# ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರಂ

## ಸಂಪುಟ - ೧

## ದಶಾವತಾರ - ೫೬ ಚಿತ್ರಗಳು

*ತಿರುಮಲೆ ತಿರುಪತಿ ದೇವಸ್ಥಾನಗಳವರ ಉದಾರ
ಆರ್ಥಿಕ ನೆರವಿನಿಂದ ಈ ಸಂಪುಟ ಪ್ರಕಟವಾಗಿದೆ.*

ಸಂಪಾದನೆ - ವಿಶೇಷ ವಿವರ
**ಜಿ. ಜ್ಞಾನಾನಂದ. ಎಂ. ಎ.**

**ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ**
ಜ್ಞಾನಭಂಡಾರ, ಭಾರತ್‌ನಗರ ಬಿ. ಇ. ಎಂ. ಎಲ್ ಅಂಚೆ.
ಕೆ.ಜಿ.ಎಫ್ - ೫೬೩ ೧೧೫

**Sri BRAHMEEYA CHITRA KARMA SHASTRAM**, Vol I Sanskrit original edited with Kannada gist & explanatary notes by **Sri G. Gnanananda.** M. A., Published by **SANRITI SAHITYA PRASARA SAMITHI,** JNANA BHANDARA, BHARATH NAGAR, K.G.F. 563115 (Karnataka)

Pages : 256 Price : Rs. 175 /-

No off copies : 1000

Published with financial assistance from T.T.D, Tirupathi under scheme aid to authors.

© ಜಿ. ಜ್ಞಾನಾನಂದ. ಎಂ. ಎ.

First Edition : Sept 99

ಬೆಲೆ : ರೂ . 175 /-

ಮುದ್ರಣ :
ಚಂದನ ಪ್ರಿಂಟರ್ಸ್
ರಾಮಾಂಜನೆಯ ಮುಖ್ಯರಸ್ತೆ
ಶ್ರೀನಗರ ಬೆಂಗಳೂರು - 50

# ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರಂ

## ಪ್ರಾರ್ಥನಾ

ಪಂಚಾನನೋ ದಶಭುಜೋ ವ್ರತಬಂಧ ದೀಕ್ಷಃ
ಕೇಯೂರಹಾರ ಮಣಿಕುಂಡಲ ಚಂಡತೇಜಾಃ ॥ ೧ ॥
ಭಸ್ಮಾಂಕಿತೋ ಮಣಿಮಯಾಸನ ಸಂಸ್ಥಿತೋಽಸೌ
ಸರ್ವೇಶ್ವರೋ ವಸತು ಮೇಹೃದಿ ವಿಶ್ವಕರ್ಮಾ ॥ ೨ ॥


ಪಂಚ ಮುಖಗಳನ್ನು, ಹತ್ತು ತೋಳುಗಳನ್ನು, ರತ್ನ ವಜ್ರ ಖಚಿತ ಕೇಯೂರ ಹಾರಗಳನ್ನು, ಮಣಿ ಖಚಿತ ಕುಂಡಲಗಳನ್ನು ಧರಿಸಿದ್ದು, ಪ್ರಚಂಡ ತೇಜಸ್ಸಿನಿಂದ ಪ್ರಕಾಶಮಾನನಾಗಿದ್ದು, ನವರತ್ನಖಚಿತ ಸಿಂಹಾಸನದಲ್ಲಿ ಭಸ್ಮಾಲಂಕೃತವಾಗಿ ಲೋಕ ಸೇವಾ ದೀಕ್ಷೆಯಿಂದ ಬದ್ಧಕಂಕಣನಾಗಿ ಮಂಡಿಸಿರುವ ದೇವ ದೇವೇಶನಾದ ಶ್ರೀ ವಿಶ್ವಕರ್ಮ ಪರಮೇಶ್ವರನು ನನ್ನ ಹೃದಯ ಮಂದಿರದಲ್ಲಿ ವಾಸಿಸಲಿ.

ಓಂ ನಮಃ ಪರಮಾರ್ಥಾಯ ಪುರುಷಾಯ ಮಹಾತ್ಮನೇ
ಶುದ್ಧ ಸತ್ವಸ್ವರೂಪಾಯ ಮಾಯಿನೇ ವಿಶ್ವಕರ್ಮಣೇ ॥ ೩ ॥

ಮಾಯೆಯ ಜನಕನೂ, ಶುದ್ಧಸತ್ವ ಸ್ವರೂಪನಾಗಿರುವವನೂ, ಪುರುಷ ಶಬ್ದವಾಚ್ಯನೂ, ಪರಮಾರ್ಥ ಪ್ರದಾಯಕನೂ, ಮಹಾತ್ಮನೂ, ಓಂಕಾರ ಸ್ವರೂಪನೂ ಆಗಿರುವ ಶ್ರೀ ವಿಶ್ವಕರ್ಮ ಪರಮೇಶ್ವರನೇ ನಿನಗೆ ನಮಸ್ಕಾರ.

ಖಂ ವಾಯುರಗ್ನಿರಾಪೋ ಭೂಃ ಸೂರ್ಯಶ್ಚಂದ್ರೋಽಹಮಷ್ಟಮಃ
ಯಸ್ಯೈತಾನಿ ಸ್ವರೂಪಾಣಿ ತಸ್ಮೈ ಮಾಯಾತ್ಮನೇ ನಮಃ ॥ ೪ ॥

ಆಕಾಶ, ಗಾಳಿ, ಬೆಂಕಿ, ನೀರು, ನೆಲ, ಸೂರ್ಯ, ಚಂದ್ರ, ದೇವಿ ಈ ಎಂಟು ರೂಪಗಳೂ ನಿನ್ನವೇ ಆಗಿವೆ. ಮಾಯೆಯ ಆತ್ಮ ಸ್ವರೂಪಿಯಾದ ಶ್ರೀ ವಿಶ್ವಕರ್ಮ ಪರಮೇಶ್ವರನೇ ನಿನಗೆ ನಮಸ್ಕಾರ.



ಚಿತ್ರ ೧ : ಸರ್ವೇಶ್ವರ ಶ್ರೀ ವಿಶ್ವಕರ್ಮ

ಸ್ಪರ್ಶ ರೂಪೋ ವಿಚಿತ್ರೋಽಪಿ ತೇಪಿ ಶೂನ್ಯೇ ನಿರವ್ಯಯೀ
ಯೇನ ಶಬ್ದಮಯಂ ಜ್ಯೋತಿರ್ಘಟೇ ರೂಪಮಿವಾಹಿತಮ್ ॥ ೫ ॥
ಯೇನ ಶ್ರೋತ್ರೀ ಕೃತಂ ವ್ಯೋಮ ಶಬ್ದ ಸಂಗ್ರಹಣಕ್ಷಮಮ್
ಅಚಿಂತ್ಯ ಶಕ್ತಯೇ ತಸ್ಮೈ ನಮಸ್ತೇ ವಿಶ್ವಕರ್ಮಣೇ ॥ ೬ ॥

ಶಬ್ದ, ಸ್ಪರ್ಶ, ರೂಪ, ತೇಜಸ್ಸುಗಳು ಸಮಾಹಿತವಾಗಿರುವ ಆಕಾಶದಿಂದ ಶಬ್ದವನ್ನು ಮಾತ್ರವೇ ಗ್ರಹಿಸಬಲ್ಲ ಶ್ರೋತ್ರೇಂದ್ರಿಯವನ್ನು ಉತ್ಪನ್ನ ಮಾಡಿದಂತಹ ಅಪಾರವೂ, ಕಲ್ಪನಾತೀತ ಶಕ್ತಿಯುಳ್ಳವನೂ ಆದ ಶ್ರೀ ವಿಶ್ವಕರ್ಮ ಪರಮೇಶ್ವರನೇ ನಿನಗೆ ನಮಸ್ಕಾರ.

ಅರೂಪಾಃ ಸ್ಪರ್ಶವಂತೋಽಪಿ ವಾಯವ್ಯಾಃ ಪರಮಾಣವಃ
ಯೇನ ಪಿಂಡೀಕೃತಾಃ ಸರ್ವೇ ಅಸಂಗಾ ಅಪಿ ಪಾಂಸುವತ್ ॥ ೭ ॥
ವಾತ ಪಿಂಡತ್ತತಃ ಸ್ವರ್ಣ ಪಿಂಡಾದಿ ವಚಯೋ ಕರೋತ್
ವಂಶತಂತೂಂಶ್ಚ ಯೇ ಭೂಮೌನಪತ್ಯಂತ ಗುರುಂತ್ವತಃ ॥ ೮ ॥
ವಂಶ ತಂತುಮಯಂ ಶಿಕ್ಯಂ ಶಿಕ್ಯೇ ಬ್ರಹ್ಮಾಂಡ ಮದ್ಭುತಮ್
ನಿಹಿತಂಚೋಭಯಂಯೇನ ವಿಶ್ವಕರ್ಮಾ ಸಪಾತುನಃ ॥ ೯ ॥

ರೂಪಹೀನನಾದರೂ ಸ್ಪರ್ಶಕ್ಕೆ, ಅನುಭವಕ್ಕೆ ಬರುವ ವಾಯುವಿನ ಪರಮಾಣುವನ್ನು ಪಿಂಡ ರೂಪದಲ್ಲಿ ಏಕತ್ರಗೊಳಿಸಿ, ಅದನ್ನು ಸ್ವರ್ಣ ಪಿಂಡದಲ್ಲಿ ಶಬ್ದ ಬದ್ಧಗೊಳಿಸಿ, ಅದರಿಂದ ತಂತು ರೂಪವನ್ನು ರೂಪಿಸಿ, ಈ ಭೂಮಿಯನ್ನು ಆಕರ್ಷಿಸಿ ಹಿಡಿದಿರಿಸಿ, ತಂತು ಮಯವಾದ ಶಿಕ್ಯವನ್ನು (ನೆಲುವಿನಂತೆ ಜೋತಾಡುತ್ತಿರುವ ಖಗೋಳ ಕಾಯಗಳನ್ನು) ಅಶಿಕ್ಯ (ತಂತು ರಹಿತವಾದ) ಬ್ರಹ್ಮಾಂಡದಲ್ಲಿ ಅದ್ಭುತವಾಗಿ ಸೃಷ್ಟಿಸಿ ತೂಗಿಬಿಟ್ಟಿರುವ ಅಂಡ - ಪಿಂಡ - ಬ್ರಹ್ಮಾಂಡಗಳ ಸೃಷ್ಟಿಕರ್ತನಾದ ಶ್ರೀ ವಿಶ್ವಕರ್ಮನು ನಮ್ಮನ್ನು ಚೆನ್ನಾಗಿ ರಕ್ಷಿಸಲಿ.

ದಿವಿ ಭುವ್ಯುದರೇ ಕಾಷ್ಠ ಪಾಷಾಣಾದೌಚಯೇ ವಿಭುಃ
ಚತುರ್ಥವ್ಯಭಜಜ್ಜ್ಯೋತಿಶ್ಚತುರ್ವಿಧ ಫಲಾಪ್ತಯೇ ॥ ೧೦ ॥

ಧರ್ಮ - ಅರ್ಥ - ಕಾಮ - ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಪಡೆದುಕೊಳ್ಳಲು ತನ್ನ ತೇಜಸ್ಸನ್ನು ನಾಲ್ಕು ಭಾಗಗಳಾಗಿ ಮಾಡಿ ಆಕಾಶ, ಭೂಗರ್ಭಗಳ ಮಧ್ಯ ಪ್ರದೇಶಗಳಲ್ಲಿ, ಮರಗಳಲ್ಲಿ ಮತ್ತು ಕಲ್ಲುಗಳಲ್ಲಿ ನಿಹಿತ ಗೊಳಿಸಿರುವಂತಹ ವಿಭುವಾದ ಶ್ರೀ ವಿಶ್ವಕರ್ಮ ಪರಮೇಶ್ವರನು ನಮ್ಮನ್ನು ರಕ್ಷಿಸಲಿ.

ವಾತ ರಜ್ಜ್ವಾ ಧೃತಂ ದಿವ್ಯಂ ಜ್ಯೋತಿಃ ಕಾಲಸ್ಯ ಕಾರಣಮ್
ಬಭ್ರ ಮೀತ್ಯನಿಶಂ ಯೇನ ಪ್ರವರ್ತಂತೇ ಕ್ರತುಕ್ರಿಯಾಃ ॥ ೧೧ ॥

ಕಾಲದ ಸೃಷ್ಟಿಗೆ ಕಾರಣನಾಗಿರುವಂತಹವನು, ದಿವ್ಯ ತೇಜಸ್ಸಿನ ಸೂರ್ಯನನ್ನು ಗಾಳಿ ರೂಪವಾದ ಹಗ್ಗಗಳಿಂದ ಆಕರ್ಷಿಸಿ ಹಿಡಿದು ತಿರುಗಿಸುತ್ತಾ ಕಾಲಚಕ್ರ ಭ್ರಮಣಕ್ಕೆ ಕಾರಣನಾಗಿದ್ದು, ಕ್ರತು ಕ್ರಿಯೆಗಳು ನಿತ್ಯವೂ ಯಾರಿಂದ ಪ್ರವರ್ತಿಸಲ್ಪಡುತ್ತಿವೆಯೋ ಅಂತಹ ಯಜ್ಞಕರ್ತನಾದ ಶ್ರೀವಿಶ್ವಕರ್ಮನು ನಮ್ಮನ್ನು ರಕ್ಷಿಸಲಿ.

ಭೌಮಾಕಾರಜಂ ಜ್ಯೋತಿಃ ಸ್ವರ್ಣಾಯಃ ಪಾರದಾದಿಕಂ
ನಾನಾ ಕಾರ್ಯಕರಂ ಲೋಕೇ ಭೂಷಾಯುಧ ರಸಾಯನೈಃ ॥ ೧೨ ॥
ಯೋಽಸೌ ವೈಶ್ವಾನರೋ ವಹ್ನಿಃ ಪ್ರಾಣಿನಾಂ ದೇಹಮಾಶ್ರಿತಃ
ಚತುರ್ವಿಧಂ ಪಚತ್ಯನ್ನಂ ತದುದರ್ಯಂ ಮಹತ್ಸ್ಮೃತಮ್ ॥ ೧೩ ॥
ದೃಢಾಘಾತೇನ ಕಾಷ್ಠಾದೇರ್ಯತ್ತೇಜೋ ಜಾಯತೇ ಮಹತ್
ಜ್ವಲನೋ ನಾಮ ತಲ್ಲೋಕೇ ಶ್ರೌತಂ ಸ್ಮಾರ್ತಂ ಹವಿಃ ಪಚೇತ್ ॥ ೧೪ ॥
ಯಃ ಕಾಲಂ ದಕ್ಷಿಣಾಂ ಚೈವ ಯಜಮಾನಂ ಹವೀಂಷಿ ಚ
ಧಾರಯಾನ್ಯಃ ಪರಶಿವೋ ವಿಶ್ವಕರ್ಮಾ ಸಪಾತು ನಃ ॥ ೧೫ ॥

ಭೂಮಿಯಲ್ಲಿ ಹುಟ್ಟಿ ಬೆಳೆಯುವಂತಹವನ್ನು, ಗಣಿಗಳಲ್ಲಿ ದೊರೆಯುವಂತಹ ಚಿನ್ನ, ಕಬ್ಬಿಣ, ಪಾದರಸ ಮುಂತಾದುವನ್ನು, ಎಲ್ಲಾ ಕಾರ್ಯಗಳಲ್ಲೂ ಬಳಸಲ್ಪಡುವ ಧಾತುಗಳನ್ನು ಲೋಕದಲ್ಲಿ ಸೃಷ್ಟಿಸಿ ಅವುಗಳಿಂದ ಆಭೂಷಣಗಳನ್ನು, ರಸಾಯನಗಳನ್ನು, ಆಯುಧಗಳನ್ನು ರೂಪಿಸಿದಂತಹವನು. ಜಠರಾಗ್ನಿ ರೂಪವಾಗಿ ಜೀವಿಗಳ ದೇಹ ಮಧ್ಯದಲ್ಲಿದ್ದು ಚತುರ್ವಿಧ ಅನ್ನಗಳನ್ನು ಪಚನಗೊಳಿಸುತ್ತಾ ದೇಹವನ್ನು ಪೋಷಿಸುತ್ತಿರುವ ಆ ವೈಶ್ವಾನರಾಗ್ನಿಯು ದೊಡ್ಡದೆಂಬ ಮೆಚ್ಚುಗೆಯನ್ನು ಗಳಿಸಿದೆ. ಮರಗಳನ್ನು ಒತ್ತಿ ಉಜ್ಜುವುದರಿಂದ ಮಹತ್ತರವಾದ ಅಗ್ನಿಯು ಹುಟ್ಟಿ ಅದು ಅತ್ಯಂತ ಶುದ್ಧವಾದ ಅಗ್ನಿಯೆಂಬ ಹೆಸರಿನಿಂದ ಹವಿಸ್ಸು (ಪುರೋಡಾಶ, ಅನ್ನ, ಆಜ್ಯ ಮುಂತಾದವು) ಸ್ವೀಕರಿಸುವಂತೆ ವಸಂತಾದಿ ಕಾಲದಲ್ಲಿಯೂ, ಸುವರ್ಣಾದಿ ದಕ್ಷಿಣೆಯನ್ನು, ಯಜಮಾನನನ್ನು, ಹವಿಸ್ಸನ್ನು ಧರಿಸಿರುವಂತಹ ಪರಮ ಮಂಗಳ ಸ್ವರೂಪಿಯಾದ ಶ್ರೀವಿಶ್ವಕರ್ಮ ಪರಮೇಶ್ವರನು ನಮ್ಮನ್ನು ಕಾಪಾಡಲಿ.

ನಯತ್ಯನೇಕ ರಸತಾಂ ಮಧುರೈಕರಸಂ ಜಲಂ
ಯಸ್ತತ್ತದ್ಬೀಜ ಯೋಗೇನ ಮಹಾಶಿಲ್ಪೀ ಸ ಪಾತು ನಃ ॥ ೧೬ ॥

ಮಧುರವೇ ಪ್ರಧಾನವಾಗಿರುವ ನೀರಿನಲ್ಲಿ ಆಯಾ ಬೀಜಗಳ ಸಂಬಂಧದಿಂದ ಅನೇಕ ರಸಗಳು ರೂಪುಗೊಳ್ಳುವಂತೆ ಮಾಡುತ್ತಿರುವ ಮಹಾಶಿಲ್ಪಿಯಾದ ಶ್ರೀ ವಿಶ್ವಕರ್ಮನು ನಮ್ಮನ್ನು ಚೆನ್ನಾಗಿರಕ್ಷಿಸಲಿ.

ಭೌಮಾನ್ಯನೇಕ ರೂಪಾಣಿ ಯಸ್ಯ ಶಿಲ್ಪಾನಿ ಮಾನವಾಃ
ಉಪಜೀವಂತಿ ತಂ ವಿಶ್ವಂ ವಿಶ್ವಕರ್ಮಾಣಮೀ ಮಹಿ ॥ ೧೭ ॥

ಭೂಗರ್ಭದಲ್ಲಿ ದೊರೆಯುವ ಬಹುವಿಧ ಧಾತುಗಳಿಂದ, ಶಿಲೆಗಳಿಂದ ಅನೇಕ ರೂಪಗಳುಳ್ಳ ಶಿಲ್ಪಗಳನ್ನು ಸೃಜಿಸುತ್ತಾ ಮಾನವರು ಸೌಖ್ಯದಿಂದ ಜೀವಿಸುವಂತೆ ಮಾಡಿರುವ ಶ್ರೀ ವಿಶ್ವಕರ್ಮ ವಿಭುವನ್ನು ಧ್ಯಾನಿಸುತ್ತೇನೆ.

ದಿಕ್ಕಾಲೈ ಸ್ಸೂರ್ಯ ಚಂದ್ರಾಭ್ಯಾಂ ಗೋವಿಪ್ರಾಭ್ಯಾಂ ಹವಿರ್ಮನೂನ್
ನಿರ್ಮಾಯ ನಿರ್ಮಮೇ ಯಜ್ಞಂ ತ್ವಸೃಷ್ಟ್ಯೈ ಯಜ್ಞಾತ್ಮನೇ ನಮಃ ॥ ೧೮ ॥

ದಿಕ್ಕುಗಳು, ಕಾಲಗಳು, ಸೂರ್ಯ, ಚಂದ್ರ, ಗೋವು, ವಿಪ್ರ, ಹವಿಸ್ಸು ಇವನ್ನು ಸೃಷ್ಟಿಸಿ

ಇವುಗಳಿಂದ ಯಜ್ಞಗಳನ್ನು ನಿರಂತರವಾಗಿ ನೆರವೇರುವಂತೆ ವ್ಯವಸ್ಥೆ ಮಾಡಿರುವ ಯಜ್ಞಕರ್ತನಾದ ಶ್ರೀ ವಿಶ್ವಕರ್ಮ ಪ್ರಭುವಿಗೆ ನಾನು ನಮಸ್ಕರಿಸುತ್ತೇನೆ.


**ದಿವಿ ಭುವ್ಯಂತರಿಕ್ಷೇ ವಾ ಪಾತಾಲೇ ವಾಪಿ ಸರ್ವಶಃ**
**ಯತ್ಕಿಂಚಿಚ್ಛಿಲ್ಪಿನಾಂ ಶಿಲ್ಪಂ ತತ್ಪ್ರವರ್ತಕತೇ ನಮಃ ॥ ೧೯ ॥**

ಸ್ವರ್ಗ, ಭೂಮಿ, ಆಕಾಶ, ಪಾತಾಳ ಮುಂತಾದ ಎಲ್ಲಾ ಎಡೆಗಳಲ್ಲೂ ಯಾವ ಯಾವ ಶಿಲ್ಪಗಳು ತುಂಬಿರುವವೋ ಆ ಶಿಲ್ಪಗಳನ್ನು ಆಯಾಯ ಕಾಲಗಳಿಗೆ ಅನುಗುಣವಾಗಿ ಮೂಡಿಸುತ್ತಾ ಇರುವ ಶ್ರೀ ವಿಶ್ವಕರ್ಮನೇ ನಿನಗೆ ನಮಸ್ಕಾರ.

**ವಿಶ್ವಕರ್ಮ ಸಮಾರಂಭಾಂ ವಿಶ್ವರೂಪಾರ್ಯ ಮಧ್ಯಮಾಂ**
**ಅಸ್ಮದಾಚಾರ್ಯ ಪರ್ಯಂತಂ ವಂದೇ ಗುರು ಪರಂಪರಾಂ ॥ ೨೦ ॥**

ಜಗಚ್ಛಿಲ್ಪಿಯಾಗಿರುವ ವಿಶ್ವಕರ್ಮ ಪರಮೇಶ್ವನಿಂದಲೇ ಆದಿಯಲ್ಲಿ ಪ್ರವರ್ತಿತವಾಗಿರುವ ಈ ಶಿಲ್ಪಗುರು ಪರಂಪಂರೆಯಲ್ಲಿ ಸುರಲೋಕದ ಪುರೋಹಿತರಾಗಿದ್ದಂತಹ ವಿಶ್ವರೂಪಾಚಾರ್ಯರಂಥಾ ಮಹಾಶಿಲ್ಪ ಬ್ರಾಹ್ಮಣರನ್ನು ಶಿಲ್ಪ ವಿದ್ಯಾಗುರುಗಳಾಗಿ ಪಡೆದುಕೊಂಡಿರುವ ಈ ನನ್ನ ಪಾವನ ಗುರು ಪರಂಪರೆಯು ಪ್ರಸ್ತುತ ನನ್ನ ಗುರುಗಳಿಂದ ಮುಂದುವರಿಸಲ್ಪಟ್ಟಿದೆ. ಇಂತಹ ಮಹಾ ಪರಂಪರೆಯನ್ನು ಬೆಳೆಸುತ್ತಾ ಬಂದಿರುವ ನನ್ನ ಎಲ್ಲಾ ಗುರುಗಳಿಗೂ ನಮಸ್ಕರಿಸುತ್ತೇನೆ.

*[ವಿದ್ಯಾರ್ಥಿಯು ತನ್ನ ಶಾಖೆ, ಗೋತ್ರ, ಸೂತ್ರ, ಪ್ರವರಗಳನ್ನು ಹೇಳಿಕೊಂಡು ಆಚಾರ್ಯರ ಪಾದಕ್ಕೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಶಿಲ್ಪಾಧ್ಯಯನವನ್ನು ಪ್ರಾರಂಭಿಸಬೇಕು]*



ಚಿತ್ರ ೧ ಅ : ಬ್ರಹ್ಮದೇವ

# ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರಂ

## *ಪ್ರಾದುರ್ಭಾವ ಕಾಂಡಃ*

### ಅಥ ಪ್ರಥಮೋಽಧ್ಯಾಯಃ

## ಮತ್ಸ್ಯ ಲಕ್ಷಣಮ್

ಬ್ರಹ್ಮೋವಾಚ -

ಪ್ರಾಸಾದಂ ಪಂಚಮಾನಾನಿ ಭೂಷಣಾನ್ಯಂಬರಾಣಿ ಚ
ವರ್ಣಕಾರಾದಿಕಾನ್ ಸರ್ವಾನ್ ಮೂರ್ತೀನಾಂ ಕಥಯಾತ್ಮನಃ
[ವರ್ಣಕಾರಾದಿಕಾನ್ ಸರ್ವ ಮೂರ್ತೀನಾಂ ಅಥಯಾತ್ಮನಾ] ॥ ೧ ॥

ಬ್ರಹ್ಮದೇವನು ಕೇಳಿದ :

ಭಗವಾನ್, ನಿಮ್ಮ ಮೂರ್ತಿ ರೂಪ, ಆಲಯ ಲಕ್ಷಣ, ಮಾನ, ಉಪಮಾನ, ಪರಿಮಾಣ, ಲಂಬಮಾನ, ಉನ್ಮಾನ ಎಂಬ ಐದು ಮಾನಗಳು, ಆಭೂಷಣಗಳು, ಆಯುಧಗಳು, ವಸ್ತ್ರಗಳು, ವರ್ಣಗಳು ಇತ್ಯಾದಿ ಎಲ್ಲಾ ವಿವರಗಳನ್ನು ಕೃಪೆದೋರಿ ತಿಳಿಸಬೇಕು.

ಶ್ರೀ ಭಗವಾನುವಾಚ -

ಯಥಾ ಪ್ರಶ್ನಂ ಗದಿಷ್ಯೇಹಂ ಸಂಯತಾತ್ಮನ್ ಶೃಣು ಕ್ರಮಾತ್
ಪರ್ವತಾ ಕೃತೀ ಹರ್ಮ್ಯಂ ಸ್ಯಾನ್ನಾರಸಿಂಹ ವರಾಹಯೋಃ ॥ ೨ ॥
ಸ್ವಸ್ತಿಕಂ ಸರ್ವತೋಭದ್ರಂ ನಂದ್ಯಾವರ್ತಂ ಚತುರ್ಮುಖಮ್
ವಾಮನಸ್ವಾಮಿನೋ ಹರ್ಮ್ಯಂ (ದೃಷ್ಯಂ) ಸ್ವಸ್ತಿಕಂ ಹಸ್ತಿಪೃಷ್ಠಕಮ್ ॥ ೩ ॥
ಜಾಮದಗ್ನೋರ್ಭವೇತ್ಪಂಚ ವಸಂತಃ ಶ್ರೀಪತಿಷ್ಠಿತಮ್
[ಜಮದಗ್ನಿ ರ್ಭವೇತ್ಪಂಚ ವಸಂತ ಸ್ರೀ ಪ್ರತಿಷ್ಠಿತಮ್]
ರಾಘವಸ್ಯಾಂಗನಾಕಾರಂ ಸರ್ವತೋಭದ್ರ ಸಾಹ್ವಯಮ್ ॥ ೪ ॥
ಭವೇನ್ನಂದೀ ವಿಶಾಲೇನ ಚಿತ್ರ ಶಿಲ್ಪಂ ಚತುರ್ಮುಖಮ್
ಬಲಭದ್ರಾಖ್ಯ ರಾಮಸ್ಯ ಭವೇ ಧ್ವಜ ವಿಮಾನಕಮ್ ॥ ೫ ॥
ಸ್ವಸ್ತಿಕಂ ಸರ್ವತೋಭದ್ರಂ ನಂದ್ಯಾವರ್ತ ಸುಪದ್ಮಕೇ

ಗಣಿಕಾಗಾರ ಮಷ್ಟಾಂಗಂ ಚಿತ್ರಶಿಲ್ಪಂ ಚತುಷ್ಪುಟೇ ॥ ೭ ॥
ಕೃಷ್ಣಸ್ಯೈತಾನೀ ಹರ್ಮ್ಯಾಣಿ ಕ[ರ್ಮ]ಣೋಕ್ಶ್ಯಾನತಂ ತಥಾ
ಸ್ವಸ್ತಿಕಂ ಸರ್ವಸಾಮಾನ್ಯಂ ಮೂರ್ತಿನಾಂ ತು ಸನಾತನಮ್
[ಸ್ವಸ್ತಿಕಂ ಸರ್ವ ಸಾಮಾನ್ಯಾನ್ಮೂರ್ತಿನಾಂ ತು ಸನಾತನಮ್] ॥ ೭ ॥


ಭಗವಂತ ಹೇಳಿದ :

ಎಲೈ ಬ್ರಹ್ಮದೇವನೇ, ನಿನ್ನ ಪ್ರಶ್ನೆಯು ಬಹು ಸೂಕ್ತವಾದದು. ಅದಕ್ಕೆ ಉತ್ತರವನ್ನು ಸಕ್ರಮವಾಗಿ, ಸವಿವರವಾಗಿ ಹೇಳುತ್ತೇನೆ. ಗಮನವಿರಿಸಿ ಕೇಳು. ನರಸಿಂಹಮೂರ್ತಿಗೂ, ವರಾಹಮೂರ್ತಿಗೂ ಬೆಟ್ಟದಹಾಗೆ ಕಾಣಿಸುವಂತಹ ದೇವಾಲಯಗಳನ್ನು ನಿರ್ಮಿಸಬೇಕು. ಸ್ವಸ್ತಿಕ, ಸರ್ವತೋಭದ್ರ, ನಂದ್ಯಾವರ್ತ, ಚತುರ್ಮುಖ ಈ ಬಗೆಯ ದೇವಾಲಯಗಳನ್ನು ವಾಮನ ಮೂರ್ತಿಗೆ ನಿರ್ಮಿಸಬಹುದು. ಸ್ವಸ್ತಿಕ, ಹಸ್ತಿಪೃಷ್ಠ ವಿಧದ ಆಲಯಗಳನ್ನು ಪರಶುರಾಮನಿಗೂ (ಜಾಮದಗ್ನಿಗೂ), ಸರ್ವತೋಭದ್ರ ಮತ್ತು ಶ್ರೀಪ್ರತಿಷ್ಠಿತ ಇವೆರಡು ಬಗೆಯ ದೇವಾಲಯಗಳನ್ನು ಶ್ರೀರಾಮನಿಗೂ ನಿರ್ಮಿಸಬೇಕು. ಚತುರ್ಮುಖ, ಚಿತ್ರಶಿಲ್ಪ ಈ ಎರಡು ಬಗೆಯ ದೇವಾಲಯಗಳನ್ನು ಬಲಭದ್ರನಿಗೆ ನಿರ್ಮಿಸಬೇಕು. ಧ್ವಜ, ವಿಮಾನ, ಸ್ವಸ್ತಿಕ, ಸರ್ವತೋಭದ್ರ, ನಂದ್ಯಾವರ್ತ, ಸುಪದ್ಮ, ಗಣಿಕಾಕಾರ, ಅಷ್ಟಾಂಗ, ಚಿತ್ರಶಿಲ್ಪ, ಚಾತುಷ್ಪುಟ ಇವೆಲ್ಲವು ಶ್ರೀ ಕೃಷ್ಣನಿಗಾಗಿ ನಿರ್ಮಿಸಬಹುದಾದ ದೇವಾಲಯಗಳ ಬಗೆಗಳು. ಇವುಗಳಲ್ಲಿ ಸ್ವಸ್ತಿಕ ಜಾತಿಯ ದೇವಾಲಯಗಳು ಎಲ್ಲಾ ಮೂರ್ತಿಗಳಿಗೂ ಅನ್ವಯವಾಗುವಂತಹ ವಿಧವಾಗಿದೆ.

## ತಾಲ ಭೇದ

ಏಕಾದಿ ದಶ ತಾಲಾಂತ ಮೇಕೈಕಂ ತ್ರಿವಿಧಂ ಭವೇತ್
ಚತುರ್ಮಾತ್ರಾಧಿಕಂ ನ್ಯೂನಮುತ್ತಮಂಚಾಧಮಂ ಭವೇತ್ ॥ ೮ ॥
ನ್ಯೂನಾಧಿಕಾತಿರಿಕ್ತಂ ತನ್ಮಧ್ಯಮಂ (ಯನ್ಮಧ್ಯಮಂ) ಪ್ರವಿಧೀಯ ತೇ
ದ್ವಿತಾಳಮುತ್ತಮಂ ಮತ್ಸ್ಯಂ ಮಧ್ಯಮಂ ಸ್ಯಾತ್ ದ್ವಿತಾಳಕಮ್
[ ದ್ವಿತಾಳ ಮುತ್ತಮಂ ಮತ್ಸ್ಯಂಕರ್ಮಿಣಾಂ ಸಪ್ತ ತಾಲಕಮ್] ॥ ೯ ॥
ಕೂರ್ಮಸ್ಯ ಚ ವರಾಹಸ್ಯ ನಾರಸಿಂಹಸ್ಯ ಮಧ್ಯಮಮ್
ದಶತಾಳಂ ತಥಾ ಪಂಚತಾಳ ಮುತ್ತಮಮೇವ ಹೀ ॥ ೧೦ ॥
ವಾಮನಸ್ಯ ತ್ರಿರಾಮಾಣಾಂ ಕೃಷ್ಣಸ್ಯಾಪಿ ಚ [ತ] ಮಧ್ಯಮಮ್
ದಶತಾಳಮಿತಿ ಪ್ರೋಕ್ತಂ ಕರ್ಮಿಣಾಮಷ್ಟ ತಾಳಕಮ್ ॥ ೧೧ ॥
ಯಥಾ ಕ್ರಮೇಣ ವಕ್ಷ್ಯಾಮಿ ಸಾಹಮಾನಾದಿಕಂ ಕ್ರಮಾತ್
ಮತ್ಸ್ಯಮಾನ ವಿಭಾಗಸ್ತು [ಗಂತು] ವಕ್ಷ್ಯ ತೇ ವಿಧಿನಾಽ ಧುನಾ ॥ ೧೨ ॥

ಏಕ ತಾಳದಿಂದ ಮೊದಲುಗೊಂಡು ದಶತಾಳದ ತನಕ ಪ್ರತಿಯೊಂದು ತಾಳಮಾನ ವಿಭಜನೆಯಲ್ಲಿ ಮೂರು ಪ್ರತ್ಯೇಕ ಬಗೆಗಳಿರುತ್ತವೆ. ನಾಲ್ಕು ಅಂಗುಳಗಳು ಹೆಚ್ಚಾಗಿರುವುದನ್ನು



ಚಿತ್ರ ೨ : ಮತ್ಸ್ಯ ಮೂರ್ತಿ

ಉತ್ತಮ (ಶ್ರೇಷ್ಠ) ಎಂದು ಹೇಳಿದರೆ, ನಾಲ್ಕು ಅಂಗುಳಗಳು ಕಡಿಮೆಯಾಗಿರುವುದನ್ನು ಅಧಮ (ಕನಿಷ್ಠ) ಎಂದು ಹೇಳಲಾಗುತ್ತದೆ. ಹೆಚ್ಚು - ಕಡಿಮೆ ಇಲ್ಲದೆ ಇರುವುದನ್ನು ಮಧ್ಯಮ ಎನ್ನಲಾಗುತ್ತದೆ.

ಮತ್ಸ್ಯಾವತಾರ ಮೂರ್ತಿಗೆ ಉತ್ತಮ ದ್ವಿ ತಾಳ, ಕೂರ್ಮಾವತಾರಕ್ಕೆ ಮಧ್ಯಮ ದ್ವಿತಾಳ, ವರಾಹ ಮತ್ತು ನರಸಿಂಹಮೂರ್ತಿಗಳಿಗೆ ಮಧ್ಯಮ ದಶತಾಳ, ವಾಮನ ಮೂರ್ತಿಗೆ ಉತ್ತಮ ಪಂಚತಾಲ, ಮುವ್ವರು ರಾಮರಿಗೂ (ಪರಶುರಾಮ, ರಾಮ ದಾಶರಥಿ, ಬಲರಾಮ) ಮತ್ತು ಕೃಷ್ಣನಿಗೂ ಮಧ್ಯಮ ದಶತಾಳವೇ. ಕರ್ಮಭೂಮಿಯಲ್ಲಿ (ಭೂಲೋಕದಲ್ಲಿ) ಜನಿಸಿದವರೆಲ್ಲರಿಗೂ ಅಷ್ಟತಾಳವೇ ಅನ್ವಯವಾಗುತ್ತದೆ.

ಇನ್ನು ಮುಂದೆ ಕ್ರಮವಾಗಿ ತಾಲಮಾನಾದಿಗಳನ್ನು, ಸುತ್ತಳತೆಗಳ ವಿವರಗಳನ್ನು ಹೇಳುತ್ತೇನೆ. ಮೊದಲಿಗೆ ಮತ್ಸ್ಯಮೂರ್ತಿಯ ತಾಲಮಾನ ವಿಭಾಗವನ್ನು ಹೇಳುತ್ತೇನೆ.

**ನಾಸಾಗ್ರಾತ್ಪುಚ್ಛಪರ್ಯಂತಮಷ್ಟವಿಂಶತಿ ಮಾತ್ರಕಮ್**
**ನಾಸ್ಯಾನೇತ್ರಂ ದ್ವಿಮಾತ್ರಂ ಚತುಷ್ಕಂ ಕರ್ಣಂ ದ್ವಿಮಾತ್ರಕಮ್**
**[ನಾಸ್ಯಾ ನೇತ್ರಾಂತ ದ್ವಿಮಾತ್ರ ಚತುಷ್ಕಂ ಕರ್ಣಂ ದ್ವಿಮಾತ್ರಕಮ್] ॥ ೧೩ ॥**
**ತಸ್ಮಾತ್ತು ಪುಚ್ಛ [ತಸ್ಮಾತ್ತತ್ಪುಚ್ಛ]ಮೂಲಾಂತಂ ನವಕೋಲಕಮುಚ್ಯತೇ**
**ತಸ್ಮಾತ್ಪುಚ್ಛಾಗ್ರಕಂ ಮಾತ್ರ ಚತುಷ್ಕಂ ಹಸ್ತಿ ಕುಂಭವತ್ ॥ ೧೪ ॥**
**ಶಿರಸಃ ಪುಚ್ಛಮೂಲಾಂತಂ [ಚೋಕ್ತಂ] ಷಣ್ಣವಮಾತ್ರಕಮ್**
**[ಸಶಿರಃ ಕುಕ್ಷೀ ಪುಚ್ಛಮೂಲಾಂತಂ ಷಣ್ಣವ ದೇವಕಮ್]**
**ಪುಚ್ಛಮೂಲಂ ದ್ವಿಮಾತ್ರಂ ಸ್ಯಾತ್ ಪುಚ್ಛಾಗ್ರಂ ಸ್ಯಾತ್ರಿ ಕೋಲಕಮ್ ॥ ೧೫ ॥**
**ದ್ವಿ ಮಾತ್ರಾಧ್ಯರ್ಧ ಮಾತ್ರಂ ಸ್ಯಾತ್ಪಕ್ಷಸ್ಯಾಯಾಮ ವಿಸ್ತರೇ**
**[ದ್ವಿಮಾತ್ರಾ ತ್ಯರ್ಧ ಮಾತ್ರಂ ಸ್ಯಾತ್ಪಕ್ಷಸ್ಯಾಯಾಮ ವಿಸ್ತರೌ]**
**ಸ್ಯಾತಾಂ ಸರ್ವಾಂಗ ನಾಹಂ ಸ್ಯಾತ್ತದರ್ಧಂ (ತು) ಗುಣಾರ್ಧಕಂ ॥ ೧೬ ॥**

ಮೂಗಿನ ಕೊನೆಯಿಂದ (ನಾಸಾಗ್ರದಿಂದ) ಪ್ರಾರಂಭಿಸಿ ಬಾಲದ ತನಕ ಮತ್ಸ್ಯದ ಎತ್ತರವು ೨೮ ಅಂಗುಳಗಳು. ನಾಸ (ಮೂಗು) ದಿಂದ ನೇತ್ರ (ಕಣ್ಣು) ೨ ಅಂಗುಳಗಳ ದೂರದಲ್ಲಿರುತ್ತದೆ. ಅಲ್ಲಿಂದ ಕಿವಿಯ ದೂರವು ೪ ಅಂಗುಳಗಳು. ಕರ್ಣದ ಉದ್ದವು ೨ ಅಂಗುಳ. ಅಲ್ಲಿಂದ ಪುಚ್ಛಮೂಲಾಂತದ(ಬಾಲದತುದಿಯ)ವರೆವಿಗೂ ೧೮ ಅಂಗುಳಗಳು. ಅಲ್ಲಿಂದ ಬಾಲದ ತುದಿಯು ೪ ಅಂಗುಳಗಳಾಗಿದ್ದು ನೋಡಲು ಆನೆಯ ಕುಂಭಗಳಂತಿರುತ್ತವೆ. ಶಿರದಿಂದ ಮೊದಲುಗೊಂಡು ಪುಚ್ಛ (ಬಾಲದ) ಮೂಲದವರೆವಿಗೂ ೧೫ ಅಂಗುಲ. ಪುಚ್ಛಮೂಲವು ೨ ಅಂಗುಳ. ಪುಚ್ಛದ ಕೊನೆಯು ೬ ಅಂಗುಳ. ಎರಡು ರೆಕ್ಕೆಗಳ ಉದ್ದವು ೨ ಅಂಗುಳ. ಅಗಲವು ೧ ಅಂಗುಳ ೪ಯವ. ಉದ್ದದಲ್ಲಿ ಅರ್ಧಭಾಗವು ಅವುಗಳ ಸುತ್ತಳತೆಯಾಗಿರುತ್ತದೆ.

## *ವಿಶೇಷ ವಿವರ*

ದೇವನ ಅವತಾರಗಳು ಮೂರು ಬಗೆಯಾಗಿರುತ್ತವೆ. ಅವನ್ನು ಕ್ರಮವಾಗಿ ಅವತಾರ, ಆವೇಶ ಮತ್ತು ಅಂಶ ಎಂದು ಕರೆಯಲಾಗುತ್ತದೆ. ಪೂರ್ಣಾವತಾರ ಎಂದು

ಪರಿಗಣಿಸಲ್ಪಡುವುದನ್ನು ಅವತಾರ ಎನ್ನುತ್ತಾರೆ. ಬಹುಪಾಲು ತಾತ್ಕಾಲಿಕವಾದುದಾಗಿದ್ದು ಭಾಗಶಃ ಅವತಾರವಾದುದನ್ನು ಆವೇಶ ಎನ್ನುತ್ತಾರೆ. ದೇವನ ಶಕ್ತಿಯ ಒಂದು ಪಾಲಿನ ಅವತಾರವನ್ನು ಅಂಶಾವತಾರವೆಂದು ಕರೆಯುತ್ತಾರೆ.

ರಾಮ ಮತ್ತು ಕೃಷ್ಣರು ದೇವನ ಪೂರ್ಣಾವತಾರವೆಂದು ಭಾವಿಸಲ್ಪಡುವುದರಿಂದ ಅವರನ್ನು ವಿಷ್ಣುವಿನ ಅವತಾರಗಳೆಂದು ಪರಿಗಣಿಸುತ್ತಾರೆ. ದುರಹಂಕಾರಿಗಳಾಗಿ ಸ್ವೇಚ್ಛಾಚಾರಿಗಳಾಗಿದ್ದ ಕ್ಷತ್ರಿಯರನ್ನು ಮರ್ದಿಸಿ ಅವರನ್ನು ನಿಯಂತ್ರಿಸುವ ಏಕಮಾತ್ರ ಗುರಿಯಿಂದ ದೈವದಿಂದಲೇ ನಿಯಮಿತನಾಗಿ ಈ ಲೋಕಕ್ಕೆ ಬಂದ ಪರಶುರಾಮನ ಬದುಕಿನ ಗುರಿಯು ಅದೇ ಆಗಿತ್ತು. ಈ ಕೆಲಸವನ್ನು ಮುಗಿಸುತ್ತಲೇ ತನ್ನ ಬದುಕಿನ ಉದ್ದೇಶವು ಸಫಲವಾಯಿತು ಎಂದು ಹೇಳಿ ತನ್ನಲ್ಲಿದ್ದ ದೈವೀಕ ಶಕ್ತಿಯನ್ನು ದಶರಥ ರಾಮನಿಗೆ ಅರ್ಪಿಸಿ ತಾನು ಮಹೇಂದ್ರ ಪರ್ವತಕ್ಕೆ ಹೊರಟು ಹೋದ. ಈ ರೀತಿಯಾಗಿ ಪರಶುರಾಮನಲ್ಲಿ ಕೇವಲ ಕೆಲವು ಕಾಲದ ಮಟ್ಟಿಗೆ ದೈವೀ ಶಕ್ತಿಯು ಇತ್ತು. ಈ ಶಕ್ತಿಯು ಆತನಲ್ಲಿ ಆತನ ಜೀವನ ಪರ್ಯಂತ ಇರಲಿಲ್ಲ. ಆದುದರಿಂದ ಇದನ್ನು ತಾತ್ಕಾಲಿಕ ಎಂದು ಪರಿಗಣಿಸಿ ಇಂತಹುದನ್ನು ಆವೇಶ ಎನ್ನುತ್ತಾರೆ. ಮನುಷ್ಯರ ಸ್ಥಿತಿ ಗತಿಗಳನ್ನು ಉತ್ತಮಗೊಳಿಸಲು ವಿಷ್ಣುವೇ ತನ್ನ ಶಕ್ತಿಯ ಅಂಶಗಳಾಗಿರುವ ಶೇಷ, ಶಂಖ ಮತ್ತು ಚಕ್ರಗಳಿಗೆ ಮನುಷ್ಯರ ಮಧ್ಯೆ ಜನ್ಮಿಸುವಂತೆ ಆದೇಶ ನೀಡುವುದು ಉಂಟು. ಈ ಆಯುಧಗಳು ಭೂಮಿಯ ಮೇಲೆ ಸಂತರಾಗಿ ಹುಟ್ಟಿ ತಮ್ಮ ಹುಟ್ಟಿನ ಉದ್ದೇಶನ್ನು ಸಾಧಿಸುತ್ತವೆ. ಇಂತಹ ಅವತಾರಗಳನ್ನು ಅಂಶಾವತಾರ ಎಂದು ಪರಿಗಣಿಸಲಾಗುತ್ತದೆ. ಹೀಗೆ ಭೂಮಿಗೆ ಸಂಬಂಧಿಸಿರುವ ಪ್ರಾಣಿಗಳ, ಅರ್ಧಪ್ರಾಣಿ - ಅರ್ಧ ನರ ಅಥವ ನರ ರೂಪದಲ್ಲಿ ದೇವನು ಜನ್ಮಸುವುದನ್ನು ಅಪರ ವರ್ಗದ ಅವತಾರವೆನ್ನುತ್ತಾರೆ. ಈ ಅವತಾರಗಳೆಲ್ಲಾ ಭಕ್ತರಿಂದ ಪೂಜಿಸಲ್ಪಡಬೇಕಾದುವು (**ತತ್ರಾಷ್ಟಭುಜಮಾಕಾರಂ ಕಲ್ಪಯಿತ್ವಾ ಸುವಾಹನಮ್ ॥ ಸಾಯುಧಂ ಸಪರಿವಾರಂ ಚ ಉದಯಾರ್ಥೀ ಪ್ರಪೂಜಯೇತ್।** ಪರಮಸಂಹಿತಾ, ೩ : ೧೨ - ೧೩)

ಪರಮಾತ್ಮನು ಈ ರೀತಿಯ ಅವತಾರಗಳಲ್ಲಿ ಕಾಣಿಸಿಕೊಳ್ಳಲು ಮುಖ್ಯ ಉದ್ದೇಶವು ಲೋಕೋಪಕಾರವೇ (**ಲೋಕೋಪಕಾರ ಸಿದ್ಧ್ಯರ್ಥಂ ಅನೇಕಂ ರೂಪಮಾಸ್ಥಿತಃ॥** ಪರಮಸಂಹಿತಾ ೪ : ೮೩)

ಈ ರೀತಿಯ ಅವತಾರ ಮೂರ್ತಿಗಳ ಬಿಂಬಗಳನ್ನು ನಿರ್ಮಿಸಿ ಆರಾಧಿಸುವ ಬಗ್ಗೆ ವಿಷ್ವಕ್ಸೇನ ಸಂಹಿತೆಯು (೧೧: ೩೧೨ - ೩೨೩) ಹೀಗೆ ವಿವರಿಸುತ್ತದೆ -

**ಅವತಾರೇಽಥವಾ ಕುರ್ಯಾದರ್ಚನಾಬೇರಮತ್ರ ವೈ**
**ಅತ್ರಕಿಂಚಿದ್ವಿಶೇಷೋಽಸ್ತಿ ಮತ್ಸ್ಯಾದೀನಾಂತು ನಾರದ ॥**
**ಪ್ರವಕ್ಷ್ಯಾಮಿ ಮುನಿಶ್ರೇಷ್ಠ ಶೃಣು ಮತ್ಸ್ಯಾದಿಕಾನ್ ಕ್ರಮಾತ್**
**ಬಹಿರಾವರಣೇ ಕುರ್ಯಾದವತಾರಾಲಯಂ ಬುಧಃ ॥**
**ಮಂಟಪೇ ಗೋಪುರೇ ವಾಪಿ ಪ್ರಾಕಾರೇ ವಾ ಸ್ವತಂತ್ರಕಮ್**

ಸರ್ವಕಾಮಪ್ರದಂ ಪುಣ್ಯಮಾಯುರಾರೋಗ್ಯವರ್ಧನಮ್ ॥
ಜಯಲಕ್ಷ್ಮೀ ವಿವೃದ್ಧ್ಯರ್ಥಂ ಸ್ವತಂತ್ರಪರತಂತ್ರಯೋಃ
ಅವತಾರಾರ್ಚನ ಫಲಂ ಲೋಕೇಷು ಪರಿಪಠ್ಯತೇ ॥
ಪರ್ವತೇ ವಾ ವನೇ ವಾಪಿ ಗ್ರಾಮೇ ವಾ ನಗರೇಽಪಿ ವಾ
ಕಾರಯೇಲ್ಲಕ್ಷಣೋಪೇತಂ ಪ್ರಾಸಾದಾದೀನ್ ಕ್ರಮಾನ್ಮುನೇ ॥
ಸ್ವತಂತ್ರೇಣೈವ ವಾಚಾಸ್ಮಿನ್ ಪರತಂತ್ರೇಣ ವಾ ಮುನೇ
ಕಾರಯೇತ್ ಪ್ರತಿಮಾಮತ್ರ ಪೂರ್ವೋಕ್ತದ್ರವ್ಯಸಂಯುತಮ್ ॥
ಸಂಸ್ಥಾಪ್ಯ ವಿಧಿವತ್ತೇಷಾಂ ಪೂಜಯೇತ್ ದಿನೇ ದಿನೇ
ಸ್ವತಂತ್ರಾರ್ಚಾವಿಧಾನೇ ತು ಮೂರ್ತಿಭೇದವಿಧಿಂ ಶೃಣು ॥
ಬಲಿ ಬಿಂಬೋತ್ಸವಾದೀಂಶ್ಚ ವಾಸುದೇವಾದಿಕಾನ್ ನಯೇತ್
ಮೂಲಮೂರ್ತ್ಯಾನುಸಾರಂ ತು ಕುರ್ಯಾದ್ವಾಪ್ಯವತಾರಕೇ ॥
ಯಜಮಾನೇಚ್ಛಯಾ ಚಾಸ್ಮಿನ್ಯಥಾಕಾಮಂ ಸಮಾಚರೇತ್
ಪರಿವಾರಾಣಿ ಸರ್ವಾಣಿ ಪೂರ್ವವತ್ ಕ್ರಮಯೋಗತಃ ॥
ಕಲ್ಪಯೇದವತಾರಾಣಾಂ ಸ್ವತಂತ್ರಾರ್ಚಾವಿಧಾನಕೇ
ದ್ವಾರಾದ್ಯಾವರಣಾನ್ ಸರ್ವಾನ್ ಕುರ್ಯಾಚ್ಚೈವ ಸ್ವತಂತ್ರಕೇ ॥
ಮುಕ್ತ್ವಾ ಯುಕ್ತ ವಿಶೇಷೇಣ ಕ್ರಿಯತೇ ಶಾಸ್ತ್ರ ಬುದ್ಧಿಮಾನ್
ಏವಮುಕ್ತ ಪ್ರಕಾರೇಣ ಪ್ರತಿಮಾಂ ಕುರುತೇ ಯದಿ ॥
ಸರ್ವಾನ್ ಕಾಮಾನವಾಪ್ನೋತಿ ವಿಷ್ಣುಲೋಕಂ ಸ ಗಚ್ಛತಿ

ಎಲೈ ನಾರದ ಮಹಾಮುನಿಯೇ, ಮತ್ಸ್ಯಾದಿ ಅವತಾರಗಳ ಮೂರ್ತಿಗಳನ್ನು ಅರ್ಚಿಸುವುದರಿಂದ ಪ್ರತ್ಯೇಕ ಫಲ ಸಿದ್ಧಿಸುತ್ತದೆ. ಆದ್ದರಿಂದ ಮತ್ಸ್ಯಾದಿ ಅವತಾರಗಳನ್ನು ವಿವರಿಸುತ್ತೇನೆ. ಆಲಿಸು. ಈ ಅವತಾರ ಮೂರ್ತಿಗಳನ್ನು ಊರಿನ ಹೊರ ಆವರಣದಲ್ಲಾಗಲಿ, ಪ್ರತ್ಯೇಕ ಮಂಟಪ ನಿರ್ಮಿಸಿಯಾಗಲಿ, ಗೋಪುರದಲ್ಲಾಗಲಿ, ಆಲಯದ ಪ್ರಾಕಾರದಲ್ಲಾಗಲಿ ಅಥವ ಸ್ವತಂತ್ರ ಆಲಯದಲ್ಲಾಗಲಿ ಪ್ರತಿಷ್ಠಿಸಿದಲ್ಲಿ ಸಕಲ ಆಯುರಾರೋಗ್ಯ ಐಶ್ವರ್ಯಾದಿಗಳು ಲಭಿಸಿ ಅಭೀಷ್ಟಾರ್ಥವು ಕೈಗೂಡುವುದು. ಜಯಲಕ್ಷ್ಮೀ ಸಿದ್ಧಿಗಾಗಿಯೂ ಈ ಮೂರ್ತಿಗಳನ್ನು ಸ್ವತಂತ್ರ ಆಲಯದಲ್ಲಾಗಲಿ ಅಥವ ಇರುವ ದೇವಾಲಯದಲ್ಲಿ ಸೂಕ್ತಸ್ಥಳದಲ್ಲಿ ಅವಕಾಶ ಕಲ್ಪಿಸಿಕೊಂಡಾಗಲಿ ಪ್ರತಿಷ್ಠೆಯನ್ನು ನೆರವೇರಿಸಬಹುದು. ಈ ಪ್ರತಿಮೆಗಳನ್ನು ವಿಗ್ರಹ ನಿರ್ಮಾಣಕ್ಕೆ ಸೂಕ್ತವೆಂದು ತಿಳಿಸಿರುವ ವಸ್ತುಗಳನ್ನೇ ಬಳಸಿ ತಯಾರಿಸಬೇಕು. ಹೀಗೆ ನಿರ್ಮಿತವಾದ ಮೂರ್ತಿಗಳನ್ನು ಆಗಮ ಶಾಸ್ತ್ರೋಕ್ತ ವಿಧಿವಿಧಾನಗಳನ್ನು ಅನುಸರಿಸಿ ನಿತ್ಯವೂ ಅರ್ಚಿಸ ಬೇಕು. ನಿತ್ಯ ಬಲಿ, ನಿತ್ಯೋತ್ಸವಗಳನ್ನು ಆಯಾ ಬಿಂಬಗಳಿಗೆ ಸೂಕ್ತವಾಗುವಂತೆ ನಿರ್ವಹಿಸಬೇಕು. ಯಜಮಾನನಾದವನು ತನ್ನ ಇಷ್ಟಾರ್ಥ ಸಿದ್ಧಿಗಾಗಿ ಸೂಕ್ತವಾದ ಅವತಾರವನ್ನು ನಿರ್ಣಯಿಸಿಕೊಂಡು ಶಾಸ್ತ್ರವಿಧಿಯಂತೆ ಕ್ರಮವಾಗಿ ಅರ್ಚನೆಯನ್ನು ನಿರ್ವಹಿಸಬೇಕು. ಸ್ವತಂತ್ರ ಅರ್ಚನಾ ವಿಧಾನವು ಅವತಾರ ಬೇರ(ವಿಗ್ರಹ)ಗಳಿಗಾಗಿ ಶಾಸ್ತ್ರದಲ್ಲಿ ನಿಯಮಿತವಾಗಿದೆ. ಈ ದೇವ ಬೇರಗಳಿಗೆ ದ್ವಾರ, ಆವರಣ, ಪರಿವಾರಾದಿಗಳ ಪೂಜೆಗಳನ್ನು ಸಕ್ರಮವಾಗಿ

ನಿರ್ವಹಿಸಬೇಕು. ಹಾಗೆ ಪೂಜಿಸಿದಲ್ಲಿ ಯಜಮಾನನು ತನ್ನ ಸಕಲಾಭಿಷ್ಟಗಳನ್ನು ಸಿದ್ಧಿಸಿಕೊಳ್ಳುವುದರೊಂದಿಗೆ ವಿಷ್ಣು ಲೋಕವನ್ನು ಕೂಡ ಪಡೆದುಕೊಳ್ಳುತ್ತಾನೆ.

ಆದ್ದರಿಂದ ಅವತಾರ ಮೂರ್ತಿಗಳನ್ನು ಆರಾಧಿಸುವ ಪದ್ಧತಿಯು ಶಾಸ್ತ್ರೀಯವಾದುದು. ಈ ಅವತಾರಗಳಿಗೆ ಪ್ರತ್ಯೇಕವಾದ ಆಲಯಗಳನ್ನು ನಿರ್ಮಿಸಿ ಆರಾಧಿಸಬಹುದು.

ವಿಷ್ಣುವಿನ ಅವತಾರಗಳಲ್ಲಿ ಹತ್ತು - ದಶಾವತಾರಗಳು - ಬಹು ಜನಪ್ರಿಯವಾದುವು. ಅವು ೧. ಮತ್ಸ್ಯ, ೨. ಕೂರ್ಮ, ೩. ವರಾಹ, ೪. ನರಸಿಂಹ, ೫. ವಾಮನ, ೬. ಪರಶುರಾಮ, ೭. ರಾಮ ದಾಶರಥಿ, ೮. ಬಲರಾಮ (ಬಲ ಭದ್ರ), ೯. ಶ್ರೀಕೃಷ್ಣ, ೧೦. ಕಲ್ಕಿ

ಅಸುರರು ನಡೆಸುತ್ತಿದ್ದ ಕುಕೃತ್ಯಗಳನ್ನು ದೂರೀಕರಿಸಿ ಲೋಕಸುಖ ಸಂಸ್ಥಾಪನೆಯೇ ಪ್ರತಿ ಅವತಾರದ ಉದ್ದೇಶವಾಗಿದೆ. ಮತ್ಸ್ಯ ಪುರಾಣದಲ್ಲಿ ಅವತಾರಗಳ ವಿವರಗಳು ದೊರೆಯುತ್ತವೆ. ದೇವ ಅಸುರರ ಮಧ್ಯೆ ಹನ್ನೆರಡು ಬಾರಿ ಯುದ್ಧಗಳು ನಡೆದಿವೆ. ಇಂತಹ ಯುದ್ಧಗಳಲ್ಲಿ ಒಮ್ಮೆ ಪ್ರಹ್ಲಾದನು ಸೋತು ಇಂದ್ರನೇ ಮೂರುಲೋಕಗಳ ಒಡೆಯನಾದ. ಅಸುರರ ಪುರೋಹಿತನಾದ ಶುಕ್ರಾಚಾರ್ಯನು ಅವರನ್ನು ಬಿಟ್ಟು ದೇವತೆಗಳ ಬಳಿಗೆ ಹೋದ. ಅಸುರರು ತಮ್ಮನ್ನು ಬಿಟ್ಟು ಹೋಗಬಾರದೆಂದು ಶುಕ್ರಾಚಾರ್ಯನನ್ನು ಪ್ರಾರ್ಥಿಸಿಕೊಂಡರು. ಶುಕ್ರಾಚಾರ್ಯ ತನ್ನ ನೆರವನ್ನು ಅವರಿಗೆ ಕೊಡುವುದಾಗಿ ವಾಗ್ದಾನಮಾಡಿದ. ಇದೇ ಸಮಯದಲ್ಲಿ ದೇವತೆಗಳು ಅಸುರರ ಮೇಲೆ ಧಾಳಿಮಾಡಿ ಅವರನ್ನು ಸದೆ ಬಡಿದರು. ಈ ಧಾಳಿಯ ನಂತರ ತಮ್ಮ ತೊಂದರೆಯನ್ನು ಅಸುರರು ತಮ್ಮ ಆಚಾರ್ಯರಲ್ಲಿ ಅರಿಕೆಮಾಡಿಕೊಂಡರು. ಶುಕ್ರಾಚಾರ್ಯ ಅಸುರರನ್ನು ಸಾಂತ್ವನಗೊಳಿಸಿ ಸೂಕ್ತ ಸಮಯಕ್ಕಾಗಿ ಕಾಯಲು ಹೇಳಿದ. 'ಯುದ್ಧಗಳಲ್ಲಿ ಜಯವಾಗಲಿ, ಅಪಜಯವಾಗಲಿ ಶಾಶ್ವತವಾದುದಲ್ಲ. ಶತ್ರುಗಳೊಂದಿಗೆ ಹೋರಾಡಲು ಸದಾ ಸನ್ನದ್ಧರಾಗಿರುವುದರೊಂದಿಗೆ ನಿರಂತರವಾಗಿ ನಿಮ್ಮ ಶಕ್ತಿಯನ್ನು ವರ್ಧಿಸಿಕೊಳ್ಳುತ್ತಿರಬೇಕು' ಎಂದು ಹೇಳಿದ. ಅದಕ್ಕಾಗಿ ಮಹಾದೇವನಿಂದ ಅಸುರರಿಗೆ ಖಂಡಿತವಾಗಿ ಜಯ ದೊರೆಕಿಸಿಕೊಡುವ ಮಂತ್ರವನ್ನು ಪಡೆದುಕೊಳ್ಳಲೇಬೇಕೆಂಬ ತನ್ನ ಪ್ರಯತ್ನವನ್ನು ವಿವರಿಸಿದ. ಈ ಮಾತಿಗೆ ಅಸುರರು ಅಂಗೀಕರಿಸಿ ದೇವತೆಗಳೊಂದಿಗೆ ಸಂಧಾನವನ್ನು ಮಾಡಿಕೊಂಡರು.

ಶುಕ್ರಾಚಾರ್ಯನು ಮಹಾದೇವನ ಬಳಿಗೆ ಹೋಗಿ ದೇವತೆಗಳ ಪುರೋಹಿತನಾದ ಬೃಹಸ್ಪತಿಯ ಬಳಿ ಇರುವ ಮಂತ್ರ ಶಕ್ತಿಗಿಂತಲೂ ಬಲವತ್ತರವಾದ ಮಂತ್ರ ಶಕ್ತಿಯನ್ನು ತನಗೆ ಉಪದೇಶಿಸಬೇಕೆಂದು ಪ್ರಾರ್ಥಿಸಿದ. ಮಹಾದೇವನು ಕಣಧೂಮ(ತೌಡಿನ ಹೊಗೆ)ದಲ್ಲಿ ಮುಖವನ್ನು ಕೆಳಗೆ ಮಾಡಿಕೊಂಡು ಒಂದು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಬೇಕೆಂದು ಹೇಳಿದ. ಶುಕ್ರಾಚಾರ್ಯನು ಇದಕ್ಕೆ ಅಂಗೀಕರಿಸಿದ. ಈ ರಹಸ್ಯವನ್ನು ಅರಿತ ದೇವತೆಗಳು ಅಸುರರ ಮೇಲೆ ಮತ್ತೆ ಧಾಳಿ ಪ್ರಾರಂಭಿಸಿದರು. ಭೀತರಾದ ಅಸುರರು ಶುಕ್ರಾಚಾರ್ಯನ ತಾಯಿಯನ್ನು ಆಶ್ರಯಿಸಿದರು. ದೇವತೆಗಳು ಆಗಲೂ ಅಸುರರನ್ನು ಬಿಡಲಿಲ್ಲ.

ಶುಕ್ರಾಚಾರ್ಯರ ತಾಯಿ ಮೊದಲಿಗೆ ದೇವತೆಗಳನ್ನು ಎಚ್ಚರಿಸಿದಳು. ಈ ಮಾತು ಫಲ ನೀಡದೆ ಹೋದಾಗ ಆಕೆ ತನ್ನಲ್ಲಿದ್ದ ಮಂತ್ರ ಶಕ್ತಿಯಿಂದ ಇಂದ್ರನನ್ನು ಅಸಹಾಯಕನನ್ನಾಗಿ ಮಾಡಿದಳು. ಇದರಿಂದ ದೇವತೆಗಳು ಹೆದರಿ ಹಿಮ್ಮೆಟ್ಟಿದರು. ಇಂದ್ರನನ್ನು ರಕ್ಷಿಸಲು ವಿಷ್ಣುವು ಇಂದ್ರನನ್ನು ತನ್ನಲ್ಲಿ ಪ್ರವೇಶಿಸುವಂತೆ ಹೇಳಿದ. ಇದನ್ನು ಕೇಳಿದ ಶುಕ್ರಾಚಾರ್ಯನ ತಾಯಿ ಕೃದ್ಧಳಾಗಿ ಇಬ್ಬರನ್ನೂ ಸುಡುವುದಾಗಿ ಎಚ್ಚರಿಸಿದಳು. ಇಂದ್ರನು ಆಕೆಯು ತನ್ನ ಮಾತನ್ನು ಕೃತಿಗೆ ಇಳಿಸುವ ಮೊದಲೇ ಆಕೆಯನ್ನು ಕೊಲ್ಲುವಂತೆ ವಿಷ್ಣುವಿಗೆ ಸೂಚಿಸಿದ. ಮೊದಲಿಗೆ ವಿಷ್ಣುವು ಸ್ವಲ್ಪ ಯೋಚಿಸಿದರೂ ನಂತರದಲ್ಲಿ ತನ್ನ ಸುದರ್ಶನ ಚಕ್ರದಿಂದ ಆಕೆಯ ಶಿರವನ್ನು ಕತ್ತರಿಸಿದ. ಇದರಿಂದ ವಿಷ್ಣುವು ಶುಕ್ರಾಚಾರ್ಯನ ಶಾಪಕ್ಕೆ ತುತ್ತಾಗಿ ಏಳುಬಾರಿ ಭೂಲೋಕದಲ್ಲಿ ಹುಟ್ಟಬೇಕಾಯಿತು.

ಶುಕ್ರಾಚಾರ್ಯರ ಶಾಪದ ಫಲವಾಗಿ ವಿಷ್ಣುವು ಭೂಲೋಕದಲ್ಲಿಯ ಈ ಹುಟ್ಟು ಮರುಹುಟ್ಟನ್ನು ಧರ್ಮ ಸಂಸ್ಥಾಪನೆಗಾಗಿ ಬಳಸಿಕೊಂಡು, ಶುಕ್ರಾಚಾರ್ಯರ ಶಿಷ್ಯರಾದ ಅಸುರರನ್ನು ನಾಶ ಮಾಡಿದ್ದು ಒಂದು ವಿಪರ್ಯಾಸ. ಪ್ರಹ್ಲಾದನಿಗೆ ಅವಿಧೇಯರಾಗಿ ನಡೆದುಕೊಳ್ಳುವ ಎಲ್ಲಾ ಅಸುರರು ಮನುಷ್ಯರಿಂದ ಸಾಯಿಸಲ್ಪಡುತ್ತಾರೆ ಎಂದು ಬ್ರಹ್ಮನು ಶಾಸಿದ್ದನು. ಇದರಿಂದ ವಿಷ್ಣುವಿನ ಅವತಾರಗಳನ್ನು ಹೀಗೆ ಲೆಕ್ಕಿಸಲಾಗುತ್ತದೆ :

(೧) ವಿಷ್ಣುವಿನ ಒಂದು ಭಾಗವು ಧರ್ಮನಾಗಿ ಉದ್ಭವಿಸಿತು.

(೨) ನರಸಿಂಹ ಅವತಾರ

(೩) ವಾಮನ

ಈ ಮೂರು ದೈವೀಕ ಸ್ವರೂಪಗಳೆಂದು ಪರಿಗಣಿಸಲ್ಪಡುತ್ತವೆ. ಇನ್ನು ಉಳಿದ ಏಳು ಮಾನವ ರೂಪಗಳು. ಇವು ಶುಕ್ರಾಚಾರ್ಯನ ಶಾಪದ ಫಲವಾಗಿ ಉಂಟಾದುವೆಂದು ಹೇಳುತ್ತಾರೆ. ಅವು -

(೪) ದತ್ತಾತ್ರೇಯ

(೫) ಮಾಂಧಾತ್ರಿ

(೬) ಪರಶುರಾಮ

(೭) ರಾಮ ದಾಶರಥಿ

(೮) ವೇದವ್ಯಾಸ [ಶ್ರೀಕೃಷ್ಣನನ್ನು ಪರಿಗಣಿಸಿದರೆ ಈ ಹೆಸರು ಕೈಬಿಡಬೇಕಾಗಿರುತ್ತದೆ]

(೯) ಬುದ್ಧ

(೧೦) ಕಲ್ಕಿ

ಭಾಗವತ ಪುರಾಣವು ೨೨ ಅವತಾರಗಳನ್ನು ಇಂತು ಉಲ್ಲೇಖಿಸುತ್ತದೆ :

(೧) ಪುರುಷ (೨) ವರಾಹ (೩) ನಾರದ (೪) ನರ ಮತ್ತು ನಾರಾಯಣ (೫) ಕಪಿಲ (೬)ದತ್ತಾತ್ರೇಯ (೭) ಯಜ್ಞ (೮) ವೃಷಭ (೯) ಪ್ರಿಥು (೧೦) ಮತ್ಸ್ಯ (೧೧) ಕೂರ್ಮ

(೧೨ ಮತ್ತು ೧೩) ಧನ್ವಂತ್ರಿ (೧೪) ನಾರಸಿಂಹ (೧೫) ವಾಮನ (೧೬) ಪರಶುರಾಮ (೧೭) ವೇದವ್ಯಾಸ (೧೮) ರಾಮ (೧೯ ಮತ್ತು ೨೦) ಬಲರಾಮ ಮತ್ತು ಕೃಷ್ಣ (೨೧) ಬುದ್ಧ (೨೨) ಕಲ್ಕಿ. ಕೊನೆಯ ಎರಡು ಭವಿಷ್ಯದ್ದೆಂದು ಹೇಳಲಾಗಿದೆ.

ವಿಷ್ಣುವಿನ ಅವತಾರಗಳು ಪಾತಾಳಗಂಗೆ ಚಿಮ್ಮಿಸುವ ತೊರೆಗಳಂತೆ ಅಗಣಿತ ಮತ್ತು ಅನಂತ ಎನ್ನಲಾಗುತ್ತದೆ. ಋಷಿಗಳು, ಮನುಗಳು, ದೇವತೆಗಳು, ಪ್ರಜಾಪತಿಗಳು ಎಲ್ಲರೂ ವಿಷ್ಣುವಿನ ಅಂಶಗಳೇ.

## ಮತ್ಸ್ಯಾವತಾರ

ದಶಾವತಾರಗಳಲ್ಲಿ ಇದು ಮೊದಲ ಅವತಾರ. ಜಲ ಪ್ರಳಯದಲ್ಲಿ ಮನುವನ್ನು ಉಳಿಸಿದ ಮತ್ಸ್ಯದ ಉಲ್ಲೇಖವು ಶತಪಥ ಬ್ರಾಹ್ಮಣದಲ್ಲಿ (೧ : ೮ : ೧) ದೊರೆಯುತ್ತದೆ.

ಪದ್ಮ ಪುರಾಣದ ಪ್ರಕಾರ ವೇದಗಳನ್ನು ಶಂಖಾಸುರನು ಅಪಹರಿಸಿದ. ಆಗ ದೇವತೆಗಳನ್ನು ರಕ್ಷಿಸಲು ವಿಷ್ಣುವು ಈ ಅವತಾರವನ್ನು ಧರಿಸಿದ (ಪದ್ಮ ಪುರಾಣ, ಉತ್ತರಖಂಡ, ೯೦ - ೯೧ ಸೃಷ್ಟಿಖಂಡ - ೧). ಭಾಗವತ ಪುರಾಣದ ಅನುಸಾರ ಈ ಹತ್ತನೆಯ ಅವತಾರವು ಚಾಕ್ಷುಷ ಮನ್ವಂತರದಲ್ಲಿ ಉಂಟಾಯಿತು (ಭಾಗವತ ೧ : ೩ : ೧೫).

ಪದ್ಮಪುರಾಣದಲ್ಲಿಯೇ (ಉತ್ತರ ಖಂಡ : ೨೩೦) ಈ ಕಥೆ ಬೇರೊಂದು ರೀತಿಯಲ್ಲಿ ದೊರೆಯುತ್ತದೆ. ಕಶ್ಯಪ ಪ್ರಜಾಪತಿಯ ಪತ್ನಿ ದಿತಿಯಲ್ಲಿ ಉತ್ಪನ್ನನಾದ ಮಕರ ಎಂಬ ರಾಕ್ಷಸನು ಬ್ರಹ್ಮನಿಗೆ ಮೋಸಮಾಡಿ ವೇದಗಳನ್ನು ಅಪಹರಸಿದ. ವೇದಗಳನ್ನು ತೆಗೆದುಕೊಂಡು ಪಾತಾಳದಲ್ಲಿ ಅಡಗಿಕುಳಿತ. ವೇದಗಳು ಅಪಹರಣಗೊಂಡಿದ್ದರಿಂದ ಜಗತ್ತಿನಲ್ಲಿ ಅನಾಚಾರ ವ್ಯಾಪಿಸಿತು. ಇದರಿಂದ ಬ್ರಹ್ಮನು ವಿಷ್ಣುವನ್ನು ಆಶ್ರಯಿಸಿ ವೇದಗಳನ್ನು ರಕ್ಷಿಸಬೇಕೆಂದು ಪ್ರಾರ್ಥಿಸಿದ. ಆಗ ವಿಷ್ಣುವು ಮತ್ಸ್ಯಾವತಾರವನ್ನು ಧರಿಸಿ ಮಕರ ರಾಕ್ಷಸನನ್ನು ವಧಿಸಿ, ವೇದಗಳನ್ನು ತಂದು ಬ್ರಹ್ಮನಿಗೆ ಒಪ್ಪಿಸಿದ.

ಮತ್ಸ್ಯಪುರಾಣದಲ್ಲಿ ( ೧ : ೨ : ೨೯೦) ಈ ಅವತಾರದ ಬಗ್ಗೆ ಬೇರೆಯಾದ ವಿವರಣೆ ಹೀಗೆ ದೊರೆಯುತ್ತದೆ:

ಐವತ್ತನೆಯ ಕಲ್ಪದಲ್ಲಿ ಬ್ರಹ್ಮದೇವನ ರಾತ್ರಿ ಪ್ರಾರಂಭವಾಯಿತು. ಆಗ ಬ್ರಹ್ಮನಿದ್ರೆಯಲ್ಲಿದ್ದ. ಅದೇ ಸಮಯದಲ್ಲಿ ಪ್ರಳಯವು ಬಂತು. ಈ ಪ್ರಳಯದಲ್ಲಿ ಸ್ವರ್ಗ, ಭೂಮಿಗಳು ಮುಳುಗಿದವು. ನಿದ್ರೆಯಲ್ಲಿದ್ದ ಬ್ರಹ್ಮನ ಮುಖದಿಂದ ವೇದಗಳು ಕೆಳಗೆ ಬಿದ್ದವು.ಅದೇ ಸಮಯದಲ್ಲಿ ಹಯಗ್ರೀವನೆಂಬ ರಾಕ್ಷಸನು ಆ ವೇದಗಳನ್ನು ಅಪಹರಿಸಿದ. ಅವನಿಂದ ವೇದಗಳನ್ನು ರಕ್ಷಿಸಲೆಂದು ವಿಷ್ಣುವು ಸೂಕ್ಷ್ಮವಾದ ಮೀನಿನ ರೂಪವನ್ನು ಪಡೆದು ಕೃತಮಾಲ ನದಿಯಲ್ಲಿ ಸೂಕ್ತ ಸಮಯಕ್ಕಾಗಿ ಕಾಯತೊಡಗಿದ.

ಆ ನದಿಯ ದಡದಲ್ಲಿ ವೈವಸ್ವತ ಮನು ತಪಸ್ಸನ್ನು ಮಾಡುತ್ತಿದ್ದ. ಒಂದು ದಿನ ಅರ್ಘ್ಯ ಪ್ರದಾನ ಮಾಡುತ್ತಿರುವಾಗ ಆತನ ಅಂಜಲಿಯಲ್ಲಿ ಸಣ್ಣ ಮೀನು ಬಂತು. ಅದನ್ನು

ನೀರಿನಲ್ಲಿ ಬಿಡಲು ಪ್ರಯತ್ನಿಸುತ್ತಿದ್ದಂತೆಯೇ ಮೀನು ತನ್ನನ್ನು ರಕ್ಷಿಸಬೇಕೆಂದು ಕೋರಿತು. ದಯಾಳುವಾದ ಮನುವು ಅದನ್ನು ಕಲಶದಲ್ಲಿರಿಸಿದ. ದಿನ ದಿನಕ್ಕೆ ಈ ಮೀನು ಬೆಳೆಯುತ್ತಾ ಬಂತು. ಆದ್ದರಿಂದ ಆ ಮೀನನ್ನು ಸರೋವರದಲ್ಲಿ ಬಿಡಲಾಯಿತು.ಆದರೂ ಬೆಳವಣಿಗೆ ನಿಲ್ಲಲಿಲ್ಲ. ಮನು ಇದರಿಂದ ಬೇಸರಗೊಂಡು ಆ ಮೀನನ್ನು ಸಾಗರದಲ್ಲಿ ಬಿಡಲು ಪ್ರಯತ್ನಿಸುತ್ತಿದ್ದಂತೆಯೇ ಆ ಮೀನು ಹೇಳಿತು 'ಸಾಗರದ ಇತರ ಜಲಚರಗಳು ನನ್ನನ್ನು ತಿಂದುಹಾಕುತ್ತವೆ. ಆದ್ದರಿಂದ ಅಲ್ಲಿ ನನ್ನನ್ನು ಬಿಡದೆ ರಕ್ಷಿಸಿ ' ಈ ಮಾತಿಗೆ ಚಕಿತನಾದ ಮನುವು ಹೇಳಿದ : 'ನಿನ್ನಂತಹ ಸಮರ್ಥವಾದ ಮೀನನ್ನು ನಾನು ಇದುವರೆವಿಗೂ ನೋಡಿಲ್ಲ; ಕೇಳಿಲ್ಲ. ಒಂದೇ ದಿನದಲ್ಲಿ ನೂರು ಯೋಜನದಷ್ಟು ಉದ್ದ ಮತ್ತು ಅಗಲಗಳಲ್ಲಿ ಬೆಳೆದಿದ್ದೀಯ. ಆದ್ದರಿಂದ ನೀನೇ ಪರಮೇಶ್ವರನಾಗಿರಬೇಕು. ನಿನ್ನ ಈ ಜನ್ಮವು ಲೋಕ ಕಲ್ಯಾಣಾರ್ಥ ಎಂಬುದನ್ನು ನಾನು ಗ್ರಹಿಸಿದ್ದೇನೆ '.

ಈ ಮಾತಿಗೆ ಮತ್ಸ್ಯವು ಇಂದಿನಿಂದ ಏಳನೆಯದಿನ ಮಹಾಜಲಪ್ರಳಯ ನಡೆಯಲಿದೆ. ಪ್ರಪಂಚವೆಲ್ಲಾ ಜಲಸಮಾಧಿಯಾಗುತ್ತದೆ. ಆದ್ದರಿಂದ ನೌಕೆಯಲ್ಲಿ ಸಪ್ತರ್ಷಿಗಳು, ಓಷಧಿಗಳು, ಬೀಜಗಳು ಮುಂತಾದವನ್ನೆಲ್ಲಾ ಸಂಗ್ರಹಿಸಿ ಅದರಲ್ಲಿ ನೀನೂ ಇರು. ನೌಕೆಯು ಚಲಿಸತೊಡಗಿದರೆ ಕೂಡಲೇ ವಾಸುಕಿಯನ್ನು ಹಗ್ಗದಂತೆ ಬಳಸಿ ನನ್ನ ಕೊಂಬಿಗೆ ಬಿಗಿದುಬಿಡು ಎಂದು ಹೇಳಿತು.

ಪ್ರಳಯವು ಬಂದಾಗ ಮನು ಹಾಗೆಯೇ ಮಾಡಿ ಜಲಪ್ರಳಯದಿಂದ ಉಳಿಸಲ್ಪಟ್ಟ.

ಭಾಗವತ ಪುರಾಣದಲ್ಲಿ ಮತ್ಸ್ಯವು ರಕ್ಷಿಸಿದ ರಾಜನ ಹೆಸರನ್ನು ದಕ್ಷಿಣದೇಶಾಧಿಪತಿ ಸತ್ಯವ್ರತ ಎಂದು ಹೇಳಲಾಗಿದೆ. ಪ್ರಳಯದ ನಂತರ ಮತ್ಸ್ಯಾವತಾರಿ ವಿಷ್ಣುವು ಸತ್ಯವ್ರತನನ್ನು ಮನ್ವಂತರಾಧಿಪ ಪ್ರಜಾಪತಿಯನ್ನಾಗಿ ಮಾಡಿ ಆಶೀರ್ವದಿಸಿದನೆಂದು ಹೇಳಿದೆ. ಅವನಿಗೇ ಮತ್ಸ್ಯಪುರಾಣ ಸಂಹಿತೆಯ ಉಪದೇಶವನ್ನು ಮಾಡಿದ (ಭಾಗವತ ೧ : ೩ : ೧೫, ೮ : ೨೪, ಮತ್ಸ್ಯ ೧ : ೩೩ - ೩೪ ).

ವಿಷ್ಣು ಧರ್ಮೋತ್ತರ ಪುರಾಣದ ( ೧ . ೭೭ ) ಪ್ರಕಾರ ಪ್ರಳಯಕಾಲದಲ್ಲಿ ಕೇವಲ ಸಪ್ತರ್ಷಿಗಳು ಮಾತ್ರವೇ ಉಳಿದಿದ್ದರು. ಮತ್ಸ್ಯರೂಪಧಾರಿ ವಿಷ್ಣುವು ಅವರನ್ನು ಹಿಮಾಲಯಗಳ ಶಿಖರಕ್ಕೆ ಕರೆದೊಯ್ದು ಉಳಿಸಿದ.

ಮತ್ಸ್ಯಾವತಾರವನ್ನು ಕೂಡಲೇ ಗುರ್ತಿಸಲು ಸಾಧ್ಯವಾಗುವಂತೆ ಮತ್ಸ್ಯದ ರೂಪದಲ್ಲಿಯೇ ಕಲ್ಪಿಸುವ ರೂಢಿಯುಂಟು. ವೈಖಾನಸಾಗಮದಲ್ಲಿ ಮತ್ಸ್ಯಾವತಾರಿಣಂ ದೇವಂ ಮತ್ಸ್ಯಾಕಾರಂ ಪ್ರಕಲ್ಪಯೇತ್ ಎಂದು ಹೇಳಲಾಗಿದೆ.

ಮತ್ಸ್ಯಾಕೃತಿಂ ಮಹಾಕಾಯಂ ಶುಕ್ಲವರ್ಣಂ ತು ಕಾರಯೇತ್ ||
ಕಚ್ಛ (ಆಸ್ಯ ) ಪುಚ್ಛಸಮಾಯುಕ್ತಂ ಪಕ್ಷಪಾದಸಮನ್ವಿತಮ್
ಗರ್ಭಜಾಲಸಮಾಯುಕ್ತಂ ಶತಾವಲಿ ಸಮನ್ವಿತಮ್ ||


ಫಲಕೇ ವಾ ಪಟೇ ಮಧ್ಯೇ ಆತ್ಮಾರ್ಥಾಯ ಲಿಖೇತ್ ಕ್ರಮಾತ್
ಪರಾರ್ಥೇ ಚ ಕ್ರಮಾತ್ ಕೃತ್ವಾ ಮೀಲಯೇತ್ಸುವಿಚಿತ್ರಿತೈಃ ॥
ಶತಪತ್ರಮಯಾ ತು ಮತ್ಸ್ಯರೂಪಂ ವರಂ ತು ಮಾಮ್
ಧ್ಯಾಯೇನ್ನಾರಾಯಣಂ ಸಾಕ್ಷಾತ್ಸರ್ವ ಕಾಮ ಸುಖಪ್ರದಮ್ ॥

( ವಿಷ್ಣು ಸಂಹಿತೆ, ೧೪ : ೩ - ೬ )

ಮತ್ಸ್ಯವು ಬಿಳಿಯ ಬಣ್ಣದಲ್ಲಿದ್ದು ಅದರ ಅಂಗಾಂಗಗಳೆಲ್ಲಾ ಇರಬೇಕು. ಈ ರೀತಿಯ ಸ್ವರೂಪವನ್ನು ಆರಾಧಿಸುವುದರಿಂದ ಇಷ್ಟಾರ್ಥ ಸಿದ್ಧಿಸುವುದೆಂದು ಹೇಳಲಾಗಿದೆ. ಶ್ರೀ ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರದಲ್ಲಿಯೂ ಕೇವಲ ಮತ್ಸ್ಯರೂಪವನ್ನೇ ವಿವರಿಸಿ ಅದರ ಅಳತೆಗಳನ್ನು ಕೊಡಲಾಗಿದೆ.

ವಿಷ್ವಕ್ಸೇನ ಸಂಹಿತೆಯಲ್ಲಿ (೧೧ : ೩೧ - ೩೮ ) ಕೇಂದ್ರದಲ್ಲಿ ಪುಂಡರೀಕನಿದ್ದು ಅಷ್ಟದಿಕ್ಕುಗಳಲ್ಲಿ ಪದ್ಮಪತ್ರಗಳಲ್ಲಿ ಮತ್ಸ್ಯವಿರಬೇಕೆಂದು ಹೀಗೆ ವಿವರಿಸಲಾಗಿದೆ -

.ಮತ್ಸ್ಯಾದೀನ್ ಶ್ರುಣು ನಾರದ
ಶತಪತ್ರ ಮಯಸ್ಯಾಥ ಪುಂಡರೀಕಸ್ಯ ಮಧ್ಯಮೇ ॥
ಪದ್ಮಾಸನಸ್ಥಂ ಮತ್ಸ್ಯಾಷ್ಟಪರೀತಂ ಕನಕಪ್ರಭಮ್
ತ್ರಿನೇತ್ರಂ ದ್ವಿಭುಜಂ ಚೈವ ಪ್ರಾಙ್ಮುಖಂ ಪದ್ಮಧಾರಿಣಮ್ ॥
ಸರ್ವಾವಯ ಸಂಪೂರ್ಣಂ ಸರ್ವಾಭರಣ ಭೂಷಿತಮ್
ಮತ್ಸ್ಯಾಭಿಮಾನಿನಂ ಮೂರ್ತಿಂ ಇತ್ಥಮುಕ್ತಂ ಚ ನಾರದ ॥
ಪದ್ಮ ಪೂರ್ವದಳೇ ಸೌವರ್ಣಂ ವಿನ್ಯಸೇತ್ ಬುಧಃ
ಆಗ್ನೇಯ ದಿಗ್ದಲೇ ಮತ್ಸ್ಯಂ ರಜತಂ ಚಾಥ ವಿನ್ಯಸೇತ್ ॥
ಯಾಮ್ಯಾದಿಗ್ದಲ ಮಧ್ಯೇತು ಮತ್ಸ್ಯಂ ತಾಮ್ರನಿಭಂ ನ್ಯಸೇತ್
ನೈರ್ಋತ್ಯದಿಗ್ದಲೇ ಮತ್ಸ್ಯಂ ಕೃಷ್ಣವರ್ಣಂ ತು ವಿನ್ಯಸೇತ್ ॥
ವಾರುಣೇ ದಿಗ್ದಲೇ ಮತ್ಸ್ಯಂ ರಕ್ತವರ್ಣಂ ತು ವಿನ್ಯಸೇತ್
ಸೌಮ್ಯದಿಗ್ದಲ ಮತ್ಸ್ಯಂ ತು ಧೂಮ್ರವರ್ಣಂ ತು ವಿನ್ಯಸೇತ್ ॥
ಈಶಾನ ದಿಗ್ದಲೇ ಮತ್ಸ್ಯಮಗ್ನಿ ವರ್ಣಂ ತು ವಿನ್ಯಸೇತ್
ಇತ್ಯಷ್ಟದಿಗ್ದಲ ಸ್ಥಿತೈಸ್ತು ಮತ್ಸ್ಯೈರಭಿಮುಖೀ ಕೃತಮ್ ॥
ಮತ್ಸ್ಯಾಭಿಮಾನಿನಂ ಮೂರ್ತಂ ತವ ಸ್ನೇಹಾತ್ ಪ್ರದರ್ಶಿತಮ್
ಅಸ್ಯ ದಕ್ಷಿಣ ಪಾರ್ಶ್ವೇ ತು ಶ್ರಿಯಂ ಪುಷ್ಟಿಂ ಪರತ್ರ ಚ ॥



ಚಿತ್ರ ೩ : ಮತ್ಸ್ಯಾಭಿಮಾನಿ ಮೂರ್ತಿ

ಮಧ್ಯದಲ್ಲಿ ಪದ್ಮದ ಮೇಲೆ ಪುಂಡರೀಕನು ಕುಳಿತಿದ್ದು ಆತನ ಅಷ್ಟದಿಕ್ಕುಗಳಿಗೂ ಮತ್ಸ್ಯಮೂರ್ತಿಗಳು ಶೋಭಾಯಮಾನವಾಗಿದ್ದು ಸ್ವರ್ಣಕಾಂತಿಯಲ್ಲಿ ಬೆಳಗುತ್ತಿರುತ್ತಾನೆ. ತ್ರಿನೇತ್ರಗಳು, ಎರಡು ಬಾಹುಗಳು ಇರುವ ಈ ಸ್ವಾಮಿಯು ಎರಡು ಹಸ್ತಗಳಲ್ಲಿ ಪದ್ಮಗಳನ್ನು ಧರಿಸಿರುತ್ತಾನೆ. ಸಕಲ ಅವಯವಗಳಿಂದ ಸುಂದರಾಕಾರನಾಗಿರುವ ಈ ಮೂರ್ತಿಯು ಬಗೆ ಬಗೆಯ ಆಭರಣಗಳಿಂದ ಅಲಂಕೃತನಾಗಿರುತ್ತಾನೆ. ಈ ಸ್ವಾಮಿಯ ಎಡ ಮತ್ತು ಬಲಗಳಲ್ಲಿ ಶ್ರೀದೇವಿ ಮತ್ತು ಪುಷ್ಟಿದೇವಿಗಳು ಆಸೀನರಾಗಿರುತ್ತಾರೆ. ಸುತ್ತಲು ಎಂಟು ದಳಗಳ ಪದ್ಮವಿದ್ದು ಪ್ರತಿದಿಕ್ಕಿಗೂ ಒಂದೊಂದು ಮತ್ಸ್ಯಮೂರ್ತಿ ಪ್ರತ್ಯೇಕವಾದ ಕಾಂತಿಯಲ್ಲಿ ಪರಸ್ಪರ ಅಭಿಮುಖವಾಗಿ ಇರುತ್ತವೆ. ಪೂರ್ವದಿಕ್ಕಿನ ದಳದಲ್ಲಿ ಚಿನ್ನದ ಬಣ್ಣದ ಮೀನೂ, ಆಗ್ನೇಯಕ್ಕೆ ಬೆಳ್ಳಿಬಣ್ಣದ ಮೀನೂ, ದಕ್ಷಿಣಕ್ಕೆ ತಾಮ್ರವರ್ಣದ ಮೀನೂ, ನೈಋತ್ಯಕ್ಕೆ ಕೃಷ್ಣವರ್ಣದ ಮೀನೂ, ಪಶ್ಚಿಮಕ್ಕೆ ರಕ್ತವರ್ಣದ ಮೀನೂ, ವಾಯುವ್ಯಕ್ಕೆ ಶ್ಯಾಮಲ ವರ್ಣದ ಮೀನೂ, ಉತ್ತರಕ್ಕೆ ಧೂಮ್ರ ವರ್ಣದ ಮೀನೂ, ಈಶಾನ್ಯಕ್ಕೆ ಅಗ್ನಿ ವರ್ಣದ ಮೀನೂ ಇರುತ್ತವೆ. ಈತನನ್ನು **ಮತ್ಸ್ಯಾಭಿಮಾನಿ ಮೂರ್ತಿ** ಎನ್ನಲಾಗುತ್ತದೆ.


ಪಾಂಚರಾತ್ರಾಗಮದಲ್ಲಿ ಈ ರೂಪದ ಧ್ಯಾನ ದೊರೆಯುತ್ತದೆ :

**ವಾಮೇ ಶಂಖಂ ಗದಾಂ ದಕ್ಷೇ ದ್ವಿಭುಜೋ ಮತ್ಸ್ಯರೂಪಧೃತ್**
**ನರಾಂಘ್ರಿರ್ಮತ್ಸ್ಯ ರೂಪೋ ವಾ ಮತ್ಸ್ಯರೂಪೀ ಜನಾರ್ಧನಃ ||**

ಮತ್ಸ್ಯರೂಪವನ್ನು ಧರಿಸಿದ ಜನಾರ್ಧನನು ಶ್ವೇತವರ್ಣ ಕಾಂತಿಯ ಮೈಯಿಂದ ಕೇವಲ ಎರಡು ಹಸ್ತಗಳೊಂದಿಗೆ ಕೆಳಭಾಗ ಮತ್ಸ್ಯರೂಪದಲ್ಲಿದ್ದು ಮೇಲ್ಭಾಗ ಮನುಷ್ಯ ರೂಪದಲ್ಲಾಗಲಿ, ಮನುಷ್ಯನಂತೆ ಪಾದ ಇದ್ದು ಮೇಲ್ಭಾಗ ಮತ್ಸ್ಯರೂಪದಲ್ಲಾಗಲಿ ಇರಬೇಕು. ಬಲಗೈಯಲ್ಲಿ ಗದೆ, ಎಡಗೈಯಲ್ಲಿ ಶಂಖ ಧರಿಸಿರಬೇಕು.

ಮತ್ಸ್ಯದ ವರ್ಣವು ಸಾಧಾರಣವಾಗಿ ಬಿಳುಪು ಎಂದು ಹೇಳಿದ್ದರೂ ಇಲ್ಲಿ ಹಲವು ವರ್ಣಗಳಲ್ಲಿ ಮತ್ಸ್ಯದ ಚಿತ್ರಣವಿದೆ. **ಶೇಷಸಂಹಿತೆಯಲ್ಲಿ** (೨೨ : ೧೫) ಹರಿಯು ಕೋರೆಗಳು ಕಾಣಿಸುವಂತೆ ಭಯಂಕರವಾಗಿ ಬಾಯನ್ನು ತೆರೆದುಕೊಂಡು ಮತ್ಸ್ಯರೂಪದಲ್ಲಿದ್ದು ಶಂಖ ಚಕ್ರಧಾರಿಯಾಗಿರುತ್ತಾನೆ. ಈ ಸ್ವಾಮಿಯನ್ನು ಧ್ಯಾನಿಸಿದರೆ ಸಕಲ ವಿದ್ಯೆಗಳು ಸಿದ್ಧಿಸುತ್ತವೆ. **(ದಂಷ್ಟ್ರಾಕರಾಲಮತ್ಸ್ಯುಗ್ರಂ ಶಂಖ ಚಕ್ರಧರಂ ವಿಭುಮ್ । ಮಾತ್ಸ್ಯರೂಪಹರಿಂ ಧ್ಯಾಯೇತ್ ಸರ್ವವಿದ್ಯಾಪ್ರದಾಯಕಮ್ ||)**

ಸ್ವಾಮಿಯನ್ನು ಮೀನಿನ ದೇಹದಲ್ಲಿ ಮಾನವ ಮುಖದೊಂದಿಗೆ ಆಯುಧಗಳನ್ನು ಧರಿಸಿರುವಂತೆ ತೋರಿಸಿರುವುದೂ ಉಂಟು. ನಾಲ್ಕು ತೋಳುಗಳಿದ್ದು ಬಲಪಾರ್ಶ್ವದ ಕೆಳಹಸ್ತದಲ್ಲಿ ಅಭಯ ಮುದ್ರೆ, ಮೇಲಿನ ಹಸ್ತದಲ್ಲಿ ಚಕ್ರ, ಎಡಭಾಗದ ಕೆಳಹಸ್ತದಲ್ಲಿ ವರದ ಮುದ್ರೆ, ಮೇಲಿನ ಹಸ್ತದಲ್ಲಿ ಶಂಖಧರಿಸಿರುತ್ತಾನೆ. ಇದು ಬಹುಳವಾಗಿ ಪ್ರಚಾರದಲ್ಲಿರುವ ಸ್ವರೂಪ. ತೋಳುಗಳು ಹೆಚ್ಚಿದಂತೆ ಆಯುಧಗಳೂ ಸೇರುತ್ತವೆ.



ಚಿತ್ರ ೪ : ಮತ್ಸ್ಯಾವತಾರ ಮೂರ್ತಿ ( ದ್ವಿಭುಜ )




ಚಿತ್ರ ೫ : ಮತ್ಸ್ಯಾವತಾರ ಮೂರ್ತಿ (ಚತುರ್ಭುಜ )

ಇದೇ ಮೂರ್ತಿಯನ್ನು ಮಾನವ ದೇಹದೊಂದಿಗೆ ಮತ್ಸ್ಯದ ಮುಖ ಇರುವಂತೆ ರೂಪಿಸಿರುವುದೂ ಉಂಟು. ನಾಲ್ಕು ತೋಳುಗಳ ದೇವನು ಅಭಯವರದ ಮುದ್ರೆಗಳನ್ನು ಶಂಖ ಚಕ್ರಗಳನ್ನು ಧರಿಸಿರುವ ದೇವನು ಶ್ರೀದೇವಿ, ಭೂದೇವಿ, ನೀಲಾದೇವಿಯರೊಂದಿಗೆ ಮತ್ಸ್ಯದ ತಲೆಯೊಂದಿಗಿರುತ್ತಾನೆ (**ಚಕ್ರಶಂಖಧರಂ ದೇವಂ ಸರ್ವಾಭರಣ ಸಂಯುತಮ್ । ಮತ್ಸ್ಯ ಗ್ರೀವ ಹರಿಂ ವಂದೇ ಶ್ರೀ ಭೂ ನೀಲಾದಿ ಸಂಯುತಮ್ ॥** ಪರಾಶರ ಸಂಹಿತೆ, ೨೮ : ೬).

ಈ ದೇವನಿಗೆ ಇನ್ನೂ ಹೆಚ್ಚಿನ ತೋಳುಗಳು ಇರುವುದುಂಟು. ಎಂಟು ತೋಳುಗಳಿದ್ದಾಗ ದೇವನು ಚಕ್ರ, ಶಂಖ, ಗದಾ, ಪದ್ಮ, ಶಾರ್ಙ್ಗ ಎಂಬ ಬಿಲ್ಲು, ಬಾಣ, ಅಭಯ, ವರದ ಹಸ್ತಗಳು ಇರುತ್ತವೆ. ಖಡ್ಗ ಖೇಟಕಗಳು ಇರುವುದೂ ಉಂಟು. ಆಗ ಹತ್ತು ತೋಳುಗಳಿರಬಹುದು. ಸ್ವಾಮಿಯು ಶ್ರೀವತ್ಸ, ಕೌಸ್ತುಭ, ವನಮಾಲೆ, ಕಿರೀಟಾದಿಗಳಿಂದ ವಿರಾಜಿತನಾಗಿ ಶ್ರೀದೇವಿ, ಭೂದೇವಿ, ನೀಲಾದೇವಿಯ ಸಮೇತವಾಗಿರುತ್ತಾನೆ. ಈ ಸ್ವಾಮಿಯನ್ನು ಮತ್ಸ್ಯನಾರಾಯಣ ಎಂದು ಕರೆಯುತ್ತಾರೆ (**ಚಕ್ರ ಶಂಖ ಗದಾ ಪದ್ಮ ಶಾರ್ಙ್ಗ ಬಾಣಸಿಧಾರಿಣಮ್। ವಿಭುಂ ಖೇಟಧರಂ ದೇವಂ ಕಿರೀಟಾದ್ಯೈರಲಂಕೃತಮ್ ॥ ಶ್ರೀವತ್ಸಕೌಸ್ತುಭೋರಸ್ಕಂ ವನಮಾಲಾವಿರಾಜಿತಮ್ । ಮತ್ಸ್ಯನಾರಾಯಣಂ ವಂದೇ ಶ್ರೀಭೂನೀಲಾಧಿಪಂ ಸದಾ ॥** ಪರಾಶರಸಂಹಿತೆ ೨೮ : ೨೦ - ೨೧). ಹತ್ತು ತೋಳುಗಳಲ್ಲಿ ಖಡ್ಗ ಖೇಟಕಗಳಿಗೆ ಬದಲಾಗಿ ಶೂಲ, ವಜ್ರ, ಅಂಕುಶಗಳನ್ನು ಧರಿಸಿ ಕೇವಲ ಅಭಯಹಸ್ತ ಒಂದೇ ರೂಪಿಸಬಹುದು (**ಶೂಲ ವಜ್ರಾಂಕುಶಧರ ಮತ್ಸ್ಯಗ್ರೀವ ಮಹಂ ಭಜೇ ॥** ಪರಾಶರಸಂಹಿತೆ, ೨೩ : ೨೫ ).

ಹನ್ನೆರಡು ತೋಳುಗಳಿದ್ದಾಗ ಚಕ್ರ, ಶಂಖ, ಗದೆ, ಪದ್ಮ, ಶಾರ್ಙ್ಗ(ಬಿಲ್ಲು), ಬಾಣ, ಖೇಟ, ವಜ್ರ, ಅಂಕುಶ, ವಹ್ನಿ (ಅಗ್ನಿ), ಶೂಲ ಮತ್ತು ಅಭಯ ಮುದ್ರೆ ಇರಬೇಕು (**ಚಕ್ರಶಂಖಾಗದಾ ಪದ್ಮ ಶಾರ್ಙ್ಗ ಬಾಣಾಸಿಧಾರಿಣಮ್ । ಖೇಟವಜ್ರಾಂಕುಶಧರಂ ವಹ್ನಿ ಶೂಲಧರಂ ವಿಭುಮ್ ॥** ಪರಾಶರ ಸಂಹಿತೆ ೨೩ : ೨೮). ಅಥವ ವರದ, ಅಭಯ, ಗದೆ, ಚಕ್ರ, ಶಂಖ, ಬಾಣ, ಧನುಸ್ಸು, ಶೂಲ, ಖೇಟಕ, ಅಂಬುಜ (ಪದ್ಮ), ವಜ್ರ, ಪಾಶಗಳನ್ನು ಧರಿಸಿರಬಹುದು (**ವರಾಭಯ ಗದಾ ಚಕ್ರ ಶಂಖ ಬಾಣಧನುರ್ಧರಮ್ । ಶೂಲ ಖೇಟಾಂಬುಜಧರಂ ವಜ್ರಪಾಶಧರಂ ವಿಭುಂ ॥** ಪರಾಶರ ಸಂಹಿತೆ ೨೩ : ೩೦ ) ಮತ್ಸ್ಯಗ್ರೀವ ಹರಿಯು ಸರ್ವಮೃತ್ಯುವಿನಾಶಕನೆಂದು, ಸರ್ವಶತೃಕ್ಷಯಕಾರಕನೆಂದು ಆರಾಧಿಸುವಾಗ ಕೇವಲ ನಾಲ್ಕು ಭುಜಗಳಿದ್ದು ವರದಾಭಯ ಮುದ್ರೆಗಳೊಂದಿಗೆ ಅಗ್ನಿ ಮತ್ತು ಚಕ್ರಗಳನ್ನು ಮಾತ್ರವೇ ಧರಿಸಿರುತ್ತಾನೆ. ಸರ್ವಾಲಂಕಾರ ಭೂಷಿತನಾದ ಸ್ವಾಮಿಯು ಕಿರೀಟವನ್ನು ಧರಿಸಿರುತ್ತಾನೆ. ಈ ರೂಪದಲ್ಲಿ ಶ್ರೀದೇವಿ, ಭೂದೇವಿ ಮತ್ತು ನೀಲಾದೇವಿಯರು ಇರುವುದಿಲ್ಲ (**ಅಗ್ನಿ ಚಕ್ರಧರಂ ದೇವಂ ಕಿರೀಟಾದಿ ವಿಭೂಷಿತಮ್। ಮತ್ಸ್ಯಗ್ರೀವಹರಿಂ ವಂದೇ ಸರ್ವಮೃತ್ಯುವಿನಾಶನಮ್** ಪರಾಶರ ಸಂಹಿತೆ ೨೩ : ೩೬ ). ಶಂಖ, ಚಕ್ರ, ಅಭಯ, ವರದಮುದ್ರೆಗಳನ್ನು ಧರಿಸಿ ನಾಲ್ಕು ತೋಳುಗಳಿರುವ ದೇವನು ಮತ್ಸ್ಯಾನನ ಹರಿ ಎಂದು ಹೇಳಲ್ಪಡುತ್ತಾನೆ (**ಮತ್ಸ್ಯಾನನ ಹರಿಂ ದೇವಂ ಚಕ್ರಶಂಖಧರಂ ವಿಭುಮ್ ।** ಪರಾಶರಸಂಹಿತೆ ೧೫ : ೨೪ ).



ಚಿತ್ರ ೬ : ಮತ್ಸ್ಯಾನನ ಹರಿ

ವಿಷ್ವಕ್ಸೇನ ಸಂಹಿತೆಯಲ್ಲಿ ವಿವರಿಸಿರುವಂತೆ ಸ್ವಾಮಿಯು ನರರೂಪದಲ್ಲಿದ್ದು ಸೌಮ್ಯಮುಖದಲ್ಲಿ ಚತುರ್ಭುಜಧಾರಿಯಾಗಿದ್ದು ನಿಂತು ಅಥವ ಕುಳಿತಿರುವಂತೆ ಇರಬಹುದು. ಶಂಖ ಚಕ್ರ ಗದೆಗಳನ್ನು, ಅಭಯಮುದ್ರೆಯನ್ನು ಧರಿಸಿರಬಹುದು. ಮತ್ಸ್ಯಾಕಾರವನ್ನು ಬರೆದು ಅಥವ ಶಿಲಾ, ಕಾಷ್ಠ, ಲೋಹಗಳಲ್ಲಿ ರೂಪಿಸಿ ಗೋಡೆಯ ಮೇಲೆ ಸಮುದ್ರವನ್ನು ಚಿತ್ರಿಸಿ ಅದರಲ್ಲಿ ಪದ್ಮವನ್ನು ರೂಪಿಸಿ ಮತ್ಸ್ಯವನ್ನು ಅಲಂಕರಿಸಬೇಕು. ಅಲ್ಲಿ ಪಂಚಾಯುಧಗಳು, ಛತ್ರಿ, ಚಾಮರಾದಿಗಳನ್ನು ಚಿತ್ರಿಸಬೇಕು. ನಾರದಾದಿಮುನಿಗಳು ಅದನ್ನು ಪೂಜಿಸುತ್ತಿರುವಂತೆ ಚಿತ್ರಿಸಬೇಕು (ಪಾದ್ಮ ಸಂಹಿತೆ ಕ್ರಿ : ೧೭ : ೨೭ ).

ಸ್ವಾಮಿಯ ರೂಪ ಯಾವುದೇ ಆಗಿದ್ದರೂ ಆರಾಧಿಸುವ ಭಕ್ತನು ಮಾತ್ರ ನಾರಾಯಣನನ್ನು ಸ್ಮರಿಸುತ್ತಾ ಆರಾಧಿಸಬೇಕು (**ಧ್ಯಾಯೇನ್ನಾರಾಯಣಂ ಸಾಕ್ಷಾತ್ಸರ್ವಕಾಮಸುಖಪ್ರದಮ್ ||** ವಿಷ್ಣು ಸಂಹಿತಾ, ೧೪ : ೬ ).

ಮತ್ಸ್ಯಾವತಾರವನ್ನು ಪ್ರತಿಷ್ಠಾಪಿಸುವ ಗರ್ಭಗುಡಿಯ ಹಿಂದಿನ ಗೋಡೆಯನ್ನು ಸಾಗರದ ಕಲ್ಪನೆಬರುವ ರೀತಿಯಲ್ಲಿ ನೀರಿನಬಣ್ಣವನ್ನು ರೂಪಿಸಿ ಅಲ್ಲಿ ಪಂಚಾಯುಧಗಳನ್ನು, ಷ್ಟಾಯುಧಗಳನ್ನು , ಛತ್ರಿ ಚಾಮರಗಳನ್ನು, ಜನರನ್ನು ಚಿತ್ರಿಸಬೇಕು.

ಈ ಸ್ವಾಮಿಯನ್ನು ರೂಪಿಸಬೇಕಾಗಿರುವ ಅಳತೆಗಳನ್ನು ಪ್ರಸ್ತುತ ಶಾಸ್ತ್ರದಲ್ಲಿ ವಿವರವಾಗಿ ಕೊಡಲಾಗಿದೆ. ಇಷ್ಟು ವಿವರಗಳು ಸಾಧಾರಣವಾಗಿ ಇತರ ಶಾಸ್ತ್ರ ಗ್ರಂಥಗಳಲ್ಲಿ ಸಿಗುವುದಿಲ್ಲ. ಉದಾಹರಣೆಗೆ ಹಯಶೀರ್ಷಸಂಹಿತೆಯ ಆದಿಕಾಂಡದಲ್ಲಿ (೨೦ : ೧ - ೩)

**ಷಟ್ತ್ರಿಂಶದಂಗುಲಾಯಾಮಂ ತದರ್ಧೇನ ತು ವಿಸ್ತೃತಮ್ ||**

**ದ್ವೈಘ್ಯಾಷ್ಟಮಾಂಶ ಸಂಯುಕ್ತಂ ಪುಚ್ಛಕೃಚ್ಛ್ಯಂ ತು ಕಾರಯೇತ್**

**ರೋಹಿತಂ ವಿವೃತಾಸ್ಯಂತು ದ್ವಾದಶಾಂಗುಲ ಮಾನತಾ ||**

**ಯದ್ವೈಕಂ ಪೃಷ್ಠರೋಮಂತು ಪುಚ್ಛೋರ್ಧ್ವಂ ಕ್ರೋಡಗಂ ತಥಾ**

ಮತ್ಸ್ಯಮೂರ್ತಿಯ ಉದ್ದವು ೨೬ ಅಂಗುಳ . ಅದರ ಅಗಲವು ಅರ್ಧಭಾಗ (ಎಂದರೆ ೧೩ ಅಂಗುಳ ).ಬಾಲದ ಉದ್ದವು ೮ ಅಂಗುಳ .ಅದರ ಮಧ್ಯದೇಹದ ಉದ್ದವು ೧೨ ಅಂಗುಳ

ಮಾರ್ಕಂಡೇಯ ಸಂಹಿತೆಯಲ್ಲಿ ೧೬ ಅಂಗುಳ ಎತ್ತರವಾಗಿದ್ದು ೬ ಅಂಗುಳ ಅಗಲವಾಗಿರುತ್ತದೆ ಎಂದು ಹೇಳಲಾಗಿದೆ (**ಮತ್ಸ್ಯಾಕಾರಂ ಭವೇದ್ಯಸ್ತು ಷೋಡಶಾಂಗುಲಮುನ್ನತಮ್। ಷಡಂಗುಲಂ ತು ವೈಪುಲ್ಯಂ ಮಾನಾಖ್ಯಂ ಪರಿಕಲ್ಪಯೇತ್||**) ಉಳಿದ ಅಳತೆಗಳನ್ನು ಶಿಲ್ಪಿಯೇ ಕಲ್ಪಿಸಿಕೊಳ್ಳಬೇಕೆಂಬ ಸ್ವಾತಂತ್ರ್ಯ ಕೊಡಲಾಗಿದೆ.

ಪಾದ್ಮ ಸಂಹಿತೆಯಲ್ಲಿ (೧೮ :೨ ) ಮೀನ ದೇಹದ ಉದ್ದವು ೩೨ ಅಂಗುಳವಾಗಿದ್ದು ಅದರ ಅಗಲವು ೧೦ ಅಂಗುಳವೆಂದು ಹೇಳಲಾಗಿದೆ (**ತತ್ರ ಮತ್ಸ್ಯಸ್ಯ ಕಾಯಶ್ಚ ದೈರ್ಘ್ಯಾದ್ವೈ ಷೋಡಶಾಂಗುಲಮ್ । ದಶಾಂಗುಲಂ ತು ವೈಪುಲ್ಯಾನ್ ಮೀನಾಖ್ಯಂ ಪರಿಕಲ್ಪಯೇತ್||**) ಇಲ್ಲಿಯೂ ಉಳಿದ ಅಳತೆಗಳನ್ನು ಶಿಲ್ಪಿಯ ಕಲ್ಪನೆಗೆ ಬಿಡಲಾಗದೆ.

ಈ ಅಳತೆಗಳನ್ನು ಪ್ರಸ್ತುತ ಶಾಸ್ತ್ರ ಗ್ರಂಥದಲ್ಲಿ ಹೇಳಿರುವ ಅಳತೆಗಳೊಂದಿಗೆ ಪಟ್ಟಿ ಮಾಡಿ ಓದುಗರ ಅನುಕೂಲಕ್ಕಾಗಿ ಮುಂದಿನ ಪುಟದಲ್ಲಿ ಕೊಡಲಾಗಿದೆ.

| ಶಾಸ್ತ್ರ ಕೃತಿ / ಮೂರ್ತಿಯ ಅಂಗಗಳ ಎತ್ತರ | ಬ್ರಾಹ್ಮೀಯ ಚಿತ್ರಕರ್ಮ ಶಾಸ್ತ್ರಂ | ಹಯಶೀರ್ಷ ಸಂಹಿತೆ | ಮಾರ್ಕಂಡೇಯ ಸಂಹಿತೆ | ಪಾದ್ಮ ಸಂಹಿತೆ |
|---|---|---|---|---|
| ೧. ಮೂರ್ತಿಯ ಒಟ್ಟು ಎತ್ತರ(ಅಂಗುಳಗಳಲ್ಲಿ) ನಾಸಾಗ್ರದಿಂದ ಬಾಲದ (ಪುಚ್ಛದ)ಕೊನೆ | ೨೮ (ಉತ್ತಮ ದ್ವಿತಾಲ) | ೨೬ (ಸಾರ್ಧ ದ್ವಿತಾಲ) | ೧೬ (ಉತ್ತಮ ಏಕತಾಲ) | ೩೨ (ಅಧಮ ತ್ರಿತಾಲ) |
| ೨. ಕಿವಿಯಿಂದ ಬಾಲದ ಪ್ರಾರಂಭ | ೧೮ | ೧೨ | - | - |
| ೩. ಮೂಗಿನ ತುದಿಯಿಂದ ಕಣ್ಣು | ೨ | ೨ | - | - |
| ೪. ಕಣ್ಣಿನಿಂದ ಕಿವಿ | ೪ | ೪ | - | - |
| ೫. ಬಾಲದ ಉದ್ದ | ೪ | ೮ | - | - |
| ೬. ಬಾಲದ ಮೂಲ | ೨ | - | - | - |
| ೭. ಬಾಲದ ತುದಿ (ಕೊನೆ) | ೬ | - | - | - |
| ೮. ಕಿವಿಯ ಅಗಲ | ೨ | - | - | - |
| ೯. ಸುತ್ತಳತೆ * | ೧೪ | ೧೩ | ೬ | ೧೦ |

*ಉದ್ದದಲ್ಲಿ ಅರ್ಧ ಭಾಗವು ಆಯಾ ಅಂಗಗಳ ಸುತ್ತಳತೆಯಾಗಿರುತ್ತದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಈ ಮೂರ್ತಿಯ ಸ್ಥಾಪನೆ, ಆರಾಧನೆಯು ಸಕಲ ಪಾಪಗಳನ್ನು ಪರಿಹರಿಸುತ್ತದೆ. ಈ ಮೂರ್ತಿಯ ಆರಾಧನೆಯು ಬಹು ರಹಸ್ಯವೂ, ಸಾರಾತ್ ಸಾರತರವೂ ಆದ ಮಾರ್ಗವಾಗಿದ್ದು ಭುಕ್ತಿ, ಮುಕ್ತಿ, ಸಕಲ ಸುಖ ಸೌಭಾಗ್ಯಗಳನ್ನು ಕರುಣಿಸುತ್ತದೆ. ಈ ಮೂರ್ತಿಯನ್ನು ಆತ್ಮಾರ್ಥಕ್ಕಾಗಲಿ, ಪರಾರ್ಥಕ್ಕಾಗಲಿ ಅರ್ಚಿಸಬಹುದು. ನಾರಾಯಣನು ಮತ್ಸ್ಯರೂಪದಲ್ಲಿ ಬಹುಶ್ರೇಷ್ಠವೆನಿಸಿದ್ದು ಸರ್ವಕಾಮ ಸುಖ ಪ್ರದನೆಂದು ಪ್ರಖ್ಯಾತನಾಗಿದ್ದಾನೆ (ವಿಷ್ಣುಸಂಹಿತಾ ೧೪ : ೧ ೮ ).

*ಇತಿ ಶ್ರೀ ಬ್ರಾಹ್ಮೀಯೇ ಚಿತ್ರಕರ್ಮ ಶಾಸ್ತ್ರೇ ಪ್ರಾದುರ್ಭಾವಕಾಂಡೇ ಮತ್ಸ್ಯಲಕ್ಷಣಂ ನಾಮ ಪ್ರಥಮೋಽಧ್ಯಾಯಃ*

ಅಥ ದ್ವಿತೀಯೋಽಧ್ಯಾಯಃ

# ಕೂರ್ಮ ಲಕ್ಷಣಮ್

ಅಥ ಕೂರ್ಮಸ್ಯ ರೂಪಸ್ಯ ವಕ್ಷ್ಯೇ ಮಾನವಿಭಾಗಿಕಮ್
[ಅತಃ ಪರಂ ಕೂರ್ಮರೂಪಸ್ಯ ವಕ್ಷ್ಯೇ ಮಾನ ವಿಭಾಗಿಕಮ್]
ದ್ವಿಮಾತ್ರಂ ಸ್ಯಾಚ್ಛಿರೋಮಾನಂ ಕರ್ಣಂ ವೇದಾಂಶಕಂ ಭವೇತ್ ॥ ೧ ॥
ದ್ವಿಮಾತ್ರಂ ಹೃದಯಾಂತಂ ಸ್ಯಾತ್ತತ್ಸಮಂ ನಾಭಿ[ಹ] ಮಧ್ಯಮಮ್
ತಸ್ಮಾತ್ತ್ರಿಮಾತ್ರಂ ಪೃಷ್ಠಂ ಸ್ಯಾತ್ ದಾಮಪ್ರೋಕ್ತಂ ದಲಂ ತಥಾ
[ತ್ರಿಮಾತ್ರಂ ಪೃಷ್ಠಮಿತಿ ಪ್ರೋಕ್ತಂ ದಾಮ ಪ್ರೋಕ್ತಂ ದಲಂತಥಾ] ॥ ೨ ॥
ಏಕೈಕಮಂಗುಲಂ ಪ್ರೋಕ್ತಂ ಪಾದಮಾನಂ ತಥೈವ ಹೀ
ಆಯಾಮ ಸಮವಿಸ್ತಾರಂ ಶೇಷ ಮೂಹ್ಯಂ ವಿಧಾನತಃ ॥ ೩ ॥
ಪಂಚವರ್ಣೋ ಜಲೇ ವಂಶಶ್ಚಾಂತಶ್ಚಂದ್ರ ಸಮಪ್ರಭಃ
[ಪಂಚವರ್ಣೋ ಜಲಂ ವಂಶಮಂತಶ್ಚಂದ್ರ ಸಮಪ್ರಭಮ್ ] ॥ ೪ ॥

ಕೂರ್ಮ ಮೂರ್ತಿಯ ಅಳತೆಗಳ ವಿವರಗಳನ್ನು ಇನ್ನು ಮುಂದೆ ಹೇಳುತ್ತೇನೆ: ಶಿರವು ೨ ಅಂಗುಳ. ಕಿವಿ ೪ ಅಂಗುಳ. ಹೃದಯದವರೆವಿಗೂ ೨ ಅಂಗುಳ, ನಾಭಿಯವರೆವಿಗೂ ೨ ಅಂಗುಳ, ಪೃಷ್ಠವು ೩ ಅಂಗುಳ. ಪಾದ ಮಾನವು ಒಂದೊಂದು ಒಂದೊಂದು ಅಂಗುಳ. ಅದರ ಅಗಲವು ಉದ್ದದಷ್ಟೇ ಇರುತ್ತದೆ. ಉಳಿದ ಅಂಗಾಂಗಗಳನ್ನು ಕಲ್ಪಿಸಿಕೊಂಡು ಅಂದವಾಗಿರುವಂತೆ ರೂಪಿಸಬೇಕು. ಪ್ರಾಣಿಗಳ ಬಣ್ಣಗಳು ದಟ್ಟವಾಗಿರುತ್ತವೆ. ತಳಭಾಗವು ಚಂದ್ರನಂತಹ ಬಣ್ಣವನ್ನು ಹೊಂದಿರುತ್ತದೆ.

### *ವಿಶೇಷ ವಿವರ*

ಪ್ರಜಾಪತಿಯು ಪ್ರಜೋತ್ಪಾದನೆಯ ಉದ್ದೇಶದಿಂದ ಕೂರ್ಮರೂಪವನ್ನು ಧರಿಸಿ ನೀರಿನಲ್ಲಿ ಸಂಚರಿಸಿದನೆಂಬ ಉಲ್ಲೇಖವು ಶತಪಥ ಬ್ರಾಹ್ಮಣದಲ್ಲಿ ( ೭ : ೫ : ೧ , ೫ : ೧೦) ಮೊದಲಿಗೆ ದೊರೆಯುತ್ತದೆ. ಇದೇ ಮಾತು ಮಹಾಭಾರತ (ಆದಿಪರ್ವ, ೧೬), ಪದ್ಮ

ಪುರಾಣ ( ಉತ್ತರಖಂಡ, ೨೫೧) ಮತ್ತು ಭಾಗವತ (೧ : ೩ : ೨೬) ಗಳಲ್ಲಿ ದೊರೆಯುತ್ತದೆ. ಭೂಮಿ ರಸಾತಲಕ್ಕೆ ಮುಳುಗುತ್ತಿದ್ದಾಗ ಮಹಾವಿಷ್ಣುವು ಕೂರ್ಮಾವತಾರವನ್ನು ಪಡೆದುಕೊಂಡು ಭೂಮಿಯನ್ನು ತನ್ನ ಬೆನ್ನಿನ ಮೇಲೆ ನಿಲ್ಲಿಸಿಕೊಂಡ. ಕೂರ್ಮದ ಈ ಬೆನ್ನು ಒಂದು ಲಕ್ಷ ಯೋಜನೆಗಳಷ್ಟು ವೈಶಾಲ್ಯವನ್ನು ಹೊಂದಿತ್ತು (ಲಿಂಗ ಪುರಾಣ, ೧೪).

ದೂರ್ವಾಸ ಮಹರ್ಷಿಯು ಪಾರಿಜಾತ ಪುಷ್ಪಗಳ ಮಾಲೆಯನ್ನು ಇಂದ್ರನಿಗೆ ಬಹುಕರಿಸಿದ. ಇಂದ್ರ ಅದನ್ನು ಬಹು ಕ್ಷುಲ್ಲಕವಾಗಿ ಕಂಡ. ಇದರಿಂದ ಮುನಿಯು ಕೋಪಗೊಂಡು ನಿನ್ನ ವೈಭವ ನಷ್ಟವಾಗಲಿ ಎಂದು ಶಪಿಸಿದ. ಆದ್ದರಿಂದ ಲಕ್ಷ್ಮಿಯು ಸಾಗರ ಗರ್ಭದಲ್ಲಿ ಅಡಗಿದಳು. 'ಮಂದರ ಪರ್ವತವನ್ನು ಕಡೆಗೋಲಾಗಿರಿಸಿಕೊಂಡು, ವಾಸುಕಿಯನ್ನು ಹಗ್ಗವನ್ನಾಗಿಮಾಡಿಕೊಂಡು, ದೇವ ದಾನವರಿಬ್ಬರೂ ಸೇರಿ ಕ್ಷೀರಸಾಗರದ ಮಂಥನವನ್ನು ಮಾಡಬೇಕು. ಆಗ ತಾನೇ ಕೂರ್ಮವಾಗಿ ತನ್ನ ಬೆನ್ನಿನ ಮೇಲೆ ಮಂದರ ಪರ್ವತವನ್ನು ಹೊರುತ್ತೇನೆ. ಆಗ ಲಕ್ಷ್ಮೀ ದೊರೆಯುತ್ತಾಳೆ ' ಎಂದು ಮಹಾವಿಷ್ಣು ಹೇಳಿದ (ಪದ್ಮ ಪುರಾಣ, ಬ್ರಹ್ಮ ಖಂಡ ೮). ಕ್ಷೀರಸಾಗರದ ಮಂಥನವು ನಡೆದಿದ್ದು ಅಮೃತ ಪ್ರಾಪ್ತಿಗಾಗಿ ಎಂದೂ (ಪದ್ಮ ಪುರಾಣ, ಉತ್ತರಖಂಡ ೨೩೧ - ೨೩೩, ಭಾಗವತ ೨ : ೭ : ೧೩, ೮ : ೭ : ೮) ಹೇಳಲಾಗುತ್ತದೆ.

ಭಾಗವತ ಪುರಾಣದಲ್ಲಿ ಅಮೃತವನ್ನು ಪಡೆಯಲೆಂದು ಕ್ಷೀರಸಾಗರ ಮಂಥನ ನಡೆಸಿದ್ದರ ವಿವರಣೆಯು ಹೀಗೆ ದೊರೆಯುತ್ತದೆ :

ಅಸುರರಿಂದ ಬಲವಾಗಿ ಪೆಟ್ಟು ತಿಂದ ದೇವತೆಗಳು ಬಹುದುರ್ಬಲರಾದರು. ಮಹೇಂದ್ರ ವರುಣರು ತಮ್ಮಲ್ಲೇ ಸಮಾಲೋಚನೆ ನಡೆಸಿ ಯಾವ ತೀರ್ಮಾನಕ್ಕೂ ಬರಲಾರದೆ ಪಿತಾಮಹನಾದ ಬ್ರಹ್ಮನ ಬಳಿಗೆ ಹೋದರು.

ಬ್ರಹ್ಮನು ಪರಿಸ್ಥಿತಿಯನ್ನು ಅವಲೋಕಿಸಿ 'ಈಗ ನಾವೆಲ್ಲರೂ ನಿತ್ಯನೂ, ಅನಂತನೂ, ದೇವ ಶ್ರೇಷ್ಠನೂ ಆದ ವಿಷ್ಣುವನ್ನೇ ಆಶ್ರಯಿಸಬೇಕು. ಅನ್ಯಥಾ ಮಾರ್ಗವಿಲ್ಲ' ಎಂದು ಹೇಳಿದ. ಮರದ ಬೇರಿಗೆ ನೀರುಕೊಟ್ಟರೆ ಹೇಗೆ ಅದು ಎಲ್ಲಾ ಕೊಂಬೆ ಮತ್ತು ಎಲೆಗಳಿಗೂ ತಲುಪುತ್ತದೆಯೋ ಅದೇ ರೀತಿಯಾಗಿ ವಿಷ್ಣುವನ್ನು ಪೂಜಿಸಿದರೆ ಅದು ಎಲ್ಲಾ ದೇವರುಗಳನ್ನು ಮುಟ್ಟುತ್ತದೆ ಎಂಬ ರಹಸ್ಯವನ್ನು ಬ್ರಹ್ಮನೇ ವಿವರಿಸಿದ.

ಮಹಾವಿಷ್ಣು ಅವರ ಪ್ರಾರ್ಥನೆಯಿಂದ ಸಂಪ್ರೀತನಾಗಿ ' ಮೊದಲಿಗೆ ದಾನವರೊಂದಿಗೆ ಒಪ್ಪಂದ ಮಾಡಿಕೊಳ್ಳಿ. ಕೂಡಲೇ ಅವರ ನೆರವನ್ನು ಪಡೆದುಕೊಂಡು ಕ್ಷೀರಸಾಗರದ ಮಂಥನವನ್ನು ಪ್ರಾರಂಭಿಸಿ. ಆಗ ಅಮೃತ ದೊರೆಯುತ್ತದೆ. ಆ ಅಮೃತವು ದೇವತೆಗಳನ್ನು ಉಳಿಸಬಲ್ಲದು. ಸಮುದ್ರ ಮಂಥನಕ್ಕಾಗಿ ಮಂದರ ಪರ್ವತವನ್ನು ಕಡಗೋಲನ್ನಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಳ್ಳಿ. ಮಂಥನದಲ್ಲಿ ನಾನೂ ನೆರವಾಗುತ್ತೇನೆ. ಸಮುದ್ರ ಮಂಥನವನ್ನು ಮಾತ್ರ ನಿಲ್ಲಿಸದೆ ಮುಂದುವರಿಸಿ ' ಎಂದು ಹೇಳಿದ.

ಅದೇ ರೀತಿಯಾಗಿ ದೇವತೆಗಳು ದಾನವರೊಂದಿಗೆ ಒಪ್ಪಂದ ಮಾಡಿಕೊಂಡರು. ಇಬ್ಬರೂ ಸೇರಿ ಸಾಗರ ಮಂಥನ ನಡೆಸಿ ಅಮೃತಕುಂಭವನ್ನು ಪಡೆದು ಹಂಚಿಕೊಳ್ಳ ಬೇಕೆಂದು ತೀರ್ಮಾನಿಸಿದರು.

ಮಂದರ ಪರ್ವತವನ್ನು ಕಿತ್ತು ವಾಸುಕಿಯನ್ನು ಹಗ್ಗವಾಗಿರಲು ಒಪ್ಪಿಸಿ ಮಂಥನಕ್ಕೆ ಸಿದ್ಧವಾದರು. ವಿಷ್ಣುವಿನ ನಾಯಕತ್ವದಲ್ಲಿ ದೇವತೆಗಳು ವಾಸುಕಿಯ ತಲೆಯ ಕಡೆಗೆ ಇದ್ದರು. ದಾನವರು ಅದರ ಬಾಲ ಹಿಡಿದಿದ್ದರು. ಕೊನೆಯ ಕ್ಷಣದಲ್ಲಿ ದಾನವರು ಈ ಮಾರ್ಗ ಸರಿಯಲ್ಲ ಎಂದು ತಕರಾರು ಹೂಡಿದರು. ವಾಸುಕಿಯ ಬಾಲ ಹಿಡಿಯುವುದು ತಮ್ಮಂತಹ ಬಲಾಢ್ಯರಿಗೆ ಗೌರವತರುವುದಿಲ್ಲ ಎಂಬುದು ದಾನವರ ವಾದವಾಗಿತ್ತು. ಮೌನವಾಗಿ ದೇವತೆಗಳು ವಾಸುಕಿಯ ತಲೆಯ ಭಾಗವನ್ನು ದಾನವರೇ ಹಿಡಿಯಲೆಂದು ತಾವೆಲ್ಲರೂ ಅದರ ಬಾಲದ ಕಡೆಗೆ ಬಂದರು.

ಕಶ್ಯಪ ಪ್ರಜಾಪತಿಯ ಮಕ್ಕಳು ಅಮೃತವನ್ನು ಪಡೆಯಲು ಕ್ಷೀರಸಾಗರ ಮಂಥನವನ್ನು ಪ್ರಾರಂಭಿಸಿದರು. ಇದ್ದಕ್ಕಿದ್ದಂತೆಯೇ ಮಂದರ ಪರ್ವತವು ಕ್ಷೀರ ಸಾಗರದಲ್ಲಿ ಮುಳುಗಿತು. ಆಗ ಮಹಾವಿಷ್ಣು ಬೃಹದಾಕಾರದ ಆಮೆಯ ರೂಪವನ್ನು ಪಡೆದು ಸಾಗರದಲ್ಲಿ ಮುಳುಗಿ ತನ್ನ ಬೆನ್ನಿನಮೇಲೆ ಮಂದರ ಪರ್ವತವನ್ನು ಹೊತ್ತು ಅದು ಮೇಲಕ್ಕೆ ಬರುವಂತೆ ಮಾಡಿದ.

ಮಂಥನದ ಫಲವಾಗಿ ವಾಸುಕಿಯು ವಿಷವನ್ನುಗುಳತೊಡಗಿತು. ಅಸುರರಿಗೆ ವಿಷದ ಝಳವನ್ನು ಸಹಿಸಲು ಸಾಧ್ಯವಾಗಲಿಲ್ಲ. ತಲೆಯ ಭಾಗವನ್ನು ಅವರು ಬಿಟ್ಟು ಬಾಲದ ಕಡೆಗೆ ಬರುವುದಾಗಿ ಹೇಳಿದರು. ದೇವತೆಗಳು ಅನಿವಾರ್ಯವಾಗಿ ವಾಸುಕಿಯ ಶಿರೋಭಾಗದಕಡೆಗೆ ಬರಬೇಕಾಯತು. ಮಂಥನವು ಮುಂದುವರಿಯಿತು. ಸಾಗರದಿಂದ ಹಾಲಾಹಲವು ಬಂತು. ತೀವ್ರಸ್ವರೂಪದ ಈ ವಿಷವು ಎಲ್ಲಾ ಲೋಕಗಳನ್ನು ಸುಡುವಷ್ಟು ಪರಿಣಾಮಕಾರಿಯಾಗಿತ್ತು. ಹಾಲಾಹಲ ಎಲ್ಲಾ ಲೋಕಗಳನ್ನು ಬಹು ಕ್ಷಿಪ್ರವಾಗಿ ವ್ಯಾಪಿಸತೊಡಗಿತು. ಎಲ್ಲಾ ಜೀವಕೋಟಿಯು ಪರಮಾತ್ಮನ ಶರಣಾಗಿ ರಕ್ಷಣೆಯನ್ನು ಪ್ರಾರ್ಥಿಸಿತು. ಮಹಾದೇವನು ಜೀವಕೋಟಿಯ ಮೇಲೆ ಕರುಣಾರ್ದ್ರ ದೃಷ್ಟಿಯನ್ನು ಹರಿಸಿ ಹಾಲಾಹಲವನ್ನೆಲ್ಲಾ ಅಂಗೈಯಲ್ಲಿ ತುಂಬಿಕೊಂಡು ನುಂಗಿದ. ಮಹಾದೇವನ ಮೇಲೂ ಹಾಲಹಲ ಪರಿಣಾಮ ಬೀರಿ ಆತನ ಕಂಠವನ್ನು ನೀಲವರ್ಣವನ್ನಾಗಿಸಿತು.

ಮತ್ತೆ ಸಮುದ್ರ ಮಂಥನ ಮುಂದುವರೆಯಿತು. ಚಂದ್ರನಂತೆ ಬಿಳುಪಾಗಿದ್ದ ಉಚ್ಚೈಶ್ರವಸ್ ಎಂಬ ಕುದುರೆ, ನಾಲ್ಕು ದಂತಗಳಿದ್ದ ಐರಾವತ ಎಂಬ ಆನೆ, ಕೌಸ್ತುಭ ಎಂಬ ವಜ್ರಾಭರಣ ಸಾಗರ ಗರ್ಭದಿಂದ ಬಂದವು. ಕೌಸ್ತುಭವನ್ನು ವಿಷ್ಣುವು ಆಭರಣವಾಗಿ ತನ್ನ ವಕ್ಷದ ಮೇಲೆ ಧರಿಸಿಕೊಂಡ. ಸದಾ ಶುಭಗಳನ್ನೇ ನೀಡುವ ಪಾರಿಜಾತ ವೃಕ್ಷ, ಅಪ್ಸರೆಯರು ಮತ್ತು ಲಕ್ಷ್ಮೀ, ಸಾಗರದಿಂದ ಆವಿರ್ಭವಿಸಿ ಬಂದರು. ಸಾಗರದಿಂದ ಲಕ್ಷ್ಮೀ ಬರುತ್ತಲೇ ವಿಷ್ಣು ಆಕೆಯನ್ನು ಸ್ವೀಕರಿಸಿದ. ನಂತರ ವಾರುಣಿ ಬಂದಳು. ವಿಷ್ಣುವಿನ ಒಪ್ಪಿಗೆಯ ಮೇರೆಗೆ ಅಸುರರು ಆಕೆಯನ್ನು ಸ್ವೀಕರಿಸಿದರು.

ಕೊನೆಗೆ ಆಜಾನುಬಾಹುವಾಗಿದ್ದು ನೀಲವರ್ಣ ದೇಹಿಯಾಗಿದ್ದ ಮಾನವಾಕಾರವೊಂದು ಸಾಗರಗರ್ಭದಿಂದ ಹೊರಕ್ಕೆ ಬಂತು. ಆತ ಸರ್ವಾಭರಣಗಳಿಂದ ಅಲಂಕೃತನಾಗಿದ್ದ. ಆತನ ಹೆಸರು ಧನ್ವಂತ್ರಿ. ಅಮೃತ ಕುಂಭವನ್ನು ಹೊತ್ತು ತಂದಿದ್ದ. ಇದನ್ನು ಕಂಡ ಕೂಡಲೇ ಅತ್ಯಾಸೆಗೆ ತುತ್ತಾದ ಅಸುರರು ಅಮೃತಕುಂಭವನ್ನೇ ಕಸಿದುಕೊಂಡು ಓಡಿದರು. ಆಗ ಸಕಲವನ್ನೂ ಅರಿತಿರುವ ಮಹಾವಿಷ್ಣುವು 'ನನ್ನ ಮಾಯಾಶಕ್ತಿಯಿಂದಲೇ ಅವರಲ್ಲಿ ಭಿನ್ನತೆಯನ್ನು ಬಿತ್ತಿ ಅವರಿಗೆ ಅಮೃತವು ದಕ್ಕದಂತೆ ಮಾಡುತ್ತೇನೆ' ಎಂದು ಹೇಳಿ ಅತ್ಯಂತ ಸುಂದರವಾದ ಹೆಣ್ಣಿನ ರೂಪವನ್ನು ವಿಷ್ಣುವು ಧರಿಸಿದ. ಅಸುರರ ಬಳಿ ಇದ್ದ ಅಮೃತಕುಂಭವನ್ನು ಬಹು ಜಾಣ್ಮೆಯಿಂದ ಕಸಿದು ತಂದು ದೇವತೆಗಳು ಕುಡಿಯಲು ಕೊಟ್ಟ. ಇದರಿಂದ ದೇವತೆಗಳು ಅಮರರಾದರು. ಅವರನ್ನು ಜರಾ ಮೃತ್ಯುಗಳು ಕಾಡದೆ ದೂರಸರಿದವು.

ಇದರಲ್ಲಿ ವಿಷ್ಣುವು ಕೂರ್ಮವಾಗಿ ಸಮುದ್ರ ಮಂಥನಕ್ಕೆ ನೆರವಾದುದು ಮಾತ್ರವಲ್ಲ ಮಂಥನವು ಯಶಸ್ವಿಯಾಗಲು ಕೀಲಕ ಪಾತ್ರವನ್ನು ವಹಿಸಿ ದೇವತೆಗಳಿಗೆ ಇದರ ಲಾಭ ದೊರೆಯುವಂತೆ ಮಾಡಿದ್ದಾನೆ.

ಶಿಲ್ಪದಲ್ಲಿ ಕೂರ್ಮಾವತಾರ ಮೂರ್ತಿಯನ್ನು ಮೂರು ಬಗೆಗಳಲ್ಲಿ ರೂಪಿಸುವ ಪದ್ಧತಿಯುಂಟು:

೧ ಪೂರ್ಣವಾಗಿ **ಕೂರ್ಮ**ದಂತೆ ರೂಪಿಸುವುದು (ಪ್ರಸ್ತುತ ಶಾಸ್ತ್ರದಲ್ಲಿ ವಿವರಿಸಿರುವುದು ಇದೇ ಬಗೆಯ ರೂಪವನ್ನು).

೨ ದೇಹ ಮಾತ್ರವೇ ಕೂರ್ಮದಂತಿದ್ದು ತಲೆ ಮನುಷ್ಯನದಾಗಿರುವುದು. **ನೃಕೂರ್ಮ** .

೩ ಮೈ ಮನುಷ್ಯನದಾಗಿದ್ದು ತಲೆಮಾತ್ರವೇ ಕೂರ್ಮದ್ದಾಗಿರುವುದು. **ಕೂರ್ಮಗ್ರೀವ.**

ಪ್ರಸ್ತುತ ಶಾಸ್ತ್ರದಲ್ಲಿ ಹೇಳಿರುವುದು ಪೂರ್ಣ ಕೂರ್ಮರೂಪ. ಅದರ ಅಳತೆ ಮಧ್ಯಮ ದ್ವಿತಾಲ. ಎಂದರೆ ೨೪ ಅಂಗುಳ. ಪಾದ್ಮ ಸಂಹಿತೆಯಲ್ಲಿ (ಕ್ರಿ, ೧೭ : ೨) **ಕೂರ್ಮ ವಿಸ್ತಾರಂ ದ್ವಾದಶಾಂಗುಲಂ** ಎಂದು ಹೇಳಿ ಇದನ್ನು ಏಕ ತಾಲದಲ್ಲೂ ಮಾಡಬಹುದು ಎಂದು ಸ್ಪಷ್ಟೀಕರಿಸಲಾಗಿದೆ. ಇದರ ಪ್ರಕಾರ ರೂಪವು ಕೂರ್ಮದ್ದೇ (**ಕೂರ್ಮವತ್ಕೂರ್ಮಮೂರ್ತಿಂ**).

ನೃಕೂರ್ಮರೂಪವು ಸಾಧಾರಣವಾಗಿ ಬಹುವಾಗಿ ಚಿತ್ರಿತವಾಗಿರುವ ಸ್ವರೂಪ. ಪಾಂಚರಾತ್ರಾಗಮದಲ್ಲಿ **ಕೂರ್ಮಸ್ತು ಕಚ್ಛಪಾಕಾರೋ ಮತ್ಸ್ಯರೂಪೋಕ್ತ ರೂಪವಾನ್** ಎಂದು ಹೇಳಲಾಗಿದೆ. ಆಮೆಯ ರೂಪವನ್ನು ಧರಿಸಿದ ಜನಾರ್ಧನನು ಶ್ವೇತ ಶರೀರ ಛಾಯೆಯಿಂದ ಎರಡು ಕೈಗಳಿರುವಂತೆ ಕೇವಲ ಕೂರ್ಮರೂಪದಲ್ಲಾಗಲಿ, ಮನುಷ್ಯಪಾದಗಳುಳ್ಳ ಕೂರ್ಮ ದೇಹಿಯಂತಾಗಲಿ ರೂಪಿಸಬಹುದು. ಬಲಗೈಯಲ್ಲಿ ಗದೆ ಮತ್ತು ಎಡಗೈಯಲ್ಲಿ ಪದ್ಮ ಇರಬೇಕು.

ಹಯಶೀರ್ಷ ಸಂಹಿತೆಯಲ್ಲಿ (ಆದಿ, ೨೩ : ೫ - ೮) ಇಂತು ವಿವರಿಸಲಾಗಿದೆ :

**ದೈರ್ಘ್ಯಂ ತ್ರಿತಾಲಸಂಯುಕ್ತಂ ತದೂರ್ಧ್ವಂ ಪರಿಮಂಡಲಂ ||**
**ಚತುಶ್ಚರಣ ಸಂಶ್ಲಿಷ್ಟಂ ಚತುರಂಗುಲ ಮಾತ್ರಯಾ**
**ಕಪೋಲದ್ವಯ ಮಧ್ಯಾತ್ತು ಗೋವಿಂದಂತು ಸಮುದ್ಧೃತಮ್ ||**
**ಕೃತ್ವಾ ಚಾಗುಲ್ಫಪರ್ಯಂತ ಮುದ್ಗಚ್ಛಂತಂ ಸುರೋತ್ತಮ**

**ನೃಕೂರ್ಮಂ ಕಾರಯಿತ್ವೈವಂ ಕೂರ್ಮಂ ವಾ ಸ್ಥಾಪಯೇತ್ತು ಯಃ ||**
**ಸ್ವವಂಶೋತ್ತರಣಂ ತಸ್ಯ ಜಾಯತೇ ಮುಕ್ತಿರೇವ ಚ**

ಕೂರ್ಮ ದೇಹದ ಮಾನುಷ ಶೀರ್ಷದ ನೃಕೂರ್ಮವನ್ನು ತ್ರಿತಾಲಕ್ಕೆ ರೂಪಿಸಬೇಕು. ತಲೆಯ ಸುತ್ತಲೂ ಕಾಂತಿವಲಯವನ್ನು ಚಿತ್ರಿಸಬೇಕು. ನಾಲ್ಕು ಕಾಲುಗಳು ಕೇವಲ ನಾಲ್ಕು ಅಂಗುಳಗಳಷ್ಟಿರಬೇಕು. ಇಲ್ಲಿ ಆಯುಧಗಳ ಉಲ್ಲೇಖವಿಲ್ಲ. ಚಕ್ರ - ಶಂಖ, ಅಭಯ - ವರದಗಳೊಂದಿಗೆ ನಾಲ್ಕು ತೋಳಿನ ಮೂರ್ತಿಯನ್ನು ರೂಪಿಸುವ ಪದ್ಧತಿಯು ಇದೆ. ಕೇವಲ ತಲೆ ಮಾತ್ರವೇ ನರ ರೂಪಿನದು ಎಂಬ ಮಾತಿದೆ. ಕೇವಲ ಕೂರ್ಮವನ್ನು ರೂಪಿಸಿ ಸ್ಥಾಪಿಸಬಹುದೆಂಬ ಅಭಿಪ್ರಾಯವೂ ಇಲ್ಲಿದೆ.

ಕೂರ್ಮ ಗ್ರೀವ ರೂಪದ ಮೂರ್ತಿಯ ವಿವರಣೆ ಕೆಲವು ಶಾಸ್ತ್ರಗಳಲ್ಲಿ ತಿಳಿಸಿದೆ.

**ಕೂರ್ಮ ಮುದ್ರಾನ್ವಿತಂ ಕೂರ್ಮವಕ್ತ್ರಂ ನಿಷ್ಟಪ್ತರುಕ್ಮಭಮ್ ||**
**ಶಂಖಪದ್ಮಧರಂ ಕೂರ್ಮಂ ಸ್ವಸ್ತಿಕೇನ ಸ್ಥಿತಂ ಸ್ಮರೇತ್**
**ಮುಂಚತಮನಿಶಂ ತೇಜೋ ದೇಹಾದ್ಭೀಷಣಮುತ್ಕಟಮ್ ||**


(ಪೌಷ್ಕರಸಂಹಿತೆ ೨೪ : ೨೨ : ೨೩)

ಕೂರ್ಮ ಮುಖದ ಸ್ವಾಮಿಯು ಸ್ವಸ್ತಿಕದಲ್ಲಿದ್ದು ಶಂಖ ಪದ್ಮಗಳನ್ನು ಧರಿಸಿರುತ್ತಾನೆ. ಸಾಧಾರಣವಾಗಿ ನಾಲ್ಕು ತೋಳುಗಳನ್ನು ರೂಪಿಸುವುದು ಪದ್ಧತಿ. ಆದ್ದರಿಂದ ಉಳಿದ ಎರಡು ಹಸ್ತಗಳಲ್ಲಿ ಅಭಯ ವರದ ಮುದ್ರೆಗಳನ್ನು ರೂಪಿಸಬೇಕು. ಇಲ್ಲಿ ಸ್ವಾಮಿಗೆ ನಾಲ್ಕು ಕೈಗಳಿರುವಂತೆ ರೂಪಿಸಬೇಕು. ಮೂರ್ತಿಯನ್ನು ಬಹು ಭೀಷಣವಾಗಿರುವಂತೆ ಕಲ್ಪಿಸಬೇಕೆಂಬ ಆದೇಶವಿದೆ. ಆದರೆ ಮೂರ್ತಿಯು ಉತ್ಸವ ಬೇರವಾಗಿದ್ದರೆ ಇದನ್ನು ಸೌಮ್ಯರೂಪದಲ್ಲಿಯೇ ರೂಪಿಸಬೇಕೆಂಬುದು ಶಾಸ್ತ್ರದ ಆದೇಶ (**ಕರ್ಮಾರ್ಚದೀನಿ ಬಿಂಬಾನಿ ಸೌಮ್ಯ ವಕ್ತ್ರಾಶ್ಚತುರ್ಭುಜಾಃ** ಪಾದ್ಮ ಸಂಹಿತೆ, ಕ್ರಿ : ೧೭ : ೧೨)


**ಶಂಖ ಚಕ್ರ ಧರಂ ದೇವಂ ಚಂದ್ರ ಮಂಡಲ ಮಧ್ಯಗಮ್**
**ಶ್ರೀ ಭೂ ಸಹಿತಂ ದೇವಂ ಕಿರೀಟಾದಿ ವಿಭೂಷಿತಮ್ ||**
**ಶ್ರೀವತ್ಸ ಕೌಸ್ತುಭೋರಸ್ಕಂ ವನಮಾಲಾ ವಿರಾಜಿತಮ್**
**ಗದಾ ಪದ್ಮಧರಂ ಶಾಂತಂ ಕೂರ್ಮಗ್ರೀವಮಹಂ ಭಜೇ ||**

(ಪರಾಶರ ಸಂಹಿತೆ, ೨೯ : ೫ - ೭)

ಚಂದ್ರ ಮಂಡಲದ ಮಧ್ಯದಲ್ಲಿ ಇರುವ ಈ ಕೂರ್ಮಾವತಾರಿ ದೇವ ಶ್ರೀದೇವಿ ಭೂದೇವಿಗಳ ಸಮೇತವಾಗಿ ಸಕಲಾಭರಣ ಕಿರೀಟಾದಿಗಳೊಂದಿಗೆ ಶ್ರೀವತ್ಸ, ಕೌಸ್ತುಭ, ವನಮಾಲಾದಿಗಳನ್ನು ಧರಿಸಿ ತೇಜೋವಂತನಾಗಿರುತ್ತಾನೆ. ಶಾಂತ ಸ್ವರೂಪದ ಕೂರ್ಮದ ತಲೆಯುಳ್ಳ ಈ ದೇವನು ನಾಲ್ಕು ಅಥವ ಆರು ತೋಳುಗಳನ್ನು ಪಡೆದಿರುತ್ತಾನೆ. ನಾಲ್ಕು ತೋಳುಗಳಿದ್ದಾಗ ಶಂಖ ಚಕ್ರಗಳು ಮೇಲಿನ ಹಸ್ತಗಳಲ್ಲೂ, ಅಭಯ ವರದಗಳು ಕೆಳಹಸ್ತಗಳಲ್ಲೂ, ಆರು ತೋಳುಗಳಿದ್ದಾಗ ಶಂಖ ಚಕ್ರಗಳು ಮೇಲಿನ ಹಸ್ತಗಳಲ್ಲೂ, ಅಭಯ ವರದಗಳು ಮಧ್ಯಹಸ್ತಗಳಲ್ಲೂ, ಅಧೋಹಸ್ತಗಳಲ್ಲಿ ಗದಾ ಪದ್ಮಗಳು ಇರುತ್ತವೆ.



ಚಿತ್ರ ೭ : ಕೂರ್ಮಾವತಾರ ಮೂರ್ತಿ (ನೃಕೂರ್ಮ - ದ್ವಿಭುಜ )



ಚಿತ್ರ ೮ : ಕೂರ್ಮಾವತಾರ ಮೂರ್ತಿ ( ನೃಕೂರ್ಮ - ಚತುರ್ಭುಜ )

ಇದೇ ಮೂರ್ತಿಯು ಹನ್ನೆರಡು ತೋಳುಗಳನ್ನು ಪಡೆದಿರುವುದರ ವಿವರಣೆ ದೊರೆಯುತ್ತದೆ.

**ಚಕ್ರ ಶಂಖಾಭಯ ವರಗದಾಪದ್ಮಾದಿ ಧಾರಿಣಮ್**
**ಶಾರ್ಙ್ಗಬಾಣ ಖೇಟಾಗ್ನಿ ಶೂಲ ಪಾಶಧರಂ ವಿಭುಮ್ ॥**
**ಕಿರಾಟಾದಿಧರಂ ಶಾಂತಂ ಪರಶುಂ ಮುಸಲಂ ಹಲಮ್**
**ಕೂರ್ಮಗ್ರೀವಮಹಂ ವಂದೇ ಚಂದ್ರ ಮಂಡಲಮಧ್ಯಗಮ್ ॥**

(ಪರಾಶರ ಸಂಹಿತೆ, ೨೯ : ೧೨ - ೧೩)

ಹನ್ನೆರಡು ತೋಳುಗಳಲ್ಲಿ ಇರುವ ಆಯುಧಗಳು ಇವು : ಚಕ್ರ - ಶಂಖ, ಅಭಯ - ವರದ, ಗದೆ - ಪದ್ಮ, ಶಾರ್ಙ್ಗ (ಬಿಲ್ಲು) - ಬಾಣ, ಖೇಟಕ - ಶೂಲ, ಅಗ್ನಿ - ಪಾಶ.

ಹದಿನಾರು ತೋಳುಗಳಿರುವಾಗ ಈ ಮೊದಲು ಹೇಳಿರುವುದರೊಂದಿಗೆ ಉಪದೇಶಮುದ್ರೆ, ಪರಶು, ಒನಕೆ, ಮುಸಲ, ನೇಗಿಲು (ಹಲ) ಗಳಿರುತ್ತವೆ. ಕೂರ್ಮಾವತಾರದಲ್ಲಿ ಸ್ವಾಮಿಯು ಅಸುರರು ಅಪಹರಿಸಿದ್ದ ವೇದಗಳನ್ನು ಋಷಿಗಳಿಗೆ ಒಪ್ಪಿಸಿದ ಉದಂತವಿದೆ. ಆದ್ದರಿಂದ ಶಾಂತಿಸ್ಥಾಪನೆಗಾಗಿ ವೇದೋಪದೇಶವನ್ನು ಕೂರ್ಮಮೂರ್ತಿ ನಡೆಸಿದ ಎಂದು ಹೇಳುತ್ತಾರೆ.

ಸಾಧಾರಣವಾಗಿ ಎರಡು ಅಥವ ನಾಲ್ಕು ತೋಳುಗಳಿರುವ ಮೂರ್ತಿಯ ವರ್ಣನೆಯು ಅನೇಕ ಕಡೆ ಉಲ್ಲೇಖಿತವಾಗಿದೆ :

**ಶಂಖ ಚಕ್ರಧರಂ ದೇವಂ ಸರ್ವಾಭರಣ ಭೂಷಿತಂ ॥**
**ಸರ್ವಕಾರಮಜಂ ದೇವಂ ಕರ್ಮರೂಪಂ ಹರಿಂ ಭಜೇ**

(ಶೇಷ ಸಂಹಿತಾ, ೨೨ : ३३ - ३४)

**ಚಕ್ರಶಂಖಧರಂ ದೇವಂ ಕೂರ್ಮರೂಪಂ ಹರಿಂ ವಿಭುಂ**
**ಸರ್ವಾಭರಣ ಭೂಷಾಂಗಂ ಶ್ರೀಕೂರ್ಮಮನಿಶಂ ಭಜೇ ॥**

(ಪರಾಶರಸಂಹಿತೆ, ೧೫ : ೧೨೩)

ಮತ್ಸ್ಯ ರೂಪವನ್ನು ಅಷ್ಟದಳಗಳಲ್ಲಿ (ದಿಕ್ಕುಗಳಲ್ಲಿ) ಚಿತ್ರಿಸಿ ಮಧ್ಯೆ ನಾರಾಯಣನನ್ನು ಚಿತ್ರಿಸಿರುವಂತೆಯೇ ಕೂರ್ಮರೂಪವನ್ನು ದಳಗಳಲ್ಲಿ ಚಿತ್ರಿಸಿ ಮಧ್ಯೆ ಸ್ವಾಮಿಯನ್ನು ರೂಪಿಸಬಹುದೆಂಬ ಉಲ್ಲೇಖವು ವಿಷ್ವಕ್ಸೇನ ಸಂಹಿತೆಯಲ್ಲಿ (೧೧, ३೮ - ४೫) ದೊರೆಯುತ್ತದೆ:

**ವಿನ್ಯಸೇ ನ್ಮತ್ಸ್ಯ ರೂಪಂ ವೈ ಕೂರ್ಮ ರೂಪಂ ತತಃ ಶೃಣು**
**ಕಾಲಾಂಜನಗಿರಿ ಪ್ರಖ್ಯಂ ತ್ರಿನೇತ್ರಂ ಸ್ವಾಂಗಶೋಭಿತಮ್ ॥**
**ಚತುರ್ಬಾಹುಯುತಂ ಚೈವ ಸರ್ವಾಭರಣಭೂಷಿತಮ್**
**ಅಂಜನ ಮೃತ್ಸಂನ್ನಿಭಮೂರ್ತಿಃ ದ್ವಾದಶ ಪತ್ರೇ ವರ್ತಿತಮಾಬ್ಜೇ ॥**
**ಪದ್ಮ ಸಮಾಖ್ಯ ಸ್ವಾಸನಯುಕ್ತಃ ಕೂರ್ಮಶರೀರೀ ವಿಷ್ಣುರಿಹಾಸ್ತೇ**
**ಪ್ರಾಕ್ಕ್ರಮತೋ ऽಬ್ಜ ದ್ವಾದಶಪತ್ರಾರೂಢ ಶರೀರೈಃ ದ್ವಾದಶ ಕೂರ್ಮೈಃ ॥**
**ಅಂಜನ ವರ್ಣಪ್ರಖ್ಯ ಶರೀರೈರೇವರಾವೃತಮೂರ್ತಿಃ ಸ್ವಾಭಿಮುಖಸ್ಥೈಃ**

ಶಂಖ ಚಕ್ರಧರಶ್ಚೈವ ಪದ್ಮ ಹಸ್ತಸ್ತಥೈವ ಚ ||
[ತತೋ ದ್ವಾದಶ ಕೂರ್ಮಾ ಹಿ (ಕೂರ್ಮೈರ್ಹಿ) ದೇವೋ ಪ್ಯಭಿಮುಖೀಕೃತಃ]
ಅಸ್ಯ ದಕ್ಷಿಣ ಹಸ್ತೋರ್ಧ್ವೇ ಚಕ್ರಂಪದ್ಮಂ ಕರಾಂತರೇ ||
ವಾಮೋರ್ಧ್ವೇ ಶಂಖಮಿತ್ಯುಕ್ತಂ ಪದ್ಮಂ ಚಧಃಸ್ಥಿತೇ ಕರೇ
ಅಸ್ಯ ದಕ್ಷಿಣ ಪಾರ್ಶ್ವೇ ತು ಶ್ರೀಯಂ ವಿನ್ಯಸ್ಯ ಬುದ್ಧಿಮಾನ್ ||
ಪುಷ್ಟಿಂ ವಾ ಮೇ ನ್ಯಸೇದೇವಂ ಕೂರ್ಮಮೂರ್ತಿರುದಾಹೃತಾ

ತ್ರಿನೇತ್ರಯುತನಾಗಿ ನಾಲ್ಕು ಬಾಹುಗಳನ್ನು ಪಡೆದುಕೊಂಡು ಸರ್ವಾಭರಣಭೂಷಿತನಾಗಿರುವ ನಾರಾಯಣಮೂರ್ತಿಯು ಹನ್ನೆರಡು ದಳಗಳ ಪದ್ಮದ ಮಧ್ಯೆ ಪದ್ಮದ ಮೇಲೆ ಕೂರ್ಮಶರೀರಿಯಾಗಿ ಆಸೀನನಾಗಿರುತ್ತಾನೆ. ಈ ಮೂರ್ತಿಗೆ ಎದುರಾಗಿ ಹನ್ನೆರಡು ಪದ್ಮ ದಳಗಳಲ್ಲೂ ಹನ್ನೆರಡು ಕೂರ್ಮಗಳು ಕಪ್ಪು ಬಣ್ಣದ ಕಾಂತಿಯೊಂದಿಗೆ ತೇಜೋವಂತವಾಗಿರುತ್ತವೆ. ಸ್ವಾಮಿಯು ಶಂಖ, ಚಕ್ರ, ಪದ್ಮಗಳನ್ನು ಧರಿಸಿರುತ್ತಾನೆ. ಇನ್ನೊಂದು ಬಲ ಹಸ್ತವು ಅಭಯ ಮುದ್ರೆಯನ್ನು ಧರಿಸಿರುತ್ತದೆ. ಮೇಲಿನ ಬಲ ಹಸ್ತದಲ್ಲಿ ಚಕ್ರ ಧರಿಸಿರಬೇಕು. ಎಡಹಸ್ತದಲ್ಲಿ ಶಂಖವಿರಬೇಕು. ಎಡ ಕೆಳಹಸ್ತದಲ್ಲಿ ಪದ್ಮವಿರಬಹುದು ಅಥವ ವರದ ಮುದ್ರೆಯನ್ನೂ ರೂಪಿಸಬಹುದು. ಕೆಳಗಿನ ಬಲಹಸ್ತವು ವರದ ಮುದ್ರೆಗೇ ಮೀಸಲಾಗಿರಬೇಕು. ಸ್ವಾಮಿಯ ಬಲಕ್ಕೆ ಶ್ರೀದೇವಿ, ಎಡಭಾಗದಲ್ಲಿ ಪುಷ್ಟಿದೇವಿ ಇರಬೇಕು.

ಸಾಧಾರಣವಾಗಿ ಕೂರ್ಮವನ್ನು ಶ್ಯಾಮಲ ವರ್ಣದಲ್ಲಿ* ತೋರಿಸುವ ಪದ್ಧತಿ ಇದ್ದರೂ ಸ್ವರ್ಣವರ್ಣದಲ್ಲಿಯೂ ತೋರಿಸುವ ಅವಕಾಶವಿದೆ (**ತಪನೀಯ ನಿಭಂ ಕೂರ್ಮಂ**). ಕೂರ್ಮದ ಬಾಯಿ ತೆರೆದಿದ್ದರೆ ಅದು ವೇದ ಘೋಷ ನಡೆಸುತ್ತಿದೆ ಎಂದು ಅರ್ಥ. (**ಮುಖೋಪಕರಣಾಂಗಶ್ಚ ನಿಮಗ್ನೋದ್ಧರಣ ಕ್ಷಮ :** ). ದೇವನು ಶ್ರೀದೇವಿ ಮತ್ತು ಪುಷ್ಟಿ ಅಥವ ಶ್ರೀದೇವಿ ಮತ್ತು ಭೂದೇವಿ ಇವರೊಂದಿಗೆ ಇರುವಂತೆ ರೂಪಿಸಬಹುದು. ಈ ದೇವನಿಗೆ ಹಿನ್ನೆಲೆಯಾಗಿ ಮಂದರ ಪರ್ವತವನ್ನು ಹೊತ್ತಿರುವಂತೆ, ಇತರ ದೇವತೆಗಳೊಂದಿಗೆ ಇರುವಂತೆಯೂ ಚಿತ್ರಿಸಬಹುದು.

*ಇತಿ ಶ್ರೀ ಬ್ರಾಹ್ಮಿಯೇ ಚಿತ್ರಕರ್ಮ ಶಾಸ್ತ್ರೇ ಪ್ರಾದುರ್ಭಾವಕಾಂಡೇ*
***ಕೂರ್ಮ ಲಕ್ಷಣಂ** ನಾಮ ದ್ವಿತೀಯೋಽಧ್ಯಾಯಃ*

ಅಥ ತೃತೀಯೋಽಧ್ಯಾಯಃ

# ವರಾಹ ಲಕ್ಷಣಮ್

ವಕ್ಷ್ಯೇ ವರಾಹ ರೂಪಸ್ಯ ಲಕ್ಷಣಂ ಚತುರಾನನ (ಮ್)
ದಶ ದ್ವಾದಶ ಮಾತ್ರಂ ಸ್ಯಾನ್ಮೂರ್ಧೋಂಘ್ರಿ [ರ್ಧ್ನಾಂಘ್ರಿ] ತಲಸೀಮಕಮ್ ॥ ೧ ॥
ಮೂರ್ಧ್ನೇಶ್ಚ ಮಸ್ತಕಂ ತಸ್ಮಾತ್ ದೃಗ್ಘೋಣಂ ಚ ಹನುಃ ಸ್ಮೃತಮ್
[ಮ ರ್ಧ್ನೇಶ್ಚ ಮಸ್ತಕಂತಸ್ಮಾದ್ದೃ ದೃಶೋ ಘೋಣ ಹನ್ವದ್ದೃಶಮ್]
ಭಾಗಂ ವೇದಾಂಗುಲಂ ರುದ್ರ ಮಾತ್ರಂ ಕಂಠಂ [ಕರ್ಣ] ಕಲಾದ್ವಯಮ್ ॥ ೨ ॥
ಕಂಠಾಚ್ಚ ಹೃದಯಂ ನಾಭಿ ರ್ನಾಭೇರ್ಮೇಢ್ರಂ ಮುಖಾಂಗುಳಮ್
[ಕರ್ಣೇ ಚ ಹೃದಯೇ ನಾಭಿ ನಾಭೇರ್ಮೇಢ್ರ ಮುಖಾಂಗುಳಮ್]
ಷಡ್ಭಾಗಂತು ಕಲಾ ಚೋರು ಭಾಗಂ ಜಾನು ತ್ರಯೋದಶ ॥ ೩ ॥
[ಷಡ್ಭಾಗ ಮೂರ್ಧಾನ್ತ ಶ್ಚೋರು ಭಾಗಂ ಜನ್ಮತ್ರ ಯೋದಶ]
ಕಲಾ ಜಂಘಾ ತಲಂ ಭಾಗಂ ಸಪ್ತದಶಾಂಗುಲಾಯತಮ್
ನೇತ್ರಾನ್ಮಾತ್ರ (ನೇತ್ರಮಾತ್ರ) ದ್ವಯಂ ಭ್ರೂ ಸ್ಯಾನ್ನೇತ್ರಾ ಸೃಕ್ಕ್ವತ್ವ (ಸೃಕ್
ತ್ವಕ್) ಶರಾಂಗುಳಮ್ ॥ ೪ ॥
ತ್ವಚೋ (ಸ್ಮೃತ್ವಾ) ಭಾಗಂ ಹನುರ್ಮಾತ್ರಾ ತ್ರಯಂ ನೇತ್ರಾಂತರಂ ಭವೇತ್
ನೇತ್ರಾಯಾಮಂ ತ್ರಿಮಾತ್ರಂ (ಮಿಮಾತ್ರೇತು) ನೇತ್ರಾಚ್ಛ್ರೋತ್ರಂ ಸಪ್ತ
ಮಾತ್ರಕಮ್ ॥ ೫ ॥

ಎಲೈ ಬ್ರಹ್ಮದೇವನೆ, ವರಾಹ ಮೂರ್ತಿಯ ಲಕ್ಷಣವನ್ನು ಹೇಳುತ್ತೇನೆ. ಗಮನದಿಂದ ಆಲಿಸು. ಮೂರ್ಧ್ನಾ (ಉಷ್ಣೀಷ - ತುದಿ ತಲೆ) ದಿಂದ ಹಿಡಿದು ಪಾದ ತಲದವರೆವಿಗೂ ೧೨೦ ಅಂಗುಳಗಳು (ಎಂದರೆ ಮಧ್ಯಮ ದಶತಾಳ). ಉಷ್ಣೀಷದಿಂದ ಕೇಶಾಂತದವರೆವಿಗೂ ೪ ಅಂಗುಳಗಳು. ಕೇಶಾಂಶದಿಂದ ನೇತ್ರ ಸೂತ್ರದವರೆವಿಗೂ ೪ ಅಂಗುಳಗಳು. ನೇತ್ರದಿಂದ ನಾಸಾ ಪುಟದವರೆವಿಗೂ ೧೧ ಅಂಗುಳಗಳು. ನಾಸಾ ಪುಟದಿಂದ ಬಾಯಿಯು ೧ ಅಂಗುಳ. ಅಲ್ಲಿಂದ ಕೊರಳು ೪ ಅಂಗುಳ. ಕೊರಳಿನಿಂದ ಹೃದಯ, ಹೃದಯದಿಂದ ನಾಭಿ, ನಾಭಿಯಿಂದ ಮೇಢ್ರ

4-13

ಮೂಲ ಒಂದೊಂದು ೧೨ ಅಂಗುಳಗಳಿರುತ್ತವೆ. ಊರು (ತೊಡೆ) ವಿನ ಉದ್ದವು ೨೬ ಅಂಗುಳ. ಮೊಣಕಾಲು (ಜಾನು) ೪ ಅಂಗುಳ. ಜಂಘ (ಮುಂಗಾಲು) ೨೬ ಅಂಗುಳ. ಪಾದದ ಎತ್ತರವು ೪ ಅಂಗುಳ. ಪಾದದ ಉದ್ದವು ೧೭ ಅಂಗುಳಗಳು. ನೇತ್ರದಿಂದ ಹುಬ್ಬುಗಳು ೨ ಅಂಗುಳ. ಅಲ್ಲಿಂದ ಬಾಯಿಯ ಹೊರಕ್ಕೆ ಗುಂಡಾಗಿ ಸುರುಳಿಸುತ್ತಿರುವ ಕೆಂಪಾದ ತುಟಿಗಳ ಅಂಚಿನ (ಸ್ರಕ್ವ) ಭಾಗವು ೫ ಅಂಗುಳ. ಅಲ್ಲಿಂದ ಹನ್ವಂತವು ೪ ಅಂಗುಳ.

ಎರಡು ಕಣ್ಣುಗಳ ಮಧ್ಯೆ ಅಂತರವು ೩ ಅಂಗುಳ. ನೇತ್ರಗಳ ಉದ್ದ ಒಂದೊಂದು ೩ ಅಂಗುಳ. ನೇತ್ರಗಳಿಂದ ಕಿವಿಯು ೭ ಅಂಗುಳ ದೂರದಲ್ಲಿರುತ್ತದೆ.

**ಕರ್ಣ ಮೂಲಾದಧಸ್ತಾತ್ತು ಕಪೋಲಂ ಸಪ್ತ ಮಾತ್ರಕಮ್**
**ಸಯವದ್ವ್ಯಾಂಗುಲಂ ಕರ್ಣತಾರಂ ತದ್ವಿಗುಣಾಯತಮ್**
**ತತ್ಸಮಂ ಕರ್ಣನಾಳಸ್ಯ ಲಂಬಂ (ವ್ಯಾಸಾಂಗುಳಾರ್ಧಕಮ್) ॥ ೬ ॥**

ಕಿವಿಯ ಮೂಲ ಮುಂಭಾಗದ ಪ್ರಾರಂಭದ ಬಿಂದುವಿನಿಂದ ಕಿವಿಯ ಕೆಳಭಾಗವು ೭ ಅಂಗುಳವಿರುತ್ತದೆ. ಕಿವಿಯ ಅಗಲವು ೨ ಅಂಗುಳ ೧ ಯವ. ಅದರ ಉದ್ದವು ೪ ಅಂಗುಳ ೨ ಯವ. ಕರ್ಣನಾಳದ (ಕುಂಡಲಗಳನ್ನು ಧರಿಸುವ ಕಿವಿಯ ಅಡಿಭಾಗ) ಉದ್ದವು ೪ ಅಂಗುಳ ೨ ಯವ. ಅದರ ಅಗಲವು ೪ ಯವ.

**ಯವವ್ಯಾಸೌ (ಚತುಃ ಪಂಚ) ನಾಳೌ ಪೂರ್ವಾ ಪರೌ ಮತೌ**
**ಏಕಾದಶಾಂಗುಲ ವ್ಯಾಸಂ ಮುಖಂ ನೇತ್ರಮಥಾಂಗುಲಮ್ ॥ ೭ ॥**

ಪೂರ್ವ (ಹಿಂಭಾಗದ) ನಾಳದ ಅಗಲವು ೪ ಯವಗಳು (ಅರ್ಧ ಅಂಗುಳ). ಅಪರ (ಮುಂಭಾಗದ) ನಾಳದ ಅಗಲವು ೫ ಯವಗಳು (ಅರ್ಧ ಅಂಗುಳ ಮತ್ತು ಅದರಲ್ಲಿ ಕಾಲು ಭಾಗ). ಮುಖದ ಅಗಲವು ೧೧ ಅಂಗುಳ. ನೇತ್ರದ ಅಗಲವು ೧ ಅಂಗುಳ.

**ನಾಸಾಮೂಲತತಂ ಸಪ್ತಮಾತ್ರಂ ಮಧ್ಯಂ ತ್ರಿಕೋಲಕಮ್**
**ನಾಸಾಗ್ರತಾರಂ ಭಾಗಾರ್ಧಮಾತ್ರಂ ಸ್ರೋತಸ್ತಥಾಂಗುಲಮ್ ॥ ೮ ॥**

ಮೂಗಿನ ಅಡಿ ಭಾಗದ ಅಗಲವು ೭ ಅಂಗುಳ. ಅದರ ಪುಟಗಳ ಬಳಿ ಅಗಲವು ೬ ಅಂಗುಳ. ಮೂಗಿನ ತುದಿಯ ಅಗಲವು ೪ ಅಂಗುಳ ೪ ಯವ. ಮೂಗಿನ ತುದಿಭಾಗದ ಅಗಲವು ೧ ಅಂಗುಳ.

**ಅಂಗುಲಂ ಪುಷ್ಕರ (ಪುಷ್ಪರ ) ವ್ಯಾಸಂ ಅಧರಂ ತ್ರಿಕಲಾಂಗುಲಮ್**
**ನಿರ್ಗಮಂ ವೇದಮಧ್ಯಂ (ತಸ್ಯ ಮೂಲಸ್ಯ) ಸ್ಯಾತ್ ತಾರಂ ಭಾಗಂ ತರ್ಧಕಮ್ ॥ ೯ ॥**
**ತಸ್ಯಾಗ್ರಂ ವಿಪುಲಂ ತಸ್ಮಿನ್ ದಂಷ್ಟ್ರಾಯಾಮಂ ದ್ವಿಮಾತ್ರಕಮ್**
**ಕಂಠತಾರಂ ನವಾಂಗುಳಂ ಬಾಹುಮೂಲಂ ತದೇವ ಹೀ ॥ ೧೦ ॥**
**ಷಡ್ವಿಂಶದಂಗುಲಂ ಜತ್ರು ಸೂತ್ರಾಧಸ್ತಾತ್ ಭುಜಾಯತಮ್**
**ಕೂರ್ಪರಂ ದ್ವ್ಯಂಗುಲಂ ಸಾಷ್ಟ ಮಾತ್ರ ತಾಲಂ ಪ್ರಕೋಷ್ಠಕಮ್ ॥ ೧೧ ॥**

ಮೂಗಿನ ಎರಡು ಪುಟಗಳೂ ಸೇರಿಕೊಂಡು ಮುಖದ ಮೇಲೆ ಕಾಣಿಸಿಕೊಳ್ಳುವ ಮೂಗಿನ

ಸೇತುವೆಯನ್ನು ಪುಷ್ಕರ ಎನ್ನಲಾಗುತ್ತದೆ. ಇದರ ಅಗಲವು ೧ ಅಂಗುಳ. ಕಂಠದ ಮೇಲ್ಭಾಗ ಮತ್ತು ಬಾಯಿಯ ಕೆಳ ಭಾಗವಾಗಿರುವ ಇದನ್ನು ಕೆಳದವಡೆ ಎನ್ನಲಾಗುತ್ತದೆ. ಇದರ ಅಗಲವು ೬ ಅಂಗುಳ. ಕೆಳದವಡೆಯು ಮಧ್ಯಭಾಗದಲ್ಲಿ ೪ ಅಂಗುಳವಿದ್ದು ತುದಿಯಲ್ಲಿ ೨ ಅಂಗುಳವಿರುತ್ತದೆ. ಕೋರೆಹಲ್ಲಿನ ಉದ್ದವು ೨ ಅಂಗುಳ. ಕಂಠದ ಅಗಲವು ೯ ಅಂಗುಳ. ಬಾಹು (ಮೇಲ್ತೋಳು) ವಿನ ಅಗಲ ಪ್ರಾರಂಭದಿಂದ (ಮೂಲದಿಂದ ) ೨೬ ಅಂಗುಳ. ಮೊಣಕೈ ಉದ್ದವು ೨ ಅಂಗುಳ ಮುಂಗೈ ಉದ್ದವು ೨೦ ಅಂಗುಳ

ಸಪ್ತಾಂಗುಲಂ ತಲಾಯಾಮಂ ಮಧ್ಯಮಾಯಾಷ್ಷಡಂಗುಲಮ್
ಪಂಚಾಂಗುಲಾಯ ತಾಽನಾಮಿ ಪ್ರದೇಶಿನ್ಯೌ ಕಲಾದ್ವಯಮ್ ॥ ೧೨ ॥
ಕನಿಷ್ಠಾಂಗುಷ್ಠಯೋರ್ದೀರ್ಘಂ ತ್ರಿಕಾಲಂ ತಲವಿಸ್ತರಮ್
ತ್ರಿಯವಂ ತ್ರ್ಯಂಗುಲಂ ತಾರಂ ಮಣಿ ಬಂಧಸ್ಯ ಸಾರ್ಧಕಮ್ ॥ ೧೩ ॥
ಪಂಚಮಾತ್ರಂ ಪ್ರಕೋಷ್ಠಂ ಸ್ಯಾತ್ ಕೂರ್ಪರಂ ಷಡ್ಯವಂ ತ್ರಿಕಲಂ
ವಸುಮಾತ್ರಂ ಭವೇತ್ತತ್ರ ಬಾಹು ಮಧ್ಯವಿಶಾಲಕಮ್ ॥ ೧೪ ॥

ಅಂಗೈ ಉದ್ದವು ೭ ಅಂಗುಳ. ಮಧ್ಯ ಬೆರಳಿನ ಉದ್ದವು ೬ ಅಂಗುಳ. ಅನಾಮಿಕಾ (ಉಂಗುರ ಬೆರಳು) ಮತ್ತು ಪ್ರದೇಶಿನಿ (ತೋರುಬೆರಳು) ಇವೆರಡರ ಉದ್ದವು ೫ ಅಂಗುಳ. ಅಂಗುಷ್ಠ (ಹೆಬ್ಬೆರಳು) ಮತ್ತು ಕನಿಷ್ಠಿಕೆ (ಕಿರುಬೆರಳು) ಇವೆರಡರ ಉದ್ದವು ೪ ಅಂಗುಳ. ಅಂಗೈ ಅಗಲವು ೬ ಅಂಗುಳ. ಮಣಿಕಟ್ಟಿನ ಅಗಲವು ೩ ಅಂಗುಲ ೩ ಯವಗಳು. ಮುಂಗೈ ಅಗಲವು ೫ ಅಂಗುಳ ೪ಯವಗಳು. ಮೊಣಕೈ ಅಗಲ ೬ ಅಂಗುಳ. ಬಾಹು ಮಧ್ಯಭಾಗ (ಎಂದರೆ ಮೊಣಕೈಯಿಂದ ಮೇಲೆ ಮತ್ತು ಭುಜಗಳಿಂದ ಕೆಳಗೆ ಇರುವ ಸ್ನಾಯುಭಾಗ - ಬೈಸೆಪ್ಸ್ ಭಾಗ) ದ ಅಗಲವು ೮ ಅಂಗುಳ.

ಬಾಹ್ವೋಃ ಪರ್ಯಂತ ಮೇಕೋನ ಚತ್ವಾರಿಂಶತಿ ಮಾತ್ರಕಮ್
ಕಕ್ಷಯೋರಂತರಂ ವಕ್ಷಸ್ಥಲಂ ತ್ರಿಸ್ಸಪ್ತಮಾತ್ರಕಮ್ ॥ ೧೫ ॥
ಅರ್ಧೋನ ಷೋಡಶಾಂಗುಲ್ಯಂ ಮಧ್ಯಮಂ (ತು ಪ್ರಕೀರ್ತಿತಮ್)
ತಸ್ಮಾತ್ಕಲಾಧಿಕಂ ತಾರಂ ಶ್ರೋಣ್ಯಾ (ಶ್ಚೈವತು ಸ ಇತಮ್) ॥ ೧೬ ॥
ಕಟಿ ತಾರಂ (ತು ವಿಜ್ಞೇಯ ) ಮರ್ಧೋನಂ ವಿಂಶದಂಗುಲಮ್
ಊರು ಸ್ತ್ರಯೋದಶಾಂಗುಲ್ಯಂ ತತೋ ಜಾನು ನವಾಂಗುಲಮ್ ॥ ೧೭ ॥
ಜಂಘಾ ಮಧ್ಯಮ ವಿಸ್ತಾರಂ ಸಪ್ತಮಾತ್ರ ಕಲಾದ್ವಯಮ್
ತ್ರಿಯವಂ ನಳಕಾ ತಾರಂ ಪಾರ್ಷ್ಣೀ ತಾರಂ ತದೇವ ಹಿ ॥ ೧೮ ॥
ಪಂಚಾಂಗುಲಂ ಸದ್ವಿಯವಂ ತಲ ಮಧ್ಯಮ ವಿಸ್ತೃತಮ್
ಸಾರ್ಧಂ ತು ಮಾತ್ರಂ ಪಾದಾಗ್ರಂ ದ್ವಿಯವ ವೈಪುಲ್ಯ ಮುಚ್ಯತೇ ॥ ೧೯ ॥

ಎರಡು ಬಾಹುಗಳ ಹೊರ ಅಂಚುಗಳ ಮಧ್ಯೆ ಇರುವ ಅಂತರವು ೩೯ ಅಂಗುಳಗಳು. ಎರಡು ಕಂಕುಳಗಳ ಮಧ್ಯೆ ಇರುವ ಅಂತರವು ೨೧ ಅಂಗುಳಗಳು. ಮಧ್ಯಭಾಗದ ಅಗಲವು ೧೫ ಅಂಗುಳ ೪ ಯವಗಳು. ನಾಭಿಯಿಂದ ಕೆಳಕ್ಕೆ ಇರುವ ಪ್ರದೇಶದ ಅಗಲವು ೧೭ ಅಂಗುಳ

೪ ಯವಗಳು. ಕಟಿ (ಸೊಂಟ) ಪ್ರದೇಶದ ಅಗಲವು ೧೯ ಅಂಗುಳ ೪ ಯವಗಳು. ಊರು (ತೊಡೆ) ಅಗಲವು ೧೩ ಅಂಗುಳಗಳು. ಮೊಣಕಾಲು (ಜಾನು) ೯ ಅಂಗುಳ. ಮುಂಗಾಲು (ಜಂಘ - ಮೊಣಕಾಲಿನ ಕೆಳಭಾಗದಿಂದ ಪ್ರಾರಂಭವಾಗಿ ಪಾದದ ಕೀಲಿನ ಬಳಿ ಮುಕ್ತಾಯಗೊಳ್ಳುವ ಕಾಲಿನ ಭಾಗ) ಮಧ್ಯಭಾಗದಲ್ಲಿ ೭ ಅಂಗುಲ ವಿಸ್ತಾರವಾಗಿರುತ್ತದೆ. ನಳಕಾ ಅಗಲವು ೪ ಅಂಗುಳ ೩ ಯವ. ಹಿಮ್ಮಡಿಯ ಅಗಲವು ನಳಕಾದಷ್ಟೇ ಇರುತ್ತದೆ. ಪಾದದ ಮಧ್ಯಭಾಗದ ಅಗಲವು ೫ ಅಂಗುಳ ೨ ಯವ. ಪಾದದ ಮುಂಭಾಗದ ಅಗಲವು ೬ ಅಂಗುಳ ೪ಯವಗಳು. ಪಾದಾಗ್ರವು (ಪಾದದ ಮುಂಭಾಗವು) ಇದಕ್ಕಿಂತಲು ೨ಯವ ಹೆಚ್ಚು ಅಗಲವನ್ನು ಪಡೆದಿರುತ್ತದೆ.

> ಭಾಗಜಾತ್ರದ್ವಯಂ ಭಾಗಯವಂ ತ್ರಿತ್ರಿಯವಂ ತಥಾ
> ತ್ರಿಮಾತ್ರಾರ್ಧಂ ತಥಾಂಗುಲ್ಯಂ ತ್ರಿಮಾತ್ರಂ ಸಪ್ತಯವಾರ್ಧಕಮ್ ॥ ೨೦ ॥
> ದ್ವಿಮಾತ್ರಾರ್ಧಂ ತಥಾ ಸಪ್ತಯವ ಮಾಯಾಮ ವಿಸ್ತರಮ್
> ಅಂಗುಷ್ಠಾದಿ ಕನಿಷ್ಠಾಂತಮಂಗುಲೀನಾಂ ಯಥಾಕ್ರಮಮ್ ॥ ೨೧ ॥

ಬೆರಳುಗಳ ಉದ್ದ ಮತ್ತು ಅಗಲಗಳನ್ನು ಹೆಬ್ಬೆರಳಿನಿಂದ ಮೊದಲುಮಾಡಿ ಕಿರುಬೆರಳಿನ ತನಕ ಕ್ರಮವಾಗಿ ಹೇಳಲಾಗುತ್ತದೆ. ಅಂಗುಷ್ಠವು (ಹೆಬ್ಬೆರಳು) ೪ ಅಂಗುಳ ಉದ್ದ ೨ ಅಂಗುಳ ಅಗಲ ಇರುತ್ತದೆ. ತರ್ಜನಿ (ತೋರು ಬೆರಳು) ೪ ಅಂಗುಳ ೧ ಯವ ಉದ್ದವಾಗಿಯೂ ೧ ಅಂಗುಳ ೧ ಯವ ಅಗಲವಾಗಿಯೂ ಇರುತ್ತದೆ. ಮಧ್ಯದ ಬೆರಳು ೩ ಅಂಗುಳ ೩ಯವ ಉದ್ದವಾಗಿಯೂ, ೧ ಅಂಗುಳ ಅಗಲವಾಗಿಯೂ ಇರುತ್ತದೆ. ಅನಾಮಿಕಾ (ಉಂಗುರ ಬೆರಳು) ಉದ್ದವು ೩ ಅಂಗುಳ ಅದರ ಅಗಲವು ಏಳೂವರೆ ಯವಗಳು. ಕಿರುಬೆರಳಿನ ಉದ್ದವು ೨ ಅಂಗುಳ ೪ ಯವಗಳು ಅದರ ಅಗಲ ೭ ಯವಗಳು.

> ಅತ್ರಾನುಕ್ತಂ ತು ಯತ್ಪಶ್ಚಾದ್ವಕ್ಷ್ಯತೇ ತಸ್ಯ ಯಾ ಹ್ಯಜ
> ಶಿಖಿಕಂಧರ ಪಿಂಛಾಭೋ ನೀಲೋತ್ಪಲ ನಿಭೋSಥವಾ ॥ ೨೨ ॥
> ರಕ್ತಾಂಬರಶ್ಚತುರ್ಬಾಹುಃ ಶಂಖ ಚಕ್ರಗದಾಧರಃ
> ಹ್ರಸ್ವಕರ್ಣಿಕ ಮೌಳಿಃ ಸ್ಯಾತ್ ನಾರಸಿಂಹ ವರಾಹಯೋಃ ॥ ೨೩ ॥
> ಕುಂಡಲಂ ರತ್ನಹಾರಂ (ಚ) ಕೇಯೂರಂ ಚಾಂಗದಂ ತಥಾ
> ರತ್ನಾವಯವಂ ಮುಕ್ತಾವಯವಂ ವೋದರ ಬಂಧನಮ್ ॥ ೨೪ ॥
> ಹಸ್ತಾಗ್ರ ಮಂಡನಂ ರತ್ನಕಟಕೈ ಸ್ತ್ರಿ ಭಿರು ಕ್ತ್ರಭೈಃ
> ಸಕೃತ್ರಿಮಂ ಕಟಿ ಬಂಧಂ ಮುದ್ರಿಕಾರತ್ನಮುದ್ರಿಕಾ ॥ ೨೫ ॥
> ರತ್ನಬಂಧ ಮುಖಂ ಮುಕ್ತಾ ಕಲಾಪಂ ಛನ್ನವೀರಕಮ್
> ಯೋಜ್ಯಂ ಪ್ರಲಂಬ ಸೂತ್ರೋರ ಸ್ಸೂತ್ರಾ ಭ್ಯಾಮುಖ ಶೋಭಿತಮ್ ॥ ೨೬ ॥
> ಸುಂದರಂ ಪಾದಜಾಲಂ ಸ್ಯಾತ್ ಮುದ್ರಿಕಾ ರತ್ನಮುದ್ರಿಕಾ
> ಆದಾಯ ಮೇದಿನೀಮೂರೌ ಸಿಂಹವಿಷ್ಟರ ವಿಷ್ಟರಃ ॥ ೨೭ ॥
> ಲಕ್ಷ್ಮೀಕ್ಷಾಸಹಿತೋ ವಾಥ ದಕ್ಷಿಣೇS ದಕ್ಷಿಣೇ ಕರೇ
> ಕಿಂಚಿನ್ನಾನುಷಮಾಶ್ರಿತ್ಯಾಸನಂ ದೈವಿಕ ಮಧ್ಯಮೇ

ಸ್ಥಾನಂ ಸ್ಯಾದೇಕ ಬೇರಂ ಚೇತ್ ಬ್ರಾಹ್ಮಕೇ ವಿನಿವೇಶಯೇತ್ ॥ ೨೮ ॥

ಎಲೈ ಬ್ರಹ್ಮನೇ, ಇದುವರೆವಿಗೂ ಹೇಳದೆ ಇರುವ ಅಂಶಗಳನ್ನು ಇನ್ನು ಮುಂದೆ ಹೇಳುತ್ತೇನೆ. ಕೇಳುವಂತಹವನಾಗು. ವರಾಹದ ವರ್ಣವು ನವಿಲಿನ ಕೊರಳಿನಂತೆಯೂ ಅದರ ಬಾಲದಂತೆಯೂ ಇರುತ್ತದೆ. ಅಥವ ನೀಲೋತ್ಪಲದಂತೆಯೂ ಇರಬಹುದು. ಕೆಂಪು ವಸ್ತ್ರಗಳನ್ನು ಧರಿಸಿದ್ದು ನಾಲ್ಕು ತೋಳುಗಳನ್ನು ಹೊಂದಿರುವ ಈ ಮೂರ್ತಿಯು ಶಂಖ, ಚಕ್ರ, ಗದೆ (ಪದ್ಮ)ಗಳನ್ನು ಧರಿಸಿ ಶೋಭಾಯಮಾನವಾಗಿರುತ್ತಾನೆ. ನರಸಿಂಹ ಮತ್ತು ವರಾಹ ಮೂರ್ತಿಗಳ ಕಿವಿಗಳು ಕಿರಿದಾಗಿರುತ್ತವೆ. ಸ್ವಾಮಿಯು ಮಕರ ಕುಂಡಲಗಳಿಂದ, ರತ್ನ ಹಾರಗಳಿಂದ, ಕೇಯೂರ, ಅಂಗದ ಮುಂತಾದ ಆಭರಣಗಳಿಂದ ಅಲಂಕೃತನಾಗಿರುತ್ತಾನೆ. ಹೊಟ್ಟೆಯನ್ನು ಸುತ್ತಿಕೊಂಡಿರುವ ವಡ್ಯಾಣದ ರೀತಿಯ ಉದರ ಬಂಧ ಆಭರಣವು ರತ್ನ ಖಚಿತವಾಗಿದ್ದು, ಮತ್ಸ್ಯದ ಮುಖಭಾಗದ ರೀತಿಯ ಅಲಂಕರಣವನ್ನು ಪಡೆದಿರುತ್ತದೆ. ಮುಂಗೈಗಳಲ್ಲಿ ಬಹು ಪ್ರಕಾಶವಂತವಾದ ಮೂರು ಕಡಗಗಳು (ಬಳೆಗಳು). ರತ್ನಖಚಿತವಾದ ಉಂಗುರಗಳು, ಕೀರ್ತಿಮುಖದಿಂದ ಅಲಂಕೃತವಾದ ಕಟಿಬಂಧ, ಮುತ್ತು ರತ್ನಗಳ ಗೊಂಚಲುಗಳನ್ನು ದಟ್ಟವಾಗಿ ಪಡೆದುಕೊಂಡಿರುವ ಛನ್ನವೀರ ಇರಬೇಕು. ವಕ್ಷಸ್ಥಳ, ಕೊರಳು ಮತ್ತು ಭುಜಗಳಲ್ಲಿ ಅಲಂಕೃತಗೊಂಡಿರುವ ಆಭರಣಗಳ ಸಮೂಹವನ್ನು ಛನ್ನವೀರ ಎನ್ನುತ್ತಾರೆ. ಎಡ ಭುಜದಿಂದ ತೊಡೆಯವರೆವಿಗೂ ಸರಪಳಿಯಂತೆ ದೇಹದ ಎಡದಿಂದ ಬಲಕ್ಕೆ ತೂಗಾಡುತ್ತಿರುವಂತೆ ಇರುವ ಹಾರವನ್ನು ಪ್ರಲಂಬಸೂತ್ರ ಎನ್ನುತ್ತಾರೆ. ಆ ಪ್ರಲಂಬ ಸೂತ್ರವು ಮುತ್ತು, ರತ್ನ, ವಜ್ರ, ಮಾಣಿಕ್ಯಾದಿ ನವರತ್ನ ಖಚಿತವಾಗಿದ್ದು ಸುಂದರವಾಗಿರುತ್ತದೆ. ಅಂತಹ ಪ್ರಲಂಬಸೂತ್ರದಿಂದ ಮೂರ್ತಿಯು ಅಲಂಕೃತಗೊಂಡಿರಬೇಕು. ಉರು ಸೂತ್ರ ಎಂಬುದು ಮೂರ್ತಿಯ ಭುಜದ ಮೇಲಿಂದ ವಕ್ಷದಮೇಲೆ ಜೋತುಬಿದ್ದು ತೋಳಿನ ಕಡೆಗೆ ಸರಿದು ಉದರ ಬಂಧದ ಬಳಿಗೆ ಬಂದಿರುವ ಮಣಿ ಖಚಿತವಾದ ಹಾರ. ವರಾಹಮೂರ್ತಿಯು ಈ ಉರು ಸೂತ್ರದಿಂದ ಅಲಂಕೃತನಾಗಿರಬೇಕು. ನವರತ್ನ ಖಚಿತವಾದ ಸುಂದರವಾದ ಅಂದಿಗೆ, ಕಡಗಗಳಿಂದ ಪಾದಗಳನ್ನು ಅಲಂಕರಿಸಬೇಕು. ಎಡ ತೊಡೆಯ ಮೇಲೆ ಭೂದೇವಿಯನ್ನು ಕೂರಿಸಿಕೊಂಡು ಸಿಂಹಾಸನದ ಮೇಲೆ ವರಾಹಮೂರ್ತಿಯು ಮಂಡಿಸಿರುತ್ತಾನೆ. ಸ್ವಾಮಿಯ ಬಲಭುಜದ ಮೇಲೆ ಶ್ರೀದೇವಿಯೂ, ಎಡಭುಜದಮೇಲೆ ಭೂದೇವಿಯು ಇರುತ್ತಾರೆ. ಚಿಕ್ಕ ಆಕಾರದ ಮನುಷ್ಯರೂಪಗಳು ಈ ಇಬ್ಬರು ದೇವಿಯರ ನಡುವೆ ಇರುತ್ತಾರೆ. ವರಾಹಮೂರ್ತಿಯು ಏಕಮೂರ್ತಿಯಾಗಿ ನಿರ್ಮಾಣವಾದುದೇ ಆದರೆ ಅದು ಗರ್ಭ ಗೃಹದ ಬ್ರಹ್ಮಸ್ಥಾನದಲ್ಲಿಯೇ ಇರಬೇಕೆಂಬುದು ಶಾಸ್ತ್ರದ ನಿಯಮ.

## *ವಿಶೇಷ ವಿವರ*

ವರಾಹ ರೂಪದ ಅಸ್ಪಷ್ಟ ನಿರ್ದೇಶವು ವೈದಿಕ ಸಾಹಿತ್ಯದಲ್ಲಿ ದೊರೆಯುತ್ತದೆ. ಆದರೆ ಅಲ್ಲಿ ಇದು ವಿಷ್ಣುವಿನ ಅವತಾರವೆಂಬುದಾಗಿ ಎಲ್ಲೂ ಉಲ್ಲೇಖಿಸಿಲ್ಲ. ಋಗ್ವೇದದಲ್ಲಿ

ಇಂದ್ರನು ವರಾಹವನ್ನು ಕೊಂದ ಉಲ್ಲೇಖವಿದೆ (ಋ ೧೦ : ೯೯ : ೬). ತೈತ್ತಿರೀಯ ಸಂಹಿತೆಯಲ್ಲಿ ಸೃಷ್ಟಿಕರ್ತನಾದ ವಿಶ್ವಕರ್ಮ ಪ್ರಜಾಪತಿಯು ವರಾಹದ ರೂಪವನ್ನು ಪಡೆದ ಕಥೆಯು ದೊರೆಯುತ್ತದೆ. ವಿಶ್ವಕರ್ಮ ಪ್ರಜಾಪತಿಯು ಅಂತರಿಕ್ಷದಲ್ಲಿ ಸಂಚರಿಸುತ್ತಿದ್ದಾಗ ನೀರಿನಲ್ಲಿ ಮುಳುಗಿದ್ದ ಭೂಮಿಯು ಆತನ ಕಣ್ಣಿಗೆ ಕಾಣಿಸಿತು. ವರಾಹ ರೂಪವನ್ನು ಧರಿಸಿ ಪ್ರಜಾಪತಿಯು ನೀರಿನ ಒಳಹೊಕ್ಕು ಒಳಗೆ ಮುಳುಗಿದ್ದ ಭೂಮಿಯನ್ನು ಮೇಲಕ್ಕೆ ತಂದ. ನಂತರ ಅದನ್ನು ಒರೆಸಿ ಶುದ್ಧೀಕರಿಸಿ ಭೂಮಿಯಲ್ಲಿ ದೇವ ಮನುಷ್ಯಾದಿ ಜೀವಿಗಳನ್ನು ಸೃಷ್ಟಿಸಿ ಅವರು ವಾಸಮಾಡಲು ಅನುವುಮಾಡಿಕೊಟ್ಟ (ತೈ. ಸಂ. ೭ : ೧ : ೫ : ೧). ಇದರ ವಿವರ ಇಂತಿದೆ :

**ಆಪೋವಾ ಇದಮಗ್ರೇ ಸಲಿಲ ಮಾಸೀತ್ತಸ್ಮಿನ್ ಪ್ರಜಾಪತಿರ್ವಾಯು ರ್ಭೂತ್ವಾ ಚರದ್ಸ ಇಮಾಪಶ್ಯತ್ತಾಂ ವರಾಹೋ ಭೂತ್ವಾ ಹರತ್ತಾಂ ವಿಶ್ವಕರ್ಮಾಭೂತ್ವಾ ವ್ಯಮಾರ್ಟ್ಸಾಪ್ರಥತ ಸಾ ಪೃಥಿವ್ಯಭವತ್ತತ್ಪೃಥಿವ್ಯೈ ಪೃಥಿವಿತ್ವಂ ತಸ್ಯಾಮ ಶ್ರಾಮ್ಯ ತ್ಪ್ರಜಾಪತಿ ಸ್ಸದೇವಾ ಸಸೃಜತ ವಸೂನ್ ರುದ್ರಾನಾದಿತ್ಯಾನ್ ತೇದೇವಾಃ ಪ್ರಜಾಪತಿ ಮಬ್ರುವನ್ ಪ್ರಜಾಯಾ ಮಹಾ ಇತಿ ಸೋಽಬ್ರವೀತ್ ||**

**ಯಥಾ ಹಂ ಯುಷ್ಮಾಗ್ಂ ಸ್ತಪಥಾಸೃಕ್ಷೇವಂ ತಪಸಿ ಪ್ರಜನಮಿಚ್ಛಧ್ವಮಿತಿ ತೇಭ್ಯೋಗ್ನಿ ಮಾಯತನಂ ಪ್ರಾಯಚ್ಛತ್**

ಈಗ ಕಣ್ಣಿಗೆ ಕಾಣಿಸುವ ಪರ್ವತ, ನದಿ, ಸಾಗರಗಳೆಲ್ಲಾ ಜಗತ್ತಿನ ಸೃಷ್ಟಿಗೆ ಮೊದಲು ನೀರಿನ ರೂಪದಲ್ಲಿತ್ತು. ಆ ಜಲಭೂತದಲ್ಲಿ ವಿಶ್ವಕರ್ಮ ಪ್ರಜಾಪತಿಯು ಸ್ವಶರೀರಿಯಾಗಿ ವಾಸಿಸಲು ಅವಕಾಶವಿಲ್ಲದೆ ಇದ್ದುದರಿಂದ ವಾಯು ರೂಪನಾಗಿ ನೀರಿನಲ್ಲಿ ಸೇರಿಕೊಂಡನು. ಹಾಗೆ ನೀರನ್ನು ಸೇರಿಕೊಂಡು ಅದರಲ್ಲಿ ಸಮಾಹಿತವಾಗಿದ್ದ ಭೂಮಿಯನ್ನು ನೋಡಿ ವರಾಹ ಮೂರ್ತಿಯಾಗಿ ಕೋರೆಯ ಹಲ್ಲಿನ ಮೊನೆಯಿಂದ ಭೂದೇವಿಯನ್ನು ಎತ್ತಿ, ವರಾಹವತಾರವನ್ನು ಸಮಾಪ್ತಿಗೊಳಿಸಿ, ತನ್ನ ಪೂರ್ವ ರೂಪವನ್ನು ಧರಿಸಿ (ಎಂದರೆ ವಿಶ್ವಕರ್ಮ ಪ್ರಜಾಪತಿ ರೂಪವನ್ನು ಧರಿಸಿ) ಭೂದೇವತೆಯ ಒದ್ದೆಯಾಗಿದ್ದ ದೇಹಾಂಗಗಳನ್ನು ಒರೆಸಿ, ವಿಸ್ತಾರವಾಗುವಂತೆ ಹರಡಿದನು. ನಂತರ ಕಣ್ಣಿಗೆ ಕಾಣಿಸುವ ಭೂಮಿಯು ಸಕಲ ಪ್ರಾಣಿಗಳಿಗೆ ಆಧಾರವಾಗಿರುವ ಪೃಥಿವಿಯಾಯಿತು. ನೀರಿನಿಂದ ಬೇರ್ಪಡಿಸಿದ್ದರಿಂದ ಭೂಮಿಗೆ ಪೃಥಿವಿ ಎಂಬ ಹೆಸರು ರೂಢಿಗೆ ಬಂತು. ವಿಶ್ವಕರ್ಮ ಪ್ರಜಾಪತಿಯು ಪೃಥವಿ ಭೂತದಲ್ಲಿ ಅಧಿವಾಸವನ್ನು ನಡೆಸಿ, ತಪಸ್ಸುಮಾಡಿ ಅಷ್ಟವಸುಗಳನ್ನು, ಏಕಾದಶ ರುದ್ರರನ್ನು, ದ್ವಾದಶ ಆದಿತ್ಯರನ್ನು, ಸಕಲ ದೇವತೆಗಳನ್ನು ಸೃಷ್ಟಿಮಾಡಿದ. 'ಹೇಗೆ ನಾನು ತಪಸ್ಸಾಮರ್ಥ್ಯದಿಂದ ನಿಮ್ಮೆಲ್ಲರನ್ನು ಸೃಷ್ಟಿಸಿದ್ದೇನೆಯೋ ಅದೇ ವಿಧವಾಗಿ ನೀವು ನಿಮ್ಮ ತಪಸ್ಸಾಮರ್ಥ್ಯದಿಂದ ಪ್ರಜೆಗಳನ್ನು ಸೃಷ್ಟಿಸಿ' ಎಂದು ವಿಶ್ವಕರ್ಮ ಪ್ರಜಾಪತಿಯು ಅಪ್ಪಣೆ ನೀಡಿದ. ತಪೋವ್ರತಕ್ಕೆ ಆಧಾರವಾಗಿರುವ ಅಗ್ನಿಹೋತ್ರವನ್ನು ನೀಡಿ ತಪಸ್ಸು ಮಾಡಬೇಕೆಂದು ವಸು - ರುದ್ರ - ಆದಿತ್ಯಾದಿಗಳನ್ನು ನಿಯಮಿಸಿದ. ಆದ್ದರಿಂದಲೇ ಪ್ರಪಂಚದಲ್ಲಿ ಮಾನವರಿಗೆಲ್ಲಾ ವಸು - ರುದ್ರ - ಆದಿತ್ಯರು ಪಿತೃ- ಪಿತಾಮಹ - ಪ್ರಪಿತಾಮಹರಾಗಿ ವಿಖ್ಯಾತರಾಗಿದ್ದಾರೆ. ಲೋಕಗಳ ಸೃಷ್ಟಿಗೆ ಇದೇ

ಮೂಲವಾಯಿತು.

ಇದೇ ಆಖ್ಯಾಯಿಕೆಯು ತೈತ್ತಿರೀಯ ಬ್ರಾಹ್ಮಣದಲ್ಲಿ ಸ್ವಲ್ಪ ವ್ಯತ್ಯಸ್ತವಾಗಿ ಹೇಳಲಾಗಿದೆ. ಬ್ರಹ್ಮನ ನಾಭಿಕಮಲದ ಅಡಿಭಾಗದಲ್ಲಿದ್ದ ಕೊಳೆಯನ್ನು ವಿಶ್ವಕರ್ಮ ಪ್ರಜಾಪತಿಯು ವರಾಹ ರೂಪಧರಿಸಿ ಕ್ಷೀರಸಾಗರದಿಂದ ಹೊರಕ್ಕೆ ತಂದು ಅದನ್ನು ಬ್ರಹ್ಮನ ನಾಭಿ ಕಮಲದ ದಳಗಳ ಮೇಲೆ ಎರಚಿದ. ಮುಂದೆ ಅದೇ ಕೊಳಕೇ ಭೂಮಿಯಾಗಿ ರೂಪುಗೊಂಡಿತು (ತೈ. ಬ್ರಾ. ೧ : ೧ : ೩)

ಈಮುಶ ಎಂಬ ವರಾಹವು ಆಳವಾದ ನೀರಿನಲ್ಲಿ ಅಡಗಿದ್ದ ಭೂಮಿಯನ್ನು ಮೇಲಕ್ಕೆ ತಂದುದರ ಉಲ್ಲೇಖವು ಶತಪಥ ಬ್ರಾಹ್ಮಣದಲ್ಲಿ ದೊರೆಯುತ್ತದೆ. ತೈತ್ತಿರೀಯ ಆರಣ್ಯಕವು **ವರಾಹೇನ ಕೃಷ್ಣೇನ ಶತಬಾಹುನಾ ಉದ್ಧೃತಾ** (ಕಪ್ಪುವರ್ಣದ ನೂರು ಬಾಹುಗಳ ವರಾಹವು ಭೂಮಿಯನ್ನು ಮೇಲಕ್ಕೆ ಎತ್ತಿತು) ಎಂದು ಹೇಳುತ್ತದೆ.

ರಾಮಾಯಣದಲ್ಲಿ ಭೂಮಿಯ ಸೃಷ್ಟಿಯ ಬಗ್ಗೆ ವಶಿಷ್ಠ ಮಹರ್ಷಿಯು ಇಂತು ಹೇಳುತ್ತಾನೆ: ಪ್ರಾರಂಭದಲ್ಲಿ ಸಕಲವೂ ನೀರಿನಿಂದಲೇ ತುಂಬಿಕೊಂಡಿತ್ತು. ಆಗ ಸ್ವಯಂ ಭೂ ಬ್ರಹ್ಮನು ಅವತರಿಸಿದ. ಬ್ರಹ್ಮನೇ ವರಾಹದ ರೂಪವನ್ನು ಧರಿಸಿ ಪಾತಾಳದಿಂದ ಭೂಮಿಯನ್ನು ಹೊರಕ್ಕೆ ತೆಗೆದುಕೊಂಡು ಬಂದ.

ಇದರಂತೆ ಭೂಮಿಯನ್ನು ಹೊರಕ್ಕೆ ತಂದವನು ಬ್ರಹ್ಮ - ವಿಷ್ಣುವಲ್ಲ. ಭಾಗವತ ಪುರಾಣದಲ್ಲಿ ಈ ಉದಂತ ದೊರೆಯುತ್ತದೆ.

ಪರಮೇಷ್ಠಿಯು ಸ್ವಯಂ ಭೂ ಮನುವನ್ನು, ಆತನ ಪತ್ನಿಯನ್ನು ಸೃಷ್ಟಿಸಿದ ನಂತರ ಮನುವು ಕೈಜೋಡಿಸಿ ಬಹು ಭಕ್ತಿಯಿಂದ ಇಂತು ಅರಿಕೆ ಮಾಡಿಕೊಂಡನು : 'ಎಲ್ಲಾ ಪಾಪಗಳನ್ನು ಪರಿಹರಿಸುವ ದೇವನೇ, ಭಗವಂತನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಶಕ್ತಿಯನ್ನು ನನಗೆ ಕೊಡು. ನಾನು ಇರಲೊಂದು ಜಗತ್ತು ಕೊಡು. ಅಲ್ಲಿ ಎಲ್ಲಾ ಜೀವಿಗಳೊಂದಿಗೆ ನಾನೂ ಇರುತ್ತೇನೆ. ಎಲ್ಲಾ ಜೀವಿಗಳ ವಾಸಸ್ಥಾನವಾಗಿದ್ದ ಭೂಮಿಯು ಈಗ ನೀರಿನಲ್ಲಿ ಅಡಗಿಕೊಂಡಿದೆ. ಅದನ್ನು ಸಾಗರದ ತಳದಿಂದ ಎತ್ತಿ ಉದ್ಧರಿಸುವ ಶಕ್ತನು ನೀನೇ'.

ಈ ಮಾತನ್ನು ಆಲಿಸಿದ ಪರಮೇಷ್ಠಿಯು ಸಾಗರದತ್ತ ದೃಷ್ಟಿಬೀರಿ ನೀರಿನ ಒಳಗೆ ಭೂಮಿಯು ಅಡಗಿರುವುದನ್ನು ಗಮನಿಸಿ. 'ಆ ಭೂಮಿಯನ್ನು ಹೇಗೆ ಹೊರಕ್ಕೆ ತರುವುದು?' ಎಂಬುದರ ಬಗ್ಗೆ ಬಹುವಾಗಿ ಚಿಂತಿಸಿದ. 'ಸೃಷ್ಟಿಸಬೇಕೆಂಬ ಬಯಕೆ ನನ್ನಲ್ಲಿ ತುಂಬಿರುವಾಗ ಭೂಮಿಯು ನೀರಿನಲ್ಲಿ ಅಡಗಿಕೊಂಡಿದೆ. ಈಗ ನಾನೇನು ಮಾಡಬೇಕು?' ಎಂದು ಯೋಚಿಸುತ್ತಿರುವಾಗಲೇ ಒಂದು ಅಂಗುಲಕ್ಕೂ ಕಡಿಮೆಯಾಗಿದ್ದ ಸಣ್ಣ ವರಾಹವೊಂದು ಪರಮೇಷ್ಠಿಯ ಮೂಗಿನಿಂದ ಹೊರಕ್ಕೆ ಬಿತ್ತು. ಚಕಿತನಾಗಿ ಅದನ್ನು ದೃಷ್ಟಿಸುತ್ತಿರುವಂತೆಯೇ ಗಾಳಿಯಲ್ಲಿಯೇ ನಿಂತಿದ್ದ ಆ ವರಾಹವು ಆನೆಗಿಂತಲೂ ಹೆಚ್ಚು ಗಾತ್ರವಾಗಿ ಬೆಳೆಯಿತು. ಬಾಲವನ್ನು ಎತ್ತಿಕೊಂಡು, ದೇಹವನ್ನೆಲ್ಲಾ ನಿಮಿರಿಸಿಕೊಂಡು ಕೊರಳನ್ನು

ಕೊಡವುತ್ತಾ, ಮೈಮೇಲಿನ ಮುಳ್ಳುಗಳನ್ನೆಲ್ಲಾ ನಿಮಿರಿಸಿಕೊಂಡು, ತೇಜೋವಂತವಾಗಿ ಮೋಡಗಳನ್ನು ತುಳಿಯುತ್ತಾ, ಹೊಳೆಯುತ್ತಿರುವ, ಕೋರೆಗಳನ್ನು ತೋರಿಸುತ್ತಾ, ಕಾಂತಿಯಿಂದ ಮಿಂಚುತ್ತಿರುವ ಕಣ್ಣುಗಳೊಂದಿಗೆ ಭಗವಂತನೇ ಭೂಮಿಯನ್ನು ಉದ್ಧರಿಸಲು ಕಾಣಿಸಿಕೊಂಡಿದ್ದನು. ಯಜ್ಞ ದೇಹಿಯಾಗಿರುವ ಭಗವಂತನು ಬಹು ಬಲವತ್ತರವಾದ ಕೋರೆಗಳೊಂದಿಗೆ ವರಾಹದ ಅವತಾರದಲ್ಲಿ ಭೂಮಿಯ ಗಂಧವನ್ನು ಗುರ್ತಿಸುವಂತೆ ಮೂಗಿನಿಂದ ವಾಸನೆ ನೋಡುತ್ತಾ ನೇರವಾಗಿ ನೀರನ್ನು ಪ್ರವೇಶಿಸಿದ.

ಭಗವಂತನು ನೀರನ್ನು ಪ್ರವೇಶಿಸುವುದನ್ನು ತಡೆಯಲು ದೈತ್ಯರು ಗದಾಧಾರಿಗಳಾಗಿ ಬಂದರು. ಅವರನ್ನು ಸೀಳಿ ನೀರಿನಲ್ಲಿ ಚೆಲ್ಲುತ್ತಾ ಭಗವಂತನು ಮುಂದೆ ಸಾಗಿದ. ಇದರಿಂದ ವರಾಹದ ಮೂಗು ಮತ್ತು ಕೆನ್ನೆಗಳು ರಕ್ತಸಿಕ್ತವಾದವು. ಬಿಳಿಯ ಕೋರೆಗಳ ತುದಿಯಿಂದಲೇ ಭೂಮಿಯನ್ನು ಎತ್ತಿ ನೀರಿನಿಂದ ಹೊರಕ್ಕೆ ತಂದ. ನೀಲವರ್ಣದ ವರಾಹವನ್ನು ಸ್ತುತಿಸುತ್ತಾ ವಿರಂಚಿಯ ನೇತೃತ್ವದಲ್ಲಿ ದೇವತೆಗಳು, ಋಷಿಗಳು ಅಲ್ಲಿ ಸೇರಿದರು. ಇಲ್ಲಿ ಭಗವಂತನೇ ವಿಷ್ಣುವೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ವಿಷ್ಣುಪುರಾಣ, ಲಿಂಗ ಪುರಾಣ, ಗರುಡಪುರಾಣಗಳು ಭೂಮಿಯನ್ನು ಉದ್ಧರಿಸಿದ್ದು ಬ್ರಹ್ಮನೇ ಎಂದು ಹೇಳಿದರೂ ವಿಷ್ಣುವೇ ಬ್ರಹ್ಮನೆಂಬುದನ್ನೂ ಸ್ಪಷ್ಟಪಡಿಸುತ್ತವೆ.

ವಿಷ್ಣು ಪುರಾಣದಲ್ಲಿ ವರಾಹ ಅವತಾರದ ಬಗ್ಗೆ ಈ ರೀತಿಯಾಗಿ ವಿವರಣೆ ದೊರೆಯುತ್ತದೆ : ಪ್ರಜಾಪತಿಗಳ ಒಡೆಯನಾದ ಬ್ರಹ್ಮನು ಈ ಕಲ್ಪದ ಪ್ರಾರಂಭದಲ್ಲಿ ಸಕಲ ಜೀವಕೋಟಿಯನ್ನು ಸೃಷ್ಟಿಸಿದನು. ಇದಕ್ಕೆ ಮೊದಲಿನ ಪದ್ಮಕಲ್ಪದಲ್ಲಿದ್ದ ಬ್ರಹ್ಮನು ತನ್ನ ನಿದ್ರೆಯಿಂದ ಎಚ್ಚರಗೊಂಡು ಜಗತ್ತೆಲ್ಲಾ ಬರಿದಾಗಿರುವುದನ್ನು ಕಂಡನು. ಸಕಲಕ್ಕೂ ಮೂಲ ಆಕರವಾಗಿರುವ, ಆದ್ಯಂತ ರಹಿತನಾಗಿರುವ ಬ್ರಹ್ಮರೂಪದಲ್ಲಿದ್ದರೂ ಅರಿವಿಗೆ ನಿಲುಕದ ನಾರಾಯಣಮೂರ್ತಿಯು ಸಕಲ ನಿಯಂತಾರನು. ಜಲ ಪ್ರಳಯವಾಗಿ ಎಲ್ಲಾಕಡೆ ನೀರೇ ತುಂಬಿದ್ದಾಗ, ಭೂಮಿಯು ನೀರಿನ ಅಡಿಯಲ್ಲಿ ಮುಳುಗಿರುವಾಗ, ಅದನ್ನು ಹೊರಕ್ಕೆ ತರಲೆಂದು ಆಗಲೇ ಇನ್ನೊಂದು ರೂಪವನ್ನು ಧರಿಸಿದನು. ಹಿಂದಿನ ಕಲ್ಪಗಳ ಪ್ರಾರಂಭ ಕಾಲಗಳಲ್ಲಿ ಈ ಸ್ವಾಮಿಯು ಇದೇ ತೆರನಾಗಿ ಮತ್ಸ್ಯ ಮತ್ತು ಕೂರ್ಮ ಅವತಾರಗಳನ್ನು ಧರಿಸಿದ್ದ. ಯಜ್ಞ ಮತ್ತು ವೇದಗಳಿಂದ ರೂಪುಗೊಂಡಿರುವ ವರಾಹ ರೂಪವನ್ನು ಈ ಬಾರಿ ಸ್ವಾಮಿಯು ಧರಿಸಿದ. ಸನಕಾದಿ ಮಹರ್ಷಿಗಳಿಂದ ಸ್ತುತಿಸಲ್ಪಡುತ್ತಿದ್ದ ಈ ಪರಮಾತ್ಮನು ಭೂಮಿಯನ್ನು ಉದ್ಧರಿಸಲೆಂದೇ ಸಾಗರವನ್ನು ಪ್ರವೇಶಿಸಿದ. ಭೂದೇವಿಯು ಈ ದೇವನಿಗೆ ಪ್ರಣಾಮಮಾಡಿ 'ಶಂಖ ಗದೆಗಳನ್ನು ಧರಿಸಿರುವ ಗೋವಿಂದ ಮೂರ್ತಿಯೇ ನನ್ನನ್ನು ಉದ್ಧರಿಸು. ಪ್ರತಿ ಕಲ್ಪಾಂತದ ನಂತರ ಸಕಲವೂ ಜಲಸಮಾಧಿಯಲ್ಲಿ ಪ್ರವೇಶಿಸುತ್ತದೆ. ನಂತರ ನೀನೇ ಎಲ್ಲರನ್ನೂ ಉದ್ಧರಿಸುವ ದಾತನು. ಯಾರು ತಾನೇ ವಾಸುದೇವನನ್ನು ಆರಾಧಿಸದೆ ಮುಕ್ತಿಯನ್ನು ಪಡೆಯುವುದು ಸಾಧ್ಯವಿದೆ? ನೀನೇ ಯಜ್ಞ ಸ್ವರೂಪಿ. ನೀನೇ ವಷಟ್ಕಾರ. ನೀನೇ ಓಂಕಾರ ಸ್ವರೂಪಿ. ನೀನೇ

ಅಗ್ನಿ...' ಎಂದು ಸ್ತುತಿಸಿದಳು. ಆಗ ಸಾಮಗಾನದಂತೆ ಸದ್ದು ಮಾಡುತ್ತಾ ಮಹಾವರಾಹ ರೂಪಿ ಪರಮಾತ್ಮನು ತನ್ನ ಕಣ್ಣುಗಳನ್ನು ತಾವರೆಯಂತೆ ಅರಳಿಸಿದ. ನೀಲೋತ್ಪಲದ ಎಲೆಯಂತೆ ಭೂಮಿಯನ್ನು ಜಲಗರ್ಭದಿಂದ ತನ್ನ ಕೋರೆಗಳ ನೆರವಿನಿಂದ ಮೇಲಿಂದ ಮೇಲಕ್ಕೆ ಎತ್ತಿಕೊಂಡು ಹೊರಬಂದ. ಈ ದೃಶ್ಯವನ್ನು ಕಂಡ ಸನಕ ಸನಂದನಾದಿ ಮಹರ್ಷಿಗಳು ದೇವನ ನಾಮ ಸಂಕೀರ್ತನೆಯನ್ನು ಮಾಡಿದರು.

ಮಹಾವರಾಹ ಮೂರ್ತಿಯು ಭೂಮಿಯನ್ನು ಎತ್ತಿ ಮಹಾಸಾಗರದ ಮೇಲೆ ದೊಡ್ಡ ಜಹಜಿನಂತೆ ತೇಲಿಸಿ ಇರಿಸಿದ.

ಇದೇ ರೀತಿಯ ವರ್ಣನೆಯು ಲಿಂಗ ಪುರಾಣದಲ್ಲೂ (೧.೯೪) ದೊರೆಯುತ್ತದೆ :

ಸಕಲ ಚರಾಚರವು ಮಹಾ ಪ್ರಳಯದಲ್ಲಿ ಸಿಲುಕಿ ಮರೆಯಾಗಿ ಸಕಲವೂ ಜಲಮಯವಾದಾಗ, ಬ್ರಹ್ಮನು ಆ ನೀರಿನಲ್ಲಿಯೇ ಮಲಗಿದ. ನೀರಿನಲ್ಲಿ ಮಲಗಿದವನನ್ನು ನಾರಾಯಣ ಎನ್ನುತ್ತಾರೆ. ಸಕಲ ವೇದಗಳನ್ನು ತಿಳಿದ ವಿಶ್ವಬ್ರಹ್ಮನು ಮರು ಸೃಷ್ಟಿ ನಡೆಸಬೇಕೆಂದು ತೀರ್ಮಾನಿಸಿದ. ನೀರಿನ ಗರ್ಭದಲ್ಲಿ ಸೇರಿಕೊಂಡಿದ್ದ ಭೂಮಿಯನ್ನು ವರಾಹದ ರೂಪವನ್ನು ಧರಿಸಿ ಹೊರಕ್ಕೆ ತಂದು ಮೊದಲು ಇದ್ದಂತೆಯೇ ಅದನ್ನು ಇರಿಸಿ, ಜೀವಿಗಳ ನಿವಾಸ ಯೋಗ್ಯ ಸ್ಥಳವನ್ನಾಗಿ ಅದನ್ನು ರೂಪಿಸಿದ.

ಪುರಾಣಗಳು ಸಾಧಾರಣವಾಗಿ ನಿರ್ದಿಷ್ಟವಾಗಿ ವರಾಹ ಅವತಾರವು ಮಹಾವಿಷ್ಣುವಿನದು ಎಂದೇ ಹೇಳುತ್ತವೆ. ಹಿರಣ್ಯಾಕ್ಷನೆಂಬ ಅಸುರನು ಭೂದೇವಿಯನ್ನು ಅಪಹರಿಸಿಕೊಂಡು ಹೋಗಿ ಪಾತಾಳದಲ್ಲಿ ಅಡಗಿಸಿದ. ಆಗ ವಿಷ್ಣುವು ವರಾಹದ ರೂಪವನ್ನು ಧರಿಸಿ ತನ್ನ ಒಂದೇ ಕೋರೆಯ ತುದಿಯ ಮೇಲೆ ಭೂಮಿಯನ್ನು ಪಾತಾಳದಿಂದ ಹೊರಕ್ಕೆ ತಂದು ಶೇಷನ ತಲೆಯ ಮೇಲೆ ಸ್ಥಾಪಿಸಿದ. ನಂತರ ಹಿರಣ್ಯಾಕ್ಷನ ವಧೆಯನ್ನು ನಡೆಸಿದ (ಮತ್ಸ್ಯ ೪೭ : ೪೭ : ೨೪೭, ವಾಯು ೯೭ : ೭, ಹರಿವಂಶಪುರಾಣ ೧ : ೪೧, ಪದ್ಮಪುರಾಣ, ಉತ್ತರಖಂಡ ೧೬೯: ೨೩೭). ವಿಷ್ಣುವಿನ ಈ ಅವತಾರವು ವರಾಹ ಕಲ್ಪದ ಪ್ರಾರಂಭದಲ್ಲಿ ಉಂಟಾಯಿತೆಂದು ವಾಯುಪುರಾಣ ತಿಳಿಸುತ್ತದೆ. ಅನೇಕ ಪುರಾಣಗಳಲ್ಲಿ ವರಾಹದ ರೂಪವು ಚತುರ್ಬಾಹು, ಚತುಷ್ಪಾದ, ಚತುರ್ನೇತ್ರ ಮತ್ತು ಚತುರ್ಮುಖನೆಂದು ವರ್ಣಿತವಾಗಿದೆ. ವರಾಹದ ಪೂರ್ಣದೇಹವೇ ಯಜ್ಞ ಸ್ವರೂಪವೆಂದು ಪದ್ಮ ಮತ್ತು ವಾಯು ಪುರಾಣಗಳಲ್ಲಿ ವರ್ಣನೆ ದೊರೆಯುತ್ತದೆ.

ವಿಷ್ಣು ತಂತ್ರ (೧೬ : ೫ - ೬) ದಲ್ಲಿ ಹೇಳಿರುವ ನೃವರಾಹಮೂರ್ತಿಯ ವರ್ಣನೆಯ ರೂಪೇ ಹೆಚ್ಚು ಪ್ರಚಲಿತವಾಗಿರುವ ಮೂರ್ತಿ. ಆ ಧ್ಯಾನವು ಇಂತಿದೆ :

**ಕಟಿಪ್ರದೇಶ ಮಾಲಂಬ್ಯಾ ಪಾಣಿನಾ ದಕ್ಷಿಣೇನ ತು**
**ವಿಷ್ಣು ಸ್ವರೂಪಂ ಮಹಾಕಾರಂ ಸುತಪ್ತಂ ಸೂಕರಾನನಮ್**
**ಸರ್ವಲಕ್ಷಣ ಸಂಪನ್ನಂ ಶ್ರೀವತ್ಸಾಂಕಿತ ವಕ್ಷಸಮ್**
**ಏವಂ ಮದ್ವಿಗ್ರಹಂ ಬ್ರಹ್ಮನ್ ಶಂಖಚಕ್ರಧರಂ ಪರಮ್**

ಸರ್ವಲಕ್ಷಣ ಸಂಪನ್ನನಾಗಿ ಶ್ರೀವತ್ಸವನ್ನು ಧರಿಸಿದ್ದು ವಿಷ್ಣುಸ್ವರೂಪಿಯಾದ ಈ



ಚಿತ್ರ ೯ : ವರಾಹಮೂರ್ತಿ

ಮೂರ್ತಿಗಗೆ ವರಾಹದ ಮುಖವಿರುತ್ತದೆ. ಮುಖವು ಕೆಂಪಾಗಿರುತ್ತದೆ. ಅಭಯಮುದ್ರೆಯನ್ನು ಮುಂದಿನ ಬಲಹಸ್ತದಲ್ಲಿ ಧರಿಸಿದ್ದು ಎಡಹಸ್ತವನ್ನು ಕಟ್ಯಾವಲಂಬಿತ ಹಸ್ತವನ್ನಾಗಿರಿಸಿಕೊಂಡಿರುತ್ತಾನೆ. ಹಿಂದಿನ ಎರಡು ಹಸ್ತಗಳಲ್ಲಿ ಶಂಖ ಚಕ್ರಗಳನ್ನು ಧರಿಸಿರುತ್ತಾನೆ.

ಶಿಲ್ಪಾಗಮ ಮತ್ತು ತಂತ್ರಗಳು ವರಾಹದ ಅವತಾರವು ವಿಷ್ಣುವಿನದೇ ಎಂಬುದರ ಬಗ್ಗೆ ಸಂಶಯಕ್ಕೆ ಎಡೆಯೇ ಕೊಡದಂತೆ ಹೇಳುತ್ತವೆ. ವರಾಹಮೂರ್ತಿಯಲ್ಲಿ ಮೂರು ಮುಖ್ಯ ಬಗೆಗಳನ್ನು ಶಿಲ್ಪಾಗಮಗಳು ವಿವರಿಸುತ್ತವೆ (೧) ಭೂ ವರಾಹ, ಆದಿ ವರಾಹ ಅಥವ ನೃ ವರಾಹ (೨) ಯಜ್ಞ ವರಾಹ ಮತ್ತು (೩) ಪ್ರಳಯ ವರಾಹ

## (೧) ಭೂ (ಆದಿ / ನೃ) ವರಾಹ ಮೂರ್ತಿ

ವೈಖಾನಸ ಆಗಮ (ಷಟ್ ಪಂಚಾಶ ಪಟಲ) ದಲ್ಲಿ ಇಂತಿದೆ :


**ಆದಿವರಾಹಂ ಚತುರ್ಭುಜಂ ಶಂಖ ಚಕ್ರಧರಂ ಸಸ್ಯಶ್ಯಾಮನಿಭಂ ನಾಗೇಂದ್ರ ಫಣಾಮಣಿ ಸ್ಥಾಪಿತ ದಕ್ಷಿಣಪಾದಂ ತದೂರೌ ಮಹೀಂ ದಧಾನಂ ದಕ್ಷಿಣಹಸ್ತೇನ ದೇವ್ಯೋಃ ಪಾದೌ ಗೃಹ್ಣಂತಂ ವಾಮಹಸ್ತೇನ ತಾಮುಪಗೃಹ್ಣಂತಂ ಮುಖೇನ ದೇವೀಂ ಜಿಘ್ರಂತಂ ಕೃತ್ವಾ ತಾಂ ಮಹೀಂ ಪ್ರಾಂಜಲೀಕೃತಹಸ್ತಾಂ ಪ್ರಸಾರಿತಪಾದಾಂ ಪುಷ್ಪಾಂಬರಧರಾಂ ಶ್ಯಾಮಾಭಾಂ ಕಿಂಚಿದ್ದೇವಂ ಸಮೀಕ್ಷ್ಯ ಬ್ರೀಡಾಹರ್ಷೇಣ ಸಂಯುಕ್ತಾಂ ಸರ್ವಾಭರಣಸಂಯುತಾಂ ದೇವಸ್ಯ ಸ್ತನಾಂತಂ ವಾ ಪಂಚತಾಲೇನ ಮಾನೇನ ಕಾರಯೇತ್।**

ಆದಿ ವರಾಹವು ವರಾಹ ಮುಖವನ್ನು ಹೊಂದಿದ್ದು ನರದೇಹದಲ್ಲಿ ನಾಲ್ಕು ತೋಳುಗಳನ್ನು ಪಡೆದಿರಬೇಕು. ಮೇಲಿನ ಎರಡು ಹಸ್ತಗಳಲ್ಲಿ ಶಂಖ ಚಕ್ರಗಳು ಇರಬೇಕು. ಬಲಗಾಲು ಸ್ವಲ್ಪ ಬಗ್ಗಿದ್ದು ಆದಿಶೇಷನ ಹೆಡೆಯ ಮೇಲೆ ಇರಿಸಿರಬೇಕು. ಆದಿಶೇಷನೊಂದಿಗೆ ಆತನ ಪತ್ನಿಕೂಡ ಇರಬೇಕು. ಸ್ವಾಮಿಯ ಮಡಚಿರುವ ಬಲಗಾಲ ತೊಡೆಯ ಮೇಲೆ ಕಾಲುಗಳನ್ನು ಕೆಳಗೆ ಬಿಟ್ಟು ಕುಳಿತಿರುವ ಭೂದೇವಿಗೆ ಕೆಳಗಿನ ಎಡ ಹಸ್ತವು ಆಸರೆಯಾಗಿರಬೇಕು. ಬಲ ತೋಳು ಭೂದೇವಿಯ ಸೊಂಟವನ್ನು ಬಳಸಿರಬೇಕು. ವರಾಹ ಮುಖವು ಭೂದೇವಿಯ ವಕ್ಷಸ್ಥಳವನ್ನು ಮೂಸುತ್ತಿರುವಂತೆ ತೋರಬೇಕು. ಮೂರ್ತಿಯ ಬಣ್ಣವು ಸಂಧ್ಯಾಸಮಯದ ಕತ್ತಲೆಯಂತೆ ಇರಬೇಕು. ಭೂದೇವಿಯು ಅಂಜಲಿ ಮುದ್ರೆಯಲ್ಲಿದ್ದು ಸೂಕ್ತ ವಸ್ತ್ರ, ಪುಷ್ಪ ಮತ್ತು ಆಭರಣಗಳಿಂದ ಅಲಂಕೃತಳಾಗಿರಬೇಕು. ಭೂದೇವಿಯು ಶ್ಯಾಮಲ ವರ್ಣೆ. ಆಕೆಯ ಮುಖವು ಸ್ವಾಮಿಯ ಕಡೆಗೆ ಸ್ವಲ್ಪವಾಗಿ ತಿರುಗಿದ್ದು ಮುಖದಲ್ಲಿ ನಾಚಿಕೆ ಸಂತೋಷಗಳು ಸ್ಪಷ್ಟವಾಗಿರಬೇಕು. ಭೂದೇವಿಯ ಉಷ್ಣೀಶವು ಸ್ವಾಮಿಯ ವಕ್ಷಸ್ಥಲಕ್ಕೆ ಸಮಾನ ಎತ್ತರದಲ್ಲಿರ ಬೇಕು. ಭೂದೇವಿಯನ್ನು ಪಂಚತಾಲದಲ್ಲಿ ರೂಪಿಸಬೇಕು.

ಪಾಂಚರಾತ್ರಾಗಮಕ್ಕೆ ಸೇರಿದ ಪರಾಶರ ಸಂಹಿತೆಯಲ್ಲಿ (೧೫ : ೧೪೦)

**ಭುಜಾಗ್ರೇ ಭೂಧರಂ ದೇವಂ ಚಕ್ರಶಂಖಧರಂ ವಿಭುಂ ।**
**ಕಿರೀಟಾದಿ ವಿಭೂಷಾಂಗಂ ಭೂವರಾಹ ಮಹಂ ಭಜೇ ॥**

ಎಂದು ಹೇಳಿ ಭೂದೇವಿಯನ್ನು ಭುಜದ ಮೇಲೆ ಹೊತ್ತು ಚಕ್ರ ಮತ್ತು ಶಂಖಗಳನ್ನು ಧರಿಸಿರಬೇಕೆಂದು ಹೇಳಲಾಗಿದೆ.



ಚಿತ್ರ ೧೦ : ಆದಿ ವರಾಹ ಮೂರ್ತಿ (೧)



ಚಿತ್ರ ೧೧ : ಆದಿ ವರಾಹ ಮೂರ್ತಿ ( ೨ )

ಹಯಶೀರ್ಷ ಸಂಹಿತೆಯಲ್ಲಿ (೨೩ : ೨೨ - ೨೩)

**ಶೇಷಾಹಿ ವಿಧೃತಂ ಪಾದಂ ಬಾಹುನಾ ಧಾರಯನ್ ಧರಾಮ್ ||**
**ಶಂಖಂ ವಾಮೇಽ ಥವಾ ಲಕ್ಷ್ಮೀಂ ಗದಾ ಚಕ್ರೇ ತು ದಕ್ಷಿಣೇ |**
**ಏವಂ ನರವರಾಹಂತು ಕೃತ್ವಾ ಯಃ ಸ್ಥಾಪಯೇನ್ನರಃ ||**

(ತೋಳಿನ ಮೇಲೆ ಭೂದೇವಿಯನ್ನು ಹೊತ್ತು, ಪಾದವನ್ನು ಶೇಷನ ಹೆಡೆಯಮೇಲೆ ಊರಿ, ಎಡಗಡೆ ಶಂಖ ಅಥವ ಲಕ್ಷ್ಮೀದೇವಿಯನ್ನು ಧರಿಸಿ, ಬಲಗಡೆ ಗದೆ ಮತ್ತು ಚಕ್ರಗಳನ್ನು ಧರಿಸಿರಬೇಕು. ಈ ಮೂರ್ತಿಯನ್ನು ನರವರಾಹ ಎನ್ನುತ್ತಾರೆ).

ಎಂಬುದಾಗಿ ವಿವರಣೆ ದೊರೆಯುತ್ತದೆ. ಇದೂ ಪಾಂಚರಾತ್ರಾಗಮಕ್ಕೆ ಸೇರಿದ ಗ್ರಂಥ.

ಪರಾಶರ ಸಂಹಿತೆಯಲ್ಲಿ (೩೦ : ೧೩ - ೧೪) ಈ ರೀತಿಯ ಧ್ಯಾನ ಶ್ಲೋಕವು ದೊರೆಯುತ್ತದೆ :

**ಚಕ್ರ ಶಂಖಾಭಯು ವರ ಫಣಿವಾಲಾಗ್ರ ಧಾರಿಣಮ್**
**ಶ್ರೀ ಮದಾದಿವರಾಹಂ ತಂ ದೇವಂ ಜಾನುಧರಂ ವಿಭುಮ್ ||**
**ಭಜೇ ಭೂಮಿಧರಂ ವಂದೇ ಫಣಮೂರ್ಧ್ನಿ ಸ್ಥಿತಿಂ ಹರಿಮ್**
**ವರಾಹ ಗ್ರೀವ ವೇಷಾಢ್ಯಂ ಕಿರೀಟಾದಿ ವಿಭೂಷಿತಮ್ ||**


(ಚಕ್ರ - ಶಂಖ, ಅಭಯ - ವರದಗಳನ್ನು ಧರಿಸಿ, ಆದಿಶೇಷನ ಫಣಿಯ ಮೇಲೆ ಕಾಲನ್ನು ಇರಿಸಿಕೊಂಡು, ಆ ಮೊಣಕಾಲಿನ ಮೇಲೆ ಭೂಮಿಯನ್ನು ಧರಿಸಿರುವ ಆದಿವರಾಹಮೂರ್ತಿಯು ಸಕಲಾಭರಣಗಳಿಂದಲೂ ಅಲಂಕೃತವಾಗಿ ಕಿರಿಟಾದಿ ಆಭೂಷಣಗಳನ್ನು ಧರಿಸಿರುತ್ತಾನೆ).

ಇದೇ ಸಂಹಿತೆಯಲ್ಲಿ (೩೦ : ೧೭ - ೧೮) ಸ್ವಾಮಿಗೆ ಹದಿನಾರು ತೋಳು ಗಳಿರುವುದರ ವಿವರಣೆ ಇಂತು ದೊರೆಯುತ್ತದೆ :

**ಶಂಖ ಚಕ್ರ ಗದಾ ಪದ್ಮ ಧನುರ್ಬಾಣಾಸಿ ಧಾರಿಣಮ್**
**ಶೂಲ ವಜ್ರಾಗ್ನಿ ಖೇಟಾದಿ ಪಾಶಾಂಕುಶಧರಂ ವಿಭುಮ್ ||**
**ಸದಾ ವರಾಭಯ ಹಲಧರಂ ನೀಲೋತ್ಪಲ ಪ್ರಭಮ್**
**ವಂದೇ ವರಾಹಗ್ರೀವಂ ತಂ ಸರ್ವಾಭರಣ ಭೂಷಿತಮ್ ||**

(ಶಂಖ, ಚಕ್ರ, ಗದೆ, ಪದ್ಮ, ಧನಸ್ಸು, ಬಾಣ, ಖಡ್ಗ, ಶೂಲ, ವಜ್ರ, ಅಗ್ನಿ, ಖೇಟಕ, ಪಾಶ, ಅಂಕುಶ, ವರದ, ಅಭಯ, ನೇಗಿಲು ಮತ್ತು ಒಂದು ಹಸ್ತದಲ್ಲಿ ಭೂದೇವಿಗೆ ಆಸರೆಯನ್ನು ನೀಡಿರುವ ನೀಲವರ್ಣದ ವರಾಹ ಮುಖದ ಸಕಲಾಭರಣ ಭೂಷಿತನಾದ ಸ್ವಾಮಿಗೆ ನಮಸ್ಕಾರ)

ಇದೇ ಸಂಹಿತೆಯು (೩೦ : ೨೬) ಶ್ರೀ ಭೂ ನೀಳಾಧಿಪಂ ದೇವಂ ಭೂ ವರಾಹಮಹಂ ಭಜೇ ಎಂದು ಹೇಳಿ ಶ್ರೀದೇವಿ, ಭೂದೇವಿ, ನೀಳಾದೇವಿ ಮುವ್ವರನ್ನೂ ಸ್ವಾಮಿಯೊಂದಿಗೆ ರೂಪಿಸಬಹುದೆಂದು ಸೂಚಿಸುತ್ತದೆ.



ಚಿತ್ರ ೧೨ : ಆದಿ ವರಾಹ ( ೩ )

ಪಾಂಚರಾತ್ರಾಗಮಗಳ ಪ್ರಕಾರ ವರಾಹ ಮೂರ್ತಿಯು ಭೂದೇವಿಯ ವಕ್ಷಸ್ಥಳವನ್ನೋ ಅಥವ ತೊಡೆಗಳನ್ನೋ ಮೂಸುತ್ತಿರುವಂತೆ ಇರಬಹುದು. ಅಥವ ವರಾಹದ ಮೂಗು ವಕ್ಷಗಳನ್ನು ಸ್ಪರ್ಶಿಸುತ್ತಿರಬಹುದು. ಭೂದೇವಿಯ ವರ್ಣನೆ ವಿಷ್ವಕ್ಸೇನ ಸಂಹಿತೆ (೧೧ : ೪೬ - ೪೮) ಯಲ್ಲಿ ಈ ರೀತಿ ದೊರೆಯುತ್ತದೆ.

ಶಂಖವರ್ಣಾಂತು ವಾ ಶ್ಯಾಮಂ ಸರ್ವಲಕ್ಷಣ ಲಕ್ಷಿತಮ್

ನವಯೌವನ ಸಂಪೂರ್ಣಾಂ ಸರ್ವಾವಯ ಸುಂದರೀಮ್ ॥

ನಾರೀಣಾಮುತ್ತಮಾಂ ದೇವೀಂ ಸುಕೇಶಾಂ ಪಂಕಜಾನನಾಮ್

ವಿದ್ಯುಲ್ಲತಾ ಪ್ರಭಾಂ ವಾಪಿ ಶ್ಯಾಮಾಂ ವಾಪಿ ಕೃತಾಂಜಲಿಮ್ ॥

ಸರ್ವಾಲಂಕಾರ ಸಂಯುಕ್ತಾಂ ನಿಮಗ್ನಾಂ ಜಗತೀಂ ಶುಭಾಮ್

ಶಂಖದ ಬಣ್ಣ ಅಥವ ಶ್ಯಾಮಲ ವರ್ಣೆಯಾಗಿರುವ, ಸರ್ವಲಕ್ಷಣ ಸಂಪನ್ನೆಯಾಗಿ ನವಯುವ್ವನದಲ್ಲಿರುವ ಶ್ರೇಷ್ಠ, ನಾರೀಮಣಿಯಾಗಿರುವ, ಸಂಮೃದ್ಧ ಕೇಶರಾಶಿಯ ಇಂದುವದನೆಯಾದ ಭೂದೇವಿಯು ಕಾಂತಿಯು ಮಿಂಚಿನಂತೆ ಇರುತ್ತದೆ. ಕೃತಜ್ಞತಾಂಜಲಿಯಲ್ಲಿರುವ ಈ ದೇವಿಯು ಸಕಲಾಲಂಕಾರಗಳನ್ನು ಹೊಂದಿರಬೇಕು.

ಆದರೆ ಭೂದೇವಿಯನ್ನು ಯಾವ ತಾಲಮಾನದಲ್ಲಿ ರೂಪಿಸಬೇಕೆಂಬ ವಿವರಣೆಯು ಇಲ್ಲಿ ದೊರೆಯುವುದಿಲ್ಲ.

ಶ್ಯಾಮಃ ಸುದರ್ಶನಧರಾಭಯ ಸದ್ವರೇತೋ

ಭೂಮ್ಯಾ ಯುತೋऽಖಿಲ ನಿಜೋಕ್ತ ಪರಿಗ್ರಹೈಶ್ಚ ।

ಧ್ಯೇಯೋನಿಜೈಶ್ಚ ತನುಭಿಸ್ಸಕಲೈರು ಪೇತಃ

ಕೋಲೋ ಹರಿಃ ಸಕಲವಾಂಛಿತ ಸಿದ್ಧಯೇ ನಃ ॥ (ಪಾಂಚರಾತ್ರಾಗಮ)

ಭೂ ವರಾಹ ಮೂರ್ತಿಯು ಕಪ್ಪು ಶರೀರ ಛಾಯೆ ಪಡೆದಿರುತ್ತಾನೆ. ಭೂದೇವಿ, ಶ್ರೀದೇವಿಯರು ಇರುತ್ತಾರೆ. ಈ ಸ್ವಾಮಿಗೆ ನಾಲ್ಕು ಹಸ್ತಗಳಿರುತ್ತವೆ. ಬಲಪಾರ್ಶ್ವದ ಕೆಳಹಸ್ತದಲ್ಲಿ ಅಭಯ ಮುದ್ರೆ, ಮೇಲಿನ ಹಸ್ತದಲ್ಲಿ ಸುದರ್ಶನ ಚಕ್ರ ಇರುತ್ತವೆ. ಎಡ ಪಾರ್ಶ್ವದಲ್ಲಿ ಕೆಳಹಸ್ತದಲ್ಲಿ ವರದ ಮುದ್ರೆ, ಮೇಲಿನ ಹಸ್ತದಲ್ಲಿ ಶಂಖವು ಇರುತ್ತದೆ.

ಈ ರೂಪದಲ್ಲಿ ವರಾಹ ಮೂರ್ತಿಯನ್ನು ಧ್ಯಾನಿಸಿದರೆ ಸಕಲ ಇಷ್ಟಾರ್ಥಗಳು ಸಿದ್ಧಿಸುತ್ತವೆ.

ಹೇಮಾದ್ರಿ ದಾನಕಾಂಡದಲ್ಲಿ ಈ ಸ್ವಾಮಿಯು ಶೇಷನ ಮೇಲೆ ಕುಳಿತಿರುತ್ತಾನೆ. ಅದರ ವಿವರಣೆಯು ಇಂತಿದೆ -

ವರಾಹ ರೂಪಃ ಕಾರ್ಯಸ್ತು ಶೇಷೋಪರಿಗತಃ ಪ್ರಭುಃ


ಶೇಷಶ್ಚತುರ್ಭುಜಃ ಕಾರ್ಯಶ್ಚಾರುರತ್ನ ಫಣಾನ್ವಿತಃ ॥

ಕರ್ತವ್ಯೌ ಸೀರಮುಸಲೌ ಕರಯೋಸ್ತಸ್ಯ ಯಾದವಃ


ಸರ್ಪರೂಪಶ್ಚ ಕರ್ತವ್ಯ ಸ್ತಥೈವ ರಚಿತಾಂಜಲಿಃ ॥

ಆಲೀಢಾಸ್ಥಾನ ಸಂಸ್ಥಾನ ಸ್ತತ್ಪೃಷ್ಠೇ ಭಗವಾನ್ ಭವೇತ್

ವಾಮಾ ರತ್ನಗತಾ ತಸ್ಯ ಯೋಷಿದ್ರೂಪಾ ವಸುಂಧರಾ ॥



ಚಿತ್ರ ೧೪ : ಆದಿ ವರಹ - ( ೫ )



ಚಿತ್ರ ೧೩ : ಆದಿ ವರಹ - ( ೪ )

ನಮಸ್ಕಾರಪರಾ ತಸ್ಯ ಕರ್ತವ್ಯಾ ದ್ವಿಭುಜಾ ಶುಭಾ
ಯಸ್ಮಿನ್ ಭುಜೇ ಧರಾ ದೇವೀ ತತ್ರ ಶಂಖಃ ಕರೇ ಭವೇತ್ ॥
ಅನ್ಯೇ ತಸ್ಯಕರಾಃ ಕಾರ್ಯಾಃ ಪದ್ಮ ಚಕ್ರಗದಾಧರಾಃ
ಪದ್ಮಾಸನಸ್ಥಾಂ ಕುರ್ವೀತ ಶ್ರೀಯಂ ತ್ರೈಲೋಕ್ಯಮಾತರಮ್ ॥
ಗೌರವರ್ಣಾಂ ಸುರೂಪಾಂ ಚ ಸರ್ವಾಲಂಕಾರ ಭೂಷಿತಾಮ್
ರೌಕ್ಮಪದ್ಮಕರವ್ಯಗ್ರಾಂ ವರದಾಂ ದಕ್ಷಿಣೇ ನ ತು ॥
(ವರಾಹಃ ಶ್ಯಾಮವರ್ಣಃ ಭೂಮಿ ಶ್ಶುಕ್ಲವರ್ಣಾ ಶ್ರೀ ಸುವರ್ಣಾ ಶೇಷಃ ಶ್ಶುಭ್ರವರ್ಣ:)

(ಹೇಮಾದ್ರಿ ದಾನಕಾಂಡ)

ವರಾಹ ಸ್ವಾಮಿಯು ಶೇಷನ ಮೇಲಿರಬೇಕು. ಆ ಶೇಷನು ಚತುರ್ಭುಜಗಳೊಂದಿಗೆ ಸರ್ಪದ ಹೆಡೆಯನ್ನು ಪಡೆದಿರಬೇಕು. ಆತನು ಸ್ವಚ್ಛವಾದ ಬಿಳಿಯ ಶರೀರಚ್ಛಾಯೆಯನ್ನು, ರತ್ನಗಳಿರುವ ಹೆಡೆಯನ್ನು ಪಡೆದಿರುತ್ತಾನೆ. ಮತ್ತು ನಿಜಕರಗಳಲ್ಲಿ ನಮಸ್ಕಾರಾಂಜಲಿಯಲ್ಲಿರುತ್ತಾನೆ. ಮೇಲಿನ ಬಲ ಹಸ್ತದಲ್ಲಿ ನೇಗಿಲು, ಮೇಲಿನ ಎಡ ಹಸ್ತದಲ್ಲಿ ಮುಸಲ (ಒನಕೆ) ಇರುತ್ತವೆ. ಶ್ರೀ ವರಾಹ ಮೂರ್ತಿಯು ಶೇಷನ ಭುಜಗಳ ಮೇಲೆ ಆಲೀಢಾಸನದಲ್ಲಿರುತ್ತಾನೆ.

ಸ್ತ್ರೀರೂಪದಲ್ಲಿರುವ ಭೂದೇವಿಯು ಎಡ ತೋಳಿನ ಮೊಣಕೈ ಭಾಗದಲ್ಲಿರುತ್ತಾಳೆ. ಆಕೆಗೆ ಎರಡು ತೋಳುಗಳು. ಸ್ವಾಮಿಗೆ ನಮಸ್ಕಾರ ಮಾಡುತ್ತಿರುತ್ತಾಳೆ.

ಇನ್ನೊಂದು ಬಗೆಯನ್ನು ಹೀಗೆ ಹೇಳಲಾಗಿದೆ : ವರಾಹಮೂರ್ತಿಗೆ ನಾಲ್ಕು ಹಸ್ತಗಳಿರುತ್ತವೆ. ಬಲಪಾರ್ಶ್ವದ ಕೆಳಹಸ್ತದಲ್ಲಿ ಪದ್ಮ, ಮೇಲಿನ ಹಸ್ತದಲ್ಲಿ ಚಕ್ರ ಇರುತ್ತವೆ. ಎಡ ಪಾರ್ಶ್ವದಲ್ಲಿ ಕೆಳಹಸ್ತದಲ್ಲಿ ಗದೆ ಹಿಡಿದಿರುತ್ತಾನೆ. ಮೇಲಿನ ಹಸ್ತದಲ್ಲಿ (ಭೂದೇವಿ ಕುಳಿತಿರುವ ತೋಳಿನಲ್ಲಿ) ಶಂಖವನ್ನು ಹಿಡಿದಿರುತ್ತಾನೆ. ಹೀಗೆ ನಾಲ್ಕು ತೋಳುಗಳನ್ನು ಅಲಂಕರಿಸಿರಬೇಕು.

ಈ ಸ್ವಾಮಿಗೆ ಬಲಭಾಗದಲ್ಲಿ ಲಕ್ಷ್ಮೀದೇವಿಯು ಇರಬೇಕು. ಆಕೆಗೆ ಎರಡು ಹಸ್ತಗಳು, ಮೂರುಲೋಕಗಳ ತಾಯಿಯಾದ ಆ ದೇವಿಯು ಸರ್ವಾಲಂಕಾರಗಳೊಂದಿಗೆ ಒಳ್ಳೆಯ ರೂಪದೊಂದಿಗೆ, ಹಳದಿಯ ಶರೀರ ಕಾಂತಿಯೊಂದಿಗೆ, ಬಲಪಾರ್ಶ್ವದಲ್ಲಿ ವರದ ಮುದ್ರೆಯನ್ನು ಎಡ ಪಾರ್ಶ್ವದಲ್ಲಿ ಬಂಗಾರದ ಪದ್ಮವನ್ನು ಹಿಡಿದಿರಬೇಕು.

(ಸ್ವಾಮಿಯು ಶ್ಯಾಮಲ ವರ್ಣದಲ್ಲಿ, ಭೂಮಿ, ಶೇಷ ಇಬ್ಬರೂ ಶುಭ್ರವರ್ಣದಲ್ಲಿ, ಲಕ್ಷ್ಮೀಯು ಹಳದಿ ಬಣ್ಣದಲ್ಲಿ ಇರಬೇಕು)

ಇದೇ ದೇವನನ್ನು ಶಿಲ್ಪರತ್ನವು ಸ್ವಲ್ಪ ಭಿನ್ನವಾಗಿ ವರ್ಣಿಸುತ್ತದೆ.

ನೃವರಾಹಂ ಪ್ರವಕ್ಷ್ಯಾಮಿ ಸೂಕರಾಸ್ಯೇನ ಶೋಭಿತಮ್
ಗದಾ ಪದ್ಮಧರಂ ಧಾತ್ರೀಂ ದಂಷ್ಟ್ರಾಗ್ರೇಣ ಸಮುದ್ಧೃತಾಮ್ ॥
ಬಿಭ್ರಾಣಂ ಕೋರ್ಪರೇ ವಾಮೇ ವಿಸ್ಮಯೋತ್ಫುಲ್ಲಲೋಚನಾಮ್
ನೀಲೋತ್ಪಲಧರಾಂ ದೇವೀ ಮು[illegible]ಪ್ರಕಲ್ಪಯೇತ್ ॥

**ದಕ್ಷಿಣಾಂ ಕಟಿಸಂಸ್ಥಂ ಚ ಬಾಹುಂ ತಸ್ಯ ಪ್ರಕಲ್ಪಯೇತ್**
**ಕೂರ್ಮ ಪೃಷ್ಠೇ ಪದಂ ಚೈಕಮನ್ಯನ್ನಾಗೇಂದ್ರ ಮೂರ್ಧನಿ ||**
**ಅಥವಾ ಸೂಕರಾಕಾರಂ ಮಹಾಕಾಯಂ ಕ್ವಚಿಲ್ಲಿಖೇತ್**
**ತೀಕ್ಷ್ಣಂ ದಂಷ್ಟ್ರಾಗ್ರ ಘೋಣಾಸ್ಯಸ್ಕಂಧಕರ್ಣೋರ್ಧ್ವರೋಮಕಮ್ ||**

ನೃವರಾಹಮೂರ್ತಿಯು ಗದಾ, ಪದ್ಮಗಳನ್ನು ಧರಿಸಿದ್ದು ಭೂದೇವಿಯನ್ನು ಕೋರೆಯ ತುದಿಯ ಮೇಲೆ ಕೂರಿಸಿಕೊಂಡಿರಬೇಕು. ವರಾಹ ಮೂರ್ತಿಯ ಒಂದು ಕಾಲು ಆದಿಶೇಷನ ಮೇಲೂ, ಇನ್ನೊಂದು ಕಾಲು ಕೂರ್ಮ(ಆಮೆ)ದ ಮೇಲೂ ಇರಿಸಿ ಕೊಂಡಿರಬೇಕು. ಅಥವ ಭೂದೇವಿಯು ವರಾಹ ಮೂರ್ತಿಯ ಎಡ ಮೊಣಕೈಮೇಲೆ ಕುಳಿತಿರುವಂತೆ ರೂಪಿಸಬೇಕು. ಭೂದೇವಿಯ ಕೈಯ್ಯಲ್ಲಿ ನೀಲೋತ್ಪಲ ಇರಬೇಕು. ಆಕೆಯ ಕಣ್ಣಲ್ಲಿ ಆಶ್ಚರ್ಯ ಸೂಸುತ್ತಿರಬೇಕು. ಬಲಗಡೆಯ ಎರಡು ತೋಳುಗಳಲ್ಲಿ ಒಂದು ಆಕೆಯ ಪೃಷ್ಠದ ಮೇಲೆ ಇರಬೇಕು.

ವರಾಹ ಮೂರ್ತಿಯು ಅರ್ಧ ನರಾಕಾರ ಇರುವುದಕ್ಕೆ ಬದಲಾಗಿ ಪೂರ್ಣವಾಗಿ ವರಾಹ ರೂಪದಲ್ಲಿ ಇರಬಹುದು. ಆಗ ಭುಜಗಳು ವಿಶಾಲವಾಗಿಯೂ, ಬಲವಾಗಿಯೂ ಇರಬೇಕು. ಮೂಗು ಉದ್ದವಾಗಿ ದೃಢವಾಗಿರಬೇಕು. ಕೋರೆಯ ಹಲ್ಲುಗಳು ನೀಳವಾಗಿರಬೇಕು. ಮೈಯ್ಯೆಲ್ಲ ನಿಮಿರಿರಬೇಕು.

ಅಗ್ನಿ ಪುರಾಣದಲ್ಲಿಯೂ (ಅಧ್ಯಾಯ ೪೯) ಇದೇ ರೀತಿಯಾದ ವರ್ಣನೆ ಇದೆ

**ನರಾಂಗೋ ವಾಥ ಕರ್ತವ್ಯೋ ಭೂವರಾಹೋ ಗದಾದಿಭೃತ್**
**ದಕ್ಷಿಣೇ ವಾಮಕೇ ಶಂಖಂ ಲಕ್ಷ್ಮೀರ್ವಾ ಪದ್ಮಮೇವ ವಾ ||**
**ಶ್ರೀರ್ವಾಮಕೂರ್ಪರಸ್ಥಾ ತು ಕ್ಷ್ಮಾನಂತೌ ಚರಣಾನುಗೌ**
**ವರಾಹಸ್ಥಾಪನಾದ್ರಾಜ್ಯಂ ಭವಾಬ್ಧಿತರಣಂ ಭವೇತ್ ||**

ಬಲಗೈಯ್ಯಲ್ಲಿ ಶಂಖ, ಎಡಗೈಯಲ್ಲಿ ಪದ್ಮ ಅಥವ ಲಕ್ಷ್ಮಿಯನ್ನು ಹಿಡಿದಿರಬೇಕು. ಲಕ್ಷ್ಮೀಯನ್ನು ಚಿತ್ರಿಸಿದಾಗ ಆಕೆಯು ಸ್ವಾಮಿಯ ಎಡ ಮೊಣಕೈಮೇಲೆ ಕುಳಿತಿರುವಂತೆ ಚಿತ್ರಿಸಬೇಕು. ಭೂದೇವಿ ಮತ್ತು ಆದಿಶೇಷ ಇಬ್ಬರೂ ಸ್ವಾಮಿಯ ಪಾದಗಳ ಬಳಿ ಇರಬೇಕು. ವರಾಹ ಮೂರ್ತಿಯನ್ನು ಸ್ಥಾಪಿಸಿ ಪೂಜಿಸುವುದರಿಂದ ರಾಜ್ಯಲಾಭ ಅಥವ ವಿಸ್ತರಣದೊಂದಿಗೆ ಸಂಸಾರದಿಂದ ಮುಕ್ತಿ ದೊರೆಯುತ್ತದೆ.

ವಿಷ್ಣುಧರ್ಮೋತ್ತರ ಪುರಾಣದಲ್ಲಿ ಈ ರೀತಿ ಇದೆ :

**ಐಶ್ವರ್ಯ ಸಂನಿರುದ್ಧಶ್ಚ ವರಾಹೋ ಭಗವಾನ್ ಹರಿಃ**
**ಐಶ್ವರ್ಯ ಶಕ್ತ್ಯಾ ದಂಷ್ಟ್ರಾಗ್ರ ಸಮುದ್ಧೃತ ವಸುಂಧರಃ ||**
**ನೃವರಾಹೋऽಥವಾ ಕಾರ್ಯಶ್ಶೇಷೋ ಪರಿಗತಃ ಪ್ರಭುಃ**
**ಶೇಷ ಶ್ಚತುರ್ಭುಜಃ ಕಾರ್ಯಶ್ಚಾರು ರತ್ನ ಫಣಾನ್ವಿತಃ ||**
**ಆಶ್ಚರ್ಯೋತ್ಫುಲ್ಲನಯನೋ ದೇವ ವೀಕ್ಷಣ ತತ್ಪರಃ**

ಕರ್ತವ್ಯೌ ಸೀರ ಮುಸಲೌ ಕರಯೋಸ್ತಸ್ಯ ಯಾದವ ॥
ಸರ್ಪಭೋಗಶ್ಚ ಕರ್ತವ್ಯಸ್ತಥೈವ ರಚಿತಾಂಜಲಿಃ
ಆಲೀಢಸ್ಥಾನ ಸಂಸ್ಥಾನಸ್ತ ತ್ಪೃಷ್ಠೇ ಭಗವಾನ್ಭವೇತ್ ॥
ವಾಮಾರತ್ನಿಗತಾ ತಸ್ಯ ಯೋಷಿದ್ರೂಪಾ ವಸುಂಧರಾ
ನಮಸ್ಕಾರಪರಾ ತಸ್ಯ ಕರ್ತವ್ಯಾ ದ್ವಿಭುಜಾ ಶುಭಾ ॥
ಯಸ್ಮಿನ್ ಭುಜೇ ಧರಾ ದೇವೀ ತತ್ರ ಶಂಖಕರೋ ಭವೇತ್
ಅನ್ಯೇ ತಸ್ಯ ಕರಾಃ ಕಾರ್ಯಾಃ ಪದ್ಮ ಚಕ್ರಗದಾಧರಾಃ ॥
ಹಿರಣ್ಯಾಕ್ಷಶಿರಶ್ಛೇದ ಚಕ್ರೋದ್ಧೃತ್ತಕರೋಽಥವಾ
ಮೃತೋದ್ಧತ ಹಿರಣ್ಯಾಕ್ಷಸ್ಸುಮುಖೋ ಭಗವಾನ್ಭವೇತ್ ॥
ಮೂರ್ತಿಮಂತಮನೈಶ್ವರ್ಯಂ ಹಿರಣ್ಯಾಕ್ಷಂ ವಿದುರ್ಬುಧಾಃ
ಐಶ್ವರ್ಯೇಣ ವಿನಾಶೇನ ಸ ನಿರಸ್ತೋಽ ರಿಮರ್ದನಃ ॥
ನೃವರಾಹೋಽಥವಾ ಕಾರ್ಯೋ ಧ್ಯಾನೇ ಕಪಿಲವತ್ಸ್ಥಿತಃ
ದ್ವಿಭುಜಸ್ತಥವಾ ಕಾರ್ಯಃ ಪಿಂಡನಿರ್ವಾಪನೋದ್ಯತಃ ॥
ಸಮಗ್ರಕ್ರೋಡರೂಪೇಣ ಬಹುದಾನವಮಧ್ಯಗಃ
ನೃವರಾಹೋ ವರಾಹಶ್ಚ ಕರ್ತವ್ಯಃ ಕ್ಷ್ಮಾವಿದಾರಣಃ ॥

ಈ ಮೊದಲೇ ಹೇಳಿರುವ ವಿವರಗಳು ಇಲ್ಲೂ ಮತ್ತೆ ಹೇಳಲಾಗಿದೆ. ಇಲ್ಲಿ ದೊರೆಯುವ ಹೆಚ್ಚುವರಿ ವಿವರಗಳು ಇವು -

ಆದಿಶೇಷನನ್ನು ನಾಲ್ಕು ತೋಳುಗಳಿರುವ ನಾಗನಂತೆ ರೂಪಿಸಿ ಅಲಂಕೃತ ಹೆಡೆ ಅಳವಡಿಸಬೇಕು. ಕಣ್ಣಲ್ಲಿ ಆಶ್ಚರ್ಯವಿರಬೇಕು. ತಲೆ ಸ್ವಲ್ಪ ಮೇಲಕ್ಕೆತ್ತಿದ್ದು ಸ್ವಾಮಿಯ ದರ್ಶನಕ್ಕೆ ಪ್ರಯತ್ನಿಸುತ್ತಿರುವಂತೆ ಭಾಸವಾಗಬೇಕು. ಆದಿಶೇಷನ ಎರಡು ಹಸ್ತಗಳು ಅಂಜಲಿಮುದ್ರೆಯಲ್ಲಿಯೂ, ಇನ್ನೆರಡು ಹಸ್ತಗಳಲ್ಲಿ ಹಲ (ನೇಗಿಲು) ಮತ್ತು ಮುಸಲ (ಒನಕೆ) ಧರಿಸಿರಬೇಕು. ಸ್ವಾಮಿಯು ಆಲೀಢಾಸನದಲ್ಲಿರಬೇಕು ಅಥವ ಧ್ಯಾನ ಮುದ್ರೆಯಲ್ಲಿ ಕಪಿಲಾಸನದಲ್ಲಿರುವಂತೆ ಚಿತ್ರಿಸಬೇಕು. ಅಥವ ಎರಡು ಕೈಗಳಿಂದ ಪಿಂಡ ಪ್ರದಾನ ಮಾಡುತ್ತಿರುವಂತೆ ರೂಪಿಸಬಹುದು [ಹಿರಣ್ಯಾಕ್ಷನನ್ನು ಕೊಂದ ನಂತರ ಅವನ ಸದ್ಗತಿಗಾಗಿ ವರಾಹ ಮೂರ್ತಿಯು ಪಿಂಡ ಪ್ರದಾನ ಮಾಡಿದ್ದರ ವರ್ಣನೆ ಭಾಗವತದಲ್ಲಿ ದೊರೆಯುತ್ತದೆ. ಅದರ ಪ್ರತೀಕ ಈ ಚಿತ್ರಣ ]. ಅಥವ ಪೂರ್ಣರೂಪದ ವರಾಹದಂತೆ ಅಸುರರ ಮಧ್ಯೆ ಇರುವಂತೆಯೂ ಚಿತ್ರಿಸಬಹುದು. ಆಗ ವರಾಹ ಮೂರ್ತಿಯು ಲಿಂಗೋದ್ಭವ ಮೂರ್ತಿಯಲ್ಲಿ ರೂಪಿತವಾಗುವ ವರಾಹದಂತೆ ಇರಬೇಕು.

## (೨) ಯಜ್ಞವರಾಹ ಮೂರ್ತಿ

ಅಥ ಯಜ್ಞವರಾಹಂ ಶ್ವೇತಾಭಂ ಚತುರ್ಭುಜಂ ಶಂಖಚಕ್ರಧರಂ ವಾಮಪಾದಂ ಸಮಾಕುಂಚ್ಯ ದಕ್ಷಿಣಂ ಪ್ರಸಾರ್ಯ ಸಿಂಹಾಸನೇ ಸಮಾಸೀನಂ ಪೀತಾಂಬರಧರಂ ಸರ್ವಾಭರಣ ಭೂಷಿತಂ ಕಾರಯಿತ್ವಾ ತಸ್ಯ ದಕ್ಷಿಣೇ ದೇವೀಂ ಶ್ರಿಯಂ ಹೇಮಾಭಂ ವಾಮಪಾದಂ ಸಮಾಕುಂಚ್ಯ ದಕ್ಷಿಣಂ ಪ್ರಸಾರ್ಯಾಸೀನಾಂ

ಪದ್ಮಧರವಾಮಹಸ್ತಾಮಾಸನೇ ನಿಹಿತದಕ್ಷಿಣಹಸ್ತಾಂ ವಾಮಪಾರ್ಶ್ವೇ ಮಹೀಂ ದೇವೀಂ ಸಸ್ಯಶ್ಯಾಮನಿಭಾಂ ದಕ್ಷಿಣಪಾದಮಾಕುಂಚ್ಯ ವಾಮಂ ಪ್ರಸಾರ್ಯಾಸೀನ ಮುತ್ಪಲಧರ ದಕ್ಷಿಣ ಹಸ್ತಾಮಾಸನೇ ನಿಹಿತವಾಮಹಸ್ತಾಂ ದೇವಂ ಕಿಂಚಿತ್ ಸಮೀಕ್ಷ್ಯ ವಿಸ್ಮಯೋತ್ಫುಲ್ಲಲೋಚನಾಂ ಕಾರಯೇತ್ । ತ್ರಯಾಣಾಂ ವರಹಾಣಾಂ ತತ್ತದ್ರೂಪಂ ಕೌತಕ ಬಿಂಬಂ ವಿಷ್ಣುಂ ಚತುರ್ಭುಜಂ ವಾ ಕಾರಯೇತ್ ।

ಈ ವರಾಹ ಮೂರ್ತಿಯು ಶ್ವೇತವರ್ಣದಲ್ಲಿರುತ್ತಾನೆ. ನಾಲ್ಕು ಭುಜಗಳಿರುವ ಈ ಸ್ವಾಮಿಯು ಎರಡು ಹಸ್ತಗಳಲ್ಲಿ ಶಂಖ ಚಕ್ರಗಳನ್ನು ಹಿಡಿದಿರುತ್ತಾನೆ. ಸ್ವಾಮಿಯು ಸಿಂಹಾಸನದ ಮೇಲೆ ಸುಖಾಸನದಲ್ಲಿಕುಳಿತಿರುತ್ತಾನೆ. ಎಂದರೆ ಎಡಗಾಲನ್ನು ಪೀಠದಮೇಲೆ ಅಡ್ಡಲಾಗಿ ಮಲಗಿಸಿಬಲಗಾಲನ್ನು ತೂಗಿಬಿಟ್ಟಿರುತ್ತಾನೆ. ಹಳದಿ ವಸ್ತ್ರಗಳಿಂದಲೂ, ನಾನಾ ಆಭರಣಗಳಿಂದಲೂ ಅಲಂಕೃತನಾಗಿರುವ ಈತನ ಬಲಪಾರ್ಶ್ವಕ್ಕೆ ಲಕ್ಷ್ಮೀದೇವಿಯು ಎಡಗಾಲನ್ನು ಮಡಚಿ ಪೀಠದಮೇಲೆ ಇರಸಿಕೊಂಡು ಬಲಗಾಲನ್ನು ಪೀಠದಿಂದ ತೂಗಿಬಿಟ್ಟಿರುತ್ತಾಳೆ. ಸ್ವರ್ಣಛಾಯೆಯಲ್ಲಿ ತೇಜೋವಂತಳಾಗಿರುವ ಈಕೆಯ ಎಡಗೈಯಲ್ಲಿ ತಾವರೆ ಇರುತ್ತದೆ. ಬಲಗೈಪೀಠದ ಮೇಲೆ ಊರಿರುತ್ತದೆ.

ಸ್ವಾಮಿಯ ಎಡ ಪಾರ್ಶ್ವಕ್ಕೆ ಭೂದೇವಿ ಬಲಗಾಲನ್ನು ಮಡಚಿ ಪೀಠದಮೇಲೆ ಇರಿಸಿಕೊಂಡು ಎಡಗಾಲನ್ನು ಪೀಠದಿಂದ ಕೆಳಕ್ಕೆ ತೂಗಿ ಬಿಟ್ಟಿರುತ್ತಾಳೆ. ಆಕೆಯ ಮೈ ಬಣ್ಣವು ಶ್ಯಾಮಲ ವರ್ಣವಾಗಿರುತ್ತದೆ. ಬಲಗೈಯಲ್ಲಿ ನೀಲೋತ್ಪಲವನ್ನು ಹಿಡಿದಿದ್ದು ಎಡಗೈಯನ್ನು ಪೀಠದ ಮೇಲೆ ಊರಿರುತ್ತಾಳೆ. ಈ ದೇವಿಯ ಮುಖವು ದೇವನ ಕಡೆಗೆ ಸ್ವಲ್ಪ ತಿರುಗಿದ್ದು ಕಣ್ಣುಗಳಲ್ಲಿ ಆಶ್ಚರ್ಯ ಭಾವವಿರುತ್ತದೆ.

ಶೇಷಸಂಹಿತೆ (೧೩ : ೪ - ೫) ಯಲ್ಲಿ ಇದೇ ಸ್ವರೂಪವನ್ನು ಹೇಳಿ ನೀಲಾದೇವಿಯೂ ಸ್ವಾಮಿಯೊಂದಿಗೆ ಇರಬೇಕೆಂದು ಸೂಚಿಸುತ್ತದೆ.

ಶಂಖ ಚಕ್ರಧರಂ ದೇವಂ ಸರ್ವಾಭರಣ ಭೂಷಿತಮ್ ॥
ಶ್ರೀ ಭೂಮಿ ನೀಲಾಸಹಿತಂ ಭಜೇ ಯಜ್ಞವರಾಹಕಮ್ ।

## (೩) ಪ್ರಳಯ ವರಾಹ ಮೂರ್ತಿ

ವಕ್ಷ್ಯೇ ಪ್ರಲಯವರಾಹಂ ವಾಮಪಾದಂ ಸಮಾಕುಂಚ್ಯ ದಕ್ಷಿಣಂ ಪ್ರಸಾರ್ಯ ಸಿಂಹಾಸನೇ ಸಮಾಸೀನಂ ನೀಲಾಭಂ ಶಂಖಚಕ್ರಧರಮಭಯದಕ್ಷಿಣ ಹಸ್ತಮೂರು ಪ್ರತಿಷ್ಠಿತ ವಾಮಹಸ್ತಂ ಪೀತಾಂಬರಧರಂ ಸರ್ವಾಭರಣ ಭೂಷಿತಂ ಕಾರಯಿತ್ವಾ ತಸ್ಯ ದಕ್ಷಿಣೇ ದೇವೀಂ ಮಹೀಂ ಪಾದಂ ವಾಮಮಾಕುಂಚ್ಯ ದಕ್ಷಿಣಂ ಪ್ರಸಾರ್ಯಾಸೀನಾಂ ಶ್ಯಾಮಾಭಾಂ ಸರ್ವಾಭರಣ ಭೂಷಿತಾಮುತ್ಪಲ ಧರವಾಮಕರಾಮಾಸನನಿಹಿತ ದಕ್ಷಿಣಕರಾಂ ಕಿಂಚಿದ್ದೇವಂ ಸಮೀಕ್ಷ್ಯ ವಿಸ್ಮಯೋತ್ಫುಲ್ಲ ಲೋಚನಾಂ ಕಾರಯೇತ್ ।

ಈ ರೂಪದಲ್ಲಿ ಸ್ವಾಮಿಯು ಸಿಂಹಾಸನದ ಮೇಲೆ ಕುಳಿತಿದ್ದು ಬಲಗಾಲು ಪೀಠದಿಂದ ಕೆಳಕ್ಕೆ ತೂಗುತ್ತಿರುತ್ತದೆ. ಎಡಗಾಲು ಸ್ವಲ್ಪ ಓರೆಯಾಗಿದ್ದು ಪೀಠದಮೇಲೆ ಇರಿಸಿ ಕೊಂಡಿರುತ್ತಾನೆ. ಸ್ವಾಮಿಗೆ ನಾಲ್ಕು ಬಾಹುಗಳಿದ್ದು ಎರಡರಲ್ಲಿ ಶಂಖ ಮತ್ತು ಚಕ್ರಗಳು

ಇರುತ್ತವೆ. ಮುಂದಿನ ಬಲ ಹಸ್ತ ಅಭಯ ಮುದ್ರೆಯನ್ನು ಧರಿಸಿದ್ದರೆ ಎಡಹಸ್ತವು ಎಡತೊಡೆಯ ಮೇಲೆ ಇರಿಸಿಕೊಂಡಿರಬೇಕು. ಈ ಸ್ವಾಮಿಯ ವರ್ಣ ನೀಲಿ, ಹಳದಿಯ ಬಣ್ಣದ ವಸ್ತ್ರಗಳಿಂದಲೂ ಸರ್ವಾಭರಣಗಳಿಂದಲೂ ಸ್ವಾಮಿ ಅಲಂಕೃತನಾಗಿರಬೇಕು. ಅದೇ ಪೀಠದ ಮೇಲೆ ಸ್ವಾಮಿಯ ಬಲಗಡೆಗೆ ಭೂದೇವಿ ಕುಳಿತಿರಬೇಕು. ಆಕೆಯ ಬಲಗಾಲು ಪೀಠದಿಂದ ಕೆಳಕ್ಕೆ ತೂಗುಬಿಟ್ಟಿದ್ದರೆ ಎಡಗಾಲು ಮಡಚಿದ್ದು ಪೀಠದಮೇಲೆ ಇರಬೇಕು. ಭೂದೇವಿಯ ವರ್ಣವು ಶ್ಯಾಮಲ. ಸರ್ವಾಭರಣಗಳಿಂದ ಆಕೆ ಅಲಂಕೃತಳಾಗಿರಬೇಕು. ಎಡ ಹಸ್ತದಲ್ಲಿ ಉತ್ಪಲ ಪುಷ್ಪ (ಕೆಂಪು ಕಮಲ)ಇರಬೇಕು. ಆಕೆಯ ಬಲಹಸ್ತವು ಪೀಠದ ಮೇಲೆ ಊರಿರಬೇಕು. ಆಕೆಯ ದೃಷ್ಟಿ ಸ್ವಾಮಿಯ ಮೇಲಿದ್ದು, ಆ ನೋಟದಲ್ಲಿ ಆಶ್ಚರ್ಯವು ಸ್ಪಷ್ಟವಾಗಿ ಗುರ್ತಿಸುವಂತಿರಬೇಕು.

ವಿಷ್ಣು ವರಾಹದ ಶರೀರವನ್ನು ಬಿಟ್ಟು ತನ್ನ ನಿಜರೂಪದಲ್ಲಿ ವೈಕುಂಠವನ್ನು ಪ್ರವೇಶಿಸಿದ. ಆದರೆ ವರಾಹದ ಕೋರೆಗಳು ಶಿವನ ಆಭರಣವಾಗಿ ಅಲಂಕರಣಗೊಂಡಿತು.

ವಿಷ್ಣುವಿನ ಈ ಅವತಾರಕ್ಕೆ ಪದ್ಮಪುರಾಣದಲ್ಲಿ ಒಂದು ವಿವರಣೆ ದೊರೆಯುತ್ತದೆ. ಅದೇ ವಿವರಣೆಯು ವಾಯುಪುರಾಣದಲ್ಲಿ ಪುನರುಕ್ತವಾಗಿದೆ. ವರಾಹವು ಯಜ್ಞದ ಸಂಕೇತ. ಅದರ ಅಂಗಾಂಗಗಳು ಯಜ್ಞದ ಅಂಗಾಂಗಗಳನ್ನು ಸೂಚಿಸುತ್ತವೆ. ವರಾಹದ ಗುಟುರು ಸಾಮಘೋಷದ ಸಂಕೇತ. ನಾಲ್ಕು ವೇದಗಳು ನಾಲ್ಕುಪಾದಗಳು. ವರಾಹದ ಕೋರೆಯು ಯೂಪ ಸ್ಥಂಭ. ವರಾಹದ ನಾಲಿಗೆಯೇ ಅಗ್ನಿ. ಅದರ ಕೂದಲೇ ದರ್ಭೆ. ವರಾಹದ ಶರೀವೇ ಬ್ರಹ್ಮ (ಯಜ್ಞದಲ್ಲಿಯ ಪುರೋಹಿತ). ಅದರ ಊಪಸ್ಥವು ಉದ್ಗಾತೃ. ಅದರ ಮೇಢ್ರವು ಹೋತೃ. ವರಾಹದ ಎರಡು ಕಣ್ಣುಗಳು ದಿನ ರಾತ್ರಿಗಳ ಸಂಕೇತ. ವರಾಹದ ಕರ್ಣಾಭರಣಗಳು ವೇದಾಂಗಗಳು. ಮೂಗೇ ಸ್ರುವ. ಮೂಗಿನ ಸುರಿತವೇ ಘೃತ. ವರಾಹದ ಕಾಲಿನ ಗೊರಸು ಪ್ರಾಯಶ್ಚಿತ್ತ. ಮೊಣಕಾಲು ಪಶು. ವರಾಹದ ಮೂಳೆಗಳು ಮಂತ್ರಗಳು. ಅದು ಒಳಕ್ಕೆ ಎಳೆದುಕೊಳ್ಳುವ ಗಾಳಿಯೇ ಅಂತರಾತ್ಮ. ಅದರ ರಕ್ತವೇ ಸೋಮರಸ. ಅದರ ಭುಜಗಳೇ ವೇದಿ. ಹವಿಸ್ಸು ಕಂಠ. ವರಾಹದ ಚಲನೆಯೇ ಹವ್ಯ ಕವ್ಯ. ಪುರೋಹಿತನಿಗೆ ಕೊಡುವ ದಕ್ಷಿಣೆಯೇ ವರಾಹದ ಹೃದಯ. ಅವನ ನೆರಳೇ ಯಜ್ಞಮಾಡುವವನ ಹೆಂಡತಿ. ವರಾಹದ ಪೂರ್ಣದೇಹವು ಯಜ್ಞಮಂಟಪ. ವರಾಹದ ದೇಹದ ಮೇಲಿನ ಒಂದು ಆಭರಣವನ್ನು ಪ್ರವರ್ಗ್ಯದಲ್ಲಿ ಸೇರಿಸಿ ವರಾಹದ ಸ್ಮರಣೆಗೆ ಅವಕಾಶ ಕಲ್ಪಿಸಲಾಗಿದೆ.

*ಇತಿ ಶ್ರೀ ಬ್ರಾಹ್ಮೀಯೇ ಚಿತ್ರಕರ್ಮ ಶಾಸ್ತ್ರೇ ಪ್ರಾದುರ್ಭಾವಕಾಂಡೇ ವರಾಹ ಲಕ್ಷಣಂ ನಾಮ*

अथ चतुर्थोऽध्यायः

# ನಾರಸಿಂಹ ಲಕ್ಷಣಮ್

ಅತಃ ಪರಂ ನೃಸಿಹ್ಮಸ್ಯ ಮಾನಂ ವಕ್ಷ್ಯೇ ಪಿತಾಮಹ
ಸವಿಂಶತೀಶ ತಾಂಗುಲ್ಯಂ ಮೂರ್ಧ್ನಃ ಪಾದಾಂತತಃ (ಕ್ರಮಾತ್) ॥ ೧ ॥
ಊರ್ಧ್ವತ ಶ್ಯಿರೋ ಮಾತ್ರ ತ್ರಯಂ + + + + + + + +
+ + + + + + + + ನೇತ್ರ ಸೂತ್ರಂ ಷಣ್ಮಾತ್ರ ಮುಚ್ಯತೇ ॥ ೨ ॥
ತಸ್ಮಾತ್ ಘೋಣಂ ಚತುರ್ಮಾತ್ರಂ ತಸ್ಮಾದಾಸ್ಯಂ ತ್ರಿಮಾತ್ರಕಮ್
ಅಧರಂ ದ್ವ್ಯಂಗುಲಂ ನೇತ್ರಾತ್ ಭ್ರೂವೋರ್ಮಾತ್ರ ತ್ರಯಂ ತತಃ ॥ ೩ ॥
ತತ ಶ್ಯೇಷಂ ಲಲಾಟಂ (ಸ್ಯಾದಂತ) ರಂ ನವ ಮಾತ್ರಕಂ
ದೃಗಂತರಂ (ಸ್ಯಾತ್) ದ್ವಿಯವಂ ದ್ವ್ಯಂಗುಲಂ (ತು ಪ್ರಕೀರ್ತಿತಮ್) ॥ ೪ ॥
ನೇತ್ರಾಯತಂ ಮಾತ್ರದ್ವಯಂ (ತಸ್ಯ ತಾರಂ ಪ್ರಕೀರ್ತ್ಯತೇ)
ತತಸ್ತಸ್ಯಾರ್ಧಂ ಯವ ವಿಸ್ತಾರಾ ಸಾಸ್ಯಾತ್ ಕನೀನಿಕಾ ॥ ೫ ॥
(ಪಂಚಾರ್ಧಯವ )ವಿಸ್ತಾರಾಯತಂ ಮದ್ಧ್ಯೇऽಸಿತ ಮಂಡಲಮ್
ಮಧ್ಯೇ ಜ್ಯೋತಿರ್ಯವಂ ತಸ್ಯ ದೃಷ್ಟಿರಷ್ಟಾಂಶ ವಿಸ್ತರಮ್ ॥ ೬ ॥
ಪಾರ್ಶ್ವಯೋರು ಪರೀಷ್ವಾಚ್ಚ ಶ್ವೇತಂ ಶೇಷಂ ಯವದ್ವಯಮ್
ಊರ್ಧ್ವವರ್ಮಂ ತಥಾ ಚಾರ್ಧಯವ ತಾರ ಮಧೋಗತಮ್ ॥ ೭ ॥
ಯವ ದ್ವಯಂ ತತೋ ಭಾಗಾಯತೌ ಪಂಚನತೌ ಭ್ರೂವೌ
ದ್ವಾದಶಾಂಗುಲ ವಿಸ್ತಾರಂ ನೇತ್ರ ಸೂತ್ರ ಸಮಂ ಮುಖಮ್ ॥ ೮ ॥
ಆಸ್ಯ ತಾರಂ ದಶಾಂಗುಲ್ಯಂ ವಿವರಂ ಚತುರಂಗುಲಮ್
ನವಾ(ಂಗು)ಲಂ ತತಸ್ಸೃಕ್ವಂ ತಯೋರ್ಮಧ್ಯಂ (ತು) ಸೋನ್ನತಮ್ ॥ ೯ ॥

ಪಿತಾಮಹನೆನಿಸಿರುವ ಬ್ರಹ್ಮದೇವನೇ, ಇನ್ನು ನಾರಸಿಂಹಸ್ವಾಮಿಯ ಲಕ್ಷಣವನ್ನು ಹೇಳುತ್ತೇನೆ ಕೇಳು. ಉಷ್ಣೀಷದಿಂದ (ನೆತ್ತಿಯಿಂದ) ಪಾದ ತಲದವರೆವಿಗೂ ಎತ್ತರವು ೧೨೦ ಅಂಗುಳಗಳು. ಎಂದರೆ ಮಧ್ಯಮ ದಶತಾಲ. ಉಷ್ಣೀಷದಿಂದ ಕೇಶಾಂತವು ೩ ಅಂಗುಳ. ಕೇಶಾಂತದಿಂದ ನೇತ್ರಸೂತ್ರದವರೆವಿಗೂ ಎತ್ತರವು ೬ ಅಂಗುಳ. ನೇತ್ರಸೂತ್ರದಿಂದ ನಾಸಿಕಾಗ್ರ (ಅಥವ ನಾಸಾಪುಟ ಸೂತ್ರ)ದವರೆವಗೂ ಇರುವ ಎತ್ತರವು ೪ ಅಂಗುಳ. ಅಲ್ಲಿಂದ ಬಾಯಿಯ

ತನಕ ಇರುವ ಎತ್ತರವು ೩ ಅಂಗುಳ. ತುಟಿಗಳು ೨ ಅಂಗುಳ. ಎರಡು ಕಣ್ಣುಗಳಿಂದ ಮೇಲೆ ಹುಬ್ಬುಗಳು ಇದ್ದು ಅದರ ಎತ್ತರವು ೩ ಅಂಗುಳ. ಕೇಶಾಂತ ಮತ್ತು ಹುಬ್ಬುಗಳ ಮಧ್ಯೆ ಇರುವ ಅಗಲವು (ಇದು ಹಣೆಯ ಅಗಲವಾಗುತ್ತದೆ) ೯ ಅಂಗುಳಗಳು. ನೇತ್ರಗಳ ನಡುಭಾಗವು ೧ ಅಂಗುಳ ೨ ಯವ. ನೇತ್ರಗಳ ಉದ್ದವು ೨ ಅಂಗುಳ. ಅಗಲ ೧ ಅಂಗುಳ. ಕಣ್ಣಿನ ಕಪ್ಪುಭಾಗದ ಮಧ್ಯಭಾಗದಲ್ಲಿರುವ ಕಣ್‌ಪಾಪಾದ ಅಗಲವು ೧ಯವ. ಕಪ್ಪುಭಾಗದ ಉದ್ದವು ಐದೂವರೆ ಯವ. ಅದರ ಮಧ್ಯೆ ಇರುವ ಜ್ಯೋತಿರ್ಮಂಡಲವು ೧ ಯವ ಇರುತ್ತದೆ. ಅದರಲ್ಲಿ ಎಂಟನೆಯ ಒಂದು ಭಾಗ ದೃಷ್ಟಿಮಂಡಲವಾಗಿರುತ್ತದೆ. ಕಪ್ಪಾಗಿರುವ ಕಣ್ಣಿನ ವೃತ್ತದ ಮೇಲೂ ಕೆಳಗೂ ಇರುವ ಬಿಳಿಯದಾದ ಭಾಗವು ಎರಡೆರಡು ಯವಗಳಿರುತ್ತವೆ. ಮೇಲಿನ ಕಣ್ರೆಪ್ಪೆಯ ಅಗಲವು ೨ ಯವ. ಕೆಳರೆಪ್ಪೆಯ ಅಗಲವು ೧/೨ ಯವ. ಹುಬ್ಬುಗಳ ಅಗಲವು ೨ ಯವ. ಒಟ್ಟು ಎತ್ತರವು ೪ ಅಂಗುಳ. ನೇತ್ರಸೂತ್ರದ ಮೇಲೆ ಮುಖದ ಅಗಲವು ೧೨ ಅಂಗುಳ. ಬಾಯಿಯ ಅಗಲವು ೧೦ ಅಂಗುಳ. ತೆರೆದುಕೊಂಡಿರುವ ಬಾಯಿಯ ಅಗಲವು ೪ ಅಂಗುಳ. ತುಟಿಗಳು ಸೇರುವ ಸ್ಥಳ(ಸೃಕ್ವದ) ಅಗಲವು ೯ ಅಂಗುಳ. ತುಟಿಗಳ ನಡುಭಾಗವು ಎತ್ತರವಾಗಿದ್ದು ಮುಂದಕ್ಕೆ ಚಾಚಿಕೊಂಡಿರುತ್ತದೆ.

**ಮುಖಂ ಸಾರ್ಧದ್ವಿಮಾತ್ರಂ (ಸ್ಯಾತ್) ನಾಸಾಗ್ರ ತಾರಂ + +**

**+ + ತಸ್ಮಾದಧೋಗತಂ ಬಂಧ ಮೇಕಾಂಗುಲಾಂ ತರಮ್ ॥ ೧೦ ॥**

**+ + + + + + + + ಶೇಷಂ ವರ್ತುಲ ಮುನ್ನತಮ್**

ಮೂಗಿನ ತುದಿ (ನಾಸಾಗ್ರ)ಯ ಅಗಲವು ೨ ಅಂಗುಳ ೪ ಯವ. ಅದರ ಕೆಳಗೆ ಇರುವ ನಾಸಾಪುಟಗಳ ಅಗಲವು ಒಂದೊಂದು ಅಂಗುಳ. ಮೂಗಿನ ಉಳಿದ ಭಾಗವು ಗುಂಡಾಗಿ ಎತ್ತರವಾಗಿರುತ್ತದೆ.

**ಚತ್ವಾರಃ ಸ್ಯುಃ ಪುರೋದಂತಾ ಮಾತ್ರಾರ್ಧ ವಿಸ್ತೃತಾಯತಾಃ ॥ ೧೧ ॥**

**ದಂತವೇಷ್ಟನ ಸಂ ಚಾರಾಸ್ತೈಸ್ಯುರ್ದ್ವ್ಯಂಗುಲ ದೀರ್ಘಕಾಃ**

**ತೀಕ್ಷ್ಣಾಗ್ರೋ ಬಾಲಚಂದ್ರಾರ್ಧ ನಿಭೋ ಮಾತ್ರಾರ್ಧ ವಿಸ್ತೃತಃ ॥ ೧೨ ॥**

**ಪೂರ್ವ ದಂ ಷ್ಟ್ರಾ ಸ್ತಥಾ ಪಾರ್ಶ್ವಾವಾನು ಪೂರ್ವಾತ್ ಕ್ಷಯಾ ನ್ವಿತೌ**

**ಅಧೋ ದಂತಾ ಸ್ತಥಾ ತೇಭ್ಯೋ ಯವೋ ನವಿಪುಲಾಯ ತಾಃ ॥ ೧೩ ॥**

ಕೋರೆ ಹಲ್ಲುಗಳು (ಇವನ್ನು ಮುಂದಿನ ಹಲ್ಲುಗಳು ಎಂದು ಇಲ್ಲಿ ಕರೆಯಲಾಗಿದೆ) ನಾಲ್ಕು. ಇವುಗಳ ಉದ್ದ ಮತ್ತು ಅಗಲಗಳು ೧ ಅಂಗುಳ ೪ ಯವ. ಹಲ್ಲಿನ ವಸಡುಗಳು ೧ ಅಂಗುಲ ಎತ್ತರ ಇರುತ್ತವೆ. ಮೇಲೆ ಮತ್ತು ಕೆಳಗಿರುವ (ಪೂರ್ವ ಅಪರವಾಗಿರುವ) ಹಲ್ಲುಗಳು ೧ ಅಂಗುಲ ೪ ಯವ ಅಗಲವಾಗಿದ್ದು ಮೊನಾಚಾಗಿ ಬಾಲಚಂದ್ರನ ಆಕಾರದಲ್ಲಿ ಹೊಳೆಯುತ್ತಿರುತ್ತವೆ. ಪಕ್ಕದ ಹಲ್ಲುಗಳು ಎತ್ತರದಲ್ಲಿ ಕೋರೆ ಹಲ್ಲುಗಳಿಗಿಂತಲೂ ಕಡಿಮೆಯಾಗಿರುತ್ತವೆ. ಕೆಳಸಾಲಿನಲ್ಲಿರುವ ಹಲ್ಲುಗಳು, ಕೋರೆ ಹಲ್ಲುಗಳೂ ಸೇರಿದಂತೆ ಎತ್ತರ ಮತ್ತು ಅಗಲದಲ್ಲಿ ಮೇಲಿನ ಸಾಲಿನ ಹಲ್ಲುಗಳಿಗಿಂತಲೂ ಒಂದು ಯವದಷ್ಟು ಕಡಮೆಯಾಗಿರುತ್ತವೆ.

ಜಿಹ್ವಾ ಷಡಂಗುಲಾಯಾಮಾ ಕೋಲಕದ್ವಯ ವಿಸ್ತೃತಾ
ಭಾಗಂ ಸೃಕ್ವಾತ್ ಕಪೋಲಾಂತಂ ಸೃಕ್ವಾತ್ ಘೋಣಂ ಚತುಷ್ಕಲಮ್ ॥ ೧೪ ॥
ಕರ್ಣ ಮೂಲಾಧಸ್ತಾತ್ತು ಕಪೋಲಂ ತ್ರಿಕಲಾಂಗುಲಮ್
ಅಪಾಂಗಾತ್ ಕರ್ಣಮೂಲಾಂತಂ ಪಂಚಮಾತ್ರಂ ಪ್ರಕೀರ್ತಿತಮ್ ॥ ೧೫ ॥
ತತಃ ಕಲಾ ಕರ್ಣಮೂಲಂ ಕರ್ಣಂ ತ್ರ್ಯರ್ಧಾಯತಂ ಮತಮ್
ಚತುರ್ಯವ ಕಲಾ ತಾರಂ ಶಂಖ ಚಕ್ರ ನಿಭಾಕೃತಿ ॥ ೧೬ ॥

ನಾಲಿಗೆಯ ಉದ್ದವು ೬ ಅಂಗುಳ. ಅಗಲವು ೪ ಅಂಗುಳ. ತುಟಿಗಳು ಸೇರುವ ಎಡೆಯಿಂದ (ಸೃಕ್ವದಿಂದ) ದವಡೆಗಳವರೆವಿಗೂ ಅಗಲ ೪ ಅಂಗುಳ. ಮೂಗು ೮ ಅಂಗುಳ. ಕರ್ಣಮೂಲದಿಂದ ಕೆಳದವಡೆಯುವರೆವಿಗೂ ೬ ಅಂಗುಳ. ಕಣ್ಣಿನ ಕೊನೆಯಿಂದ ಕರ್ಣಮೂಲದವರೆವಿಗೂ ೫ ಅಂಗುಳ. ಕಿವಿಯ ಕೆಳಭಾಗದ ಉದ್ದವು ೨ ಅಂಗುಳ. ಕಿವಿಯ ಉದ್ದವು ೩ ಅಂಗುಳ ೪ ಯವ. ಕಿವಿಯ ಅಗಲವು ೨ ಅಂಗುಳ ೪ ಯವ. ಶಂಖ ಚಕ್ರಗಳಂತೆ ದೇಹಕ್ಕೆ ಅವು ಶೋಭೆಯನ್ನು ಕೊಡುವಂತೆ ಇರುತ್ತವೆ.

ರೌದ್ರ ರೌದ್ರತರಂ ವಕ್ತ್ರಂ ಚಂಡಂ ತೀಕ್ಷ್ಣೇಕ್ಷಣಾನ್ವಿತಮ್
ಅನ್ಯಾಂಗಾಯಾಮ ವಿಸ್ತಾರಂ ವರಾಹ ಸ್ಯೋಕ್ತ ಮಾನವತ್ ॥ ೧೭ ॥
ಶಂಖ ಗೋಕ್ಷೀರ ಕುಂದಾಭೋ ರಕ್ತ ಪಿಂಗಳ ಕೇಸರಃ
ರಕ್ತಾಂಬರಧರ ಶ್ಯಂಖ ಚಕ್ರಧಾರೀ ಚತುರ್ಭುಜಃ ॥ ೧೮ ॥

ಕೋಪದಿಂದ ಕ್ರುದ್ಧವಾಗಿರುವ ರೌದ್ರ ಮುಖವುಳ್ಳ ಈ ಮೂರ್ತಿಯ ನೋಟವು ಬಹುಕ್ರೂರವೂ, ತೀಕ್ಷ್ಣವೂ ಆಗಿರುತ್ತದೆ. ಈಗ ವಿವರಿಸದೆ ಬಿಟ್ಟಿರುವ ನಾರಸಿಂಹ ಮೂರ್ತಿಯ [illegible] ಅನುಸರಿಸಿ ರೂಪಿಸಬೇಕು. ನಾರಸಿಂಹನ ಮೈ ಬಣ್ಣವು ಶಂಖ, ಹಸುವಿನ ಹಾಲು, ಅಥವ ಮಲ್ಲಿಗೆ ಹೂನಂತೆ ಬಿಳುಪಾಗಿ ಇರಬೇಕು. ಸಿಂಹಮುಖದ ಕೇಸರಗಳು ನೀಳವಾಗಿದ್ದು ರಕ್ತವರ್ಣಮಿಶ್ರಿತ ಕೇಸರಿ ಬಣ್ಣದಲ್ಲಿರುತ್ತವೆ. ಕೆಂಪು ವಸ್ತ್ರಗಳನ್ನು ಧರಿಸಿರುತ್ತಾನೆ. ನಾಲ್ಕು ತೋಳುಗಳಿದ್ದು ಶಂಖ, ಚಕ್ರ, ಗದೆ, ಪದ್ಮ ಮೊದಲಾದ ಆಯುಧಗಳನ್ನು ಧರಿಸಿರುತ್ತಾನೆ.

ಪ್ರಲಂಬಹಾರೀ ಹಾರಂ ಸ್ಯಾತ್ ವಲಯಂ ಬಾಹು ಮಂಡಲಮ್
ರತ್ನೈಃ ಕೃತ್ರಿಮ ವಕ್ತ್ರೈಶ್ಚ ಯುಕ್ತಂ ಹ್ಯುದರ ಬಂಧನಮ್ ॥ ೧೯ ॥
ತಥಾ ಕೃತ್ರಿಮ ವಕ್ತ್ರೈಶ್ಚಾಲಂ ಕೃತಂ ಕಟಿ ಬಂಧನಮ್
ಉರಸ್ಸಿಂದೂರ ಸಂಕಾಶಂ ಪುಷ್ಪಮಾಲೋಪವೀತಕಮ್ ॥ ೨೦ ॥
ರತ್ನೋಜ್ವಲ ಮುಖ್ಯೈ ರತ್ನಕಟಕೈರ್ಹಸ್ತಮಂಡನಮ್
ಕಿಂಕಿಣೀ ಪಾದ ಜಾಲಂ ಸ್ಯಾತ್ ಮುದ್ರಿಕಾ ರತ್ನ ಮುದ್ರಿಕಾ ॥ ೨೧ ॥

ಪ್ರಲಂಬಸೂತ್ರವೆಂಬ ಹಾರವು ಕೊರಳಿನಿಂದ ಇಳಿಬಿದ್ದಿರುತ್ತದೆ. ಬಾಹುಗಳು ಕಡಗಗಳು,ಬಳೆಗಳು ಮುಂತಾದ ಆಭರಣಗಳಿಂದ ಅಲಂಕೃತವಾಗಿರುತ್ತವೆ. ರತ್ನಖಚಿತವಾದ ಸಿಂಹ, ಮಕರಾದಿ ಹಲವು ಮುಖಗಳಿಂದ ಅಲಂಕೃತಗೊಂಡಿರುವ ಉದರ ಬಂಧ, ಅದೇ



ಚಿತ್ರ ೧೫ : ಲಕ್ಷ್ಮೀ ನರಸಿಂಹಸ್ವಾಮಿ

ರೀತಿಯಾಗಿ ಹಲವು ಮುಖಗಳಿಂದ, ಪತ್ರ ಪುಷ್ಪಗಳಿಂದ ಅಲಂಕೃತವಾಗಿರುವ ಕಟಿಬಂಧ (ವಡ್ಯಾಣ) ಇರಬೇಕು. ವಕ್ಷಸ್ಥಲದ ಮೇಲೆ ಸಿಂದೂರದ ಹೂಗಳನ್ನು ಹೋಲುವ ಹೂಗಳಮಾಲೆಯು ಇರಬೇಕು. ಯಜ್ಞೋಪವೀತವು ಸ್ವಾಮಿಯ ಎಡಭುಜದ ಮೇಲಿಂದ ಇಳಿಬಿದ್ದಿದ್ದು ಬಲಗಡೆಗೆ ಸರಿದಿರುತ್ತದೆ. ಮಣಿ ರತ್ನಾಹಾರಗಳ ಕಾಂತಿಯಿಂದ ಸ್ವಾಮಿಯ ಮುಖವು ಬೆಳಗುತ್ತಿರಬೇಕು. ಮುಂಗೈಗಳಲ್ಲಿರುವ ರತ್ನ ಖಚಿತವಾಗಿರುವ ಕಡಗಗಳು ಶೋಭಾಯಮಾನವಾಗಿ ಬೆಳಗುತ್ತಿರುತ್ತವೆ. ಬೆರಳುಗಳಲ್ಲಿ ಉಂಗುರಗಳು ಮಿಂಚುತ್ತಿರುತ್ತವೆ. ಗೆಜ್ಜೆಗಳಿಂದ ಅಲಂಕೃತಗೊಂಡಿರುವ ಅಂದಿಗೆಗಳು ನವರತ್ನ ಖಚಿತವಾಗಿದ್ದು, ಜಾಲಕಗಳು ಪಾದಗಳನ್ನು ಆವರಿಸಿರುತ್ತವೆ.

**(ರಮಯಾ ಸಹಿತಃ) ಸಿಂಹಾಸನಾರೂಢಸ್ಸುಖಾಸನಃ**
**ಗಜಹಸ್ತಾಸನೋ ವಾಽಪಿ ಊರ್ಧ್ವಜಾನು ರಥಾಪಿ ವಾ ॥ ೨೨ ॥**
**ಉಭಯೋರ್ಜಾನುಕಂ ಕುರ್ಯಾತ್ ಮಹೀಷೀಭ್ಯಾಂ ವಿನಾಸನೇ**
**ವೈತಸ್ತಿಕಂ ಸಮಪಾದ ಮರ್ಧವೈತಸ್ತಿಕಂ ಸ್ಥಿತೇ**
**ಸ್ಥಾನಂ ಸ್ಯಾದೇಕ ಬೇರಂ ಚೇತ್ ಮಾನುಷಾಪೇಕ್ಷಮಾಸನಮ್ ॥ ೨೩ ॥**

ಲಕ್ಷ್ಮೀದೇವಿಯ ಸಮೇತನಾಗಿ ಸಿಂಹಾಸನದ ಮೇಲೆ ಸುಖಾಸನದಲ್ಲಿ (ಎಡಗಾಲನ್ನು ಪೀಠದ ಮೇಲೆ ಅಡ್ಡಲಾಗಿ ಇರಿಸಿಕೊಂಡು ಬಲಗಾಲನ್ನು ಪೀಠದಿಂದ ಕೆಳಕ್ಕೆ ತೂಗುತ್ತಿರುವಂತೆ ಕೂತಿರುವುದನ್ನು ಸುಖಾಸನ ಎನ್ನುತ್ತಾರೆ) ಸ್ವಾಮಿ ಮಂಡಿಸಿರುವುದು ಒಂದು ಬಗೆ. ಲಕ್ಷ್ಮೀದೇವಿಯು ಇಲ್ಲದೆ ಸ್ವಾಮಿಯು ಒಬ್ಬನೇ ಗಜಹಸ್ತಾಸನದಲ್ಲಿ (ಎರಡು ಮೊಣಕಾಲುಗಗಳೂ ಮೇಲಕ್ಕೆ ಬರುವಂತೆ ಪಾದಗಳನ್ನು ಪೀಠದಮೇಲೆ ಕತ್ತರಿಯಂತೆ ಇರಿಸಿಕೊಂಡು ಅವುಗಳ ಮೇಲೆ ಮುಂಗೈಗಳನ್ನು ಇರಿಸಿಕೊಂಡು ಹಸ್ತಗಳನ್ನು ಆನೆಯ ಸೊಂಡಿಲಿನಂತೆ ಕೆಳಕ್ಕೆ ಜೋತು ಬಿಡಬಹುದು ಅಥವ ಎರಡು ಕೈಗಳನ್ನು ಇರಿಸಿಕೊಂಡು ಕುಳಿತುಕೊಳ್ಳಬೇಕು. ಇದನ್ನು ಗಜಹಸ್ತಾಸನ ಎನ್ನಲಾಗುತ್ತದೆ) ಇರುವುದು ಇನ್ನೊಂದು ಬಗೆ ಊರ್ಧ್ವ ಜಾನು ಆಸನದಲ್ಲಿ (ಒಂದು ಕಾಲನ್ನು ಸಾಧಾರಣವಾದ ರೀತಿಯಲ್ಲಿ ಮಡಚಿಕೊಂಡು ಇನ್ನೊಂದು ಕಾಲನ್ನು ಮೊಣಕಾಲಿನಿಂದ ತೂಗಿಬಿಟ್ಟು ಅದರ ತೊಡೆಯ ಮೇಲೆ ಮಡಚಿರುವ ಕಾಲಿನ ಪಾದವು ಇರುವಂತೆ ಮೊಣಕಾಲನ್ನು ಹತ್ತಿರವಾಗಿರಿಸಿಕೊಂಡು ಕೂರುವ ಆಸನ ಅಥವ ಎರಡೂ ಮೊಣಕಾಲುಗಳು ಎತ್ತರವಾಗಿರುವಂತೆ ಕಾಲುಗಳನ್ನು ಕತ್ತರಿಯ ರೀತಿ ಅಡ್ಡಲಾಗಿ ಇರಿಸಿಕೊಂಡು ಕುಳಿತಿರಬಹುದು). ಎಂದರೆ ಸ್ವಾಮಿಯು ಕುಳಿತಿರುವ ಭಂಗಿಯಲ್ಲಿರುವಾಗ ಪೂರ್ವೋಕ್ತ ಮೂರು ಆಸನಗಳಲ್ಲಿ ರೂಪಿಸಬಹುದು (ಸುಖಾಸನ, ಗಜಹಸ್ತಾಸನ, ಮತ್ತು ಊರ್ಧ್ವಜಾನು ಆಸನ).

ಸ್ವಾಮಿಯು ನಿಂತಿರುವ ಭಂಗಿಯಲ್ಲಿದ್ದರೆ ವೈತಸ್ತಿತ ಸಮಪಾದ ಭಂಗಿಯಲ್ಲಿ (ಪಾದಗಳನ್ನು ಸಮನಾಗಿರಿಸಿಕೊಂಡು ತಲೆ, ಮೈ, ಕೈ, ಕಾಲುಗಳನ್ನು ನೇರವಾಗಿರಿಸಿಕೊಂಡು ನಿಂತಿರುವುದನ್ನು ಸಮಪಾದ ಸ್ಥಾನಕ ಭಂಗಿ ಎನ್ನುತ್ತಾರೆ. ಹೀಗೆ ನಿಂತು ಪಾದಗಳನ್ನು ವಿರುದ್ಧ ದಿಕ್ಕುಗಳಲ್ಲಿ ಇರಿಸಿಕೊಂಡು ಎರಡು ಹೆಬ್ಬೆರಳುಗಳ ಮಧ್ಯೆ ಅಂತರವು ಒಂದು

ವಿತಸ್ತಿಯಷ್ಟು ಇದ್ದಾಗ ವೈತಸ್ತಿತ ಸಮಪಾದ ಭಂಗಿ ಎನ್ನುತ್ತಾರೆ. ಹಿಮ್ಮಡಿಗಳು ಕೂಡಿ ಒಂದೇ ಕಡೆ ಇರುತ್ತವೆ.) ಅಥವ ಅರ್ಧ ವೈತಸ್ತಿತ ಸಮಪಾದದಲ್ಲಿ (ವೈತಸ್ತಿತ ಸಮಪಾದದಲ್ಲಿ ಒಂದು ಪಾದವು ಸಾಧಾರಣ ರೀತಿಯಲ್ಲಿ ಇದ್ದರೆ ಎರಡು ಹೆಬ್ಬೆರಳುಗಳ ಮಧ್ಯೆ ಅಂತರವು ಕೇವಲ ಅರ್ಧ ವಿತಸ್ತಿಯಷ್ಟಿರುತ್ತದೆ. ಆಗ ಅದನ್ನು ಅರ್ಧವೈತಸ್ತಿತಸಮಪಾದ ಭಂಗಿ ಎನ್ನುತ್ತಾರೆ) ಇರಬೇಕು.

ನಾರಸಿಂಹ ಸ್ವಾಮಿಯ ಮೂರ್ತಿಯು ಒಂದೇ ವಿಗ್ರಹವಾಗಿದ್ದರೆ, ಆಗ ಸ್ವಾಮಿಯನ್ನು ಯಜಮಾನ ಬಯಸುವ ಅಥವ ಶಿಲ್ಪಿಯು ಇಚ್ಛಿಸುವ ಆಸನದಲ್ಲಿ ರೂಪಿಸಬಹುದು.

## *ವಿಶೇಷ ವಿವರ*

ಕಶ್ಯಪ ಪ್ರಜಾಪತಿ ತನ್ನ ಪತ್ನಿ ದಿತಿಯಲ್ಲಿ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಎಂಬ ಇಬ್ಬರು ಮಕ್ಕಳನ್ನು ಪಡೆದ. ಬ್ರಹ್ಮನಿಂದ ಹಿರಣ್ಯಾಕ್ಷನು ಹಲವು ವರಗಳನ್ನು ಪಡೆದುಕೊಂಡು ಮಹಾಬಲಶಾಲಿಯಾದ. ನಂತರ ದೇವತೆಗಳನ್ನು ಪರಿಹಾಸ್ಯ ಮಾಡುತ್ತಾ ಅವರನ್ನು ಛೇಡಿಸತೊಡಗಿದ. ಇದರಿಂದ ಬಹುವಾಗಿ ನೊಂದ ದೇವತೆಗಳು ಬ್ರಹ್ಮನಿಗೆ ತಮ್ಮ ಸಂಕಟವನ್ನು ನಿವೇದಿಸಿಕೊಂಡು ಹಿರಣ್ಯಾಕ್ಷನ ಉಪದ್ರವದಿಂದ ತಮ್ಮನ್ನು ಮುಕ್ತಿಗೊಳಿಸಬೇಕೆಂದು ಪ್ರಾರ್ಥಿಸಿದರು. ಈ ಪ್ರಾರ್ಥನೆಯನ್ನು ಆಲಿಸಿದ ವಿಷ್ಣುವು ಮಹಾಬಲಶಾಲಿಯಾದ ಒಬ್ಬ ಯೋಧನನ್ನು ಸೃಷ್ಟಿಸಿ ಅವನೊಂದಿಗೆ ಗರುಡನ್ನೂ ಮತ್ತು ಇತರ ಕೆಲವರು ಯೋಧರನ್ನು ಸೇರಿಸಿ ಹಿರಣ್ಯಾಕ್ಷನನ್ನು ಸೋಲಿಸಲು ಕಳುಹಿಸಿಕೊಟ್ಟ. ಆದರೆ ಅವರ್‍ಯಾರೂ ಹಿರಣ್ಯಾಕ್ಷನನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಆದ್ದರಿಂದ ವಿಷ್ಣುವೇ ಕದನಕ್ಕೆ ಹೊರಟ. ಆಗ ಹಿರಣ್ಯಕಶಿಪು ಅವನ ಮಗ ಪ್ರಹ್ಲಾದ ಮತ್ತು ಇತರರು ಅಸುರರು ವಿಷ್ಣುವಿನ ವಿರುದ್ಧವಾಗಿ ನಿಂತು ಹೋರಾಡಿದರು. ಆದರೆ ಅಸುರರು ಈ ಕದನದಲ್ಲಿ ಬಹುದುರ್ಬಲರಾದರು. ಪ್ರಹ್ಲಾದನಿಗೆ ತಾನು ಹೋರಾಡುತ್ತಿರುವುದೇ ಮಹಾವಿಷ್ಣುವಿನ ವಿರುದ್ಧ ಎಂಬುದು ಮನವರಿಕೆಯಾಯಿತು. ಈ ಕದನವನ್ನು ನಿಲ್ಲಿಸಬೇಕೆಂದು ತನ್ನ ತಂದೆ ಹಾಗೂ ಇತರ ಅಸುರರಿಗೆ ಪ್ರಹ್ಲಾದನು ಮನವಿ ಮಾಡತೊಡಗಿದ. ಆದರೆ ಈ ಮಾತನ್ನು ಹಿರಣ್ಯಕಶಿಪು ಕಿವಿಯ ಮೇಲೆ ಹಾಕಿಕೊಳ್ಳದೆ ಕದನವನ್ನು ಮುಂದುವರಿಸಿದ. ಇದರಿಂದ ಕೃದ್ಧನಾದ ವಿಷ್ಣುವು ನರಸಿಂಹನಾಗಿ ಹಿರಣ್ಯಕಶಿಪುವನ್ನು ಚೂರು ಚೂರಾಗಿ ಸಿಗಿದು ಹಾಕಿದ. ಇದನ್ನು ಕಂಡ ಇತರ ಅಸುರರು ಓಡಿಹೋದರು.

ಇದಿಷ್ಟು ಕೂರ್ಮಪುರಾಣದಲ್ಲಿ ನರಸಿಂಹಾವತಾರದ ಬಗ್ಗೆ ದೊರೆಯುವ ವಿವರ. ಇಲ್ಲಿ ವಿಷ್ಣುವು ನರಸಿಂಹ ರೂಪವನ್ನು ಪಡೆದ ಕಾರಣವನ್ನು ಸ್ಪಷ್ಟಗೊಳಿಸಿಲ್ಲ.

ಸೌರಪುರಾಣದಲ್ಲೂ ಇದೇ ರೀತಿಯ ಕಥೆ ಇದೆ. ಅದರ ಪ್ರಕಾರ ಮೊದಲಿಗೆ ಪ್ರಹ್ಲಾದನೇ ವಿಷ್ಣುವಿನ ವಿರೋಧಿಯಾಗಿದ್ದು ನಂತರ ವಿಷ್ಣುವಿನ ದೈವೀಶಕ್ತಿಯನ್ನು ಮನವರಿಕೆಮಾಡಿಕೊಂಡು ವಿಷ್ಣುವನ್ನು ಪರಮಾತ್ಮನೆಂದು ನಂಬಿದ.

ಹಿರಣ್ಯಕಶಿಪು ದೈತ್ಯಕುಲದ ಆದಿಪುರುಷನೆಂದು ಹೇಳಲಾಗುತ್ತದೆ. ದೈತ್ಯ ಪುರುಷರಲ್ಲಿ ಉತ್ಪನ್ನರಾದ ಮುವ್ವರು ಇಂದ್ರರಲ್ಲಿ ಹಿರಣ್ಯಕಶಿಪು ಮೊದಲಿಗ. ಇನ್ನು ಉಳಿದ ಇಬ್ಬರು ಪ್ರಹ್ಲಾದ ಮತ್ತು ಬಲಿ (ವಾಯು ಪುರಾಣ ೯೭ : ೭೮ - ೯೧). ಈ ಮುವ್ವರ ನಂತರ ಇಂದ್ರ ಪದವಿಯು ಎಲ್ಲಾಕಾಲಕ್ಕೂ ದೇವತೆಗಳ ಗುಂಪಿಗೇ ಸಲ್ಲುವಂತೆ ಬದಲಾಯಿತು (ನಾರದ

ಪುರಾಣ, ಪೂರ್ವ ಭಾಗ : ೨೧).

ಕಶ್ಯಪ ಮತ್ತು ದಿತಿ ಇವರಲ್ಲಿ ಹಿರಣ್ಯಕಶಿಪು, ಹಿರಣ್ಯಾಕ್ಷ ಮತ್ತು ವಜ್ರಾಂಗ ಎಂಬ ಮುವ್ವರು ಮಕ್ಕಳು ಹಾಗೂ ಸಿಂಹಿಕಾ ಎಂಬ ಮಗಳು ಹುಟ್ಟಿದರು. ಇವರು ಸ್ವಾಯಂಭೂ ಮನ್ವಂತರದಲ್ಲಿ ಹುಟ್ಟಿದರು (ಲಿಂಗಪುರಾಣ ೧ : ೯೪). ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ದೈತ್ಯವಂಶದ ಪ್ರವರ್ತಕರೆಂದು ಹೇಳುತ್ತಾರೆ. ಏಕೆಂದರೆ ದೈತ್ಯಕುಲದ ಅನೇಕರು ಇವರ ಮಕ್ಕಳು, ಮೊಮ್ಮಕ್ಕಳ ಸಂತಾನವೇ ಆಗಿರುತ್ತಾರೆ (ವಾಯು ಪುರಾಣ ೬೭ : ೫೦, ಬ್ರಹ್ಮಾಂಡ ಪುರಾಣ ೩ : ೫ : ೭). ಮಗಧ ದೇಶದ ಜರಾಸಂಧನೂ ಇವರ ವಂಶದಲ್ಲೇ ಹುಟ್ಟಿದವನು (ಮಹಾಭಾರತ, ಆದಿಪರ್ವ ೬೧ : ೫).

ಹಿರಣ್ಯಕಶಿಪು ಎಂಬ ಹೆಸರು ಬರಲು ವಾಯುಪುರಾಣ (೬೭ : ೫೯) ಮತ್ತು ಬ್ರಹ್ಮಾಂಡ ಪುರಾಣ (೩ : ೫ : ೭ - ೧೨)ಗಳಲ್ಲಿ ಒಂದು ಸುಂದರವಾದ ಆಖ್ಯಾಯಿಕೆ ಇದೆ :

ಕಶ್ಯಪ ಪ್ರಜಾಪತಿಯು ಅಶ್ವಮೇಧಯಾಗವನ್ನು ಪ್ರಾರಂಭಿಸಿದ. ಆಗ ದಿತಿಯು ಪೂರ್ಣಗರ್ಭಿಣಿ. ಯಾಗದಲ್ಲಿಯ ಋತ್ವಿಜರಿಗಾಗಿ ಬಹು ಬೆಲೆ ಬಾಳುವ ವಸ್ತುಗಳನ್ನು ದಾನ ಕೊಡಲೆಂದು ಕಶ್ಯಪ ಸಿದ್ಧಪಡಿಸಿದ್ದ. ಅವುಗಳಲ್ಲಿ ಚಿನ್ನದ ತಗಡನ್ನು ಹೊದಿಸಿದ್ದ ಪೀಠಗಳೂ ಇದ್ದವು. ಅವನ್ನು ಹೋಮಕುಂಡ ಸುತ್ತಲೂ ಇರಿಸಿ ಋತ್ವಿಜರು ಕೂರಲು ಅಣಿಗೊಳಿಸಲಾಗಿದ್ದವು. ಒಂದು ಪೀಠದ ಮೇಲೆ ಕಲಶವನ್ನು ಜೋಡಿಸಿದ್ದರು. ಹೋಮ ನಡೆಯುತ್ತಿರುವಾಗಲೇ ದಿತಿಯು ಹೆತ್ತಳು. ಗರ್ಭದಿಂದ ಬಂದ ಹಿರಣ್ಯಕಶಿಪು ನೇರವಾಗಿ ಬಂದು ಹೋತೃಸ್ಥಾನದಲ್ಲಿ ಇರಿಸಿದ ಸುವರ್ಣ ಪೀಠದಮೇಲೆ ಕುಳಿತು ವೇದ ಮಂತ್ರಪಠಣವನ್ನು ಪ್ರಾರಂಭಿಸಿದ. ಇದರಿಂದ ಬಹು ಸಂತುಷ್ಟರಾದ ಋತ್ವಿಗ್ಗಣವು ಆ ಮಗುವಿಗೆ ಹಿರಣ್ಯಕಶಿಪು ಎಂಬ ಹೆಸರನ್ನು ಕೊಟ್ಟು, ಇವನು ಬಹು ಬಲಶಾಲಿ ಯಾಗುತ್ತಾನೆ ಎಂದು ಭವಿಷ್ಯವನ್ನೂ ಹೇಳಿದರು.

ಹಿರಣ್ಯಾಕ್ಷನು ಬಹು ಬಲಶಾಲಿಯಾಗಿದ್ದ. ದೇವಗಣವನ್ನು ಹಲವು ಬಾರಿ ಸೋಲಿಸಿ ಓಡಿಸಿದ್ದ. ವಿಷ್ಣುವೇ ಇವನನ್ನು ಎದುರಿಸಿ ಯುದ್ಧ ಮಾಡಲು ಬಂದ. ಈ ಬಾರಿ ಮೊದಮೊದಲಿಗೇ ವಿಷ್ಣು ಯುದ್ಧದಲ್ಲಿ ಗೆಲ್ಲುತ್ತಾ ಬಂದ. ಇದನ್ನು ಗಮನಿಸಿ ಭೂಮಿಯನ್ನು ಎತ್ತಿಕೊಂಡು ಹಿರಣ್ಯಾಕ್ಷನು ಸಾಗರಗರ್ಭದಲ್ಲಿ ಅಡಗಿದ. ವಿಷ್ಣುವು ವರಾಹ ಅವತಾರದಲ್ಲಿ ಸಾಗರಗರ್ಭವನ್ನು ಪ್ರವೇಶಿಸಿ ಹಿರಣ್ಯಾಕ್ಷನೊಂದಿಗೆ ಹೋರಾಡಿ ಅವನನ್ನು ಕೊಂದ (ಪದ್ಮಪುರಾಣ, ಸೃಷ್ಟಿಖಂಡ : ೭೫). ಭಾಗವತ ಪುರಾಣದ ಪ್ರಕಾರ ವಿಷ್ಣುವು ವರಾಹ ರೂಪದಲ್ಲಿ ನೀರನ್ನು ಪ್ರವೇಶಿಸಿ ಭೂಮಿಯನ್ನು ತನ್ನ ಕೋರೆಯ ಮೇಲಿರಿಸಿಕೊಂಡು ಹೊರಕ್ಕೆ ಬಂದ. ಆಗ ವರಾಹದ ಪಾದಕ್ಕೆ ಸಿಕ್ಕಿ ಹಿರಣ್ಯಾಕ್ಷನು ಸತ್ತುಹೋದ (ಭಾಗವತ, ೩ : ೨೭). ತನ್ನ ಸೋದರನು ವಿಷ್ಣುವಿನಿಂದ ಸಾಯಿಸಲ್ಪಟ್ಟಿದ್ದಕ್ಕಾಗಿ ಬಹುವಾಗಿ ಕೋಪಗೊಂಡು ಪ್ರತೀಕಾರ ಸಂಕಲ್ಪದೊಂದಿಗೆ ಹಿರಣ್ಯಕಶಿಪು ಬ್ರಹನನ್ನು ಕುರಿತು ಕಠೋರವಾದ ತಪಸ್ಸನ್ನು ಪ್ರಾರಂಭಿಸಿದ. ಬ್ರಹ್ಮನನ್ನು ಪ್ರಸನ್ನಗೊಳಿಸಿಕೊಳ್ಳಲು ತಲೆಕೆಳಗೆಮಾಡಿ ನಿಂತು ನೂರು ವರ್ಷಗಳ ತನಕ ಉಗ್ರ ತಪಸ್ಸನ್ನು ಆಚರಿಸಿದ. ಬ್ರಹ್ಮನು ಪ್ರತ್ಯಕ್ಷನಾಗಿ ಭೂಮಿಯ ಮೇಲಿನ ಯಾವುದೇ ಶಸ್ತ್ರವಿನಿಂದ ಅವನನ್ನು ಕೊಲ್ಲುವುದು ಸಾಧ್ಯವಾಗದಂತಹ ವರವನ್ನು ನೀಡಿದ. ಅಷ್ಟು

ಮಾತ್ರವಲ್ಲ, ದಿನದಲ್ಲಾಗಲಿ, ರಾತ್ರಿಯಲ್ಲಾಗಲಿ, ಮನೆಯ ಒಳಗೆ - ಹೊರಗೆ ಅವನಿಗೆ ಸಾವು ಬರಬಾರದು. ಶಸ್ತ್ರ - ಅಸ್ತ್ರಗಳಿಂದಾಗಲಿ, ಮನುಷ್ಯ - ಮೃಗಗಳಿಂದಾಗಲಿ, ಸಜೀವ - ನಿರ್ಜೀವದಿಂದಾಗಲಿ, ಒಣ ಅಥವ ಹಸಿಯದಾಗಿರುವ ವಸ್ತುವಿನಿಂದಾಗಲಿ ಅವನಿಗೆ ಮರಣ ಬರುವುದಿಲ್ಲ ಎಂದು ಬ್ರಹ್ಮನು ವರ ನೀಡಿದ.

ಬ್ರಹ್ಮನ ಈ ವರದ ಕಾರಣದಿಂದಾಗಿ ಹಿರಣ್ಯಕಶಿಪುವಿನ ಆತ್ಮಸ್ಥೈರ್ಯವು ಹೆಚ್ಚಿತು. ತನ್ನ ಬಲದ ಬಗ್ಗೆ ಅವನಿಗೆ ಅತೀವವಾದ ಅಹಂಕಾರ ಬಲಿಯಿತು. ಇದರ ಫಲವಾಗಿ ಎಲ್ಲಾ ದೇವತೆಗಳ ಶತ್ರುವಾಗಿ ಭೂಮಿಯ ಮೇಲೆ ಅನೇಕ ಅತ್ಯಾಚಾರಗಳನ್ನು ಮಾಡತೊಡಗಿದ.

ಹಿರಣ್ಯಕಶಿಪುವಿನ ಪತ್ನಿ ಕಯಾದು ಗರ್ಭವತಿಯಾಗಿದ್ದಾಗ ಅವನು ತಪಸ್ಸಿಗೆ ಹೋದ. ಆಗ ನಾರದ ಮಹರ್ಷಿಯು ಆಕೆಗೆ ವಿಷ್ಣುಭಕ್ತಿಯನ್ನು ಉಪದೇಶಿಸಿದ. ಆ ಉಪದೇಶವನ್ನು ಗರ್ಭದಲ್ಲಿದ್ದ ಪ್ರಹ್ಲಾದನೂ ಕೇಳಿದ. ಇದರಿಂದ ಹುಟ್ಟುವುದಕ್ಕೂ ಮೊದಲೇ ಪ್ರಹ್ಲಾದನು ವಿಷ್ಣುಭಕ್ತನಾಗಿದ್ದ. ತನ್ನ ಶತೃವಾದ ವಿಷ್ಣುವಿನ ಭಕ್ತನಾಗಿದ್ದ ಮಗ ಪ್ರಹ್ಲಾದನು ಹಿರಣ್ಯಕಶಿಪುವಿಗೆ ಸಂತೋಷ ನೀಡುವವನಾಗಿರಲಿಲ್ಲ. ಆದ್ದರಿಂದ ಮೊದಲು ಮಗನನ್ನು ಬದಲಿಸಲು, ತರುವಾಯ ಆ ಮಗನಿಂದ ಮುಕ್ತನಾಗಲು ಹಲವಾರು ಪ್ರಯತ್ನಗಳನ್ನು ಮಾಡಿದ. ಬಹು ಕ್ರೂರ ಶಿಕ್ಷೆಗಳ ಮಧ್ಯೆಯೂ ಪ್ರಹ್ಲಾದನು ವಿಷ್ಣುವಿನ ಕೃಪೆಯಿಂದ ಕ್ಷೇಮವಾಗಿಯೇ ಇದ್ದ. ಇದರಿಂದ ಅವನ ವಿಷ್ಣು ಭಕ್ತಿಯು ಮತ್ತಷ್ಟು ಉಲ್ಬಣಗೊಂಡಿತು. ಈಗ ವಿಷ್ಣುವಿನ ಮಹಿಮೆಯನ್ನು ಎಲ್ಲರಿಗೂ ವಿವರಿಸತೊಡಗಿದ. ವಿಷ್ಣು ಸರ್ವಶಕ್ತನು ಸರ್ವಾಂತರ್ಯಾಮಿ ಎಂದು ಹೇಳತೊಡಗಿದ.

ಕೋಪಾವಿಷ್ಟನಾಗಿ ಹಿರಣ್ಯಕಶಿಪು ಒಮ್ಮೆ ' ಸರ್ವಾಂತರ್ಯಾಮಿಯಾಗಿರುವ ವಿಷ್ಣು ಈ ಕಂಭದಲ್ಲಿ ಇರುವನೇ?... ಇದ್ದರೆ ಅವನನ್ನು ತೋರಿಸು ' ಎಂದು ಘರ್ಜಿಸುತ್ತಾ ಕಂಭವನ್ನು ಕಾಲಿನಿಂದ ಒದ್ದ. ಕೂಡಲೇ ಕಂಭವನ್ನು ಬಿರಿದುಕೊಂಡು ಅರೆಮಾನವ, ಅರೆಸಿಂಹದ ಆಕಾರವೊಂದು ಹೊರಬಂತು. ಅದು ಹಿರಣ್ಯಕಶಿಪುವನ್ನು ಸಿಂಹದ್ವಾರದ (ಹೊಸಿಲ) ಮೇಲಿರಿಸಿಕೊಂಡು ಎರಡೂ ಕೈಗಳಿಂದ ಸೀಳಿಹಾಕಿತು. ಆಗ ಸಂಧ್ಯಾಸಮಯ. ಅವನನ್ನು ಸೀಳಲು ಆಯುಧವಲ್ಲದ ಕೈಗಳನ್ನೇ ಬಳಸಲಾಯಿತು. ಇಂತು ಬ್ರಹ್ಮನು ಕೊಟ್ಟಿದ್ದ ವರವನ್ನು ಬಹು ಜಾಣ್ಮೆಯಿಂದಲೇ ನಿಷ್ಫಲವಾಗುವಂತೆ ಹಿರಣ್ಯಕಶಿಪುವನ್ನು ಕೊಲ್ಲಲಾಯಿತು.

ಈ ಕಥೆಯು ಪದ್ಮಪುರಾಣ, ವಿಷ್ಣುಪುರಾಣ, ಭಾಗವತ ಪುರಾಣಗಳಲ್ಲಿದೆ.

ನರಸಿಂಹಾವತಾರದ ಮೂರ್ತಿಗಳನ್ನು ಪ್ರಧಾನವಾಗಿ ಎರಡು ವಿಭಾಗಗಳಲ್ಲಿ ವಿಭಜಿಸುತ್ತಾರೆ ಗಿರಿಜ ನರಸಿಂಹ ಮತ್ತು ಸ್ಥೌಣ ನರಸಿಂಹ. (ಇವೇ ಅಲ್ಲದೆ ಯಾನಕ ನರಸಿಂಹ ಎಂಬ ಬಗೆಯನ್ನೂ ಹೇಳಲಾಗುತ್ತದೆ ) . ಈ ಎರಡೂ ಮೂರ್ತಿಗಳೂ ಸಿಂಹ ಮುಖವನ್ನು ನರ ದೇಹವನ್ನು ಪಡೆದಿರುತ್ತವೆ. ೧೨೦ ಅಂಗುಳ ಅಳತೆಗೆ ಪ್ರತಿಮೆ ರೂಪಿಸಬೇಕು **(ನಾರಸಿಂಹೋ ದ್ವಿವಿಧೋ ಗಿರಿಜಸ್ಥೂಣಜಶ್ಚೇತಿ। ತಯೋರ್ಮುಖಂ ಸಿಂಹಸ್ಯೈವಾನ್ಯನ್ನರಾಕಾರಂ ತಸ್ಯ ಮೂರ್ಧಾದಿಪಾದತಲಾಂತಂ ಸವಿಂಶತಿ ಶತಾಂಗುಲಂ।)**

## ೧. ಗಿರಿಜ ನರಸಿಂಹ

ಉತ್ಕುಟಿಕಾಸನದಲ್ಲಿ ಪದ್ಮ ಪೀಠದ ಮೇಲೆ ಯೋಗ ಪಟ್ಟದೊಂದಿಗೆ ಈ ಮೂರ್ತಿ ಇರುತ್ತಾನೆ. ಗಿರಿಜ ಎಂದರೆ ಬೆಟ್ಟದ ಗವಿಗಳಿಂದ ಬಂದಿರುವವನು ಎಂದು ಅರ್ಥ. ಈ ಸ್ವಾಮಿ ಒಂಟಿಯಾಗಿರುವುದರಿಂದ ಕೇವಲ ನರಸಿಂಹ ಎಂದೂ ಕರೆಯಲ್ಪಡುತ್ತಾನೆ. ಈ ಸ್ವಾಮಿಗೆ ಎರಡು ಅಥವ ನಾಲ್ಕು ಭುಜಗಳಿರಬಹುದು. ನಾಲ್ಕು ಭುಜಗಳಿರುವಾಗ ಮೇಲಿನ ಬಲ ಹಸ್ತದಲ್ಲಿ ಚಕ್ರವನ್ನು, ಎಡಹಸ್ತದಲ್ಲಿ ಶಂಖವನ್ನು ಹಿಡಿದಿರಬೇಕು. ಮುಂದಿನ ಎರಡು ಹಸ್ತಗಳನ್ನು ಮುಂದೆ ಚಾಚಿ ಮೊಣಕಾಲುಗಳ ಮೇಲೆ ಇರಿಸಿಕೊಂಡಿರಬೇಕು. **(ಕೇವಲಂ ನೃಸಿಂಹದೇವಂ ಪದ್ಮಪೀಠೋಪರಿಷ್ಟಾದ್ ದ್ವೌ ಪಾದೌ ವ್ಯತ್ಯಯೇನ ನ್ಯಸ್ಯೋತ್ಕುಟಿಕಾಸನೇ ನಾಸಯಿತ್ವೋರುಮಧ್ಯೇ ವಸ್ತ್ರೇಣಾಬಧ್ಯ ಸರ್ವಾಭರಣ ಸಂಯುಕ್ತಂ ಚತುರ್ಭುಜಂ ಶಂಖಚಕ್ರಧರ ಮನ್ಯ ಹಸ್ತೌ ಜಾನೂಪರಿಷ್ಟಾತ್ಪ್ರಸಾರಿತೌ ಚ ಕಾರಯೇತ್ ವೈಖಾನಸಾಗಮ)** ಈ ರೀತಿಯ ನರಸಿಂಹ ಸ್ವಾಮಿಯನ್ನು ಯೋಗ ನರಸಿಂಹ ಎಂದೂ ಹೇಳುತ್ತಾರೆ. ಈ ಮೂರ್ತಿಯ ವರ್ಣವು ಸ್ಪಟಿಕದಂತಿರಬೇಕು.


**ಆಸೀನಂ ದ್ವಿಭುಜಂ ದೇವಂ ಪ್ರಮತ್ತವದನೇಕ್ಷಣಮ್**
**ಶ್ವೇತ ಸ್ಪಟಿಕ ಸಂಕಾಶಂ ಚತುರ್ಬಾಹು ಮಥಾಪಿ ವಾ ||**
**ಆಜಾನುಲಂಬಿನೌ ಬಾಹೂ ಕರ್ತವ್ಯೌ ತತ್ರ ದಕ್ಷಿಣೇ**
**ಸಮೀಪೇ ಕಲ್ಪಯೇಚ್ಚಕ್ರಂ ವಾಮೇ ಶಂಖಂ ಸಮೀಪತಃ ||**
**ಊರ್ಧ್ವಸ್ಥಿತಾಭ್ಯಾಂ ಬಾಹುಭ್ಯಾಂ ದಕ್ಷಿಣೇ ಪಂಕಜಂ ನ್ಯಸೇತ್**
**ವಾಮೇ ಬಾಹೌ ಗದಾಮಾಭ್ಯಾಂ ಲಿಖೇತ್ ಚಿತ್ರವಿಶಾರದಃ ||** (ಶಿಲ್ಪರತ್ನಂ)

ಉಪರೋಕ್ತ ವಿವರಣೆಯಂತೆ ಶಿಲ್ಪರತ್ನದಲ್ಲಿ ಈ ಮೂರ್ತಿಯ ವರ್ಣನೆಯಲ್ಲಿ, ಎರಡು ಬಾಹುಗಳಿರುವಂತೆ ರೂಪಿಸಬಹುದು. ನಾಲ್ಕು ಹಸ್ತಗಳಿದ್ದಾಗ ಮೇಲಿನ ಬಲಹಸ್ತದಲ್ಲಿ ಚಕ್ರ, ಮೇಲಿನ ಎಡಹಸ್ತದಲ್ಲಿ ಶಂಖಗಳೊಂದಿಗೆ ಮುಂದಿನ ಕೆಳಹಸ್ತಗಳಲ್ಲಿ ಎಡದಲ್ಲಿ ಗದೆ, ಬಲದಲ್ಲಿ ಪದ್ಮ ಇರಬೇಕೆಂಬ ಸೂಚನೆ ಇದೆ.

ಗಿರಿಜ ನರಸಿಂಹ ಮೂರ್ತಿಯ ಬಗ್ಗೆ ವೈಖಾಸನ ಆಗಮದಲ್ಲಿ ಈ ವಿವರದೊರೆಯುತ್ತದೆ:

**ನಾರಸಿಂಹಂ ದೇವಂ ಸಿಂಹಾಸನೇ ಪಾದಂ ದಕ್ಷಿಣಂ ಪ್ರಸಾರ್ಯ ವಾಮಮಾಕುಂಚ್ಯ ಸಮಾಸೀನಂ ಚತುರ್ಭುಜಂ ಶಂಖಚಕ್ರಧರಂ ಕುಂದೇಂದು ಧವಳಪ್ರಭಂ ರಕ್ತವಸ್ತ್ರಧರಂ ಸರ್ವಾಭರಣ ಭೂಷಿತಂ ಕರಂಡಿಕಾಮಕುಟಯುತಂ ಪೂರ್ವಂ ದಕ್ಷಿಣಕರಮಭಯಂ ದಧಾನಂ ವಾಮಂ ಕಟ್ಯಾಪಲಂಬಿತ ಮೂರುಸ್ಥಂ ವಾ ಕಾರಯೇತ್ | ತದ್ದಕ್ಷಿಣೇ ಶ್ರಿಯಂ ದೇವೀಂ ವಾಮಪಾದಮಾಕುಂಚ್ಯ ದಕ್ಷಿಣಂ ಪ್ರಸಾರ್ಯಸೀನಾಂ ಪದ್ಮಧರ ವಾಮಹಸ್ತಾಮಾಸನೇ ನಿಹಿತ ದಕ್ಷಿಣಹಸ್ತಾಂ ಸುವರ್ಣಾಭಾಂ ಸರ್ವಾಭರಣಭೂಷಿತಾಂ ವಾಮಪಾರ್ಶ್ವೇ ಮಹೀಂ ದೇವೀಂ ದಕ್ಷಿಣಂ ಪಾದಮಾಕುಂಚ್ಯ ವಾಮಂ ಪ್ರಸಾರ್ಯಾಸೀನಾಮುತ್ಪಲಧರ ದಕ್ಷಿಣಹಸ್ತಾಮಾಸನೇ ನಿಹಿತವಾಮಹಸ್ತಾಂ ಶ್ಯಾಮಾಭಾಂ ಸರ್ವಾಭರಣಭೂಷಿತಾಂ ಕಾರಯೇತ್ | ಅಥವಾ ಸಿಂಹಾಸನಸ್ಯೋರ್ಧ್ವೇ ವಾಮಂ ಪಾದಂ ಪ್ರಸಾರ್ಯಾನ್ಯಮಾಕುಂಚ್ಯ ತಜ್ಜಾನೂರ್ಧ್ವೇ ದಕ್ಷಿಣಹಸ್ತಾಂ ಗಜಹಸ್ತವತ್ಪ್ರಸಾರ್ಯ ವಾಮಮೂರೌ ಸಂನ್ಯಸ್ಯಾಸೀನಂ ಶಂಖಚಕ್ರಧರಂ ದೇವೀಭ್ಯಾಂ ಸಹಿತಂ ಕಾರಯೇತ್|**

( ವೈಖಾನಸಾಗಮೇ ಷಟ್‌ಪಂಚಾಶ ಪಟಲೇ )



ಚಿತ್ರ ೧೬ : ಯೋಗ ನರಸಿಂಹ

ಗಿರಿಜ ನರಸಿಂಹ ಸ್ವಾಮಿಯು ಸಿಂಹಾಸನದ ಮೇಲೆ ಬಲಗಾಲು ಪೀಠದಿಂದ ಕೆಳಕ್ಕೆ ತೂಗಿಬಿಟ್ಟಿದ್ದು, ಎಡಗಾಲು ಪೀಠದಮೇಲೆ ಅಡ್ಡಲಾಗಿ ಮಲಗಿಸಿ ಇರಿಸಿಕೊಂಡು - ಇದನ್ನು ಸುಖಾಸನ ಎನ್ನುತ್ತಾರೆ - ಕುಳಿತಿರುವಂತೆ ರೂಪಿಸಲಾಗುತ್ತದೆ. ಈ ಮೂರ್ತಿ ಗೆ ಸಾಧಾರಣವಾಗಿ ನಾಲ್ಕು ತೋಳುಗಳು ಇರುತ್ತವೆ. ಹಿಂದಿನ ಬಲ ಮತ್ತು ಎಡಹಸ್ತಗಳಲ್ಲಿ ಕ್ರಮವಾಗಿ ಚಕ್ರ ಮತ್ತು ಶಂಖಗಳು ಇರುತ್ತವೆ. ಮುಂದಿನ ಬಲಹಸ್ತವು ಅಭಯ ಮುದ್ರೆಯನ್ನೂ ಎಡ ಹಸ್ತವು ಕಟ್ಯಾವಲಂಬಿತ ಮುದ್ರೆಯನ್ನು ತೋರುತ್ತಿರುತ್ತವೆ. ಈ ಸ್ವಾಮಿಯ ಬಣ್ಣ ಶ್ವೇತವಾಗಿದ್ದರೂ ಉಡುಗೆಗಳು ಮಾತ್ರ ಕೆಂಪು. ಸರ್ವಾಭರಣ ಭೂಷಿತನಾಗಿರುವ ಸ್ವಾಮಿಯು ಕರಂಡ ಮಕುಟವನ್ನು ಧರಿಸಿರಬೇಕು. ಇದೇ ಪೀಠದ ಮೇಲೆಯೇ ಸ್ವಾಮಿಯ ಬಲಕ್ಕೆ ಲಕ್ಷ್ಮೀದೇವಿಯು ಎಡಗಾಲನ್ನು ಮಡಚಿ ಪೀಠದಮೇಲೆ ಇರಿಸಿಕೊಂಡು ಬಲಗಾಲನ್ನು ಕೆಳಕ್ಕೆ ತೂಗಿಬಿಟ್ಟರುವಂತೆ ಇರಬಹುದು. ಈಕೆಯ ಎಡ ಹಸ್ತದಲ್ಲಿ ಪದ್ಮ ಇರಬೇಕು. ಬಲಹಸ್ತವನ್ನುಪೀಠದ ಮೇಲೆ ಇರಿಸಿಕೊಂಡಿರಬೇಕು. ಭೂದೇವಿಯು ಸ್ವಾಮಿಯ ಎಡಗಡೆಗೆ ಇದ್ದು ಬಲಗಾಲನ್ನು ಮಡಚಿ ಇರಿಸಿಕೊಂಡಿರಬೇಕು. ಎಡಗಾಲು ಪೀಠದಿಂದ ಕೆಳಕ್ಕೆ ತೂಗಾಡುತ್ತಿರಬೇಕು. ಈ ದೇವಿಯ ಬಲಹಸ್ತದಲ್ಲಿ ನೀಲೋತ್ಪಲವಿದ್ದು, ಎಡಹಸ್ತವು ಪೀಠದ ಮೇಲೆ ಇರಿಸಿಕೊಂಡಿರಬೇಕು. ಲಕ್ಷ್ಮೀದೇವಿಯು ಸ್ವರ್ಣ ಛಾಯೆಯಲ್ಲೂ, ಭೂದೇವಿಯು ಶ್ಯಾಮಲ ಛಾಯೆಯಲ್ಲೂ ಇರಬೇಕು. ಇಬ್ಬರೂ ಸರ್ವಾಭರಣ ಭೂಷಿತರಾಗಿರಬೇಕು. ಕೇವಲ ಲಕ್ಷ್ಮೀ ಮಾತ್ರವೇ ಇರುವಂತೆಯೂ ರೂಪಿಸಬಹುದು.

## ಸ್ಥೌಣ ನರಸಿಂಹ

ಸ್ವಾಮಿಯು ಕಂಭದಿಂದ ಹೊರಬಂದಂತೆ ಇರುತ್ತಾನೆ. ಎಂದರೆ ರಾಕ್ಷಸಮರ್ದನ ಕಾರ್ಯದಲ್ಲಿ ತೊಡಗಿರುತ್ತಾನೆ. ವೈಖಾನಸ ಆಗಮದಲ್ಲಿ ಈ ವಿವರಣೆ ದೊರೆಯುತ್ತದೆ :

**ಅಥ ಸ್ಥೌಣ ನಾರಸಿಂಹಂ ಸೋಪಾಧಾನ ಸಿಂಹಾಸನೇ ವಾಮಪಾದಮಾಕುಂಚ್ಯಾನ್ಯಂ ಪ್ರಸಾರ್ಯ ಸಮಾಸೀನಂ ಚತುರ್ಭುಜಂ ಶಂಖಚಕ್ರಧರ ಮಭಯಕ ದಕ್ಷಿಣಂ ಪೂರ್ವಮಭಯ ಹಸ್ತಮೂರು ಪ್ರತಿಷ್ಠಿತ ವಾಮಹಸ್ತಂ ಸಟಾ (?) ಸ್ಕಂದ ಸಂಯುಕ್ತಂ ತೀಕ್ಷ್ಣದಂಷ್ಟ್ರೇಕ್ಷಣಂ ಭಯಾನಕಂ ಶ್ವೇತಾಭಂ ರಕ್ತಾಂಬರಧರಂ ಸರ್ವಾಭರಣ ಸಂಯುಕ್ತಂ ಕಾರಯೇತ್ । ಅಥವಾ ಷೋಡಶದ್ವಾದಶಹಸ್ತೈರ್ಯುಕ್ತಂ ತ್ರಿಭಾಗಂ ಸ್ಥಿತಂ ವಾಮೋರೌ ಸುರೇಂದ್ರಂ ವಿನ್ಯಸ್ಯೋರಸಿ ಹಸ್ತಾಭ್ಯಾಂ ನಖೈರ್ಭೇದಯಿತ್ವಾ ದಕ್ಷಿಣ ಭಾಗೇ ಚೈಕೈಕಾಭಯ ಪ್ರದಾನಮೇಕೇನ ಶ್ರೋತ್ರಾಂಗುಲೀಯ ವಿನ್ಯಾಸಂ ವಾಮೇ ಚೈಕೇನ ಮಕುಟಗ್ರಹಣಮೇಕೇನ ಮುಷ್ಟಿಪ್ರಹರಣಮನ್ಯೈರ್ದಮನಂ ವಾಶೀಘ್ರಂ ಸತೀತ್ಯೇವಮತಿಭಯಾನಕಂ ಕೃತ್ವಾ । ತಸ್ಯ ಕೋಪಶಾಂತ್ಯರ್ಥಂ ಪಾರ್ಶ್ವಯೋ ದಕ್ಷಿಣವಾಮಯೋಃ ಶ್ರೀಮಹ್ಯೌ ಪ್ರಹ್ಲಾದಂ ವಂದಮಾನಂ ಚ ಕಾರಯೇತ್ । ದಕ್ಷಿಣೇ ನಾರದಂ ವೀಣಾಹಸ್ತಂ ಭಿತ್ತಿಪಾರ್ಶ್ವೇ ಪರಿತಃ ಪ್ರಾಗಾದ್ಯೈಶಾನಾಂತಮಿಂದ್ರಾದಿಲೋಕ ಪಾಲಾನ್ವಂದ ಮಾನಾಂಶ್ಚ ಕಾರಯೇತ್ ।**



ಚಿತ್ರ ೧೭ : ಸ್ಥೌಣ ನರಸಿಂಹ - ೧

ಈ ವರ್ಣನೆಯಲ್ಲೂ ಸ್ವಾಮಿ ನಾಲ್ಕು ತೋಳುಗಳನ್ನು ಪಡೆದಿದ್ದು ಸಿಂಹಾಸನದ ಮೇಲೆ ಕುಳಿತಿರುತ್ತಾನೆ. ಮೇಲಿನ ಹಸ್ತಗಳಲ್ಲಿ ಚಕ್ರ ಮತ್ತು ಶಂಖಗಳು ಇದ್ದು ಕೆಳ ಹಸ್ತಗಳು ಅಭಯ ಮತ್ತು ವರದ ಮುದ್ರೆಗಳನ್ನು ಧರಿಸಿರುತ್ತವೆ. ಅಥವ ಅಭಯ ಮುದ್ರೆ ಮಾತ್ರವೇ ಇದ್ದು ಎಡಹಸ್ತವನ್ನು ತೊಡೆಯ ಮೇಲಿರಿಸಿಕೊಂಡಿರಬಹುದು. ಎಡಗಾಲನ್ನು ಮಡಚಿ ಪೀಠದ ಮೇಲೆ ಇರಿಸಿಕೊಂಡು ಬಲಗಾಲು ಕೆಳಗೆ ತೂಗು ಬಿಟ್ಟಿರಬಹುದು. ಈ ಸ್ವಾಮಿಯ ಕಂಠವು ಸಿಂಹದ ಕಂಠದಂತೆ ಇರಬೇಕು. ಹಲ್ಲುಗಳು ಸ್ಪಷ್ಟವಾಗಿ ಮೊನಚಾಗಿರುವಂತೆ ರೂಪಿಸಬೇಕು. ಶ್ವೇತವರ್ಣದ ದೇಹದ ಸ್ವಾಮಿಯ ವಸ್ತ್ರಗಳು ಕೆಂಪಾಗಿರಬೇಕು.

ಇನ್ನೊಂದು ವರ್ಣನೆಯ ಪ್ರಕಾರ ತ್ರಿಭಂಗಿಯಲ್ಲಿರುವ ದೇವಮೂರ್ತಿಗೆ ಹನ್ನೆರಡು ಅಥವ ಹದಿನಾರು ಬಾಹುಗಳಿದ್ದು, ತೊಡೆಗಳ ಮೇಲೆ ಹಿರಣ್ಯಕಶಿಪು ಇದ್ದು, ಅವನ ಹೊಟ್ಟೆಯನ್ನು ಎರಡು ಕೈಗಳಿಂದ ಸೀಳಿರುವಂತೆ ಚಿತ್ರಿಸಬೇಕು. ಒಂದು ಬಲ ಹಸ್ತದಲ್ಲಿ ಅಭಯ ಮುದ್ರೆ, ಕತ್ತಿ (ಇದು ಕರ್ಣ ಕುಂಡಲದ ಸಮ ಎತ್ತರವಿರಬೇಕು) ಕಾಲುಗಳನ್ನು ಒಂದು ಬಲಗೈ ಹಿಡಿದಿರಬೇಕು. ಸ್ವಾಮಿಯ ಬಲ ಮತ್ತು ಎಡ ಪಾರ್ಶ್ವಗಳ ಒಂದೊಂದು ತೋಳುಗಳು ಮಾತ್ರವೇ ಕಿವಿಯ ಮಟ್ಟಕ್ಕೆ ಎತ್ತಿರಬೇಕು. ಉಳಿದವೆಲ್ಲಾ ಹಿರಣ್ಯಕಶಿಪುವನ್ನು ಮಾಲಾಕಾರದಲ್ಲಿ ಇರುವಂತೆ ಹಿಡದಿರಲು ನೆರವಾಗಬೇಕು. ಹಿರಣ್ಯಕಶಿಪು ಸ್ವಾಮಿಯನ್ನು ಕೊಲ್ಲುವ ಪ್ರಯತ್ನದಲ್ಲಿರುವಂತೆ ಕಾಣಬೇಕು. ಆದ್ದರಿಂದ ಅವನು ಕತ್ತಿ ಗುರಾಣಿಗಳನ್ನು ಹಿಡಿದಿರಬಹುದು. ಸ್ವಾಮಿಯ ಎಡ ಮತ್ತು ಬಲ ಪಾರ್ಶ್ವಗಳಲ್ಲಿ ಶ್ರೀದೇವಿ, ಭೂದೇವಿ, ನಾರದ (ತನ್ನ ವೀಣೆ ಹಿಡಿದಿರುವಂತೆ) ಪ್ರಹ್ಲಾದ ಮುಂತಾದವರೆಲ್ಲಾ ಕೈ ಜೋಡಿಸಿಕೊಂಡು ಅಂಜಲಿ ಮುದ್ರೆಯಲ್ಲಿರುವಂತೆ ಚಿತ್ರಿಸಬೇಕು. ಮೇಲ್ಭಾಗದಲ್ಲಿ ಇಂದ್ರನನ್ನು ಅಷ್ಟದಿಕ್ಪಾಲಕರೊಂದಿಗೆ ರೂಪಿಸಬಹುದು.

ಶಿಲ್ಪರತ್ನ (ಪಟಲ ೨೫)ದಲ್ಲಿ ಈ ವಿವರಣೆ ಇದೆ

**ನೃಸಿಂಹಹಸ್ಯಾಕೃತಿಂ ವಕ್ಷ್ಯೇ ರೌದ್ರಪಿಂಗ ಮುಖೇಕ್ಷಣಾಮ್**
**ಭುಜಾಷ್ಟಕಸಮಾಯುಕ್ತಾಂ ಪೀನಸ್ಕಂದ ಸಮಾಶ್ರಿತಾಮ್ ॥**
**ಹಿರಣ್ಯಕಶಿಪುಂ ದೈತ್ಯಂ ದಾರಯಂತೀಂ ನಖಾಂಕುರೈಃ**
**ಊರೋರುಪರಿ ಪೀನಸ್ಯ ಖಡ್ಗಖೇಟಕಧಾರಿಣಮ್ ॥**
**ತಸ್ಯಾಂತ್ರಮಾಲಾ ನಿಷ್ಕೃಷ್ಯೇತಿ ಬಾಹುಯುಗ್ಮೇನ ಬಿಭ್ರತೀಮ್**
**ಮಧ್ಯಸ್ಥಿತಾಭ್ಯಾಂ ಬಾಹುಭ್ಯಾಂ ದಕ್ಷಿಣೇ ಚಕ್ರಪಂಕಜೌ ॥**
**ಕೌಮೋದಕೀಂ ಗದಾಂ ಶಂಖಂ ಬಾಹುಭ್ಯಾಮಿತಿ ವಾಮತಃ**
**ನೀಲೋತ್ಪಲವದಚ್ಛಾಯಾಂ ಕಿಂ ವಾ ಚಂಪಕಸಪ್ರಭಾಮ್ ॥**
**ತಪ್ತಕಾಂಚನ ಸಂಕಾಶಾಂ ಬಾಲಾರ್ಕ ಸದೃಶೀಂ ಲಿಖೇತ್**

ಎಂಟು ಹಸ್ತಗಳಲ್ಲಿ ಸ್ವಾಮಿಯನ್ನು ಚಿತ್ರಿಸಿದಾಗ ಎರಡು ಹಸ್ತಗಳಲ್ಲಿ ರಾಕ್ಷಸನ ಹೊಟ್ಟೆಯನ್ನು ಸೀಳುತ್ತಿದ್ದರೆ, ನಾಲ್ಕು ಹಸ್ತಗಳಲ್ಲಿ ಬಲಗಡೆಗೆ ಶಂಖ, ಗದೆ ಮತ್ತು ಎಡಗಡೆಗೆ



ಚಿತ್ರ ೧೮ : ಸ್ಥೌಣ ನರಸಿಂಹ - ೨

ಶಂಖ, ಪದ್ಮಗಳನ್ನು ಹಿಡದಿರಬೇಕು. ಉಳಿದ ಎರಡು ಹಸ್ತಗಳಲ್ಲಿ ರಾಕ್ಷಸನ ಕರುಳುಗಳನ್ನು ಮಾಲೆಯ ಆಕಾರದಲ್ಲಿ ಹಿಡಿದಿರಬೇಕು. ಸ್ವಾಮಿಯ ಕಂಠ ದಪ್ಪವಾಗಿರಬೇಕು. ಭುಜಗಳು ಮತ್ತು ಪೃಷ್ಠಗಳು ಸ್ಥೂಲವಾಗಿದ್ದು, ಉದರ ಮತ್ತು ಸೊಂಟಗಳು ಕ್ಷೀಣವಾಗರಬೇಕು. ಸ್ವಾಮಿಯು ಪೂರ್ಣವಾಗಿ ಸ್ವರ್ಣವರ್ಣ, ನೀಲಿ ಅಥವ ತೆಳು ಕೆಂಪಿನಲ್ಲಿರಬಹುದು.

ವಿಷ್ಣುಧರ್ಮೋತ್ತರ ಪುರಾಣದಲ್ಲಿ ಈ ರೀತಿಯ ವರ್ಣನೆ ದೊರೆಯುತ್ತದೆ :

ಯ ಏವಂ ಭಗವಾನ್ವಿಷ್ಣುರ್ನರಸಿಂಹವಪುರ್ಧರಃ
ಧ್ಯಾನವಿಧಿಸ್ಸ ಏವೋಕ್ತಃ ಪರಮಜ್ಞಾನವರ್ಧನಃ ॥
ಪೀನಸ್ಕಂಧಕಟಿಗ್ರೀವಃ ಕೃಶಮಧ್ಯಃ ಕೃಶೋದರಃ
ಸಿಂಹಾನನೋ ನೃದೇಹಶ್ಚ ನೀಲವಾಸಾಃ ಪ್ರಭಾನ್ವಿತಃ ॥
ಆಲೀಢಸ್ಥಾನ ಸಂಸ್ಥಾನ ಸ್ಸರ್ವಾಭರಣ ಭೂಷಿತಃ
ಜ್ವಾಲಾ ಮಾಲಾ ಕುಲಮುಖೋ ಜ್ವಾಲಾ ಕೇಸರ ಮಂಡಲಃ ॥
ಹಿರಣ್ಯಕಶಿಪೋರ್ವಕ್ಷಃ ಪಾಟಯನ್ನಖರೈಃ ಖರೈಃ
ನೀಲೋತ್ಪಲಾಭಃ ಕರ್ತವ್ಯೋ ದೇವ ಜಾನುಗತಸ್ತಥಾ ॥
ಹಿರಣ್ಯಕಶಿಪು ದೈತ್ಯಸ್ತಮಜ್ಞಾನಂ ವಿದುರ್ಬುಧಾಃ

ಹಿರಣ್ಯಕಶಿಪು ದೈತ್ಯನು ಮನುಷ್ಯನ ತಮೋಗುಣದ ಸಂಕೇತ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಭಗವಾನ್ ವಿಷ್ಣುವು ನರಸಿಂಹ ರೂಪದಲ್ಲಿ ಪರಮ ಜ್ಞಾನವರ್ಧಕನಾಗಿರುವುದರಿಂದಲೇ ಆತನು ಹಿರಣ್ಯಕಶಿಪುವಿನ ವಧೆಯನ್ನು ನಡೆಸುವುದು ಅನಿವಾರ್ಯವಾಗಿದೆ.

ದೃಢವಾದ ವಕ್ಷಪ್ರದೇಶ, ಕೃಶವಾದ ಸೊಂಟ ಮತ್ತು ಉದರ, ಸಿಂಹದ ಮುಖ, ಮನುಷ್ಯನ ದೇಹವಿದ್ದು ನೀಲವರ್ಣದ ವಸ್ತ್ರಗಳಿಂದ ಅಲಂಕೃತನಾಗಿರುತ್ತಾನೆ. ಸಕಲ ಆಭರಣಗಳನ್ನೂ ಧರಿಸಿರುವ ಈ ಸ್ವಾಮಿಯು ಆಲೀಢಾಸನದಲ್ಲಿ (ನಿಂತಭಂಗಿಯಲ್ಲಿ ಎಡಗಾಲನ್ನು ಸ್ವಲ್ಪ ಮುಂದೆ ಇರಿಸಿ ಬಲಗಾಲನ್ನು ಸ್ವಲ್ಪಹಿಂದಕ್ಕೆ ಸರಿಸಿ ಬಿಲ್ಲು ಹಿಡಿದು ನಿಲ್ಲುವಭಂಗಿ) ಇರುತ್ತಾನೆ. ಸಿಂಹ ಮುಖವು ಅಗ್ನಿಯಂತೆ ತೇಜೋವಂತನಾಗಿರುತ್ತದೆ. ಹಿರಣ್ಯಕಶಿಪುವನ್ನು ತನ್ನ ತೊಡೆಗಳ ಮೇಲೆ ಹಾಕಿಕೊಂಡು ತನ್ನ ಕೈಉಗುರುಗಳಿಂದ ಅವನ ಹೊಟ್ಟೆಯನ್ನು ಬಗೆಯುತ್ತಿರುತ್ತಾನೆ.

ಇವೆರಡಲ್ಲದೆ ಯಾನಕ ನರಸಿಂಹ ಎಂಬ ಇನ್ನೊಂದು ಬಗೆಯೂ ರೂಢಿಯಲ್ಲಿದೆ. ವೈಖಾನಸ ಆಗಮದಲ್ಲಿ ಈ ಸ್ವಾಮಿಯ ಬಗ್ಗೆ ಇರುವ ವಿವರಣೆ ಇದು

ಅಥ ಯಾನಕ ನರಸಿಂಹಂ ವೀಶಸ್ಕಂಧೋಪರಿಷ್ಟಾಟ್ಛೇಷೋತ್ಸಂಗೇ ಸಮಾಸೀನಾಂ ತತ್ಫಣೈಃ ಪಂಚಭಿಃ ನ್ನಿವಮೌಲಿಂ ಚತುರ್ಭುಜಂ ಶಂಖ ಚಕ್ರಧರಂ ಸಾರ್ವಾಭರಣಭೂಷಿತಂ ಕಾರಯೇತ್ । ಅಥವ ಅಷ್ಟಭಿರ್ದ್ವಿರಷ್ಟಾಭಿರ್ವಾ ಭುಜೈರ್ಯುಕ್ತಂ ಭಯಾನಕಂ ದೈತ್ಯವಧಾನುರೂಪಂ ನೃಸಿಂಹಂ ಸ್ಥೂಣಜಂ ಕಾರಯೇತ್ ।

ಈ ಬಗೆಯಲ್ಲಿ ಸ್ವಾಮಿ ಗರುಡನ ಮೇಲೆ ಕುಳಿತಿರುತ್ತಾನೆ. ಅಥವ ಅಂಜಲಿ ಬದ್ಧನಾಗಿರುವ ಆದಿಶೇಷನ ಮೇಲೆ ಕುಳಿತಿರುತ್ತಾನೆ. ನಾಲ್ಕು ತೋಳುಗಳಿರುವ ಈ ಸ್ವಾಮಿಯು

ಚಕ್ರ ಮತ್ತು ಶಂಖಗಳನ್ನು ಧರಿಸಿರುತ್ತಾನೆ. ತಲೆಯ ಮೇಲೆ ಐದು ಹೆಡೆಗಳ ಸರ್ಪ ಇರಬೇಕು. ಎಲ್ಲಾ ಬಗೆಯ ಆಭರಣಗಳಿಂದಲೂ ಸ್ವಾಮಿಯು ಅಲಂಕೃತ ನಾಗಿರಬೇಕು.

ಪಾಂಚರಾತ್ರಾಗಮ ಗ್ರಂಥಗಳಲ್ಲಿ ನರಸಿಂಹಸ್ವಾಮಿಯ ಎಪತ್ನಾಲ್ಕು ಬಗೆ ಗಳನ್ನು ಹೇಳಲಾಗಿದೆ.

ನರಸಿಂಹ ವಿಶೇಷೋ ಽಸ್ತಿ ಚತುಸ್ಸಪ್ತತಿ ವಿಗ್ರಹಃ
ನರಸಿಂಹೇತಿ ಮೂರ್ತೀನಾ ನಾಮಧೇಯಂ ಸುಕಥ್ಯತೇ ॥
ಪ್ರಥಮಂ ಸ್ವಯಂ ನೃಸಿಂಹಃ ಸ್ಯಾದ್ವಿಧಾನಂ ಮೋಕ್ಷಸಿಂಹಕಮ್
ವಿಜಯಂ ನೃಸಿಂಹಕಂ ಚೈವ ಛತ್ರಾಖ್ಯಂ ನರಸಿಂಹಕಮ್ ॥
ದೀರ್ಘಸಿಂಹಂ ಚ ದ್ವಿಪ್ತಾನಾಂ ವಿರೂಪಂ ಚ ನೃಸಿಂಹಕಮ್
ಪೂರ್ಣಸಿಂಹಾಬ್ಧಿ ಸಿಂಹಃ ಸ್ಯಾಲ್ಲಕ್ಷ್ಮೀಸಿಂಹಾವುಭಾವಪಿ ॥
ವಿಜಯಲಕ್ಷ್ಮೀ ಸಿಂಹಾಖ್ಯಂ ಯೋಗ ಯೋಗೇಶ್ವರಾವಪಿ
ದೀಪ್ತಿ ಸಿಂಹಾಬ್ಧಿ ಸಿಂಹಃ ಸ್ಯಾತ್ಪುಷ್ಟಂ ಭೂತ ಪ್ರಮಾಥಿನಮ್ ॥
ಜ್ವಾಲಾನೃಸಿಂಹ ಉಗ್ರಂ ಚ ಓಂ ಘೋರಂ ಚ ನೃಸಿಂಹಕಮ್
ವಿದಾರಣ ನೃಸಿಂಹಃ ಸ್ಯಾದಹೋಬಲ ನೃಸಿಂಹಕಮ್ ॥
ಸ್ತಂಭ ಸಿಂಹ ಮಹಾಸಿಂಹ ಪಾತಾಲ ನರಸಿಂಹಕಮ್
ವಕ್ಷ್ಯಂ ಚಾನಂತಸಿಂಹಂ ಚ ಗ್ರಹಣಪ್ರಮನಾವಪಿ ॥
ಆವೇಶ ನರಸಿಂಹಂ ಚ ಅಟ್ಟಹಾಸ ನೃಸಿಂಹಕಮ್
ನವವ್ಯೂಹ ನೃಸಿಂಹಃ ಸ್ಯಾಚ್ಚಕ್ರ ಸಿಂಹಂ ದಿಶೋ ದಶ ॥
ಚಂಡ ಸಿಂಹಾರಸಿಂಹಂ ಚ ಪ್ರಸಾದಂ ಬ್ರಹ್ಮ ಸಿಂಹಕಮ್
ವಿಷ್ಣುರೌದ್ರಂ ಚ ಮಾರ್ತಾಂಡಂ ಚಂದ್ರ ಭೈರವ ಸಿಂಹಕಮ್ ॥
ಪೃಥಿವಿ ವಾಯು ಸಿಂಹಂ ಚ ಆಕಾಶ ನರಸಿಂಹಕಮ್
ಜ್ವಲನಾಧಾರ ಸಿಂಹಃ ಸ್ಯಾದಮೃತಂ ಹಂಸಂ ತಥೈವ ಚ ॥
ಆತ್ಮ ಸತ್ಯಂ ಚ ಯಜ್ಞಂ ಸ್ಯಾದನ್ನದಾನ ಪ್ರಭಾಸಕಮ್
ವಿಶ್ವರೂಪಂ ತ್ರಿತಾರಕಂ ಚ ಚತುಸ್ಸಪ್ತತಿ ವಿಗ್ರಹಮ್ ॥
ಇತ್ಯೇವಂ ನರಸಿಂಹಂ ಸ್ಯಾದಾಯುಧಾನಾಂ ವಿಭೇದಕಮ್

(ವಿಹಗೇಂದ್ರ ಸಂಹಿತೆ ೪ : ೭ - ೧೮)

ಸ್ವಾಮಿಯು ಎರಡು ತೋಳುಗಳೊಂದಿಗೆ ಇರುವ ಈ ವರ್ಣನೆಯು ಈಶ್ವರ ಸಂಹಿತೆ (೪ : ೭೩ - ೭೬) ಈ ರೀತಿಯಾಗಿ ದೊರೆಯುತ್ತದೆ

ಜಪಾಪುಷ್ಪ ಪ್ರತೀಕಾಶಂ ದ್ವಿಭುಜಂ ರಕ್ತಲೋಚನಮ್ ॥
ಕರೌ ಭೂಮೌ ಪ್ರತಿಷ್ಠಾಯ ಲೇಲಿ ಹನ್ ಸಚರಾಚರಮ್
ಆಸ್ಫೋಟ್ಯ ಭೂಮೌ ಲಾಂಗೂಲಮಾಚ್ಛಯುಕ್ತಂ ಸುರೇಶ್ವರಮ್ ॥
ಪುಚ್ಛ ಸಿಂಹಮಿತಿ ಖ್ಯಾತಂ ಸರ್ವಲೋಕಭಯಂಕರಮ್

ಈ ಮೂರ್ತಿಯನ್ನು ಪ್ರಧಾನವಾಗಿ ನರಸಿಂಹ ಮಂತ್ರ ಸಿದ್ಧಿಗಾಗಿ ರೂಪಿಸಿ ಪೂಜಿಸಲಾಗುತ್ತದೆ. ಭೂಮಿಯ ಮೇಲೆ ಇರಿಸಿಕೊಂಡಿರುವ ಎರಡು ಕೈಗಳೊಂದಿಗೆ ಸ್ವಾಮಿಗೆ

ಬಾಲವಿರಬೇಕೆಂಬ ಸೂಚನೆಯು ಗಮನಾರ್ಹ.

೭೪ ಮೂರ್ತಿಗಳಲ್ಲಿ ಚಕ್ರಸಿಂಹ ಎಂದಿರುವ ಮೂರ್ತಿಯು ಕೇವಲ ಎರಡು ತೋಳುಗಳಿದ್ದು ಒಂದರಲ್ಲಿ ಚಕ್ರವನ್ನು ಧರಿಸಿರುವಂತೆ ಇರುವ ವರ್ಣನೆ ಶೇಷ ಸಂಹಿತೆಯಲ್ಲಿ (೨೪ : ೧೫ - ೧೬) ಈ ರೀತಿಯಾಗಿ ದೊರೆಯುತ್ತದೆ. ಅಲ್ಲಿ ಹೆಸರು ಸುದರ್ಶನ ನೃಕೇಸರಿ ಎಂದು ಹೇಳಲಾಗಿದೆ.

**ವಿಶ್ವರೂಪ ಮುದಾರಾಂಗಂ ಸುದರ್ಶನ ನೃಕೇಸರಿಮ್ ॥**
**ಜ್ವಾಲಾ ಮಾಲಾಧರಂ ದೇವಂ ಭಜೇ ತಂ ವಿಶ್ವತೋ ಮುಖಮ್ ।**

ಈ ಧ್ಯಾನಶ್ಲೋಕ ಅಪೂರ್ಣವೆನಿಸುತ್ತದೆ. ಚಕ್ರಪುರುಷಮೂರ್ತಿಯಲ್ಲಿ ತ್ರಿಕೋನಾಕೃತಿಯ ಮಧ್ಯೆ ಸುದರ್ಶನ ನಾರಸಿಂಹಮೂರ್ತಿಯನ್ನು ಅಭಿಚಾರಗಳಲ್ಲಿ ಬಳಸುತ್ತಾರೆ. ಸುದರ್ಶನ ಚಕ್ರದ ಹಿಂಭಾಗದಲ್ಲಿರುವ ನಾರಸಿಂಹಮೂರ್ತಿಯ ಚಿತ್ರವನ್ನು ಮುಂದಿನ ಪುಟದಲ್ಲಿ ವಾಚಕರ ಅವಗಾಹನೆಗಾಗಿ ಕೊಡಲಾಗಿದೆ. ಇದಕ್ಕೆ ಸುದರ್ಶನ ಮಹಾಮಂತ್ರವಿದೆ. ಜ್ವಾಲಾಚಕ್ರಧರನಾದ ನರಸಿಂಹನು ತ್ರಿನೇತ್ರ. ಆದ್ದರಿಂದ ಈ ಬಗ್ಗೆ ಇದು ಕೇವಲ ಸೂಚನೆ ಮಾತ್ರವೇ.


ಪಾರಾಶರ ಸಂಹಿತೆಯಲ್ಲಿ (೧೫ : ೧೬೦) ಲಕ್ಷ್ಮೀನರಸಿಂಹನ ಧ್ಯಾವನ್ನು ಇಂತು ಹೇಲಾಗಿದೆ

**ಸತ್ಯ ಜ್ಞಾನ ಸುಖಸ್ವರೂಪಮಮಲಂ ಕ್ಷೀರಾಬ್ಧಿಮಧ್ಯಸ್ಥಿತಂ**
**ಯೋಗಾರೂಢ ಮತಿ ಪ್ರಸನ್ನವದನಂ ಭೂಷಾ ಸಹಸ್ರೋಜ್ವಲಮ್ ।**
**ತ್ರ್ಯಕ್ಷಂ ಚಕ್ರಪಿನಾಕಸಾ ಭಯಂಕರಂ ಭಿಭ್ರಾಣ ಮರ್ಕಚ್ಛವಿಂ**
**ಛತ್ರೀ ಭೂತ ಫಣೀಂದ್ರ ಮಿಂದು ಧವಲಂ ಲಕ್ಷ್ಮೀನೃಸಿಂಹಂ ಭಜೇ ॥**

(ಕ್ಷೀರಸಾಗರದ ಮಧ್ಯದಲ್ಲಿ ಸತ್ಯ - ಜ್ಞಾನ - ಸುಖಗಳ ಅತ್ಯಂತ ಪವಿತ್ರ ಸ್ವರೂಪನಾಗಿ ಬಹು ಪ್ರಸನ್ನ ವದನನಾಗಿ ಯೋಗಾಸನದಲ್ಲಿದ್ದು ಅಗಣಿತ ಆಭರಣಗಳಿಂದ ಅಲಂಕೃತನಾಗಿರುತ್ತಾನೆ. ಸೂರ್ಯನಂತೆ ತೇಜೋವಂತನಾಗಿದ್ದು ತ್ರಿನೇತ್ರನಾಗಿ ಚಕ್ರ ಮತ್ತು ಪಿನಾಕ (ಧನಸ್ಸು)ಬಿಲ್ಲುಗಳನ್ನು ಹಿಡಿದು ಭಯಂಕರನಾಗಿ ಕಾಣಿಸುವ ಸ್ವಾಮಿಗೆ ಛತ್ರಿಯ ಆಕಾರದಲ್ಲಿ ಶೇಷನು ತನ್ನ ಹೆಡೆಯನ್ನು ಹಿಡಿದಿರುತ್ತಾನೆ. ಸ್ವಾಮಿಯು ಧವಳ ವರ್ಣದಲ್ಲಿರುತ್ತಾನೆ. ಲಕ್ಷ್ಮೀದೇವಿಯ ಸ್ವಾಮಿಯ ಎಡ ಮೊಣಕಾಲಿನ ಮೇಲೆ ಮಂಡಿಸಿದ್ದು ಆಕೆಗೆ ಸ್ವಾಮಿಯು ಒಂದು ಕೈ ಆಸರೆಯಾಗಿರುತ್ತದೆ. ಇನ್ನೊಂದು ಕೈ ಅಭಯ ಮುದ್ರೆಯಲ್ಲಿರುತ್ತದೆ. ಇಂತಹ ಲಕ್ಷ್ಮೀನರಸಿಂಹ ಮೂರ್ತಿಯನ್ನು ಭಜಿಸುತ್ತೇನೆ).

ಈಶ್ವರ ಸಂಹಿತೆಯಲ್ಲಿ (೪ : ೬೨ - ೬೬) ನರಸಿಂಹ ಮಂತ್ರ ಸಿದ್ಧಿಗಾಗಿ ಆರಾಧಿಸುವ ಮೂರ್ತಿಗಳಲ್ಲಿ ಯೋಗ ನರಸಿಂಹಸ್ವಾಮಿಯ ಧ್ಯಾನವನ್ನು ಈ ರೀತಿ ಹೇಳಲಾಗಿದೆ :

**ಚತುರ್ಭುಜಂ ತ್ರಿಣೇತ್ರಂ ಶಂಖ ಚಕ್ರಧರಂ ಶುಭಮ್ ॥**
**ಶಶಿಕೋಟಿಸಮ ಪ್ರಭಂ ಹಿಮಕುಂದೇಂದು ಸನ್ನಿಭಮ್**
**ಸಹಸ್ರಾದಿತ್ಯ ಸಂಕಾಂಶಂ ಕಿರೀಟ ಮಕುಟೋಜ್ವಲಮ್ ॥**
**ಶತರುದ್ರಸಹಸ್ರಾಭಂ ಸಟಾಚಕೋಜ್ವಲಂ ಮುಖಮ್**
**ಯೋಗಪಟ್ಟ ನಿಬದ್ಧಾಂಗಂ ಆಸೀನಂ ಪದ್ಮ ಪೀಠಕೇ ॥**



ಚಿತ್ರ ೧೯ : ನೃಸಿಂಹ (ಚಕ್ರಮೂರ್ತಿ)

**ಜಾನ್ವಾರೂಢ ಪ್ರಸ್ತ ಭುಜಂ ದ್ವಂದ್ವರಕ್ತ ನಖೋಜ್ವಲಮ್**
**ಯಜ್ಞೋಪವೀತ ಸಂಯುಕ್ತ ಮುತ್ತರೀಯಕ ಶೋಭಿತಮ್ ॥**
**ದಿವ್ಯ ಸಿಂಹಾಸನಾರೂಢಂ ಸರ್ವಜ್ಞಾನ ಮಯಂ ಪರಮ್**
**ಶ್ರೀವತ್ಸ ಕೌಸ್ತುಭೋರಸ್ಕಂ ನಾನಾರತ್ನ ವಿಭೂಷಿತಮ್ ॥**

ನಾಲ್ಕು ತೋಳುಗಳನ್ನು ಹೊಂದಿದ್ದು ಮೇಲಿನ ಎರಡು ಹಸ್ತಗಳಲ್ಲಿ ಚಕ್ರ ಮತ್ತು ಶಂಖಗಳನ್ನು ಧರಿಸಿದ್ದು ಕೋಟಿ ಚಂದ್ರರ ಪ್ರಕಾಶವನ್ನು ಪಡೆದಿದ್ದು ಮಲ್ಲಿಗೆಯ ಹೂವಿನಂತೆ ಬಿಳಿಯದಾದ ಹಿಮರಾಶಿಯಂತೆ ಕಣ್ಣಿಗೆ ತಂಪನ್ನೆರೆಯುತ್ತಾನೆ ಸ್ವಾಮಿ. ಸಾವಿರಾರು ಸೂರ್ಯಪ್ರಕಾಶದಿಂದ ತೇಜೋವಂತವಾಗಿರುವ ಕಿರೀಟವನ್ನು ಧರಿಸಿರುವ ಸ್ವಾಮಿಯು ಯೋಗಪಟ್ಟದಿಂದ ಬಂಧಿತನಾಗಿ, ಪದ್ಮ ಪೀಠದಲ್ಲಿ ಮಂಡಿಸಿರುತ್ತಾನೆ. ರಕ್ತ ಸಿಕ್ತವಾದ ನಖಗಳನ್ನು ಪಡೆದಿರುವ, ಶ್ರೀವತ್ಸ, ಕೌಸ್ತುಭಾದಿ ಗಳಿಂದಲೂ ಬಗೆಬಗೆಯ ರತ್ನಾಭರಣಗಳಿಂದಲೂ ಅಲಂಕೃತನಾಗಿರುವ ಸ್ವಾಮಿಯು ಯಜ್ಞೋಪವೀತ ಉತ್ತರೀಯಗಳಿಂದಲೂ ಸುಶೋಭಿತನಾಗಿರುತ್ತಾನೆ. ಮುಂಭಾಗದ ಎರಡು ಹಸ್ತಗಳು ಮೋಣಕಾಲುಗಳ ಆಸರೆಯಿಂದ ಕೆಳಕ್ಕೆ ತೂಗು ಬಿದ್ದಿರುತ್ತವೆ. ಈ ಸ್ವಾಮಿಯು ಸಕಲ ಜ್ಞಾನಗಳನ್ನು ಕರುಣಿಸುವನಾದ್ದರಿಂದ ಯೋಗ ನರಸಿಂಹಮೂರ್ತಿ ಎಂದು ಕರೆಯಲ್ಪಡುತ್ತಾನೆ.

ಯೋಗನರಸಿಂಹಮೂರ್ತಿಗೆ ಇನ್ನೂ ಹೆಚ್ಚು ತೋಳಿರುವುದನ್ನು ಪರಾಶರ ಸಂಹಿತೆಯು (೨೫ : ೧೦) ಈ ರೀತಿ ವಿವರಿಸುತ್ತದೆ :

**ಭಿಭ್ರಾಣಂ ಶಕ್ತಿ ಖಡ್ಗಂ ಜ್ವಲನಮಥ ಸೃಣೀ ಕುಂತ ದಂತೌ**
**ಕುಠಾರಂ ಚಕ್ರಂ ಶಂಖಾಬ್ಜ ಪಾಶಾನ್ ಹಲಮುಸಲಗದಾ ಖೇಟ ಶೂಲಾಂಶ್ಚ ದೋರ್ಭಿಃ ।**
**ಪ್ರತ್ಯಾಲೀಢಂ ತಮೀಢೇ ತ್ರಿನಯನ ಲಸಿತಂ ಪಿಂಗಕೇಶಂ ಸುದಂಷ್ಟ್ರಂ**
**ದೇವಂ ಪಂಚಾರ್ಥ ಯೋಗಾಸನಲಸಿತ ಚತುಶ್ಚಕ್ರಭಾಸ್ಯಂ ನೃಸಿಂಹಮ್ ॥**

ಮೂರು ಕಣ್ಣುಗಳಿಂದಲೂ, ಬಲವಾದ ಕೋರೆ ಹಲ್ಲುಗಳಿಂದಲೂ, ಶೋಭಾಯ ಮಾನನಾಗಿರುವ ನರಸಿಂಹಸ್ವಾಮಿಯು ಇಪ್ಪತ್ತು ಭುಜಗಳನ್ನು ಪಡೆದಿರುತ್ತಾನೆ. ತನ್ನ ಹಸ್ತಗಳಲ್ಲಿ ಬಿಲ್ಲು, ಬಾಣ, ಶಕ್ತಿ, ಖಡ್ಗ, ಜ್ವಾಲೆ, ಅಂಕುಶ (ಸೃಣಿ), ಕುಂತ, ದಂತ, ಕುಠಾರ, ಚಕ್ರ, ಶಂಖ, ತಾವರೆ, ಪಾಶ, ಹಲ (ನೇಗಿಲು), ಮುಸಲ (ಒನಕೆ), ಗದೆ, ಖೇಟಕ, ಶೂಲ ಆಯುಧಗಳನ್ನು ಒಂದೊಂದು ಹಸ್ತದಲ್ಲಿ ಹಿಡಿದುಕೊಂಡು ಅಭಯ ವರದ ಮುದ್ರೆಗಳೊಂದಿಗೆ ಪ್ರತ್ಯಾಲೀಢಾಸನದಲ್ಲಿ (ಬಿಲ್ಲನ್ನು ಹೆದೆ ಏರಿಸಿ ಬಾಣವನ್ನು ಬಿಟ್ಟನಂತರದ ಭಂಗಿಯನ್ನು ಪ್ರತ್ಯಾಲೀಢಾಸನ ಎನ್ನುತ್ತಾರೆ ) ಪಿಂಗಳ ವರ್ಣದ ತಲೆಗೂದಲಿನೊಂದಿಗೆ ಇರುತ್ತಾನೆ. ಈ ದೇವನನ್ನು ಯೋಗಾಸನದಲ್ಲಿರುವಂತೆಯೂ ರೂಪಿಸಬಹುದು.

ಈ ಸ್ವಾಮಿಗೆ ನಾಲ್ಕು ತೋಳುಗಳೆಂದು ಹೇಳಿ ಆಯುಧಗಳು ಶಂಖ, ಚಕ್ರ, ಗದೆಗಳೆಂದು ಅಥವ ಶಂಖ ಚಕ್ರಗಳು ಮಾತ್ರವೇ ಇರಬಹುದೆಂದು ಹಯಶೀರ್ಷ ಸಂಹಿತೆಯು (ಆದಿ : ೨೩) ಹೇಳುತ್ತದೆ (**ನರಸಿಂಹ ಶ್ಚತು ರ್ಬಾಹುಶ್ಶಂಖ ಚಕ್ರಗದಾಧರಃ। ಶಂಖ ಚಕ್ರಧರೋ ವಾಪಿ**

ವಿದಾರಿತ ಮಹಾಸುರಃ). ಮಾರ್ಕಂಡೇಯ ಸಂಹಿತೆಯಲ್ಲಿ (ಅ) ಚಕ್ರ, ಪದ್ಮ, ಗದೆ, ಶಂಖಗಳನ್ನು ಧರಸಿರುವ ಮೂರ್ತಿಯು ಬಹು ಭಯಂಕರವಾಗಿರುತ್ತಾನೆ (**ಚಕ್ರ ಪದ್ಮಗದಾ ಶಂಖ ನೃಸಿಂಹಃ ಸ್ಯಾದ್ಭಯಾನಕಃ**) ಎಂದು ಹೇಳಲಾಗಿದೆ. ಇದೇ ಸಂಹಿತೆಯಲ್ಲಿ ಈ ಸ್ವಾಮಿಯನ್ನು ಹೀಗೆ ವರ್ಣಿಸಲಾಗಿದೆ :

**ಬಹುಧಾ ನೃಸಿಂಹಮೂರ್ತಿಶ್ಚ ತತ್ರ ಕಾಚಿಪ್ರದೃಶ್ಯತೇ**
**ಆನನಂ ಸಿಂಹವತ್ ಕೃತ್ವಾ ನರವದ್ವಪುಷಾ ಸ್ಮೃತಃ ||**
**ಚತುರ್ಬಾಹುಂ ವಿಶಾಲಾಕ್ಷಂ ಸ್ಫಟಿಕಾ ಭಾಸ ಸಮನ್ವಿತಮ್**
**ಭ್ರುಕುಟೀಕುಟಿಲ ಭೀಮಂ ಕಲ್ಪಯೇ ತ್ಪೃಥುಸತ್ತಮ ||**

ಬಹು ಬಗೆಗಳಲ್ಲಿ ನೃಸಿಂಹ ಮೂರ್ತಿಯನ್ನು ರೂಪಿಸುವ ಪದ್ಧತಿಯುಂಟು. ದೇಹವು ನರ ದೇಹದಂತಿದ್ದು ಮುಖವು ಸಿಂಹದ ಮುಖವಾಗಿರುತ್ತದೆ. ಸ್ಫಟಿಕದ ವರ್ಣದಲ್ಲಿರುವ ವಿಶಾಲ ನೇತ್ರಗಳು, ನಾಲ್ಕು ತೋಳುಗಳಿರುವ ಈ ಸ್ವಾಮಿಯ ಹುಬ್ಬುಗಳು ದಪ್ಪವಾಗಿದ್ದು ಸ್ವಾಮಿಯೇ ಭೀಮಕಾಯನಾಗಿರುತ್ತಾನೆ.

**ಯದ್ವಾಷ್ಟ ಭುಜಸಂಯುಕ್ತ ನೃಸಿಂಹಂ ಪರಿಕಲ್ಪಯೇತ್ ||**
**ಚಕ್ರಂ ಖಡ್ಗಂ ಚ ಬಾಣಂ ಅಭಯಂ ದಕ್ಷಿಣೇ ಭುಜೇ**
**ಪಾಂಚಜನ್ಯಂ ಗದಾಂ ಶಾರ್ಙ್ಗಂ ವಾಮಬಾಹುಷು ಕಾರಯೇತ್ ||**
**ಜಾನೂಪರಿ ತಥಾ ವಾಮಂ ಹಸ್ತಮೇಕಂ ಪ್ರಸಾರಯೇತ್**
**ಯದ್ವಾ ಭುಜಯುಗಂ ಜಾನುದ್ವಯಸ್ಯೋಪರಿ ಕಲ್ಪಯೇತ್ ||**

(ಪಾದ್ಮಸಂಹಿತೆ, ಕ್ರಿ ೧೭ : ೩೧ - ೩೩)

ಚಕ್ರ, ಖಡ್ಗ, ಬಾಣ, ಅಭಯಮುದ್ರೆ ಇವು ಬಲ ಹಸ್ತಗಳಲ್ಲಿಯೂ, ಶಂಖ (ಪಾಂಚಜನ್ಯ), ಗದೆ (ಕೌಮೋದಕೀ), ಶಾರ್ಙ್ಗ (ಬಿಲ್ಲು) ಇವು ಎಡಹಸ್ತಗಳಲ್ಲಿಯೂ ಇರಬೇಕು. ಎಡ ತೋಳೊಂದು ಎಡ ಮೊಣಕಾಲಿನ ಆಧಾರಿಂದ ಚಾಚಿರುವಂತೆ ಇರಬೇಕು. ಅಥವ ಎರಡು ಕಡೆ (ಎಡ - ಬಲ) ಒಂದೊಂದು ತೋಳು ಆ ರೀತಿ ಮೊಣಕಾಲಿನ ಆಧಾರದಿಂದ ಚಾಚಿಕೊಂಡಿರುವಂತೆ ಇರಬೇಕು. (ಆಗ ಅಭಯಮುದ್ರೆಯು ಬಲ ಪಾರ್ಶ್ವದಲ್ಲಿರು ವುದಿಲ್ಲ). ಸ್ವಾಮಿಯು ಯೋಗ ಪಟ್ಟಿಕೆಯೊಂದಿಗೆ ಕುಳಿತಿರುತ್ತಾನೆ. ಈ ಸ್ವಾಮಿಯು ಯೋಗ ನರಸಿಂಹ ಮೂರ್ತಿಯಾಗಿದ್ದು ಎಂಟು ಭುಜಗಳನ್ನು ಪಡೆದಿರುತ್ತಾನೆ.

ಹದಿನಾರು ಭುಜಗಳ ನರಸಿಂಹಮೂರ್ತಿ ಅರ್ಚನೆಗೆ ಬಹು ಪ್ರಶಸ್ತವಾದುದೆಂದು ಹೇಳುತ್ತಾರೆ. ಆ ಮೂರ್ತಿಯ ವರ್ಣನೆಯು ಈ ರೀತಿಯಾಗಿರುತ್ತದೆ -

**ಅಥವಾ ಷೋಡಶಭುಜೋ ನರಸಿಂಹಃ ಪ್ರಶಸ್ಯತೇ**
**ಚಕ್ರಂ ಖಡ್ಗಂ ಸ ಪರಶುಂ ಶೂಲಂ ಬಾಣಂ ತಥಾಂಕುಶಮ್ ||**
**ವಜ್ರಂ ಚ ದಕ್ಷಿಣಭುಜ ಪ್ರದೇಶೇಷ್ವಿತರೇಷ್ವಪಿ**
**ಶಂಖಂ ಚರ್ಮ ಗದಾಂ ಶಕ್ತಿಂ ಶಾರ್ಙ್ಗಂ ಪಾಶಂ ಚ ತೋಮರಮ್ ||**

ಶಿಷ್ಟೌ ಕರೌ ಯಥಾಪೂರ್ವಂ ಸ್ಥಾಪಯೇ ಜ್ಜಾನುನೋರ್ಧ್ವಯೋಃ
ವಾಮ ಜಾನೂರ್ಧ್ವಗಂ ಕುರ್ಯಾದಧಸ್ತಾದಿತರಂ ಪುನಃ ||
ಉತ್ಸಂಗೇ ದೇವ ದೇವಸ್ಯ ಹಿರಣ್ಯಕಶಿಪುಂ ರಿಪುಂ
ನಖೈರ್ವಿದಾರಿ ತೋರಸ್ಕಂ ಸ್ರವ ದ್ರುಧಿರ ಪಂಕಿಲಮ್ ||
ರುಧಿರಸ್ರೋಮ ಸಂಭೂತ ಸಿರಾಣಾಂ ಗ್ರಾಮ ಸಂಕುಲಮ್
ಕುರ್ಯಾಚ್ಚ ದಕ್ಷಿಣೇ ಪಾರ್ಶ್ವೇ ವಿಧಿಮನ್ಯತ್ರ ಶಂಕರಮ್ ||
ಪ್ರಹ್ಲಾದಂ ಗರುಡಂ ಚಾಪಿ ಪಾರ್ಶ್ವಯೋಸ್ತತ್ರ ಕಾರಯೇತ್

(ಪಾದ್ಮ ಸಂಹಿತೆ, ಕ್ರಿ ೧೭ : ೩೪ - ೩೭)

ನರಸಿಂಹಸ್ವಾಮಿಯು ತನ್ನ ಬಲ ಪಾರ್ಶ್ವದ ಹಸ್ತಗಳಲ್ಲಿ ಮೇಲಿನಿಂದ ಕೆಳಕ್ಕೆ ಕ್ರಮವಾಗಿ ಚಕ್ರ, ಖಡ್ಗ, ಪರಶು, ಶೂಲ, ಬಾಣ, ಅಂಕುಶ, ವಜ್ರಗಳನ್ನು ಎಡ ಪಾರ್ಶ್ವಹಸ್ತಗಳಲ್ಲಿ ಮೇಲಿನಿಂದ ಕೆಳಕ್ಕೆ ಕ್ರಮವಾಗಿ ಶಂಖ, ಗುರಾಣಿ (ಚರ್ಮ), ಗದೆ, ಶಕ್ತಿ, ಶಾರ್ಙ್ಗ, ಪಾಶ, ತೋಮರಗಳನ್ನು ಹಿಡಿದಿರುತ್ತಾನೆ. ಉಳಿದ ಎರಡು ಕೈಗಳಿಂದ ಹಿರಣ್ಯಕಶಿಪುವನ್ನು ತೊಡೆಗಳ ಮೇಲೆ ಹಾಕಿಕೊಂಡು ಅವನ ಹೊಟ್ಟೆಯನ್ನು ಬಗೆಯುತ್ತಿರುತ್ತಾನೆ. ಗರ್ಭಗುಡಿಯ ದಕ್ಷಿಣದ ಗೋಡೆಯ ಮೇಲೆ ಬ್ರಹ್ಮದೇವನನ್ನು, ಉತ್ತರಕ್ಕೆ ಶಿವನನ್ನು ರೂಪಿಸಬೇಕು. ಸ್ವಾಮಿಯ ಪಾರ್ಶ್ವದಲ್ಲಿ ಎಂದರೆ ಹಿಂದಿನ ಗೋಡೆಯ ಮೇಲೆ ಪ್ರಹ್ಲಾದ, ಗರುಡ ಮುಂತಾದವರನ್ನು ರೂಪಿಸಬೇಕು.

ಜ್ವಲದಗ್ನಿ ಸಮಾಕಾರಂ ಸಿಂಹವಕ್ತ್ರಂ ನರಾಂಗಕಮ್
ದಂಷ್ಟ್ರಾ ಕರಾಳವದನಂ ಲೋಲಜಿಹ್ವಾ ಸುಭೀಷಣಮ್ ||
ವೃತ್ತಾಸ್ಯಂ ಜಟಿಲಂ ಕ್ರುದ್ಧ ಮಾಲೀಢಂ ಪೀನವಕ್ಷಸಮ್
ಅಭೇದ್ಯ ತೀಕ್ಷ್ಣ ನಖಂ ಮಾತ್ಸ್ಯೋರುಕೃತ ದಾನವಮ್ ||
ತದ್ವಕ್ಷದಾರಯಂತಂ ಚ ಕರಾಭ್ಯಾಂ ನಖರೈರ್ಭೃಶಮ್
ಗದಾಚಕ್ರಧರಂ ದ್ವಾಭ್ಯಾಂ ನೃಸಿಂಹಂ ಪ್ರಣಮೇ ತ್ರಿಭುಮ್ ||

ನೃಸಿಂಹ ರೂಪವನ್ನು ಧರಿಸಿರುವ ವಿಷ್ಣುವು ಉರಿಯುತ್ತಿರುವ ಅಗ್ನಿಯಂತೆ ಭಯಂಕರವಾದ ಆಕಾರದಿಂದ ಶ್ವೇತವರ್ಣಕಾಂತಿಯೊಂದಿಗೆ ಸಿಂಹದ ಮುಖವುಳ್ಳ ನರಶರೀರದೊಂದಿಗೆ, ಕೋರೆ ಹಲ್ಲುಗಳೊಂದಿಗೆ, ಚಲಿಸುತ್ತಿರುವ ನಾಲಿಗೆಯೊಂದಿಗೆ, ಗುಂಡಾದ ಮುಖದೊಂದಿಗೆ, ಬಲವಾದ ಕೇಸರಗಳೊಂದಿಗೆ, ಆಲೀಢಪಾದಭಂಗಿಯಲ್ಲಿ ಬಲಿತು ಹಿಗ್ಗಿದ ವಕ್ಷಗಳೊಂದಿಗೂ, ನಾಲ್ಕು ಬಾಹುಗಳೊಂದಿಗೆ ಭೇದಿಸಲು ಅಸಾಧ್ಯವಾದವನಾಗಿದ್ದು ಬಹುಬಲವಾದ ಉಗುರುಗಳನ್ನು ಪಡೆದುಕೊಂಡಿರುತ್ತಾನೆ.

ಸ್ವಾಮಿಯು ತನ್ನ ತೊಡೆಯ ಮೇಲಿರುವ ಹಿರಣ್ಯಕಶಿಪುವಿನ ಎದೆಯನ್ನು ತನ್ನ ಉಗುರುಗಳಿಂದಲೇ ಸೀಳುತ್ತಿರುತ್ತಾನೆ. ಮೇಲಿನ ಹಸ್ತಗಳಲ್ಲಿ ಬಲಗಡೆಗೆ ಚಕ್ರವು, ಎಡಗಡೆಗೆ ಗದೆಯೂ ಧರಿಸಿರುತ್ತಾನೆ.

ಇಂತಹ ರೂಪದಲ್ಲಿರುವ ನರಸಿಂಹಸ್ವಾಮಿಗೆ ನಮಸ್ಕರಿಸುತ್ತೇನೆ.



ಚಿತ್ರ ೨೦ : ಸ್ಥೌಣ ನರಸಿಂಹ - ೩

ನಾಲ್ಕು ತೋಳುಗಳೊಂದಿಗೆ ಇರುವ ಮೂರ್ತಿಯನ್ನು ಲಕ್ಷ್ಮೀ ಮತ್ತು ಅಥವ ಭೂದೇವಿ ಇರುವಂತೆ ಅಥವ ಇಲ್ಲದಂತೆ ರೂಪಿಸಬಹುದು. ನೃಸಿಂಹಮೂರ್ತಿ ಸ್ವಭಾವತಃ ಪ್ರಸನ್ನ. ಕ್ರೂರತೆಯು ವಿಶೇಷ ಸಂದರ್ಭಕ್ಕೆ ಸೇರಿದ್ದು **(ನರಸಿಂಹಸ್ಯ ಪ್ರಸನ್ನತಾ ಸ್ವಭಾವಃ ಕ್ರೂರತಾ ವಿಶೇಷೇಣ ತತ್ರ ಪೂಜಾಯಾಂ ಪ್ರಸನ್ನರೂಪಂ ಧ್ಯಾಯೇತ್ ||)** ಆದ್ದರಿಂದ ಪ್ರಸನ್ನ ರೂಪವನ್ನೇ ಪೂಜಿಸಬೇಕೆಂದು ಹೇಳಲಾಗಿದೆ.


ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಇಬ್ಬರೂ ಅಣ್ಣತಮ್ಮಂದಿರಲ್ಲವೇ? ಇವರಲ್ಲಿ ಒಬ್ಬೊಬ್ಬರನ್ನು ಕೊಲ್ಲಲು ವರಾಹ ಮತ್ತು ನರಸಿಂಹ ಅವತಾರಗಳನ್ನು ಮಹಾವಿಷ್ಣು ಪಡೆದುಕೊಳ್ಳಬೇಕಾಯಿತು. ಇದು ತಾಂತ್ರಿಕರಿಗೆ ಬಹು ದೊಡ್ಡ ಅಸ್ತ್ರವೆಂದು ಭಾಸವಾಗಿರಬೇಕು. ಆದ್ದರಿಂದ ನರಸಿಂಹ ಮೂರ್ತಿಯನ್ನು ಮೂರು ಮುಖಗಳ ಮೂರ್ತಿಯಾಗಿ ಅರ್ಚಿಸಿ ಸಿದ್ಧಿಗಳನ್ನು ಗಳಿಸಿಕೊಳ್ಳುವ ಪ್ರಯತ್ನ ಬಹಳ ಪ್ರಾಚೀನ ವಾದುದು ಎನಿಸುತ್ತದೆ. ಈ ರೀತಿಯ ವರಾಹನೃಹರಿ ಮೂರ್ತಿಯ ಕಲ್ಪನೆಯನ್ನು ಶೇನ ಸಂಹಿತೆ (೨೮ : ೧೯) ಇಂತು ವಿವರಿಸುತ್ತದೆ-

**ಚಕ್ರಾಷ್ಟಕಧರಂ ದೇವಂ ತ್ರಿನೇತ್ರಂ ಚೋಗ್ರವಿಗ್ರಹಮ್**
**ವಿಶ್ವರೂಪಮಜಂ ಸೌಮ್ಯಂ ವರಾಹನೃಹರಿಂ ಭಜೇ ||**

ಒಂದು ಕಡೆಯ ಮುಖ ವರಾಹದ್ದು, ಇನ್ನೊಂದು ಪಾರ್ಶ್ವದ ಮುಖ ಸಿಂಹದ್ದು, ಮಧ್ಯೆ ವಿಷ್ಣುವಿನ ಸಾಮಾನ್ಯ ನರರೂಪ ಮುಖ. ಈ ರೀತಿಯ ಮೂರ್ತಿಗಳು ಅಭಿಚಾರಗಳಲ್ಲಿ ಸಿದ್ಧಿಗಳಿಗಾಗಿ ಬಳಸುತ್ತಾರೆ.

ಐದು ಒಂದು ವಿಶಿಷ್ಟ ಬಗೆಯ ಸಂಖ್ಯೆ ನರಸಿಂಹಮೂರ್ತಿಯ ಪಂಚವಕ್ತ್ರ ಕಲ್ಪನೆಯನ್ನು ಈಶ್ವರಸಂಹಿತೆಯಲ್ಲಿ (೪ : ೭೬ - ೮೧) ಕಾಣಬಹುದು. ಇದೇ ಮಂತ್ರಸಾರದಲ್ಲೂ ಸಂಗ್ರಹೀತವಾಗಿದೆ. ಅಲ್ಲಿಯ ಧ್ಯಾನ ಶ್ಲೋಕ ಇಂತಿದೆ :

**ಪಂಚವಕ್ತ್ರಂ ಮಹಾಭೀಮಂ ಕಾಲಾನಲ ಸಮಪ್ರಭಮ್ ||**
**ರುಂಡಮಾಲಾಧರಂ ರೌದ್ರಂ ಕರ್ಣಾಭರಣ ಸಂಯುತಮ್**
**ಸರ್ಪಯಜ್ಞೋಪವೀತಂ ಚ ಪಂಚಾನನ ಸುಶೋಭಿತಮ್ ||**
**ಚಂದ್ರಮೌಳಿಂ ನೀಲಕಂಠಂ ಪ್ರತಿವಕ್ತ್ರಂ ತ್ರಿಲೋಚನಮ್**
**ಭುಜೈಃ ಪರಿಘಸಂಕಾಶೌ ದಶಭಿ ಶ್ಚೋಪಶೋಭಿತಮ್ ||**
**ಅಕ್ಷಸೂತ್ರಂ ಗದಾ ಪದ್ಮಂ ಶಂಖಂ ಗೋಕ್ಷೀರ ಸನ್ನಿಭಮ್**
**ಧನುಶ್ಚ ಮುಸಲಂ ಚೈವ ತಥಾ ಚಕ್ರೇಣ ಮಂಡಿತಮ್ ||**
**ಖಡ್ಗ ಚ ಶೂಲಪಾಶೌ ಚ ನೃಸಿಂಹಂ ರುದ್ರರೂಪಿಣಮ್**
**ಬಾಣಂ ವರದ ಖಡ್ಗಂ ಚ ಸರ್ವದೇವೈರುಪಾಸಿತಮ್ ||**
**ಮಕುಟಂ ಚ ಮಹಾಭೀಮಂ ಶುದ್ಧಸ್ಫಟಿಕ ಸನ್ನಿಭಮ್**
**ಚಂದ್ರಾಂಜನ ಸುವರ್ಣಾಭಂ ಇಂದ್ರಗೋಪನಿಭಂ ತಥಾ ||**
**ಪೂರ್ವಾದಿ ಚೋತ್ತರಾಂತಂ ತು ಊರ್ಧ್ವಮಗ್ನಿ ನಿಭಂ ಮುಖಂ**
**ಏತಂ ಮೇರುರಿತಿ ಖ್ಯಾತಂ ಸರ್ವವ್ಯಾಧಿ ವಿನಾಶನಮ್ ||**



ಚಿತ್ರ ೨೧ : ಪಂಚಮುಖ ನರಸಿಂಹ

ಸಕಲವ್ಯಾಧಿಗಳಿಂದ ಮುಕ್ತಿಪಡೆಯಲು ಈ ಮೂರ್ತಿಯ ಆರಾಧನೆಯನ್ನು ಸೂಚಿಸಲಾಗಿದೆ. ಪೂರ್ವ - ದಕ್ಷಿಣ - ಪಶ್ಚಿಮ - ಉತ್ತರ ದಿಕ್ಕುಗಳಿಗೆ ಮತ್ತು ಮಧ್ಯದ ಊರ್ಧ್ವದಿಕ್ಕಿಗೂ ಐದು ಸಿಂಹದ ಮುಖಗಳು. ಈ ಮುಖಗಳು ಸ್ಫಟಿಕ, ಚಂದ್ರ (ಶ್ವೇತ) ವರ್ಣ, ಅಂಜನ (ಶ್ಯಾಮಲ) ವರ್ಣ, ಸ್ವರ್ಣ ವರ್ಣ ಮತ್ತು ಇಂದ್ರನೀಲ ವರ್ಣಗಳಲ್ಲಿರಬೇಕು. ಹತ್ತು ತೋಳುಗಳಿದ್ದು ಆ ತೋಳುಗಳಲ್ಲಿ ಇರುವ ಆಯುಧಗಳು ಇವು : ಅಕ್ಷಮಾಲೆ, ಗದೆ, ಪದ್ಮ, ಶಂಖ, ಧನಸ್ಸು, ಮುಸಲ, ಚಕ್ರ, ಬಾಣ, ವರದ ಮುದ್ರೆ ಮತ್ತು ಖಡ್ಗ. ರುಂಡ ಮಾಲೆ (ಪಾಠಾಂತರದ ಪ್ರಕಾರ ಅಂಡಮಾಲೆ) ಧರಿಸಿದ್ದು ಕರ್ಣಾಭರಣಗಳಿಂದ ಅಲಂಕೃತನಾಗಿರುವ ದೇವನು ಸರ್ಪಯಜ್ಞೋಪವೀತವನ್ನು ಧರಿಸಿರುತ್ತಾನೆ. ಮಹಾಕಾಯನಾಗಿರುವ ಈ ಸ್ವಾಮಿಯು ಸಕಲದೇವತಾ ಸ್ವರೂಪನಾಗಿದ್ದು ಅಗ್ನಿಯಂತೆ ತೇಜೋವಂತನಾಗಿರುತ್ತಾನೆ.

ಸಾತ್ವತ ಸಂಹಿತೆ, ಈಶ್ವರ ಸಂಹಿತೆ, ಶ್ರೀಪ್ರಶ್ನ ಸಂಹಿತೆಗಳಲ್ಲಿ ಶ್ರೀ ನಾರಸಿಂಹಮಂತ್ರವನ್ನು ದುಃಸ್ವಪ್ನಗಳ ಸಂದರ್ಭದಲ್ಲಿ, ವಿಷ ಫಲಾಪಹರಣಕ್ಕಾಗಿ, ಶಿರೋವೇದನೆಯ ಶಮನಕ್ಕಾಗಿ, ದುರ್ಮರಣ ನಿವಾರಣೆಗಾಗಿ, ಮಾರಣ, ಉಚ್ಚಾಟನ, ವಿದ್ವೇಷಣ ಮೊದಲಾದ ಕ್ರಿಯೆಗಳಲ್ಲಿ ಇದರ ಬಳಕೆಯನ್ನು ವಿವರವಾಗಿ ತಿಳಿಸಲಾಗಿದೆ. ಶತ್ರುವಿನ ಹೆಸರನ್ನು ನೆನೆದು ಅವನನ್ನು ಜಿಂಕೆ ಮರಿ ಎಂದು ಭಾವಿಸಿ ತಾನು ನರಸಿಂಹನೆಂದು ಆ ಜಿಂಕೆಯ ಮರಿಯನ್ನು ತಾನು ಹಿಡಿದಂತೆ ಕಲ್ಪಿಸಿಕೊಂಡು ಆಕಾಶದಿಂದ ಭೂಮಿಗೆ ಎಸೆಯುವಂತಹ ಕಲ್ಪನೆಗಳಿವೆ (**ಆತ್ಮಾನಂ ನೃಹರಿರೂಪಂ ಧ್ಯಾತ್ವಾ ಶತ್ರುಂ ಹರಿಣಶಿಶುಂ ಚ ಧ್ಯಾತ್ವಾ ಆತ್ಮಾನಾ ತಂ ಗೃಹೀತಂ ಚ ಧ್ಯಾತ್ವಾ ತಂ ಶತ್ರುಂ ಗಗನತಃ ಕ್ಷಿತೌ ದೂರತಃ ಕ್ಷಿಪ್ತಂ ಚ ನಿತ್ಯಶೋಧ್ಯಾತ್ವಾ ಜಪೇತ್**) ಶತ್ರುವಿನ ಹೆಸರನ್ನು ಬರೆದಿಟ್ಟು, ಆ ಕಡೆ ಕ್ರೂರನೋಟ ಬೀರುತ್ತಾ, ನರಸಿಂಹಮಂತ್ರವನ್ನು ಪಠಿಸುತ್ತಾ ಇದ್ದರೆ ಏಳುದಿನಗಳಲ್ಲಿ ಶತ್ರು ಸಾಯುತ್ತಾನೆ ಎಂದು ಹೇಳಲಾಗುತ್ತದೆ. ಹಿಂದೆ ಯುದ್ಧಕ್ಕೆ ಹೊರಡುವ ಮುನ್ನ ಶತ್ರುಗಳ ನಾಶಕ್ಕೆಂದು ನರಸಿಂಹ ಮಂತ್ರ ಪ್ರಯೋಗವನ್ನು ಮಾಡುತ್ತಿದ್ದರು. ಈ ಪ್ರಯೋಗದಲ್ಲಿ ಸೌದೆಯನ್ನು ರಾಶಿಮಾಡಿ ಬೆಂಕಿ ಹಚ್ಚಿ ಉಗ್ರರೂಪ, ಮಹಾದಂಷ್ಟ್ರ, ಮಹೋತ್ಸಾಹ, ಅಪರಾಜಿತ, ಜಯಂತ, ಜ್ವಾಲಾಮುಖಿ, ಅಗ್ನಿನೇತ್ರ, ದೀಪ್ತಜಿಹ್ವ, ವಿದಾರಣ, ವಜ್ರನಖ, ಭೀಮ ಭೀಷಣ ಮುಂತಾದ ಹೆಸರುಗಳನ್ನು ನ್ಯಾಸದಲ್ಲಿ ಬಳಸಲಾಗುತ್ತದೆ.

ಶ್ರೀ ನಾರಸಿಂಹ ಮಹಾಮಂತ್ರದ ವ್ಯಾಪಕ ಬಳಕೆ ಅಭಿಚಾರದಲ್ಲಿದ್ದು ಆ ಬಗ್ಗೆ ವಿಪುಲವಾದ ಸಾಹಿತ್ಯವು ಹಸ್ತಪ್ರತಿಗಳಲ್ಲಿ ಅಡಗಿಕೊಂಡಿದೆ. ಅದರೊಂದಿಗೇ ಸ್ವಾಮಿಯ ವಿವಿಧ ರೂಪಕಲ್ಪನೆಗಳೂ ಸೇರಿಕೊಂಡಿವೆ.

***ಇತಿ ಶ್ರೀ ಬ್ರಾಹ್ಮೀಯೇ ಚಿತ್ರಕರ್ಮಶಾಸ್ತ್ರೇ ಪ್ರಾದುರ್ಭಾವಕಾಂಡೇ ನಾರಸಿಂಹ ಲಕ್ಷಣಂ ನಾಮ ಚತುರ್ಥೋಽಧ್ಯಾಯಃ***

ಅಥ ಪಂಚಮೋऽಧ್ಯಾಯಃ

# ವಾಮನ ಲಕ್ಷಣಮ್

ಸಾಂಪ್ರತಂ ವಾಮನಸ್ಯಾಹಂ ವಕ್ಷ್ಯೇ ಮಾನಮಥ ಶೃಣು
ಉಷ್ಣೀಷಾತ್ಪಾದ ಪರ್ಯಂತಂ ದ್ವಿ ತ್ರಿಂಶದ್ಬೇದ ಮಾತ್ರಕಮ್ ॥ ೧ ॥
ಕೋಲಕಂ ತ್ರಿಯವೇನೋನಂ ಭಾಗಂ ತಸ್ಮಾದ್ಯ(ವೋ ನಕಮ್)
ಸಮಂ (ವಹ್ನ್ಯೋ ರ್ಧ್ವಕಂ) ಮಾತ್ರಂ ದ್ವಿತಯಂ ಸಪ್ತಮಾತ್ರಕಮ್ ॥ ೨ ॥
ತುರ್ಯಂ ಚ ತತ್ಸಮಂ ಸೂರ್ಯಮಾತ್ರಂ ಮಾತ್ರ ದ್ವಯಂ ಮುಖಮ್
ಕೋಲಕಂ + ಕ್ರಮಾನ್ಮೂರ್ಧ್ನಿ ಕೇಶಾಂತಂ ದೃಕ್ ಪುಟಾಂತಕಮ್ ॥ ೩ ॥
ಹನುರ್ಗಳಂ ಚ ಕರ್ಣಂ ಚ ಹೃನ್ನಾಭೇ ರ್ಮೇಢ್ರ ಮೂಲಕಮ್
ಊರು ರ್ಜಾನು ತಥಾ ಜಂಘಾ ತಲಂ ಸ್ಯಾತ್ ಪಂಚಕೋಲಕಮ್ ॥ ೪ ॥
ತಲಾಯಾಮಂ ದಶಾಂಗುಲ್ಯಂ ಮುಖಸ್ಯ ವಿಪುಲಂ ಭವೇತ್
ಯವಾರ್ಧೋನ ನ ಕಲಾ ನೇತ್ರಾತ್ ಭ್ರೂಸ್ತತಸ್ತಸ್ಮಾತ್ತು ತಾಪತೀ ॥ ೫ ॥

ಎಲೈ ಬ್ರಹದೇವನೇ, ಈಗ ವಾಮನನ ಲಕ್ಷಣವನ್ನು ಹೇಳುತ್ತೇನೆ. ಕೇಳು. ಉಷ್ಣೀಷದಿಂದ ಪಾದತಲದವರೆವಿಗೂ ೬೪ (ಉತ್ತಮ ಪಂಚತಾಲ) ಅಂಗುಳಗಳಿರುತ್ತದೆ. ಅದರಲ್ಲಿ ಉಷ್ಣಿಷದಿಂದ ಕೇಶಾಂತದವರೆವಿಗೂ ಎತ್ತರ ೧ ಅಂಗುಳ ೫ಯವ. ಅಲ್ಲಿಂದ ನೇತ್ರಸೂತ್ರದವರೆವಿಗೂ ಎತ್ತರವು ೩ ಅಂಗುಳ ೭ಯವ. ನೇತ್ರ ಸೂತ್ರದಿಂದ ನಾಸಾ ಪುಟ ಸೂತ್ರದವರೆವಿಗೂ ಇರುವ ಎತ್ತರವು ೪ ಅಂಗುಳ. ಅಲ್ಲಿಂದ ಚುಬುಕ ೩ ಅಂಗುಳ ೭ಯವ. ಅಲ್ಲಿಂದ ಗಳವು ೩ ಯವ. ಅಲ್ಲಿಂದ ಕಂಠವು ೧ ಅಂಗುಳ ೨ಯವ. ಅಲ್ಲಿಂದ ಹೃದಯಾಂತವು ೭ ಅಂಗುಳ. ಅಲ್ಲಿಂದ ನಾಭಿಯು ೭ ಅಂಗುಳ. ಮೇಢ್ರವು ೭ ಅಂಗುಳ. ಊರು (ತೊಡೆ) ೧೨ ಅಂಗುಳ. ಜಾನು (ಮೊಣಕಾಲು) ೨ ಅಂಗುಳ. ಅಲ್ಲಿಂದ ಜಂಘ (ಮುಂಗಾಲು) ೧೨ ಅಂಗುಳ. ಅಲ್ಲಿಂದ ಪಾದವು ೨ ಅಂಗುಳ ಎತ್ತರವಿರುತ್ತದೆ. ಪಾದದ ಉದ್ದವು ೧೦ ಅಂಗುಳ

ಕೇಶಾಂತ (೧.೫) + ನೇತ್ರಸೂತ್ರ (೩.೭)+ ಪುಟಸೂತ್ರ (೪) + ಚುಬುಕ (೩.೭) + ಗಳ (೦.೩) + ಕಂಠ (೦.೨) + ಹೃದಯಾಂತ (೭) + ನಾಭಿ (೭) + ಮೇಢ್ರ (೭) + ಊರು (೧೨) + ಜಾನು (೨) + ಜಂಘ (೧೨) + ಪಾದ (೨) = ೬೪ ಅಂಗುಳ

ದೃಶಸ್ತಾರಾಯ ತೌ ಸ್ಯಾತಾಂ ಷಡ್ಭಿಶ್ಚೋಡಷಭಿರ್ಯವೈಃ ॥ ೬ ॥
ಯವೋನ ಕೋಲಕಂ ನೇತ್ರಾಂತರಂ ಶ್ರೋತ್ರದೃಶೋರಪಿ
ಅಂತರಂ ಪಂಚಮಾತ್ರಂ ಸ್ಯಾತ್ (ಕಲಾ) ಶ್ರೋತ್ರಸ್ಯ ವಿಸ್ತೃತಿಃ ॥ ೭ ॥
ತಾರ ದ್ವಿಗುಣಾಯತಾ ನಾಳಾಲಂಬಂ (ಸ್ಯಾತು) ತತ್ಸಮಮ್
ಮಾತ್ರಾರ್ಧ ಮಾತ್ರ ವಿಸ್ಕೃತೌ ನಾಳೌ ಪೂರ್ವಾಪರೌ ಮತೌ ॥ ೮ ॥
ನಾಸಾಗ್ರೇ ವಿಪುಲಂ ಮಾತ್ರ ದ್ವಯಮರ್ಧಂ ತದರ್ಧಕಮ್
ಸ್ಯಾತಾಂ ನಾಸಾ ಮಧ್ಯ ಮೂಲು (ನಾಸಾಗ್ರಮಧ್ಯಂ) ತ್ರಿಯವಾಂಗುಲ
ಮುನ್ನತಮ್ ॥ ೯ ॥
ನಾಸಾಗ್ರಂ ಗೋಜಿ ಮೂಲಂ ಸ್ಯಾತ್ ದ್ವಿಯವೋನಂ ದ್ವ್ಯಂಗುಲಂ ತತಃ
(ಗೋಜಿ ಮೂಲಂ ತದ) ರ್ಧಂ ಸ್ಯಾಧರಸ್ಯ (ವಿಶಾಲಕಮ್) ॥ ೧೦ ॥
ದ್ವಿಗುಣಂ ತಸ್ಯ ದೀರ್ಘಂ ಸ್ಯಾತ್ ದೀರ್ಘಂ ದ್ವಿಗುಣ ಮಾಸ್ಯಕಮ್
ಯವಾ ॥ ೧೧ ॥
ಸಷಡ್ಯವಾಂಗುಲಾ ಯಾಮಮಧರೋಷ್ಠಾದಧೋ ಹನು
ಸಷಡ್ಯವ ಕಲಾ ಕರ್ಣಾತ್ ಹನುಪರ್ಯಂತ ನಿರ್ಗಮಮ್ ॥ ೧೨ ॥

ದ್ವಿಸಪ್ತಾಂಗುಲ ದೋರ್ದಂಡಂ ದಶಮಾತ್ರಂ ಪ್ರಕೋಷ್ಠಕಮ್ ॥ ೧೩ ॥
ಮಣಿಬಂಧಾತ್ ತಲಂ ಭಾಗಂ ತಸ್ಮಾನ್ಮಧ್ಯಾಂಗುಲೀ ಸಮಾ
ಅರ್ಧಾಂಗುಲೋ ನದೀರ್ಘಾ ಸ್ಯಾತ್ ತತ್ಪ್ರದೇಶಿನ್ಯನಾಮಿಕಾ ॥ ೧೪ ॥
ಕಲಾಂಗುಲಾಯ ತೇಂಗುಷ್ಠ ಕನೀಯಸ್ಯೋರ್ವಿಸ್ತೃತಿಸ್ಮೃತೌ
ನವ ಷಟ್ ಸಪ್ತ ಷಟ್ ಪಂಚ ಯವ ತಾರಂ ಕ್ರಮಾದ್ಭವೇತ್ ॥ ೧೫ ॥

ಕಲಾದ್ವಯಂ ತದ್ವಿಪುಲಂ ತದ್ಘನಂ ಷಡ್ಯವಾಂಗುಲಮ್ ॥ ೧೬ ॥

ಮುಖದ ಅಗಲವು ೧೦ ಅಂಗುಲ. ಕಣ್ಣಿನ ಹುಬ್ಬುಗಳು ೧ ಅಂಗುಳ ೬ ಯವ. ಅಲ್ಲಿಂದ ಕೇಶಾಂತದವರೆವಿಗೂ ಅಗಲವು ೧ ಅಂಗುಳ ೬ ಯವ. ಹಣೆಯ ಅಗಲ ೮ ಅಂಗುಳ. ಕಣ್ಣುಗಳ ಅಗಲ ೬ಯವ, ಉದ್ದ ೧೬ಯವ (ಎಂದರೆ ೨ ಅಂಗುಳ). ಕಣ್ಣಿನ ಮಧ್ಯಭಾಗದ ಅಗಲವು ೧ ಅಂಗುಳ ೭ ಯವ. ಕಿವಿಯ ತಳಭಾಗದಿಂದ ಮೊದಲುಗೊಂಡು ನೇತ್ರಾಂತದವರೆವಿಗೂ ನಡುಭಾಗ ೫ ಅಂಗುಳ. ಕಿವಿಯ ಅಗಲ ೨ ಅಂಗುಳ ; ಉದ್ದ ೪ ಅಂಗುಳ. ಕರ್ಣನಾಳದ (ಎಂದರೆ ಕಿವಿಯಲ್ಲಿ ಓಲೆ ಇತ್ಯಾದಿಗಳನ್ನು ಅಲಂಕರಿಸುವ ಭಾಗ) ಉದ್ದವು ೪ ಅಂಗುಳ. ಪೂರ್ವನಾಳದ ಅಗಲ ೪ ಯವ. ಅಪರ ನಾಳದ ಅಗಲ ೧ ಅಂಗುಳ. ನಾಸಿಕದ ಅಗಲವು ಅಗ್ರದಲ್ಲಿ (ತುದಿಯಲ್ಲಿ) ೨ ಅಂಗುಳ. ಮಧ್ಯದಲ್ಲಿ ೧ ಅಂಗುಳ. ಕೊನೆಯಲ್ಲಿ ೪ ಯವ ಇರುತ್ತದೆ. ಮೂಗಿನ ಕೆಳಗೆ ಮತ್ತು ಮೇಲ್ತುಟಿಯ ಮಧ್ಯ ಭಾಗದಲ್ಲಿರುವ ಭಾಗವನ್ನು ಗೋಜಿ ಎನ್ನಲಾಗುತ್ತದೆ. ಈ ಗೋಜಿಯ ಮೇಲ್ತುದಿಯಿಂದ ನಾಸಾಗ್ರದ ಎತ್ತರವು ೧ ಅಂಗುಳ ೩ ಯವ. ಗೋಜಿಯ ಮೂಲದ ಅಗಲ ೧ ಅಂಗುಳ ೬ ಯವ. ತುಟಿಯ ಎತ್ತರ ಇದರಲ್ಲಿ

ಅರ್ಧ, ಎಂದರೆ ೭ ಯವ. ತುಟಿಯ ಅಗಲವು ಇದರ ಎರಡರಷ್ಟು, ಎಂದರೆ ೧ ಅಂಗುಳ ೬ ಯವ. ಬಾಯಿಯ ಅಗಲವು ತುಟಿಯ ಅಗಲದ ಎರಡರಷ್ಟು ಇರುತ್ತದೆ. ಎಂದರೆ ೩ ಅಂಗುಳ ೪ ಯವ. ಬಾಯಿಯ ಮೇಲ್ತುಟಿಯ ಎತ್ತರವು ೩ ಯವ. ಪಾಲಿಕಾ (ಎಂದರೆ ತುಟಿಯ ಅಂಚು) ೧ ಯವ. ಕೆಳತುಟಿಯ ಅಡಿಯಲ್ಲಿ ತುಟಿ ಅಗಲವು ೧ ಅಂಗುಳ ೬ ಯವ. ಕಿವಿಯಿಂದ ಕೆಳತುಟಿಗಳ ವರೆವಿಗೂ ೨ ಅಂಗುಳ ೬ ಯವ. ಕಂಠದ ಅಗಲ ಹನುವಿನ ರೇಖೆಯ ಮೇಲೆ ೮ ಅಂಗುಳ. ಹಿಕ್ಕಾಸೂತ್ರ (ಕತ್ತಿನ ಕೆಳಭಾಗ ಮತ್ತು ಹೆಗಲಿನ ಮೇಲ್ಭಾಗದ ಮೂಲಕ ಹಾದು ಹೋಗುವ ರೇಖೆಯನ್ನು ಹಿಕ್ಕಾಸೂತ್ರ ಎನ್ನುತ್ತಾರೆ) ದಿಂದ ಮೇಲ್ತೋಳಿನ ಉದ್ದವು ೧೪ ಅಂಗುಳ. ಮುಂಗೈ ಉದ್ದವು ೧೦ ಅಂಗುಳ. ಅಂಗೈ (ಮಣಿಕಟ್ಟಿನಿಂದ ಮೊದಲ್ಗೊಂಡು ಮಧ್ಯಬೆರಳಿನ ಅಡಿಯತನಕ ಇರುವ ಭಾಗ) ಉದ್ದವು ೪ ಅಂಗುಳ. ಮಧ್ಯ ಬೆರಳಿನ ಉದ್ದವು ೪ ಅಂಗುಳ. ತೋರು ಬೆರಳು (ತರ್ಜನಿ) ಮತ್ತು ಉಂಗುರ ಬೆರಳು (ಅನಾಮಿಕಾ) ಗಳ ಉದ್ದವು ೩ ಅಂಗುಳ ೪ ಯವ. ಹೆಬ್ಬೆರಳು ಮತ್ತು ಕೊನೆಯ ಬೆರಳುಗಳ ಉದ್ದವು ೨ ಅಂಗುಳ. ಹೆಬ್ಬೆರಳಿನ ಅಗಲವು ೯ ಯವ. ತೋರು ಬೆರಳಿನ (ತರ್ಜನಿಯ) ಅಗಲವು ೬ ಯವ. ನಡು ಬೆರಳಿನ ಅಗಲವು ೭ ಯವ. ಉಂಗುರ ಬೆರಳಿನ (ಅನಾಮಿಕಾದ) ಅಗಲವು ೬ ಯವ. ಕಿರುಬೆರಳಿನ ಅಗಲವು ೫ ಯವ. ಅಂಗೈ ಅಗಲವು ೪ ಅಂಗುಳ. ಅಂಗೈ ದಪ್ಪವು ೧ ಅಂಗುಳ ೬ ಯವ.

ಅಗ್ರತಾರ ತ್ರಿಕಾಂಶೇ ತು ದ್ವ್ಯಂಶಂ ಸ್ಯಾನ್ನಖ ವಿಸ್ತರಮ್
ಸ್ವತಾರಾತ್ ದ್ವಿಯವಾಧಿಕ್ಯ ನಖಾಯಾಮಾ ಪ್ರಕೀರ್ತಿತಾ ॥ ೧೭ ॥
ದ್ವಿಮಾತ್ರಾರ್ಧಂ ತ್ರಿಮಾತ್ರಾರ್ಧಂ ಚತುರ್ಮಾತ್ರಂ ಷಡಂಗುಳಮ್
ಸಷಡ್ಯವಂ ವಿಶಾಲಂ ಸ್ಯಾತ್ ಕ್ರಮೇಣ ಮಣಿ ಬಂಧನಮ್ ॥ ೧೮ ॥
ಪ್ರಕೋಷ್ಠಂ ಕೂರ್ಪರಂ ಬಾಹುಮೂಲಂ ಸಾಷ್ಟಾದಶಾಂಗುಳಮ್
ವಕ್ಷಸ್ಥಲಸ್ಯ ವಿಪುಲಂ ಮಧ್ಯೋದರಂ (ಮುಖಾಂಗುಳಮ್) ॥ ೧೯ ॥
ಕಲಾಮುಖಂ ಶ್ರೋಣೀ ವಿಸ್ತಾರಂ ಕಟಿತಾರಂ ಷೋಡಶಾಂಗುಳಮ್
ಅಂಗುಳೋನಂ ತು ಮೂಲೋರೌ ಮಧ್ಯ ಜಾನು ವಿಶಾಲಕಮ್ ॥ ೨೦ ॥
ಸಪ್ತಾಂಗುಲಂ ಸ್ಯಾತ್ ಪಂಚಾರ್ಧಾಂಗುಲ ಜಂಘಾ ತತಂ ಮತಂ
ನಳಕಾ ವಿಪುಲಂ ಸಾರ್ಧರುದ್ರಾಕ್ಷಂ ಪಂಚಮಾತ್ರಕಮ್ ॥ ೨೧ ॥
ಸಚತುರ್ಯವ ಮಾತ್ರಸ್ಯ ತಲಸ್ಯ ವಿಪುಲಂ ಭವೇತ್
ಕಲಾಂಗುಲಾಯತಾಂಗುಷ್ಠಂ ತರ್ಜನೀ ತತ್ಸಮಾಯತಾ ॥ ೨೨ ॥
ದೀರ್ಘಾ (ರ್ಧ) ತತಮಂಗುಷ್ಠಂ ತರ್ಜನೀ ತಾರ ಮಂಗುಳಮ್
ಮಧ್ಯಮಾದಿ ಕನಿಷ್ಠಾಂತವೇಕೈಕಂ ತ್ರಿಯವೋನಕಮ್ ॥ ೨೩ ॥
(ಪೂರ್ವೋಕ್ತಾನಾಂ) ವಿಶಾಲೇತು ಯವ ಹೀನಂ ತು ಪೂರ್ವವತ್
ಅಗ್ರತಾರಂ ಚತುರ್ಭಾಗಂ ದ್ವಿಭಾಗಂ ನಖ ವಿಸ್ತರಮ್ ॥ ೨೪ ॥

ಬೆರಳುಗಳ ತುದಿಗಳನ್ನು ಮೂರು ಮೂರುಸಮ ಭಾಗಗಳನ್ನಾಗಿ ವಿಭಜಿಸಿ ಅದರಲ್ಲಿ ಎರಡು ಭಾಗಗಳಷ್ಟು ಆಯಾ ಬೆರಳುಗಳ ಉಗುರುಗಳ ಅಗಲವನ್ನಾಗಿ ರೂಪಿಸಬೇಕು.

ಉಗುರುಗಳ ಅಗಲಕ್ಕೆ ೨ ಯವಗಳನ್ನು ಸೇರಿಸಿದರೆ ಆಯಾ ಉಗುರುಗಳ ಉದ್ದವು ಬರುತ್ತದೆ. ಮಣಿಕಟ್ಟಿನ ಅಗಲವು ೨ ಅಂಗುಳ ೪ ಯವ. ಮುಂದೋಳಿನ ಅಗಲವು ೩ ಅಂಗುಳ ೪ ಯವ. ಮೊಣಕೈ ಅಗಲವು ೪ ಅಂಗುಳ. ಮೇಲ್ತೋಳಿನ ಅಡಿಭಾಗದ ಅಗಲವು ೬ ಅಂಗುಳ ೬ ಯವ. ವಕ್ಷಸ್ಥಳದ ಅಗಲವು ೧೮ ಅಂಗುಳ. ಹೊಟ್ಟೆಯ ಮಧ್ಯಭಾಗದ ಅಗಲವು ೧೨ ಅಂಗುಳ. ನಾಭಿಯ ಕೆಳಭಾಗದ ಅಗಲವು ೧೪ ಅಂಗುಳ. ಸೊಂಟದ ಅಗಲವು ೧೬ ಅಂಗುಳ. ಊರು ಮೂಲ ತೊಡೆಯ ಪ್ರಾರಂಭದಲ್ಲಿ ಅಗಲವು ೧೧ ಅಂಗುಳ. ಮೊಣಕಾಲಿ (ಜಾನು) ನ ಮಧ್ಯಭಾಗದ ಅಗಲವು ೭ ಅಂಗುಳ. ಜಂಘ (ಮುಂಗಾಲು) ದ ಅಗಲವು ೫ ಅಂಗುಳ ೪ ಯವ. ಪಾದ ಕೀಲಿನ ಮೇಲೆ ಅಗಲವು ೩ ಅಂಗುಳ ೪ ಯವ. ಪಾದದ ಮುಂಭಾಗದ ಅಗಲವು ೫ ಅಂಗುಳ ೪ ಯವ. ಕಾಲಿನ ಹೆಬ್ಬೆರಳಿನ ಉದ್ದವು ೨ ಅಂಗುಳ. ಇದರ ಅಗಲವು ಉದ್ದದಲ್ಲಿ ಅರ್ಧಭಾಗವಾಗಿರುತ್ತದೆ. ಎಂದರೆ ೧ ಅಂಗುಳ. ಹೆಬ್ಬೆರಳಿನ ಪಕ್ಕದ ಬೆರಳಿನ ಉದ್ದವು ೨ ಅಂಗುಳ ಮತ್ತು ಅಗಲವು ೧ ಅಂಗುಳ. ಪಾದದ ಮಧ್ಯ ಬೆರಳಿಂದ ಮೊದಲ್ಗೊಂದು ನಂತರದ ಬೆರಳುಗಳು ಹೆಬ್ಬೆರಳಿನ ಪಕ್ಕದ ಬೆರಳಿಗಿಂತಲೂ ಕ್ರಮವಾಗಿ ಒಂದೊಂದು ಮೂರು ಯವಗಳಷ್ಟು ಕಡಿಮೆಯಾಗುತ್ತಾ ಸಾಗುತ್ತದೆ. ಎಂದರೆ ಮಧ್ಯ ಬೆರಳು (ಮೂರನೆಯ ಬೆರಳು) ೧ ಅಂಗುಳ ೫ ಯವ, ನಾಲ್ಕನೆಯ ಬೆರಳು ೧ ಅಂಗುಳ ೨ ಯವ, ಕಿರುಬೆರಳು (ಐದನೆಯ ಬೆರಳು) ೭ ಯವ ಉದ್ದವಾಗಿರುತ್ತದೆ. ಈ ಮೂರು ಬೆರಳುಗಳ ಅಗಲಗಳು ಎರಡನೆಯ ಬೆರಳಿನ ಅಗಲದಲ್ಲಿ ಒಂದೊಂದೇ ಯವದಷ್ಟು ಕಡಿಮೆಯಾಗುತ್ತಾ ಬರುತ್ತದೆ. ಎಂದರೆ ಮೂರನೆಯ ಬೆರಳಿನ ಅಗಲವು ೭ ಯವ. ನಾಲ್ಕನೆಯ ಬೆರಳಿನ ಅಗಲವು ೬ ಯವ. ಐದನೆಯ ಬೆರಳಿನ ಅಗಲವು ೫ ಯವ ದಷ್ಟಿರುತ್ತದೆ. ಆಯಾ ಬೆರಳುಗಳ ಅಗಲದ ಮೂರರಷ್ಟು ಆ ಬೆರಳುಗಳ ಸುತ್ತಳತೆಯಾಗಿರುತ್ತದೆ.

**ಮಿಶ್ರಾರಾರ್ಧ ಸಮಾಯಾಮಾಃ ಸ್ಮೃತಾಃ ಪಾದಾಂಗುಲೀನಖಾಃ**
**ಪರಿಮಾಣಮಿತಿ ಜ್ಞೇಯ ಮಂಗುಲೀ ವಿಸ್ತೃತಿತ್ರಯಮ್ ‖ ೨೫ ‖**
**ಅನುಕ್ತಮೇವಮೂಹ್ಯಂ ಯತ್ ವಿದ್ವದ್ಭಿರ್ವಿ ಪುಲೋದಯಮ್**
**ತಪ್ತ ಚಾಮೀಕರಪ್ರಖ್ಯೋ ರಕ್ತ ವಸ್ತ್ರಶ್ಚತುರ್ಭುಜಃ ‖ ೨೬ ‖**
**ಶಂಖಚಕ್ರ ಗದಾಧಾರೀ ಕೃಷ್ಣಾ ಜಿನೋಪವೀತಕಃ**
**ಉಷ್ಣೀಷ ಪಟ್ಟ ಸನ್ನದ್ಧ ಶಿರಸ್ಕೋ ರತ್ನ ಕುಂಡಲೀ ‖ ೨೭ ‖**
**ರಕ್ತಹಾರಂ ತು ಹಾರಂ ಸ್ಯಾತ್ ವಲಯಂ ಬಾಹು ಮಂಡಲಮ್**
**ರತ್ನಾಲಂಕೃತ ಕಂಜಾತ್ಮೋ (ಕನ್ನಾತ್ಮೋ) ದರ ಬಂಧನ ಮೇವ ಹೀ ‖ ೨೮ ‖**
**ಕಟಿಬಂಧ ಸ್ತಥಾ ಪಾದಕಟಕಂ ಪಾದ ಮಂಡನಮ್**
**ರತ್ನಕಂಠ್ಯಾದಿ ಭಿ (ಅದ್ರಕಂ ಕಂಠೀ ಸ್ಯಾತ್) ಸ್ಸರ್ವೈ ರ್ಭೂಷಣೈರಪಿ ಭೂಷಯೇತ್ ‖ ೨೯ ‖**
**ಅಥ ಕೌಪೀನ ವಾಸಸ್ಕ ಶ್ಶಿಖಯಾನ್ವಿತ ಮಸ್ತಕಃ**
**ಕೃಷ್ಣಾ ಜಿನಧರ ಸ್ಸೋಪವೀತೀ ಮೌಂಜೀಕ ಮೇಖಲಃ ‖ ೩೦ ‖**
**ಕಮಂಡಲುಧರಃ ಕೂರ್ಚಧಾರೀ ಪಾದುಕವಾನ್ (ಬಾಹಲಧನು) ತತಃ**

**ಸೂಚೀ ಸ್ಥಾನಂ ದೈವೀಕಾಂಶೇ ಬ್ರಹ್ಮ ಭಾಗೇ ತು ಚಾಸನಮ್**

**ಸ್ಥಾನಕಂ ಸಮಪಾದಂ ಚ ದೈವೀಕೇ ಬ್ರಾಹ್ಮಮಾಸನಮ್ ॥ ೩೧ ॥**

ಪಾದದ ಬೆರಳುಗಳ ತುದಿಯ ಅಗಲಗಳನ್ನು ನಾಲ್ಕು ಸಮ ಭಾಗಗಳಾಗಿ ಮಾಡಿದರೆ ಅದರಲ್ಲಿ ಎರಡು ಭಾಗಗಳಷ್ಟು ಆಯಾ ಬೆರಳುಗಳ ಉಗುರುಗಳ ಅಗಲವಾಗಿರುತ್ತದೆ. ಅಗಲದಲ್ಲಿ ಅರ್ಧಭಾಗದಷ್ಟು ಆಯಾ ಬೆರಳುಗಳಲ್ಲಿಯ ಉಗುರುಗಳ ಉದ್ದವಾಗಿರುತ್ತದೆ. ಪ್ರತಿಯೊಂದು ಕಾಲ್ಬೆರಳಿನ ಸುತ್ತಳತೆಯು ಪಾದದ ಇಳುಜಾರನ್ನು ಹೊಂದಿಕೊಂಡು, ಭೂಮಟ್ಟಕ್ಕೆ ಹೊಂದಿಕೆಯಾಗುವಂತೆ, ಆಯಾ ಬೆರಳಿನ ಅಗಲಕ್ಕೆ ಹೊಂದುವಂತೆ ರೂಪಿಸಬೇಕು. ಇದುವರೆವಿಗೂ ಹೇಳದೆ ಇರುವ ಅಳತೆಗಳನ್ನು ಶಿಲ್ಪಿಯು ಊಹಿಸಿಕೊಂಡು ರೂಪಿಸಿ ಮೂರ್ತಿಯು ಸುಂದರಾಗಿರುವಂತೆ ಮಾಡಬೇಕು.

ಕರಗಿಸಿದ ಚಿನ್ನದ ವರ್ಣದಂತೆ ಮೈಕಾಂತಿಯುಳ್ಳ, ಕೆಂಪಾದ ವಸ್ತ್ರವನ್ನು ಧರಿಸಿರುವ, ನಾಲ್ಕು ಭುಜಗಳನ್ನು ಪಡೆದಿದ್ದು ಶಂಖ, ಚಕ್ರ, ಗದೆಗಳನ್ನು ಆಯುಧಗಳಾಗಿ ಧರಿಸಿದ್ದು, ಕೃಷ್ಣಾಜಿನ (ಜಿಂಕೆಯ ಚರ್ಮ), ಯಜ್ಞೋಪವೀತಗಳನ್ನು ಧರಿಸಿದ್ದು, ತಲೆಯ ಮೇಲಿನ ರತ್ನಗಳಿಂದ ಅಲಂಕೃತವಾಗರುವ ರುಮಾಲನ್ನು ಸುತ್ತಿಕೊಂಡಿದ್ದು ಕೊರಳಿನಲ್ಲಿ ಕೆಂಪು ಪಚ್ಚೆಗಳ ಹಾರಗಳನ್ನು, ತೋಳಿನಲ್ಲಿ ತೋಳ್ಬಂದಿಗಳನ್ನು, ತಾವರೆಯ ಹೂವಿನಂತಹ ಮುಖಪುಟವಿರುವ ನವರತ್ನ ಖಚಿತವಾದ ಉದರ ಬಂಧನವನ್ನು, ಅದೇ ರೀತಿಯಾಗಿ ಸುಂದರವಾಗಿರುವ ಕಟಿಬಂಧ (ವಡ್ಯಾಣ)ವನ್ನು, ಪಾದದಲ್ಲಿ ಅಂದಿಗೆ ಮುಂತಾದ ಆಭರಣಗಳನ್ನು ಧರಿಸಿ ಸರ್ವಾಭರಣಗಳಿಂದ ವಾಮನ ಮೂರ್ತಿಯು ಅಲಂಕೃತನಾಗಿರುತ್ತಾನೆ. ತಲೆಯಲ್ಲಿ ಶಿಖೆ ಇರುತ್ತದೆ. ಮೌಂಜಿ ಎಂಬ ಹುಲ್ಲಿನಿಂದ ತಯಾರಿಸಿರುವ ಕಟಿ ಬಂಧವನ್ನು ಧರಿಸಿದ್ದು ಕೌಪೀನ ಧಾರಿಯಾಗಿರುವ ಈ ಬ್ರಹ್ಮಚಾರಿಯು. ಒಂದು ಕೈಯ್ಯಲ್ಲಿ ಕಮಂಡಲವನ್ನು ಇನ್ನೊಂದು ಕೈಯ್ಯಲ್ಲಿ ದರ್ಭೆಗಳಲ್ಲಿ ಮಾಡಿರುವ ಕೂರ್ಚೆಯನ್ನು ಧರಿಸಿರುತ್ತಾನೆ, ಪಾದಗಳಲ್ಲಿ ಪಾದುಕೆಗಳನ್ನು ಧರಿಸಿರುವ ವಾಮನಮೂರ್ತಿಯು ದೈವ ಭಾಗದಲ್ಲಿ ಸೂಚೀಸ್ಥಾನದಲ್ಲಿ ನಿಂತಿರುತ್ತಾನೆ. ಬ್ರಹ್ಮ ಭಾಗದಲ್ಲಾದರೆ ಕುಳಿತಿರಬಹುದು. ನಿಂತಿರುವಾಗ ಸಮಪಾದದಲ್ಲಿಯೂ, ಬ್ರಹ್ಮಭಾಗದಲ್ಲಿ ಕುಳಿತಿರುವಾಗ ಬ್ರಹ್ಮಾಸನ (ಪದ್ಮಾಸನ)ದಲ್ಲಿರುತ್ತಾನೆ.

## *ವಿಶೇಷ ವಿವರ*

ವಿಷ್ಣುವಿನ ಐದನೆಯ ಅವತಾರವಾದ ಈ ವಾಮನಾವತಾರವು ಇಂದ್ರನ ರಕ್ಷಣೆಗಾಗಿ, ಬಲಿ ವೈರೋಚನ ಎಂಬ ರಾಕ್ಷಸನ ಬಂಧನಕ್ಕಾಗಿ ಉಂಟಾಯಿತು. ಭಾಗವತ ಪುರಾಣದ ಪ್ರಕಾರ ಇದು ವಿಷ್ಣುವಿನ ೧೫ನೆಯ ಅವತಾರ (ಭಾಗವತ ಪುರಾಣ ೧ : ೩ : ೧೯)

ವೈದಿಕ ಸಾಹಿತ್ಯದಲ್ಲಿ ವಾಮನಾವತಾರದ ಕಲ್ಪನೆಯು ಅಸ್ಪಷ್ಟರೂಪದಲ್ಲಿ ಋಗ್ವೇದದಲ್ಲಿ ಕಾಣಸಿಗುತ್ತದೆ :

ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಮ್ । ಸಮುಳಹಮಸ್ಯ ಪಾಂಸುರೇ ॥

(ಋಗ್ವೇದ ೧ : ೨೨ : ೧೭ - ೧೮)

(ವಿಷ್ಣುವು ಸಮಸ್ತ ಸೃಷ್ಟಿಯನ್ನೂ ಮೂರು ಹೆಜ್ಜೆಗಳಲ್ಲಿ ವ್ಯಾಪಿಸಿಕೊಂಡನು)

ಆದರೆ ಋಗ್ವೇದದಲ್ಲಿ ವಿಷ್ಣುವು ಸ್ವಂತತ್ರ ದೇವತೆಯಾಗಿ ನಿರ್ದೇಶಿತವಾಗಿಲ್ಲ. ವಿಷ್ಣುವನ್ನು ಸೂರ್ಯದೇವತೆಯ ಒಂದು ರೂಪವಾಗಿಯೇ ವೇದವು ಹೇಳುತ್ತದೆ. ಈ ವಿಷ್ಣುರೂಪೀ ಸೂರ್ಯದೇವನ ವರ್ಣನೆ ಮಾಡುವ ಸಂದರ್ಭದಲ್ಲಿ ಆತನು ಮೂರು ಹೆಜ್ಜೆಗಳಿಂದ ಪೃಥ್ವಿಯನ್ನೆಲ್ಲಾ ವ್ಯಾಪಿಸಿದ ನಿರ್ದೇಶನವು ಋಗ್ವೇದದಲ್ಲಿ ದೊರೆಯುತ್ತದೆ.

ನಿರುಕ್ತದಲ್ಲಿ ವಿಷ್ಣುವಿನ ಮೂರು ಹೆಜ್ಜೆಗಳಿಗೆ ಅರ್ಥ ಹೇಳುವ ಸಂದರ್ಭದಲ್ಲಿ ಶಾಕಾಪೂಣಿ ಮತ್ತು ಔರ್ಣನಾಭ ಎಂಬ ಇಬ್ಬರು ಆಚಾರ್ಯರ ಅಭಿಪ್ರಾಯದ ಉಲ್ಲೇಖ ವಿದೆ. ಶಾಕಾಪೂಣಿಯ ಪ್ರಕಾರ ಪೃಥ್ವಿ, ಅಂತರಿಕ್ಷ ಮತ್ತು ಆಕಾಶಗಳನ್ನು ಹಾಗೂ ಔರ್ಣನಾಭನ ಪ್ರಕಾರ ಸಮಾರೋಹಣ (ಉದಯಗಿರಿ), ವಿಷ್ಣುಪದ (ಸ್ವಸ್ತಿಕ) ಮತ್ತು ಗಯಾಶಿರಸ್ (ಅಸ್ತಗರಿ)ಗಳನ್ನು ಶ್ರೀ ವಿಷ್ಣುವು ತನ್ನ ಮೂರು ಪಾದಗಳಿಂದ ವ್ಯಾಪಿಸಿದ.

ತೈತ್ತಿರೀಯ ಸಂಹಿತೆಯಲ್ಲಿ ವಿಷ್ಣುಮತ್ತು ಸೂರ್ಯರ ಏಕತೆಯ ಬಗ್ಗೆ ಸ್ಪಷ್ಟವಾದ ಮಾತುಗಳಿವೆ. ತನ್ನ ಮಿತ್ರನಾದ ಇಂದ್ರನು ಕಳೆದುಕೊಂಡಿದ್ದ ರಾಜ್ಯವನ್ನು ಮತ್ತೆ ಕೊಡಿಸಿಕೊಡಲು ಭೂಮಿಯ ಮೇಲೆ ಅವತಾರ ಮಾಡುವ ಕಥೆಯ ಬಗ್ಗೆ ವಿವರಗಳೂ ಅಲ್ಲಿಯೇ ದೊರೆಯತ್ತದೆ (ತೈತ್ತಿರೀಯ ಸಂಹಿತೆ ೨. ೪. ೧೨. ೨).

ವೈದಿಕ ಸಾಹಿತ್ಯದಲ್ಲಿ ದೊರೆಯುವ ಈ ನಿರ್ದೇಶನದಿಂದಲೇ ವಾಮನ ಅವತಾರದ ಕಲ್ಪನೆಯ ಉದ್ಗಮವಾಗಿದೆ. ಮೊದಲಿಗೆ ಸೂರ್ಯದೇವನು ಬಾನಿನಲ್ಲಿ ಸಂಚರಿಸುವುದರಿಂದಲೇ ಇದು ಆರಂಭ ವಾಯಿತು. ವಿಷ್ಣುವು ಸೂರ್ಯನ ಪ್ರತಿರೂಪವೇ ಎಂಬ ಭಾವನೆ ಇರುವುದರ ಕಾರಣದಿಂದಾಗಿ ಸೂರ್ಯನ ಆಕಾಶ ಸಂಚಾರದ ಪದ್ಧತಿಯು ವಿಷ್ಣುವಿನದೇ ಎಂಬ ಭಾವನೆಗೆ ಕಾರಣವಾಯಿತು. ಮುಂದೆ ವಿಷ್ಣುವಿನ ದಶಾವತಾರದ ಕಲ್ಪನೆಯು ಪ್ರಚಲಿತಕ್ಕೆ ಬರುವ ಸಮಯಕ್ಕೆ ಆಗ ಮೂರು ಹೆಜ್ಜೆಗಳಿಂದ ಭೂಮಿಯನ್ನೆಲ್ಲಾ ವ್ಯಾಪಿಸಿದ ವಿಷ್ಣುವಿನ ವೈದಿಕ ರೂಪವು, ವೈದಿಕೋತ್ತರ ಕಾಲದ ವೈದಿಕ ಮತ್ತು ಪೌರಾಣಿಕ ಗ್ರಂಥಗಳಲ್ಲಿ ವಾಮನಾವತಾರದ ವ್ಯಾಪ್ತಿಯು ನಿರ್ಧರಿತಗೊಂಡಿತು.

ವಾಮನ ಅವತಾರದ ಪ್ರಥಮ ನಿರ್ದೇಶನವು ತೈತ್ತಿರೀಯ ಸಂಹಿತೆಯಲ್ಲಿ ಅಸ್ಪಷ್ಟವಾಗಿ ದೊರೆಯುತ್ತದೆ. ಒಮ್ಮೆ ಮೂರು ಲೋಕಗಳ ಸ್ವಾಮಿತ್ವಕ್ಕಾಗಿ ದೇವ ದಾನವರ ಮಧ್ಯೆ ಸಂಗ್ರಾಮ ನಡೆಯಿತು. ಆಗ ವಿಷ್ಣು ತನ್ನ ವಾಮನ ಸ್ವರೂಪವನ್ನು ಧರಿಸಿ ಮೂರು ಲೋಕಗಳನ್ನು ಆವರಿಸಿ ಗೆದ್ದುಕೊಂಡ (ತೈತ್ತಿರೀಯ ಸಂಹಿತೆ ೨ : ೧ : ೩).

ಶತಪಥ ಬ್ರಾಹ್ಮಣದಲ್ಲಿ ವಿಷ್ಣುವಿನ ವಾಮನ ಅವತಾರದ ಕಥೆಯು ಲಭಿಸುತ್ತದೆ. ಈ

ಕಥೆಯು ಪುರಾಣಗಳಲ್ಲಿ ದೊರೆಯುವ ಕಥೆಗಳಿಗಿಂತಲೂ ಬಹು ಭಿನ್ನವಾಗಿರುತ್ತದೆ. ದೇವ - ದಾನವರ ಯುದ್ಧದಲ್ಲಿ ಒಮ್ಮೆ ದೇವತೆಗಳು ಸೋತು ಓಡಿಹೋದರು. ನಂತರ ದಾನವರು ಭೂಮಿಯನ್ನೆಲ್ಲಾ ತಮ್ಮಲ್ಲಿ ಹಂಚಿಕೊಂಡರು. ಆಗ ವಿಷ್ಣುವಿನ ನೇತೃತ್ವದಲ್ಲಿ ದೇವಗಣವು ಅಸುರರ ಬಳಿಗೆ ಹೋಗಿ, ಪೃಥ್ವಿಯ ಸ್ವಲ್ಪ ಭಾಗವನ್ನು ತಮಗೆ ಕೊಡಬೇಕೆಂದು ಪ್ರಾರ್ಥಿಸಿದರು. ಆಗ ಅಸುರರು ವಿಷ್ಣುವಿನ ಪಾದಗಳ ಮೂರು ಹೆಜ್ಜೆಗಳ ಭೂಮಿಯನ್ನು ಕೊಡಲು ಸಿದ್ಧರಾದರು. ವಾಮನ (ಎಂದರೆ ಕುಬ್ಜ) ರೂಪಧಾರಿಯಾಗಿದ್ದ ವಿಷ್ಣುವು ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಅಳೆಯುತ್ತಾ ವ್ಯಾಪಿಸಿಕೊಂಡ. ಈ ರೀತಿಯಾಗಿ ದೇವತೆಗಳಿಗೆ ಮೂರು ಲೋಕಗಳ ಸ್ವಾಮ್ಯತ್ವವು ಲಭಿಸಿತು (ಶತಪಥ ಬ್ರಾಹ್ಮಣ ೧.೨.೨.೧ - ೫).

ಪುರಾಣ ಗ್ರಂಥಗಳ ಅನುಸಾರ ವಾಮನನು ಕಶ್ಯಪ ಮತ್ತು ಅದಿತಿಯರ ಸಂತಾನವೆಂದು ಹೇಳಲಾಗಿದೆ. ಈತನ ಹೆಂಡತಿಯ ಹೆಸರು ಕೀರ್ತಿ ಮತ್ತು ಮಗನ ಹೆಸರು ಬೃಹತ್‌ಶ್ಲೋಕ. ಈತನು ಹುಟ್ಟಿದ್ದು ಭಾದ್ರಪದ ಶುಕ್ಲ ದ್ವಾದಶಿಯ ಶ್ರವಣ ನಕ್ಷತ್ರದಲ್ಲಿ ಮತ್ತು ಅಭಿಜಿನ್ ಮುಹೂರ್ತದಲ್ಲಿ (ಭಾಗವತ ಪುರಾಣ ೮ : ೧೮ : ೫ - ೬). ತಾನು ವಿಷ್ಣು ಎಂಬ ಸತ್ಯವನ್ನು ಬ್ರಹ್ಮ ಮತ್ತು ಆದಿತಿ ಇವರಿಗೆ ಹೇಳಿದ ನಂತರ ಈತನ ಬ್ರಾಹ್ಮಣ ಬ್ರಹ್ಮಚಾರಿಯ ರೂಪವನ್ನು ಧರಿಸಿದ. ಮಹಾಭಾರತದಲ್ಲಿ ಈತನ ವಿವರಣಾತ್ಮಕ ವರ್ಣನೆ ದೊರೆಯುತ್ತದೆ. ಅಲ್ಲಿ ಈತನನ್ನು ಯಜ್ಞೋಪವೀತಧಾರಿ, ಕೃಷ್ಣಾಜಿನ ಧಾರಿ, ಶಿಖೆಯುಳ್ಳವನು, ಪಾಲಾಶದಂಡ ಹಿಡಿದಿರುವವನು ಎಂದು ಸಂಭೋಧಿಸಲಾಗಿದೆ. ಇದೇ ಬ್ರಾಹ್ಮಣ ವಟುವೇ ಪ್ರಹ್ಲಾದನ ಮೊಮ್ಮಗನಾದ ಬಲಿ ವೈರೋಚನನ ಯಜ್ಞ ಮಂಟಪವನ್ನು ಪ್ರವೇಶಿಸಿದ.

ವಾಮನನು ಬಲಿವೈರೋಚನನಿಂದ ಭೂಮಿಯ ತ್ರಿಪಾದವನ್ನು ಯಾಚಿಸಿದ. ಬಲಿ ತಥಾಸ್ತು ಎಂದ. ನಂತರ ವಾಮನನು ವಿರಾಟ್‌ರೂಪವನ್ನು ಧರಿಸಿ ತ್ರಿವಿಕ್ರಮನಾಗಿ ಮೊದಲ ಎರಡು ಹೆಜ್ಜೆಗಳಲ್ಲಿ ಪೃಥ್ವಿ ಮತ್ತು ಸ್ವರ್ಗವನ್ನು ವ್ಯಾಪಿಸಿದ. ನಂತರ ಮೂರನೆಯ ಹೆಜ್ಜೆಯನ್ನು ಬಲಿಯ ನೆತ್ತಿಯ ಮೇಲೆ ಇರಿಸಲು ಉದ್ಯುಕ್ತನಾದ (ಭಾಗವತ ೮ : ೧೩ : ೨೧). ಆಗ ವೀರಭದ್ರಮುಂತಾದ ಅಸುರರು ಯುದ್ಧಕ್ಕೆ ಸನ್ನದ್ಧರಾದರು. ಅವರನ್ನು ವಾಮನನೇ ಸೋಲಿಸಿದ. ಆ ಸಮಯದಲ್ಲಿ ಬಲಿ, ಪ್ರಹ್ಲಾದ ಮತ್ತು ಬಲಿಯ ಪತ್ನಿ ವಿಂಧ್ಯಾವಳಿಯು ವಾಮನನ್ನು ಸ್ತುತಿಸಿದರು. ಆಗ ವಾಮನನು ಸಂಪ್ರೀತನಾಗಿ ಬಲಿಯನ್ನು ನಮೂಚಿ, ಶಂಬರ, ಪ್ರಹ್ಲಾದ ಮುಂತಾದ ಅಸುರರೊಂದಿಗೆ ಸುತಲ ಎಂಬ ಪಾತಾಳ ಲೋಕದಲ್ಲಿ ಇರುವಂತೆ ಅವಕಾಶಕಲ್ಪಿಸಿ, ಇಂದ್ರನಿಗೆ ತ್ರಿಭುವನಗಳ ರಾಜ್ಯವನ್ನು ಅರ್ಪಿಸಿದ (ಮಹಾಭಾರತ ಸಭಾಪರ್ವ, ಪರಿ ೧ : ೨೧, ವಾಮನಪುರಾಣ : ೩೧, ಸ್ಕಂದ ಪುರಾಣ ೧ : ೧ : ೧೭ - ೧೯, ಮತ್ಸ್ಯಪುರಾಣ ೨೪೪ : ೨೪೬).

## ೧. ವಾಮನ

ವೈಖಾನಸ ಆಗಮದಲ್ಲಿ ಈ ರೀತಿಯ ವಿವರಣೆ ಇದೆ :

**ಅಥ ವಾಮನಂ ಪಂಚತಾಲಮಿತಿಂ ದ್ವಿಭುಜಂ ಛತ್ರದಂಡಧರಂ ಕೌಪೀನವಾಸಸಂ ಶಿಖಾಪುಸ್ತಕ ಮೇಖಲೋಪವೀತ ಕೃಷ್ಣಾಜಿನ ಸಮಾಯುತಂ ಪವಿತ್ರಪಾಣಂ ಬಾಲರೂಪಂ ಬ್ರಹ್ಮವರ್ಚಸ್ವಿನಂ ಕಾರಯೇತ್।**

ವಾಮನ ರೂಪವನ್ನು ಧರಿಸಿರುವ ವಿಷ್ಣುವು ಕೃಷ್ಣವರ್ಣ ಶರೀರ ಕಾಂತಿಯೊಂದಿಗೆ, ಎರಡು ಭುಜಗಳ ಪಡೆದಿರುತ್ತಾನೆ. ಬಲ ಹಸ್ತದಲ್ಲಿ ಕಮಂಡಲುವನ್ನು, ಎಡಹಸ್ತದಲ್ಲಿ ಛತ್ರಿಯನ್ನು ಧರಿಸಿರುತ್ತಾನೆ. ತಲೆಯಲ್ಲಿ ಶಿಖೆಯಿರುತ್ತದೆ. ಒಂದು ಜೊತೆ ಕುಂಡಲಗಳು ಕಿವಿಗಳಲ್ಲಿರುತ್ತವೆ. ಕೃಷ್ಣಾಜಿನವನ್ನು ಉತ್ತರೀಯವನ್ನಾಗಿ ಧರಿಸಿರುತ್ತಾನೆ. ಯಜ್ಞೋಪವೀತ, ಮೇಖಲ (ಉಡುದಾರ), ಕೌಪೀನಗಳನ್ನು ಧರಿಸಿರುತ್ತಾನೆ. ಅನಾಮಿಕಾ ಬೆರಳಿನಲ್ಲಿ ಕುಶದಿಂದ ಮಾಡಲ್ಪಟ್ಟ ಪವಿತ್ರವನ್ನು ಧರಿಸಿರುತ್ತಾನೆ. ಕೈಯಲ್ಲಿ ಪುಸ್ತಕವೊಂದಿರಬೇಕು. ಇವೆಲ್ಲಾ ಆತನು ವೈದಿಕ ವಿದ್ಯಾರ್ಥಿ ಅಥವ ಬ್ರಹ್ಮಚಾರಿ ಎಂಬುದನ್ನು ತೋರಿಸಲು ಅವಶ್ಯಕವಾದುವು. ಈ ಮೂರ್ತಿಯನ್ನು ಬಹುಬುದ್ಧಿವಂತ ಬಾಲಕನಾಗಿ ಕಾಣಿಸುವಂತೆ ರೂಪಿಸಬೇಕು. ಈ ಸ್ವಾಮಿಯನ್ನು ಪಂಚತಾಲಕ್ಕೆ ಸರಿಯಾಗಿ ರೂಪಿಸಬೇಕು.

ಆದರೆ ಶಿಲ್ಪರತ್ನದ ಪ್ರಕಾರ ವಾಮನಮೂರ್ತಿಯು ಬಾಲಕನಂತೆ ಇರಬಾರದು. ಕುಬ್ಜಾಕಾರದ ದೊಡ್ಡಹೊಟ್ಟೆಯ ವಕ್ರವ್ಯಕ್ತಿಯನ್ನಾಗಿ ರೂಪಿಸಬೇಕಾಗಿರುತ್ತದೆ. ಈತನು ಒಂದು ಕೈಯಲ್ಲಿ ಛತ್ರಿಯನ್ನು ಇನ್ನೊಂದು ಕೈಯಲ್ಲಿ ಕಮಂಡಲುವನ್ನು ಹಿಡಿದಿರುತ್ತಾನೆ. ಶಿಖಾಯಜ್ಞೋಪವಿತಾದಿಗಳನ್ನು ಧರಿಸಿರುತ್ತಾನೆ. **(ಕೃಷ್ಣಾಜಿನ್ಯುಪವೀತೀ ಸ್ಯಾಚ್ಛತ್ರೀ ಧೃತಕಮಂಡಲುಃ । ಕುಂಡಲೀ ಶಿಖಾಯ ಯುಕ್ತಃ ಕುಬ್ಜಾಕಾರೋ ಮಹೋದರಃ ॥)**

ವಿಷ್ಣುಧರ್ಮೋತ್ತರ ಪುರಾಣದಲ್ಲಿ ವಾಮನ ಮೂರ್ತಿಯ ಬಗ್ಗೆ ಈ ರೀತಿ ವಿವರಣೆ ದೊರೆಯುತ್ತದೆ :


**ಕರ್ತವ್ಯೋ ವಾಮನೋ ದೇವಸ್ಸಂಕಟೈರ್ಗಾತ್ರ ಪರ್ವಭಿಃ**
**ಪೀನಗಾತ್ರಶ್ಚ ಕರ್ತವ್ಯೋ ದಂಡೀ ಚಾಧ್ಯಯನೋದ್ಯತಃ ॥**
**ದೂರ್ವಾಶ್ಯಾಮಶ್ಚ ಕರ್ತವ್ಯಃ ಕೃಷ್ಣಾಜಿನಧರಸ್ತಥಾ**

ದೃಢವೂ ಸ್ಥೂಲವೂ ಕುಳ್ಳಾಗಿರುವ ದೇಹವನ್ನು ಪಡೆದಿರುವ ವಾಮನನು ಬ್ರಹ್ಮಚಾರಿಯ ಎಲ್ಲಾ ಚಿಹ್ನೆಗಳನ್ನೂ ಧರಿಸಿರುತ್ತಾನೆ. ಕೃಷ್ಣಾಜಿನವನ್ನು ಉತ್ತರೀಯವನ್ನಾಗಿ ಧರಿಸಿರುತ್ತಾನೆ. ಈತನ ವರ್ಣವು ಶ್ಯಾಮಲ.

ಈ ಮೂರ್ತಿ ಕಲ್ಪನೆಯಲ್ಲಿ ಎರಡು ಬಗೆಗಳು ಪ್ರತ್ಯೇಕವಾಗಿ ಕಾಣಿಸುತ್ತವೆ. (೧) ವಾಮನ - ಕುಬ್ಜ ರೂಪ. ಬ್ರಹ್ಮಚಾರಿ. (೨) ತ್ರಿವಿಕ್ರಮ - ಮೂರು ಲೋಕಗಳನ್ನು ಆವರಿಸುವಂತಹ ಬೃಹತ್ ರೂಪ.

ಮೊದಲಿಗೆ ಪಾಂಚರಾತ್ರಾಗಮಕ್ಕೆ ಸೇರಿದ ಕೃತಿಗಳಲ್ಲಿ ವಾಮನನ ಮೂರ್ತಿಕಲ್ಪನೆಯ ಬಗ್ಗೆ ಕೆಲವು ವಿವರಗಳನ್ನು ತಿಳಿದುಕೊಳ್ಳೋಣ.

ಈ ಮೊದಲೇ ಹೇಳಿರುವ ವರ್ಣನೆಯ ರೂಪವು ಮಾರ್ಕಂಡೇಯ ಸಂಹಿತೆ (೮) ಯಲ್ಲಿ ಇಂತು ದೊರೆಯುತ್ತದೆ :



ಚಿತ್ರ ೨೨ : ವಾಮನ ಅವತಾರ ಮೂರ್ತಿ

**ವಾಮನಂ ವಾಮನಾಕಾರಂ ಶ್ಯಾಮಲಂ ದಂಡಧಾರಿಣಮ್**
**ಮೌಂಜೀ ಮೇಖಲಾಯ ಯುಕ್ತಂ ಬ್ರಹ್ಮಸೂತ್ರ ವಿರಾಜಿತಮ್ ॥**
**ಕೌಪೀನಾಚ್ಛಾದನಾಧರಂ ದ್ವಿಬಾಹುಂ ನರರೂಪವತ್**
**ಕೃಷ್ಣಾಜಿನಾಂಬರಂ ದೇವಂ ಶುದ್ಧಸ್ಫಟಿಕ ಸನ್ನಿಭಮ್ ॥**
**ಕಾಕ ಪಕ್ಷಧರಂ ದೇವಂ ರಜತಾಲಕಶೋಭಿತಮ್**
**ಈಷತ್ಕುಂಚಿತಸವ್ಯಾಂಘ್ರಿಂ ಯಾಚಮಾನಂ ವಸುಂಧರಮ್ ॥**
**ಆಸೀನೋ ವಾ ಶಯನೋ ವಾ ಸ್ಥಿತಂ ವಾ ಯದಿ ಭೂಪತೇ**
**ಆರೂಢಂ ವಿಹಗೇಶಸ್ಯ ಪೀಠಿಕಾಯಾಂ ಸುಸಂಸ್ಥಿತಮ್ ॥**

ಬ್ರಾಹ್ಮಣ ವಟುವು ತನ್ನ ಬಲಗಾಲನ್ನು ಸ್ವಲ್ಪವಾಗಿ ಮಡಚಿದ್ದು ಭೂಮಿಯನ್ನು ಬೇಡುತ್ತಿರುವಂತೆ ರೂಪಿಸ ಬೇಕು. ಈ ಮೂರ್ತಿಯನ್ನು, ಆಸನ, ಸ್ಥಾನಕ, ಶಯನ ಈ ಮೂರೂ ಪದ್ಧತಿಗಳಲ್ಲಿ ನಿರ್ಮಿಸಬಹುದು. ಅಥವ ಗರುಡನ ಮೇಲೆ ಕುಳಿತಿರುವಂತೆ ಅಥವ ಪೀಠದ ಮೇಲೆ ಕುಳಿತಿರುವಂತೆ ರೂಪಿಸಬಹುದು.

ಇದೇ ರೀತಿಯ ವರ್ಣನೆಯು ಪಾದ್ಮ ಸಂಹಿತೆಯಲ್ಲಿ (ಕ್ರಿ ೧೭ : ೪೧ - ೫೪) ಮತ್ತು ವಿಷ್ವಕ್ಸೇನ ಸಂಹಿತೆ (೧೧ : ೭೫ - ೭೧)ಯಲ್ಲಿ ದೊರೆಯುತ್ತದೆ. ಶೇಷ ಸಂಹಿತೆಯು **ಕಮಂಡಲುಂ ಯಜ್ಞಸೂತ್ರಂ ಸಶಿಖಂ ಛತ್ರಧಾರಿಣಮ್ । ತೇಜಃಪುಂಜ ಸಮಂ ದೇವಂ ವಾಮನಂ ಪುರುಷಂ ಭಜೇ ॥** ಎಂದು ವಿವರಿಸುತ್ತದೆ.

ವಾಮನ ರೂಪದಲ್ಲೇ ನಾಲ್ಕು ಬಾಹುಗಳು ಇರುವ ರೂಪದ ವರ್ಣನೆಗಳೂ ಇವೆ. ಇದು ಚತುರ್ವಿಂಶತಿಮೂರ್ತಿಗಳ ವಿಭಜನೆಗೆ ಸೇರಿರುವ ವಾಮನಮೂರ್ತಿ ಎಂಬುದನ್ನು ನೆನಪಿನಲ್ಲಿರಿಸಿಕೊಂಡಿರಬೇಕು. ಪರಾಶರ ಸಂಹಿತೆಯಲ್ಲಿ (೧೫ : ೬೩) ಇಂತಿದೆ

**ಚಕ್ರ ಶಂಖ ಗದಾ ಪದ್ಮ ಧಾರಿಣಂ ಭೂರಮಾಪತಿಮ್ ।**
**ನಮಾಮಿ ವಾಮನಂ ದೇವಂ ಸರ್ವಾಲಂಕಾರಭೂಷಿತಮ್ ॥**

ಭೂದೇವಿ, ಶ್ರೀದೇವಿಯ ಪತಿಯಾದ ವಾಮನಮೂರ್ತಿಯು ಚಕ್ರ ಶಂಖ ಗದೆ ಪದ್ಮಗಳನ್ನು ತನ್ನ ನಾಲ್ಕು ಹಸ್ತಗಳಲ್ಲಿ ಧರಿಸಿದ್ದು ಎಲ್ಲಾ ಅಲಂಕಾರಗಳಿಂದಲೂ ಶೋಭಯಮಾನನಾಗಿರುತ್ತಾನೆ.

ವಿಷ್ವಕ್ಸೇನ ಸಂಹಿತೆಯಲ್ಲಿ (೧೧ : ೧೮೪ - ೧೮೭) :

**ಕರ್ಣಿಕಾರದಲ ಪ್ರಖ್ಯಂ ರಕ್ತ ವಸ್ತ್ರಂ ಚತುರ್ಮುಖಂ**
**ಸರ್ವಾವಯವ ಸಂಪೂರ್ಣಂ ಸರ್ವಾಲಂಕಾರ ಭೂಷಿತಮ್ ॥**
**ಸರ್ವಾಭರಣ ಸಂಯುಕ್ತಂ ಸರ್ವಸಿದ್ಧಿಪ್ರದಂ ಪರಮ್**
**ಪ್ರಥಮೇ ತು ಕರೇ ಚಕ್ರಮಧಃ ಶಂಖಂ ಚ ದೃಶ್ಯತೇ ॥**
**ಗದಾ ಚ ವಾಮಹಸ್ತೇ ತು ಹ್ಯಧಃ ಪದ್ಮಂ ಚ ಶೋಭತೇ**
**ವಾಮನಾಖ್ಯಂ ತು ವಿಪ್ರೇಂದ್ರ ವಿಜ್ಞೇಯೋಽಥ ವಿಲಕ್ಷಣಃ ॥**

ಎಂದು ಹೇಳಿ ಚತುರ್ಮುಖವಿರುವ ವಾಮನ ಮೂರ್ತಿಯನ್ನು ವಿವರಿಸಲಾಗಿದೆ. ಸರ್ವಾಲಂಕಾರ ಭೂಷಿತನಾದ, ಸರ್ವಸಿದ್ಧಿ ವರಪ್ರದಾತನಾದ ಈ ಸ್ವಾಮಿಯು ಮೇಲಿನ ಹಸ್ತಗಳಲ್ಲಿ ಚಕ್ರ - ಗದೆಗಳನ್ನು ಮುಂದಿನ ಹಸ್ತಗಳಲ್ಲಿ ಶಂಖ - ಪದ್ಮಗಳನ್ನು ಧರಿಸಿರುತ್ತಾನೆ. ಈ ಮೂರ್ತಿಯನ್ನು ವಾಮನ ಎಂದು ಕರೆಯುತ್ತಾರೆ.

ಇಲ್ಲಿ ಇನ್ನೊಂದು ಮುಖ್ಯ ಅಂಶವನ್ನು ಗಮನದಲ್ಲಿರಿಸಿಕೊಳ್ಳಬೇಕು. ವಿಷ್ಣುವಿನ ಇಪ್ಪತ್ನಾಲ್ಕು ಮೂರ್ತಿರೂಪಗಳಲ್ಲಿ ಇರುವ ವಾಮನನೇ ಬೇರೆ ; ಅವತಾರ ರೂಪದ ವಾಮನನೇ ಬೇರೆ. ಸಾಧಾರಣವಾಗಿ ಎರಡು ತೋಳುಗಳ ವರ್ಣನೆ ಇರುವ ವಾಮನನು ಅವತಾರ ರೂಪದ ವಾಮನ. ಇಲ್ಲಿ ನಾಲ್ಕು ತೋಳುಗಳ ವರ್ಣನೆ ಹೇಳಿರುವ ರೂಪವನ್ನು ಚತುರ್ವಿಂಶತಿ ಮೂರ್ತಿರೂಪದ ವಾಮನ ಎಂದು ಗ್ರಹಿಸಬೇಕು. ಇಲ್ಲಿ ಎರಡೂ ಬಗೆಗಳು ಒಟ್ಟಿಗೆ ಹೇಳಿರುವುದರಿಂದ ಅಂತರವು ಸ್ಪಷ್ಟವಾಗಿದೆ ಎಂದು ನಂಬಲಾಗಿದೆ.

## ೨. ತ್ರಿವಿಕ್ರಮ

ವಾಮನನು ತ್ರಿವಿಕ್ರಮನಾಗಿ ಬೆಳೆದ ಕಥೆಯನ್ನು ಈಗಾಗಲೇ ಹೇಳಿದ್ದೇವೆ. ಮೂರ್ತಿಶಿಲ್ಪದಲ್ಲಿ ವಾಮನ, ತ್ರಿವಿಕ್ರಮ ಇಬ್ಬರನ್ನೂ ಪ್ರತ್ಯೇಕರೂಪಗಳಲ್ಲಿ ಚಿತ್ರಿಸಲಾಗುತ್ತದೆ. ಆದ್ದರಿಂದ ವಾಮನಮೂರ್ತಿಯಲ್ಲಿರುವಂತೆ ಚತುರ್ವಿಂಶತಿ ಮೂರ್ತಿ ಮತ್ತು ಅವತಾರಗಳ ಅಂತರವನ್ನು ಇಲ್ಲೂ ಅನ್ವಯಮಾಡ ಬೇಕಾಗಿರುತ್ತದೆ.

**ಚತುರ್ಭುಜೋ ವಾ ದ್ವಿಭುಜಸ್ಸವ್ಯಂ ಪಾದಂ ಮಹೀತಲೇ ||**
**ಮಸ್ತಕೇಽಸುರ ರಾಜಸ್ಯ ಪಾದಂ ಸವ್ಯೇತರಂ ದಿವಿ**
**ವಿನ್ಯಸ್ಯ ಯಾಚತೇ ಭೂಯಸ್ಸವ್ಯೇ ತರಕರೇಣ ತಮ್ ||**
**ಧರಣೀಂ ದೇಹಿ ದೇಹೀತಿ ಏಷ ಏವ ತ್ರಿವಿಕ್ರಮಃ**
**ಕಲ್ಪ ಯೇದ್ವೈನತೇಯಸ್ಯ ಸ್ಕಂಧೋಪರಿ ಜಗತ್ಪತಿಮ್ ||**
**ಸ ಏವ ಯಾನಾರೂಢಸ್ಸ್ಯಾದುದಿತಶ್ಚ ತ್ರಿವಿಕ್ರಮಃ**

(ವಿಷ್ಣುತಿಲಕ ೬ : ೪೨೫ - ೪೨೮)

ತ್ರಿವಿಕ್ರಮಮೂರ್ತಿಯು ಎರಡು ಅಥವ ನಾಲ್ಕು ಬಾಹುಗಳಿರುವಂತೆ ರೂಪಿಸಲ್ಪಡಬೇಕು. ಬಲಗಾಲು ಭೂಮಿಯ ಮೇಲೆ ಊರಿದ್ದು ಎಡಗಾಲು ಬಲಿಯ ನೆತ್ತಿಯಮೇಲಿಡಲು ಸಿದ್ಧವಾಗಿರಬೇಕು. ಭೂಮಿಯನ್ನು ಬೇಡಿದವನು ವಾಮನನು. ಕೊಡುತ್ತೇನೆ ಎಂದ ಬಲಿಯ ತಲೆಯಮೇಲೆ ಕಾಲಿಟ್ಟವನು ತ್ರಿವಿಕ್ರಮ. ಈ ಮೂರ್ತಿಯು ಗರುಡನ ಬೆನ್ನಿನಮೇಲೆ ಇರುವಂತೆ ರೂಪಿಸಬಹುದು. ಈ ಮೂರ್ತಿಯು ಅವತಾರಮೂರ್ತಿ ಮತ್ತು ಯಾನಕ ಭಂಗಿಯಲ್ಲಿರುತ್ತಾನೆ.

ಈ ತ್ರಿವಿಕ್ರಮನ ಆಯುಧಗಳನ್ನು ಮಾರ್ಕಂಡೇಯ ಸಂಹಿತೆಯು ಪದ್ಮ, ಶಂಖ, ಚಕ್ರ, ದಂಡ (ಗದೆ) ಎಂದು ಹೇಳುತ್ತದೆ.

ವೈಖಾನಸ ಆಗಮದಲ್ಲಿ ತ್ರಿವಿಕ್ರಮನ ಬಗ್ಗೆ ಈ ವಿವರಣೆ ಇದೆ -

**ತ್ರಿವಿಕ್ರಮ ಸ್ತ್ರಿವಿಧಃ ಪ್ರೋಕ್ತೋ ಲೋಕೇಷು ತ್ರಿಪಾದನ್ಯಾಸಾದ್ ಭೂಲೋಕಾಕ್ರಮಣಾರ್ಥಂ ಜಾನು ಮಾತ್ರಮಂತರಿಕ್ಷಲೋಕಾಕ್ರಮಣಾರ್ಥಂ ನಾಭಿಮಾತ್ರಂ ಸ್ವರ್ಗಲೋಕಾಕ್ರಮಣಾರ್ಥಂ ಲಲಾಟಮಾತ್ರಂ ಚೋರ್ಧ್ವಪಾದೋ ಭವೇತ್ | ಏತೇಷು ಯಥೇಷ್ಟರೂಪಂ ನಿಶ್ಚಿತ್ಯ ಪೂರ್ವವಚ್ಚತುರ್ವಿಂಶತಿ ತಾಲ ವಿಭಾಗೇನ ದೇವಷ್ಟಬಾಹುಂ ಚತುರ್ಬಾಹುಂ ವಾಷ್ಟಭುಜೇ ದಕ್ಷಿಣಹಸ್ತೇ ಚಕ್ರಶಂಖಗದಾಶಾರ್ಙ್ಗ ಹಲಧರಂ ಚತುರ್ಭುಜೇ ದಕ್ಷಿಣಹಸ್ತೇನ ಚಕ್ರಧರಂ ವಾಮಹಸ್ತೇನ ಶಂಖಧರಮಭಯಂ ವರದಂ ವಾ ದಧಾನಂ ದಕ್ಷಿಣಹಸ್ತೇ, ಪ್ರಸಾರಿತ ಪಾದೇನ ಪ್ರಸಾರಿತವಾಮಹಸ್ತಂ ಸ್ಥಿತದಕ್ಷಿಣಪಾದಂ ಪ್ರಸಾರಿತೋದ್ಧೃತ ವಾಮಪಾದಂ ಶ್ಯಾಮಾಭಂ**



ಚಿತ್ರ ೨೩ : ತ್ರಿವಿಕ್ರಮ ಅವತಾರ ಮೂರ್ತಿ

**ರಕ್ತಾಂಬರಧರಂ ಸರ್ವಾಭರಣಭೂಷಿತಂ, ತತ್ಪೃಷ್ಠೇ ಕಲ್ಪದ್ರುಮಮೈಂದ್ರಶ್ಛತ್ರಮುಭಯೋಃ ಪಾರ್ಶ್ವಯೋರ್ಪವನಜಲೇಶೌ ಚಾಮರಧಾರಿಣೌ ತದೂರ್ಧ್ವೇ ದಕ್ಷಿಣೇ ದಿವಾಕರಂ ವಾಮೇ ನಿಶಾಕರಂ ತಥಾ ಸನ್ ಸನಕ ಸನತ್ಕುಮಾರೌ ಚ ಕೃತ್ವಾ ಪ್ರಸಾರಿತ ಪಾದಸ್ಯೋರ್ಧ್ವಭಾಗೇ ಬ್ರಹ್ಮಾಣಾಂ ತತ್ಪಾದಂ ಪ್ರಗೃಹ್ಯ ಹಸ್ತಾಭ್ಯಾಂ ಪ್ರಕ್ಷಾಲಯಂತಂ ಕೃತ್ವಾ ತತ್‌ಸ್ರೌತಸಿಂ ಗಂಗಾ ಶ್ವೇತಾಭಾಂ ನಾಭೇರೂರ್ಧ್ವಂ ಶಂಕರಂ ಪ್ರಾಂಜಲೀಕೃತಹಸ್ತಂ ಚ ಕಾರಯೇತ್ । ಪಾದ ಪಾರ್ಶ್ವೇ ನಮೂಚಿಮುಂಮಮಮಾಣಂ ವಾಮಪಾರ್ಶ್ವೇ ಕ್ರತುವಿಘ್ನಕರಂ ತಂ ಮುಷ್ಟಿನಾ ಪ್ರಹರಂತಂ ಗರುಡಂ, ದಕ್ಷಿಣೇ ವಾಮನಂ, ತತ್‌ಪಾರ್ಶ್ವೇ ಬಲಿಂ ಹೇಮಾಭಂ ಸರ್ವಾಭರಣ ಭೂಷಿತಂ ಸಪತ್ನೀಕಂ ಹರ್ಷೇಣ ಪಾಣಿಭ್ಯಾ ಹೇಮಕಲಶಮುದ್ಧರಂತಂ ತಸ್ಯೋರ್ಧ್ವೇ ಜಾಂಬವಂತಂ ಭೇರಿ ತಾಡನಪರಂ ಚ ಕಾರಯೇತ್। ಅತ್ರಾನುಕ್ತಂ ಸರ್ವಂ ಭೂಭರ್ತುರ್ವಿಧಿನಾ ಕಾರಯೇತ್। ತ್ರಿವಿಕ್ರಮಸ್ಯ ಕೌತುಕಂ ವಿಷ್ಣುಂ ಚತುರ್ಭುಜಯೇವ ಕಾರಯೇತ್।**

ತ್ರಿವಿಕ್ರಮ ಅವತಾರದ ಮೂರ್ತಿಗಳು ಮೂರು ಬಗೆಗಳಲ್ಲಿ ರೂಪಿಸಲಾಗುತ್ತದೆ: (೧) ಎಡಗಾಲು ಬಲ ಮೊಣಕಾಲಿವರೆವಿಗೂ ಎತ್ತಿರುವುದು (೨) ಈ ಕಾಲು ಸ್ವಾಮಿಯ ನಾಭಿಯ ಎತ್ತರಕ್ಕೆ ಎತ್ತಿರುವದು (೩) ಈ ಕಾಲು ಸ್ವಾಮಿಯ ಹಣೆಯತನಕ ಎತ್ತಿರುವುದು. ಈ ಮೂರು ಬಗೆಗಳು ತ್ರಿವಿಕ್ರಮನು, ಭೂಮಿ, ಆಕಾಶ ಮತ್ತು ಸ್ವರ್ಗಗಳನ್ನು ಅಳೆದಿದ್ದನ್ನು ಸೂಚಿಸಲು ಈ ರೀತಿಯ ಅಂತರವನ್ನು ಯೋಜಿಸಲಾಗಿದೆ.

ಈ ಮೂರ್ತಿಯನ್ನು ಉತ್ತಮ ದಶತಾಲದಲ್ಲಿ ರೂಪಿಸಬೇಕು. ತ್ರಿವಿಕ್ರಮನಿಗೆ ನಾಲ್ಕು ಅಥವ ಎಂಟು ತೋಳುಗಳಿರಬೇಕು. ನಾಲ್ಕು ತೋಳುಗಳಿರುವಾಗ ಮೇಲಿನ ಬಲಹಸ್ತದಲ್ಲಿ ಚಕ್ರ ಮತ್ತು ಎಡಹಸ್ತದಲ್ಲಿ ಶಂಖ ಇರಬೇಕು. ಅಥವ ಚಕ್ರ ಎಡಹಸ್ತದಲ್ಲಿದ್ದು ಶಂಖ ಬಲಹಸ್ತದಲ್ಲಿಯೂ ಇರಬಹುದು. ಇನ್ನೊಂದು ಬಲಗೈಅಂಗೈ ಮೇಲ್ಮುಖಮಾಡಿ ಮೇಲಕ್ಕೆ ಚಾಚಿರಬೇಕು. ಎಡ ತೋಳು ಮೇಲಕ್ಕೆ ಎತ್ತಿರುವ ಕಾಲಿಗೆ ಸಮಾನಾಂತರವಾಗಿ ಮುಂದೆ ಚಾಚಿರಬೇಕು. ಅಥವ ಬಲಹಸ್ತ ಅಭಯ ಮುದ್ರೆಯಲ್ಲೂ, ಎಡ ಹಸ್ತ ವರದ ಮುದ್ರೆಯಲ್ಲೂ ಇರಬಹುದು. ಒಂದು ವೇಳೆ ಎಂಟು ತೋಳುಗಳಲ್ಲಿ ಸ್ವಾಮಿಯನ್ನು ರೂಪಿಸಿದರೆ ಐದು ತೋಳುಗಳಲ್ಲಿ ಶಂಖ, ಚಕ್ರ, ಗದೆ, ಶಾರ್ಙ್ಗ (ಧನುಸ್ಸು) ಮತ್ತು ಹಲ (ನೇಗಿಲು) ಇರಬೇಕು. ಉಳಿದ ಮೂರು ಹಸ್ತಗಳನ್ನು ಈ ಮೊದಲು ವಿವರಿಸಿರುವ ಹಾಗೆ ಅಂಗೈ ಮೇಲ್ಮುಖಮಾಡಿ ಮೇಲಕ್ಕೆ ಚಾಚಿರಬೇಕು. ಉಳಿದ ಎರಡು ಹಸ್ತಗಳಲ್ಲಿ ಅಭಯ ವರದ ಮುದ್ರೆಗಳು ಇರಬೇಕು.

ತ್ರಿವಿಕ್ರಮನ ಬಲಗಾಲು ಭೂಮಿಯ ಮೇಲೆ ಬಲವಾಗಿ ಊರಿರಬೇಕು. ಎಡಗಾಲು ಮಾತ್ರವೇ ಜಗತ್ತನ್ನು ಅಳೆಯಲು ಮೇಲೆತ್ತಿರುವಂತಿರಬೇಕು. ಸ್ವಾಮಿಯ ಬಣ್ಣವು ಶ್ಯಾಮಲ ಅಥವ ಮಳೆಯ ಮೋಡ ಅಥವ ಕೆಂಪು. ಕೆಂಪು ವಸ್ತ್ರಗಳಲ್ಲಿರುವ ಸ್ವಾಮಿಯು ಎಲ್ಲಾ ಆಭರಣಗಳಿಂದಲೂ ಅಲಂಕೃತನಾಗಿರಬೇಕು. ಹಿಂದೆ ಇಂದ್ರನು ತ್ರಿವಿಕ್ರಮನ ಛತ್ರಿ ಹಿಡಿದಿರುವಂತೆ, ಕಲ್ಪವೃಕ್ಷ ಇರುವಂತೆ ರೂಪಿಸಬೇಕು. ಇಕ್ಕೆಲಗಳಲ್ಲಿ ವರುಣ ಮತ್ತು ವಾಯುಗಳು ಚಾಮಧಾರಿಗಳಾಗಿರಬೇಕು. ಅವರ ಎಡ ಮತ್ತು ಬಲಗಳಿಗೆ ಚಂದ್ರ ಸೂರ್ಯರು ಕ್ರಮವಾಗಿ ಇರಬೇಕು. ಇವರ ಬಳಿ ಸನಕ, ಸನಂದನ ಮತ್ತು ಸನತ್ಕುಮಾರರು ಇರಬೇಕು.

ಬ್ರಹ್ಮನು ಎತ್ತಿರುವ ಪಾದವನ್ನು ಹಿಡಿದು ಕಮಂಡಲುವಿನಿಂದ ನೀರನ್ನು ಸುರಿದುಕೊಳ್ಳುತ್ತಾ ಪಾದವನ್ನು ತೊಳೆಯುತ್ತಿರಬೇಕು. ತ್ರಿವಿಕ್ರಮ ಪಾದದಿಂದ ಸುರಿಯುತ್ತಿರುವ ನೀರು ಮಂಜಿನಂತೆ ಬಿಳುಪಾಗಿರುವಂತೆ ತೋರಬೇಕು. ಶಿವನು ತ್ರಿವಿಕ್ರಮನ ನಾಭಿಪ್ರದೇಶದ ಮಟ್ಟದಿಂದ ಮೇಲೆ ಪಕ್ಕದಲ್ಲಿ ಕುಳಿತಿರಬೇಕು. ತ್ರಿವಿಕ್ರಮನ ಮೊಣಕಾಲುಗಳ ಮಟ್ಟದ ತನಕ ಭೂಲೋಕವೆಂದು, ಅಲ್ಲಿಂದ ಮೇಲೆ ನಾಭಿಪ್ರದೇಶದ ಮಟ್ಟದ ತನಕ ಅಂತರಿಕ್ಷಲೋಕವೆಂದು, ಅಲ್ಲಿಂದ ಹಣೆಯ ಮಟ್ಟದ ತನಕ ಸ್ವರ್ಗಲೋಕವೆಂದು ಭಾವಿಸಲಾಗುತ್ತದೆ. ಆದ್ದರಿಂದ ಶಿವನಿಗೆ ಸ್ವರ್ಗಲೋಕದಲ್ಲಿ ಸ್ಥಾನವಿರಬೇಕೆಂದು ಈ ರೀತಿಯ ಸ್ಥಾನ ನಿರ್ದೇಶನವಿದೆ.

ತ್ರಿವಿಕ್ರಮನು ಊರಿನಿಂತಿರುವ ಪಾದದ ಬಳಿ ಭಕ್ತಿ ಪ್ರಪತ್ತಿಗಳಿಂದ ತುಂಬಿದ್ದು ಕೈಜೋಡಿಸಿ ನಿಂತಿರುವ ನಮೂಚಿ (ರಾಕ್ಷಸ) ಇರಬೇಕು. ಬಲಿಗೆ ಕೊಡುತ್ತಿರುವ ಈ ಶಿಕ್ಷೆಯಿಂದ ಆತನನ್ನು ಮುಕ್ತಗೊಳಿಸಬೇಕೆಂದು ಅವನು ಬೇಡುತ್ತಿರುವಂತೆ ಭಾಸವಾಗಬೇಕು. ಎಡಭಾಗದಲ್ಲಿ ಗರುಡನು ಇದ್ದು ರಾಕ್ಷಸರ ಗುರುವಾದ ಶುಕ್ರಾಚಾರ್ಯರನ್ನು ಹಿಡಿದಿರುವಂತೆ ರೂಪಿಸಬೇಕು. ಶುಕ್ರಾಚಾರ್ಯನು ವಾಮನನಿಗೆ ದಾನಕೊಡುವದರಿಂದ ಬಲಿಯನ್ನು ತಡೆಯದಂತೆ ಮಾಡುವುದು ಗರುಡನ ಉದೇಶವಾಗಿತ್ತು. ಬಲಗಡೆಗೆ ವಾಮನಮೂರ್ತಿಯೇ ಛತ್ರಿಯೊಂದಿಗೆ ನಿಂತಿದ್ದು, ಬಲಿಯು ಕೊಡಲು ಒಪ್ಪಿಕೊಂಡಿದ್ದ ದಾನವನ್ನು ಸ್ವೀಕರಿಸಲು ಸಿದ್ಧವಾಗಿರಬೇಕು. ಸ್ವಾಮಿಯ ಮುಂದೆ ಎದುರಾಗಿ ಸರ್ವಾಭರಣ ಭೂಷಿತನಾಗಿರುವ ಬಲಿ ಚಕ್ರವರ್ತಿಯು ಸ್ವರ್ಣವರ್ಣದ ಕಾಂತಿಯಲ್ಲಿ ದಾನವನ್ನು ನೀಡಲು ಸಿದ್ಧನಾಗಿ ಕೈಯಲ್ಲಿ ಬಂಗಾರದ ಕಮಂಡಲವನ್ನು ಹಿಡಿದಿರಬೇಕು. ಬಲಿಯ ಹಿಂದೆ ಅವನ ರಾಣಿ ನಿಂತಿರಬೇಕು. ತ್ರಿವಿಕ್ರಮನ ತಲೆಯ ಮೇಲೆ ಅಸುರರ ಸಾಮ್ರಾಜ್ಯ ಕೊನೆಗೊಂಡಿತೆಂಬ ಸಂತೋಷಕ್ಕೆ ಭೇರಿನಾದವನ್ನು ಮಾಡುತ್ತಿರುವ ಜಾಂಬವಂತನ ಮೂರ್ತಿ ಇರಬೇಕು.

ಇದಿಷ್ಟು ವೈಖಾನಸ ಆಗಮದಲ್ಲಿ ದೊರೆಯುವ ವಿವರಣೆಗಳು.

ಶಿಲ್ಪರತ್ನದಲ್ಲಿ ತ್ರಿವಿಕ್ರಮನು ಎಡ ಪಾದವನ್ನು ಊರಿ ಬಲಗಾಲನ್ನು ಎತ್ತಿ ಲೋಕಗಳನ್ನು ಅಳೆಯುತ್ತಿರುವಂತೆ ರೂಪಿಸಬೇಕೆಂದು ಹೇಳಲಾಗಿದೆ **(ತ್ರಿವಿಕ್ರಮಂ ವಕ್ಷ್ಯೇ ವಾಮಪಾದೇನ ಮೇದಿನೀಮ್। ಆಕ್ರಾಮಾಂತಂ ದ್ವಿತೀಯೇನ ಸಾಕಲ್ಯೇನ ನಭಸ್ಥಲಮ್).**

ವಿಷ್ಣುಧರ್ಮೋತ್ತರ ಪುರಾಣದಲ್ಲಿ ಈ ರೀತಿಯ ವಿವರಣೆ ಇದೆ :

**ಸಜಲಾಂಬುದ ಸಂಕಾಶಸ್ತಥಾ ಕಾರ್ಯಸ್ತ್ರಿವಿಕ್ರಮಃ**
**ದಂಡ ಪಾಶಧರಃ ಕಾರ್ಯಃಶ್ಯಂಖ ಚಕ್ರ ಗದಾಧರಃ ॥**
**ಶಂಖ ಚಕ್ರಗದಾ ಪದ್ಮಾಃ ಕಾರ್ಯಸ್ತಸ್ಯ ಸುರೂಪಿಣಃ**
**ಸ್ವದೇಹಾಸ್ತೇ ನ ಕರ್ತವ್ಯಾಶ್ಯೇಷಂ ಕಾರ್ಯಂ ತು ಪೂರ್ವವತ್ ॥**
**ಏಕೋರ್ಧ್ವವದನಃ ಕಾರ್ಯೋ ದೇವೋ ವಿಸ್ಫಾರಿತೇಕ್ಷಣಃ**

ತಾವರೆಯ ಮೈಬಣ್ಣದ ತ್ರಿವಿಕ್ರಮನನ್ನು ಆರು ಅಥವ ಎಂಟು ಭುಜಗಳಿರುವಂತೆ ರೂಪಿಸಬೇಕು. ಈ ಹಸ್ತಗಳಲ್ಲಿ ದಂಡ, ಪಾಶ, ಶಂಖ, ಚಕ್ರ, ಗದೆ, ಪದ್ಮಗಳನ್ನು

ಹಿಡಿದಿರುತ್ತಾನೆ. ಶಂಖ, ಚಕ್ರ, ಗದಾ ಮತ್ತು ಪದ್ಮಗಳನ್ನು ನಾಲ್ಕು ತೋಳುಗಳು ಮಾತ್ರವೇ ಇದ್ದಾಗ ಧರಿಸಿರುತ್ತಾನೆ. ಈ ಮೊದಲು ಆರು ಆಯುಧಗಗಳನ್ನೂ ಮಾತ್ರವೇ ಸೂಚಿಸಿ ಎರಡು ಹಸ್ತಗಳು ಅಭಯ - ವರದ ಮುದ್ರೆಗಳು ಇರುತ್ತವೆ. ಇತರ ಎಲ್ಲಾ ವಿವರಗಳೂ ಈ ಮೊದಲೇ ಹೇಳಿರುವಂತೆ ಅನುಸರಿಸಬೇಕು. ಸ್ವಾಮಿಯು ತನ್ನ ಮುಖವನ್ನು ಮೇಲೆತ್ತಿ ಕಣ್ಣುಗಳನ್ನು ಅರಳಿಸಿರಬೇಕು.

ತ್ರಿವಿಕ್ರಮನ ಕೌತುಕಬೇರವನ್ನು ಸಾಧಾರಣವಾಗಿ ನಾಲ್ಕು ಬಾಹುಗಳೊಂದಿಗೆ ವಿಷ್ಣು ಬೇರಗಳನ್ನು ನಿರ್ಮಿಸುವ ರೀತಿಯೇ ರೂಪಿಸಬೇಕು.

ಪಾಂಚರಾತ್ರಾಗಮಕ್ಕೆ ಸೇರಿರುವ ಹಯಶೀರ್ಷಸಂಹಿತೆಯಲ್ಲಿ (ಆದಿ, ೨೩ : ೨೧ - ೨೩) ಈ ರೀತಿಯ ಮೂರ್ತಿಯ ವಿವರಣೆ ದೊರೆಯುತ್ತದೆ :

> **ದಕ್ಷಿಣೋರ್ಧ್ವಂ ಗದಾ ಯಸ್ಯ ಪಂಕಜಂ ಚಾಪ್ಯಧಃ ಸ್ಥಿತಮ್ ||**
> **ವಾಮೋರ್ಧ್ವಂ ಸಂಸ್ಥಿತಮ್ ಚಕ್ರಂ ಅಧಶ್ಶಂಖಂ ಪ್ರದೃಶ್ಯತೇ**
> **ಬ್ರಹ್ಮಾಂಡಗಂ ವಾಮಪಾದಂ ದಕ್ಷಿಣಂ ಶೇಷಪೃಷ್ಠಗಮ್ ||**
> **ಬಲಿವಂಚನ ಸಂಸಕ್ತಂ ವಾಮನಂಚಾಪ್ಯಧಃ ಸ್ಥಿತಮ್**
> **ತ್ರಿವಿಕ್ರಮೇತಿ ಸಾ ಮೂರ್ತಿಃ ಸ್ಥಾಪಿತಾ ರಾಜ್ಯಭೋಗದಾ ||**

ಮೇಲಿನ ಬಲಹಸ್ತದಲ್ಲಿ ಗದೆ, ಎಡಹಸ್ತದಲ್ಲಿ ಚಕ್ರ, ಮುಂದಿನ ಬಲಹಸ್ತದಲ್ಲಿ ಪದ್ಮ ಎಡಹಸ್ತದಲ್ಲಿ ಶಂಖ ಧರಿಸಿದ್ದು, ಬಲಪಾದವನ್ನು ಶೇಷನ ಬಾಲದಮೇಲೆ ಊರಿದ್ದು, ಬ್ರಹ್ಮಾಂಡವನ್ನು ಅಳೆಯಲು ತ್ರಿವಿಕ್ರಮ ಮೂರ್ತಿಯು ಎಡಪಾದವನ್ನು ಮೇಲೆತ್ತಿರುತ್ತಾನೆ. ಕೆಳಭಾಗದಲ್ಲಿ ಬಲಿಯನ್ನು ವಂಚಿಸಲು ಆಸಕ್ತನಾಗಿರುವ ವಾಮನಮೂರ್ತಿಯು ಬಲಿಯೊಂದಿಗೆ ಇರುವಂತೆ ರೂಪಿಸಬೇಕು. ಈ ರೀತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದವರಿಗೆ ರಾಜ್ಯಭೋಗ ಲಭಿಸುತ್ತದೆ.

ವಿಷ್ವಕ್ಸೇನ ಸಂಹಿತೆಯಲ್ಲಿ (೧೧ : ೧೭೯ - ೧೮೧) ಮೂರ್ತಿ ರೂಪಕ್ಕೆ ಸೇರಿರುವ ತ್ರಿವಿಕ್ರಮನ ರೂಪಧ್ಯಾನವು ಇಂತಿದೆ :

> **ತಪ್ತಹಾಟಕ ಸಂಕಾಶಂ ಶ್ಯಾಮವರ್ಣನಿಭಂ ತು ವಾ ||**
> **ಸರ್ವಾಲಂಕಾರ ಸಂಯುಕ್ತಂ ಸರ್ವಾವಯವ ಶೋಭಿತಮ್**
> **ಸರ್ವಾಭರಣ ಸಂಯುಕ್ತಂ ಪೀತವಸ್ತ್ರಂ ಚತುರ್ಭುಜಮ್ ||**
> **ಶಂಖ ಚಕ್ರ ಗದಾಪಾಣಿಂ ಸರ್ವದೇವ ನಮಸ್ಕೃತಮ್**
> **ತ್ರಿವಿಕ್ರಮಸ್ಯ ಸಂಪ್ರೋಕ್ತಂ ಲಕ್ಷಣಂ ತು ಯದ್ವಿಧಮ್ ||**

ತ್ರಿವಿಕ್ರಮನು ಸ್ವರ್ಣವರ್ಣದಲ್ಲಾಗಲಿ, ಶ್ಯಾಮಲ ವರ್ಣದಲ್ಲಾಗಲಿ ಇದ್ದು ಸಕಲ ಅಲಂಕಾರಗಳಿಂದಲೂ, ಸರ್ವ ಆಭರಣಗಳಿಂದಲೂ ಶೋಭಿತನಾಗಿರುತ್ತಾನೆ. ಸುಪುಷ್ಟವಾದ ಅಂಗಾಂಗಗಳಿಂದ ತೇಜೋಮಾನವಾಗಿರುವ ತ್ರಿವಿಕ್ರಮ ಮೂರ್ತಿಯು ಹಳದಿಯ ವಸ್ತ್ರಗಳನ್ನು ಧರಿಸಿದ್ದು ನಾಲ್ಕು ತೋಳುಗಳನ್ನು ಹೊಂದಿರುತ್ತಾನೆ. ಈ ಹಸ್ತಗಳಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದಿರುತ್ತಾನೆ. ಈ ಸ್ವಾಮಿಯು ಎಲ್ಲಾ ದೇವತೆಗಳಿಂದಲೂ

ನಮಸ್ಕರಿಸಲ್ಪಡುತ್ತಾನೆ. ಕೆಳ ಬಲ ಹಸ್ತದಲ್ಲಿ ಅಭಯ ಮುದ್ರೆಯನ್ನು ರೂಪಿಸಬೇಕು. ಈ ಮೂರ್ತಿಯ ಪಾದಗಳು ಸಮಪಾದದಲ್ಲಿರಬಹುದು. ಇಲ್ಲಿ ಲೋಕಗಳನ್ನು ಅಳೆಯುವ ಕ್ರಿಯೆಯನ್ನು ಸೂಚಿಸುವುದಿಲ್ಲ ಇದು ಚತುರ್ವಿಂಶತಿ ಮೂರ್ತಿಗಳಲ್ಲಿಯ ತ್ರಿವಿಕ್ರಮ.

ಇದೇ ರೀತಿಯ ಮೂರ್ತಿಯ ಧ್ಯಾನವು ಪರಾಶರ ಸಂಹಿತೆ (೧೩ : ೫೬)ಯಲ್ಲಿ ದೊರೆಯುತ್ತದೆ :

**ಚಕ್ರ ಶಂಖ ಗದಾ ಪದ್ಮ ಧಾರಿಣಂ ಭೂಪತಿಂ ವಿಭುಮ್**

**ಸರ್ವಾಭರಣ ಭೂಷಾಂಗ ನಮಾಮಿ ಶ್ರೀ ತ್ರಿವಿಕ್ರಮ್ ||**

ಚಕ್ರ ಶಂಖ ಗದಾ ಪದ್ಮಗಳನ್ನು ಧರಿಸಿ, ಭೂಮಿಯ ಪತಿಯಾಗಿರುವ, ಸಕಲ ಆಭರಣಗಳಿಂದ ಅಲಂಕೃತನಾಗಿರುವ ಶ್ರೀ ತ್ರಿವಿಕ್ರಮಮೂರ್ತಿಗೆ ನಮಸ್ಕಾರ. ಈ ಸ್ವಾಮಿಯು ಚತುರ್ವಿಂಶತಿ ಮೂರ್ತಿ ರೂಪದ ವರ್ಗಕ್ಕೆ ಸೇರುತ್ತಾನೆ.


*ಇತಿ ಶ್ರೀ ಬ್ರಾಹ್ಮೀಯೇ ಚಿತ್ರಕರ್ಮ ಶಾಸ್ತ್ರೇ ಪ್ರಾದುರ್ಭಾವಕಾಂಡೇ ವಾಮನ ಲಕ್ಷಣಂ ನಾಮ ಪಂಚಮೋಽಧ್ಯಾಯಃ*

ಅಥ ಷಷ್ಠ್ಯಾಽಧ್ಯಾಯಃ

# ಜಾಮದಗ್ನ್ಯ ಲಕ್ಷಣಮ್

ಅಥೋಚ್ಯತೇ ತು ರಾಮಸ್ಯ ಜಾಮದಗ್ನ್ಯಸ್ಯ ಲಕ್ಷಣಮ್
ಮಧ್ಯಮಂ ದಶತಾಲಂ ಸ್ಯಾತ್ ಮಾನೋನ್ಮಾನ ಪ್ರಮಾಣಕಮ್ ॥ ೧ ॥
ದ್ವಿಭುಜ ಸ್ತರುಣಾದಿತ್ಯರುಚಿಃ ಶ್ವೇತಾಂಬರಶ್ಶುಚಿಃ
ಶುಕ್ಲ ಪೀತಾಂಬರೋವಾಥ ಶುಕ್ಲ ವಸ್ತ್ರೋತ್ತರೀಯಕಃ ॥ ೨ ॥
ಸೋಪವೀತೀ ಜಟಾಮೌಳೀ ಪದ್ಮಕುಂಡಲ ಮಂಡಿತಃ
ಇಂದ್ರ ಚ್ಛಂದಂ ಮಹಾಹಾರಂ ವಲಯಂ ಬಾಹು ಮಂಡನಮ್ ॥ ೩ ॥
ಮಣಿಬಂಧ ಭೂಷಣಂ ರತ್ನ ಕಟಕಂ ರತ್ನ ಮುದ್ರಿಕಾ
ವಲ್ಲ್ಯಾವಯವಕಂ ನಾಮ್ನೋದರ ಬಂಧನಂ ಸಕೃತ್ರಿಮಮ್ ॥ ೪ ॥
ಕಟಿಬಂಧಂ ಭವೇತ್ ಪಾದ ಮುದ್ರಿಕಾ ರತ್ನಮುದ್ರಿಕಾ
ಏಭಿರಾಭರಣೈ ಸ್ಸಮ್ಯಕ್ ಭೂಷಿತಸ್ತ್ರೀ ಕ್ಷ್ಣಟಂಕಧೃಕ್ ॥ ೫ ॥
ನಾಭೀಗೃಹೇ ತ್ರಿಸ್ಸಪ್ತಾಂಶೇ ಮಾನುಷೋಸ್ಥಾನಕಂ ಭವೇತ್
ತತ್ರೈವ ಚಾಸನಂ ಪ್ರೋಕ್ತಂ ವೈಶಾಖ ಸ್ಥಾನಕಂ ಭವೇತ್ ॥ ೬ ॥

ಈಗ ಜಮದಗ್ನಿಯ ಮಗನಾದ ಪರಶುರಾಮನ ಜಾಮದಗ್ನಿಯ ಲಕ್ಷಣವನ್ನು ವಿವರಿಸಲಾಗುತ್ತದೆ. ಪರಶುರಾಮ ಮೂರ್ತಿಯ ಮಾನ (ಉದ್ದ), ಉನ್ಮಾನ (ದಪ್ಪ), ಪ್ರಮಾಣ (ಅಗಲ) ಈ ಮೂರು ಮಧ್ಯಮ ದಶತಾಳಮಾನವನ್ನು ಅನುಸರಿಸಿ ರೂಪಿಸಬೇಕು. ಮೂರ್ತಿಯು ಎರಡು ಭುಜಗಳನ್ನು ಹೊಂದಿರುತ್ತಾನೆ. ತಾರುಣ್ಯದಲ್ಲಿರುವ ಆದಿತ್ಯನಂತೆ ತೇಜೋವಂತನಾಗಿರುತ್ತಾನೆ. ಶ್ವೇತ ಶುಭ್ರ ರೇಷ್ಮೆವಸನಗಳಿಂದ ಅಲಂಕೃತನಾಗಿರುವ ಈ ಸ್ವಾಮಿಯು ಅದೇ ರೀತಿಯ ಶ್ವೇತ ವಸ್ತ್ರವನ್ನು ಉತ್ತರೀಯವನ್ನಾಗಿ ಪಡೆದಿರುತ್ತಾನೆ. ಯಜ್ಞೋಪವೀತ ಧಾರಿಯಾಗಿ, ಮೌಳೀರೂಪದ ಜಟೆಯನ್ನು ಧರಿಸಿರುವವನು. ಕಿವಿಗಳಲ್ಲಿ ಪದ್ಮಕುಂಡಲಗಳನ್ನು, ಕೊರಳಲ್ಲಿ ಇಂದ್ರಚ್ಛಂದ ಮಣಿಗಳಿಂದ ಮಾಡಿರುವ ಹಾರವನ್ನು ಧರಿಸಿರುವವನು. ತೋಳ್‌ಬಂದಿ, ಕಡಗ, ರತ್ನದ ಬಳೆಗಳು, ರತ್ನಾಂಗುಳೀಯಗಳಿಂದ ಅಲಂಕೃತನಾಗಿರುವವನೂ, ವಲ್ಲ್ಯಾವಯವಕ ಎಂಬ ಉದರಬಂಧವನ್ನೂ, ಸೊಂಟದಲ್ಲಿ ನವರತ್ನ ಖಚಿತವಾದ ಒಡ್ಯಾಣವನ್ನು ಸಿಂಹ ಮತ್ತು ಮಕರ ಮುಖಗಳ ಅಲಂಕಾರದೊಂದಿಗೆ, ಹಸ್ತಗಳಲ್ಲೂ ಪಾದಗಳಲ್ಲೂ ಮಣಿ ಖಚಿತವಾದ ಉಂಗುರಗಳಿಂದ ಶೋಭಿತನಾಗಿರುತ್ತಾನೆ. ಟಂಕ (ಗಂಡುಗೊಡಲಿ) ವನ್ನು ಹಿಡಿದಿರುತ್ತಾನೆ. ಬಗೆಬಗೆಯ ಆಭರಣಗಳನ್ನು ಧರಿಸಿ ಅಲಂಕರಿಸಿಕೊಂಡಿರುತ್ತಾನೆ.



ಚಿತ್ರ ೨೪ : ಪರಶುರಾಮಮೂರ್ತಿ - ೧

## ಅಥಾऽವತಾರ ಫಲಮ್

ಸ್ಥಿತ್ಯೈ ಸ್ಯಾತಾಂ ತಥಾ ಮತ್ಸ್ಯಃ ಕೂರ್ಮಃ ಜ್ಞಾನಾಭಿವೃದ್ಧಯೇ
ಶತ್ರುನಾಶಾಯ ವಾರಾಹಂ ನೃಸಿಂಹಂ ವೈರಿ ನಾಶನಮ್ ‖ ೭ ‖
ಪರಶತ್ರುಪ್ರ(ಣಾಶಂ ಚ ತಥಾ ಪ್ರ)ಜ್ಞಾಭಿವರ್ಧನಮ್
ವಾಮನೋ ಜ್ಞಾನವೃದ್ಧ್ಯೈಸ್ಯಾತ್ ಜ್ಞಾನದಶ್ಶತ್ರುಹಾಭವೇತ್
(ಜ್ಞೋನ ಸ್ವೈಶತ್ರು ಹಾನ್ನಯೇತ್) ‖ ೮ ‖
ಜಾಮದಗ್ನ್ಯೋ ಭವೇದ್ದಾಶರಥಿ ಸ್ಸರ್ವಾರ್ಥಸಿದ್ಧಯೇ
ಸರ್ವಕಾಮಾಭಿವೃದ್ಧ್ಯೈ ಸ್ಯಾತ್ ಸರ್ವಲೋಕಪ್ರಪಾಲನಮ್ ‖ ೯ ‖
ಬಲಭದ್ರೋ ಭವೇಚ್ಛಾಂತ್ಯೈ ಕೃಷ್ಣಸ್ಸರ್ವಾರ್ಥಕಾಮದಃ
ವೈರಿ ನಾಶಕರಃ ಕಲ್ಕೀ ಸರ್ವಪಾಪ ವಿನಾಶನಃ ‖ ೧೦ ‖

ಮತ್ಸ್ಯಾವತಾರದಲ್ಲಿ ಸೌಖ್ಯವನ್ನು, ಕೂರ್ಮಾವತಾರದಲ್ಲಿ ತಿಳಿವು ಮತ್ತು ಅಭಿವೃದ್ಧಿಯನ್ನು, ವರಾಹ ಅವತಾರದಲ್ಲಿ ಶತ್ರ ನಾಶನವನ್ನು, ನರಸಿಂಹ ಅವತಾರದಲ್ಲಿ ವೈರಿಗಳ ಅಳಿವನ್ನು, ವಾಮನ ಅವತಾರದಲ್ಲಿ ತಿಳಿವಳಿಕೆಯುಳ್ಳ ಶ್ರೇಷ್ಠತೆಯನ್ನು, ಶತ್ರುಗಳಾದಂತಹವರ ನಾಶವನ್ನು ಮತ್ತು ಆಧ್ಯಾತ್ಮಿಕ ಜ್ಞಾನಸಂಪತ್ತನ್ನು ದಯಪಾಲಿಸುತ್ತಾರೆ. ಅರಿ ವರ್ಗದವರ ಪಾಲಿಗೆ ಮೃತ್ಯು ಸ್ವರೂಪನಾಗಿರುವ ಜಾಮದಗ್ನ್ಯನಿಯ ಈ ಅವತಾರದಲ್ಲಿ ಜ್ಞಾನಾಭಿವೃದ್ಧಿಯನ್ನುಂಟು ಮಾಡಿ ವೈರಿನಾಶವನ್ನು, ಪ್ರಗತಿಯನ್ನು ದಯಪಾಲಿಸುತ್ತಾನೆ. ರಾಮ ದಾಶರಥಿಯು ಸರ್ವಾಭಿಷ್ಟ ಸಿದ್ಧಿಯನ್ನು, ಸಕಲ ಸನ್ಮಂಗಳಗಳನ್ನು ಬಲಭದ್ರ(ಬಲರಾಮ)ನು ಶಾಂತಿಯನ್ನು, ಶ್ರೀಕೃಷ್ಣನು ನಾಲ್ಕು ವಿಧವಾದ ಪುರುಷಾರ್ಥಗಳ ಸಿದ್ಧಿಯನ್ನು, ಕಲ್ಕಿಯು ವೈರಿನಾಶ, ಸರ್ವಪಾಪ ಪರಿಹಾರವನ್ನು ದಯಪಾಲಿಸುತ್ತಾರೆ.

### *ವಿಶೇಷ ವಿವರ*

ಪರಶುರಾಮನು ಮಹರ್ಷಿ ಜಮದಗ್ನಿಯ ಪರಾಕ್ರಮಿ ಸುತ. ಈತನು ಕ್ಷತ್ರಿಯರನ್ನು ಇಪ್ಪತ್ತೊಂದು ಬಾರಿ ಸಂಹಾರಮಾಡಿದ. ಭೃಗು ವಂಶದಲ್ಲಿ ಜನಿಸಿದ ಇವರು ಭಾರ್ಗವರೆಂದು ಪ್ರಖ್ಯಾತರು. ಪಶ್ಚಿಮ ಭಾರತದಲ್ಲಿ ರಾಜ್ಯಭಾರ ನಡೆಸುತ್ತಿದ್ದ ಹೈಹಯ ರಾಜರ ಕುಲಗುರುಗಳಾಗಿದ್ದರು. ಇವರು ಆನರ್ತ (ಪ್ರಸ್ತುತ ಗುಜರಾತ್) ದೇಶವಾಸಿಗಳು. ಹೈಹಯ ರಾಜರೊಂದಿಗೆ ಭಿನ್ನಾಭಿಪ್ರಾಯ ಬಂದು ಉತ್ತರ ಭಾರತದ ಕನ್ಯಕುಬ್ಜಕ್ಕೆ ತಮ್ಮವಾಸವನ್ನು ಬದಲಿಸಿದರು. ನಂತರದ ೧೨ ಪೀಳಿಗೆಗಳವರೆವಿಗೂ ಭಾರ್ಗವ ಮತ್ತು ಹೈಹಯರ ಮಧ್ಯೆ ವೈರ ಸಾಗುತ್ತಲೇ ಬಂತು. ಆದ್ದರಿಂದ ಕ್ರಿಪೂ ೨೫೫೦ರಿಂದ ಕ್ರಿಪೂ ೨೩೫೦ರತನಕದ ಕಾಲವನ್ನು ಇತಿಹಾಸದಲ್ಲಿ ಭಾರ್ಗವ-ಹೈಹಯರ ಕಾಲವೆಂದೇ ಗುರ್ತಿಸುತ್ತಾರೆ. ಇದು ಚರಮಸೀಮೆಯನ್ನು ಮುಟ್ಟಿದ್ದು ಪರಶುರಾಮ ಜಾಮದಗ್ನ್ಯನ ಕಾಲದಲ್ಲಿ. ಪರಶುರಾಮ ಹೈಹಯರನ್ನು ಮತ್ತು ಸಂಬಂಧಿತ ಇತರ ಕ್ಷತ್ರಿಯರನ್ನು ೨೧ ಬಾರಿ ಸಂಹಾರಮಾಡಿದ. ಆದ್ದರಿಂದ ಬ್ರಹ್ಮತೇಜದ ಸಾಕಾರ ಮೂರ್ತಿಯಾಗಿ ಹಾಗೂ ಈ ವಿಶಿಷ್ಟಕಾಲದ ಇತಿಹಾಸವಾಗಿ ಪರಶುರಾಮ ಅಮರನಾಗಿದ್ದಾನೆ.

ರಾಮ ಭಾರ್ಗವ ಎಂಬ ಹೆಸರಿನ ವೈದಿಕ ಋಷಿಯು ಸೂಕ್ತದ್ರಷ್ಟಾರನಾಗಿ (ಋಗ್ವೇದ ೧೦ : ೧೧೦) ಕಾಣಿಸುತ್ತಾನೆ. ಸರ್ವಾನುಕ್ರಮಣಿಯ ಪ್ರಕಾರ ಈತನೇ ಪರಶುರಾಮ. ರಾಮ ಭಾರ್ಗವನು ಶ್ಯಾಪರ್ಣರ ಪುರೋಹಿತ.

ಹೈಹಯರಾಜ ಕಾರ್ತವೀರ್ಯ ಮತ್ತು ಪರಶುರಾಮರ ಮಧ್ಯೆ ನಡೆದ ಯುದ್ಧದ ಉಲ್ಲೇಖವು ಸಂಕ್ಷಿಪ್ತ ರೂಪದಲ್ಲಿ ಅಥರ್ವವೇದದಲ್ಲಿದೆ (೫ : ೧೮ : ೧೦). ಅದರ ಪ್ರಕಾರ ಕಾರ್ತವೀರ್ಯರಾಜನು ಜಮದಗ್ನಿಯ ಬಳಿಯಲ್ಲಿದ್ದ ಧೇನುವನ್ನು ಇದ್ದಕ್ಕಿದ್ದಂತೆಯೇ ಕೊಂಡೊಯ್ಯುವ ಪ್ರಯತ್ನವನ್ನು ಮಾಡಿದ. ಆದ್ದರಿಂದ ರಾಜನಿಗೂ ಅವನ ಪರಿವಾರದವರಿಗೂ ಸೋಲುಗಳ ಪರಂಪರೆಯೇ ಪರಶುರಾಮನಿಂದ ದೊರೆಯಿತು.

ಮಹರ್ಷಿ ಜಮದಗ್ನಿಯ ಐದುಮಂದಿ ಪುತ್ರರಲ್ಲಿ ಕೊನೆಯವನೇ ಪರಶುರಾಮ. ಈತನ ತಾಯಿಯ ಹೆಸರು ಕಾಮಲೀ ರೇಣುಕಾ. ಈಕೆಯು ಇಕ್ಷ್ವಾಕು ವಂಶದ ರಾಜಪುತ್ರಿ. ಪರಶುರಾಮ ಧನುರ್ವಿದ್ಯೆ ಮತ್ತು ಇತರ ಎಲ್ಲಾ ಶಸ್ತ್ರ ಅಸ್ತ್ರಗಳ ಪ್ರಯೋಗ ಸಂಬಂಧದ ವಿದ್ಯೆಗಳಲ್ಲೂ ಪ್ರವೀಣನಾಗಿದ್ದ (ಬ್ರಹ್ಮಪುರಾಣ ೧೦). ಈತನು ವಿಷ್ಣುವಿನ ಅವತಾರವಾಗಿದ್ದ (ಪದ್ಮ ಪುರಾಣ, ಉತ್ತರಖಂಡ ೨೪೮; ಮತ್ಸ್ಯಪುರಾಣ ೪೭ : ೨೪೪; ವಾಯುಪುರಾಣ ೯೧ : ೮೮ ಮತ್ತು ೩೬ : ೯೦). ಈತ ಹುಟ್ಟಿದ್ದು ವೈಶಾಖ ಶುಕ್ಲ ತೃತೀಯ (ರೇಣುಕಾ ಮಹಾತ್ಮ್ಯೆ, ೧೪)ದಲ್ಲಿ ೧೯ನೆಯ ತ್ರೇತಾಯುಗದಲ್ಲಿ (ದೇವೀ ಭಾಗವತ, ೪ : ೧೬). ತ್ರೇತಾಯುಗ ಮತ್ತು ದ್ವಾಪರಯುಗದ ಸಂಧಿಕಾಲದಲ್ಲಿ ಪರಶುರಾಮನ ಅವತಾರ ಉಂಟಾಯಿತು (ಮಹಾಭಾರತ, ಆದಿಪರ್ವ ೨ : ೩).

ಉಪನಯನದ ನಂತರ ಈತನು ಸಾಲಗ್ರಾಮ ಪರ್ವತದಲ್ಲಿ ಕಶ್ಯಪ ಮಹರ್ಷಿಯಿಂದ ಮಂತ್ರೋಪದಿಷ್ಟನಾದನು (ಪದ್ಮಪುರಾಣ ೩ : ೨೪೬). ನಂತರ ತಪಸ್ಸು ಮಾಡಿ ಶಂಕರನನ್ನು ಪ್ರಸನ್ನಗೊಳಿಸಿಕೊಂಡು ಧನುರ್ವೇದ, ಶಸ್ತ್ರಾಸ್ತ್ರ ಪ್ರಯೋಗ, ಮಂತ್ರಸಿದ್ಧಿಗಳ ಜ್ಞಾನವನ್ನು ಪಡೆದುಕೊಂಡ (ರೇಣುಕಾಮಹಾತ್ಮ್ಯೆ ೧೫; ಬ್ರಹ್ಮಾಂಡ ಪುರಾಣ ೩ : ೨೨ - ೫೩ - ೬೦). ತಪಸ್ಸಿನಿಂದ ಹಿಂತಿರುಗುವಾಗ ದಾರಿಯಲ್ಲಿ ಸಾಲಗ್ರಾಮ ಶಿಖರದ ಮೇಲೆ ಶೂಲದಲ್ಲಿ ಸಿಕ್ಕಿಬಿದ್ದಿದ್ದ ಶಾಂತಾಳ ಪುತ್ರನನ್ನು ಮುಕ್ತಗೊಳಿಸಿ ತನ್ನೊಂದಿಗೆ ಕರೆದುಕೊಂಡು ಬಂದ. ಅವನೇ ಮುಂದೆ ಪರಶುರಾಮನ ಶಿಷ್ಯನಾಗಿ ಅಕೃತವ್ರಣ ಎಂಬ ಹೆಸರಿನಿಂದ ಪ್ರಖ್ಯಾತನಾದ.

ಜಮದಗ್ನಿಯ ಆಶ್ರಮವು ನರ್ಮದಾ ನದಿಯ ತೀರದಲ್ಲಿತ್ತು (ಬ್ರಹ್ಮಾಂಡ ಪುರಾಣ, ೩ : ೨೩ : ೨೬). ಪರಶುರಾಮನ ಆಶ್ರಮವೂ ಅಲ್ಲಿಯೇ ಇತ್ತು.

ಒಮ್ಮೆ ಜಮದಗ್ನಿ ತನ್ನ ಪತ್ನಿ ರೇಣುಕೆಯ ಮೇಲೆ ಕೋಪಗೊಂಡಿದ್ದು ಪರಶುರಾಮನಿಗೆ ಆಕೆಯ ತಲೆಯನ್ನು ಕತ್ತರಿಸುವಂತೆ ಅಪ್ಪಣೆಮಾಡಿದ. ತಂದೆಯ ಆಜ್ಞೆಯನ್ನು ಪರಶುರಾಮ ಕೂಡಲೇ ಪಾಲಿಸಿದ (ಮಹಾಭಾರತ, ವನಪರ್ವ ೧೧೬ : ೧೪). ಇದರಿಂದ ಪ್ರಸನ್ನನಾದ

ಜಮದಗ್ನಿಯು ಈತನ ಕೋರಿಕೆಯ ಪ್ರಕಾರ ರೇಣುಕೆಯನ್ನು ಬದುಕಿಸಿ 'ನೀನು ಅಜೇಯನಾಗಿರುತ್ತೀಯೆ. ನೀನು ಇಚ್ಛಾಮರಣಿ ಯಾಗಿರುತ್ತೀಯೆ' ಎಂದು ವರಕೊಟ್ಟು ಆಶೀರ್ವದಿಸಿದ (ವಿಷ್ಣುಧರ್ಮೋತ್ತರ ಪುರಾಣ ೧ : ೩೬ : ೧೧).

ವಿಷ್ಣುಧರ್ಮೋತ್ತರ ಪುರಾಣದಲ್ಲಿ ಪರಶುರಾಮನಿಗೆ ೪೧ ಅಸ್ತ್ರ - ಶಸ್ತ್ರಗಳ ಬಳಕೆಯ ತಿಳಿವಿತ್ತು ಎಂದು ಹೇಳಿ ಈ ವಿವರ ಕೊಡಲಾಗಿದೆ :

೧. ಬ್ರಹ್ಮಾಸ್ತ್ರ, ೨. ವೈಷ್ಣವಾಸ್ತ್ರ, ೩. ರೌದ್ರಾಸ್ತ್ರ, ೪. ಆಗ್ನೇಯಾಸ್ತ್ರ, ೫. ವಾಸವಾಸ್ತ್ರ ೬. ನೈಋತ್ಯಾಸ್ತ್ರ, ೭. ಯಾಮ್ಯಾಸ್ತ್ರ, ೮. ಕೌಬೇರಾಸ್ತ್ರ, ೯. ವಾರುಣಾಸ್ತ್ರ, ೧೦. ವಾಯವ್ಯಾಸ್ತ್ರ, ೧೧. ಸೌಮ್ಯಾಸ್ತ್ರ, ೧೨. ಸೌರಾಸ್ತ್ರ, ೧೩. ಪಾರ್ವತಾಸ್ತ್ರ, ೧೪. ಚಕ್ರ, ೧೫. ವಜ್ರ, ೧೬. ಪಾಶ, ೧೭. ಸರ್ಪಾಸ್ತ್ರ, ೧೮. ಗಾಂಧರ್ವಾಸ್ತ್ರ, ೧೯. ಸ್ವಾಪನಾಸ್ತ್ರ, ೨೦. ಭೌತಾಸ್ತ್ರ, ೨೧. ಪಾಶುಪತಾಸ್ತ್ರ ೨೨. ಐಶಿಕಾಸ್ತ್ರ, ೨೩. ತರ್ಜನಾಸ್ತ್ರ, ೨೪. ಪ್ರಾಸಾಸ್ತ್ರ, ೨೫. ಗಾರುಡಾಸ್ತ್ರ, ೨೬. ನರ್ತನಾಸ್ತ್ರ, ೨೭. ಅಸ್ತ್ರರೋಧನ, ೨೮. ಆದಿತ್ಯಾಸ್ತ್ರ, ೨೯. ರೈವತಾಸ್ತ್ರ, ೩೦. ಮಾನವಾಸ್ತ್ರ, ೩೧. ಅಕ್ಷಿಸಂತರ್ಜನಾಸ್ತ್ರ, ೩೨. ಭೀಮಾಸ್ತ್ರ, ೩೩. ಜುಂಭ್ರಣಾಸ್ತ್ರ, ೩೪. ರೋಧನಾಸ್ತ್ರ, ೩೫. ಸೌಪರ್ಣಾಸ್ತ್ರ, ೩೬. ಪರ್ಜನ್ಯಾಸ್ತ್ರ, ೩೭. ರಾಕ್ಷಸಾಸ್ತ್ರ, ೩೮. ಮೋಹನಾಸ್ತ್ರ, ೩೯. ಕಾಲಾಸ್ತ್ರ, ೪. ದಾನವಾಸ್ತ್ರ, ೪೧. ಬ್ರಹ್ಮಶಿರಸಾಸ್ತ್ರ.

ಹೈಹಯ ರಾಜನಾದ ಕಾರ್ತವೀರ್ಯನು ತಮ್ಮ ಕುಲಗುರುವಾದ ಋಚೀಕ ಔರ್ವ ಭಾರ್ಗವನಿಗೆ ಬಹುಳವಾದ ಧನವನ್ನು ಕೊಟ್ಟಿದ್ದ. ನಂತರದಲ್ಲಿ ಋಚೀಕನು ಧನವನ್ನು ಹಿಂತಿರುಗಿಸುವುದು ಸಾಧ್ಯವಿಲ್ಲ ಎಂದು ನೇರವಾಗಿ ಹೇಳಿದ. ಇದರಿಂದ ಕೋಪಗೊಂಡ ಕಾರ್ತಿವೀರ್ಯನ ಪುತ್ರ ಸಹಸ್ರಾರ್ಜುನನು (ಕಾರ್ತವೀರ್ಯಅರ್ಜುನ) ಋಚೀಕನ ಮೇಲೆ ಕೈ ಎತ್ತಿದ. ಇದರಿಂದ ಋಚೀಕನ್ನು ತನ್ನ ಇತರ ಬಂಧುಗಳೊಂದಿಗೆ ಕನ್ಯಕುಬ್ಜಕ್ಕೆ ಓಡಿಹೋದ. ಋಚೀಕನು ಬಹುಸ್ವಾಭಿಮಾನಿಯಾಗಿದ್ದ. ಅಸ್ತ್ರವಿದ್ಯೆಯಲ್ಲೂ ಕುಶಲಿಯಾಗಿದ್ದ. ಆದ್ದರಿಂದ ಕನ್ಯಕುಬ್ಜವನ್ನು ತಲುಪುತ್ತಲೇ ಹೈಹಯರ ಮೇಲೆ ಪ್ರತಿಕಾರವನ್ನು ನಡೆಸಲು ಶಕ್ತಿಶಾಲಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದರಲ್ಲಿ, ಉತ್ತರ ಭಾರತದ ಬಲಶಾಲಿಯಾದ ರಾಜರನ್ನು ತನ್ನ ಬೆಂಬಲಿಗರನ್ನಾಗಿ ಮಾಡಿಕೊಳ್ಳುವುದರಲ್ಲಿ ತೊಡಗಿದ. ಇದೇ ಉದ್ದೇಶದಿಂದಲೇ ಕನ್ಯಕುಬ್ಜದ ಗಾಧಿರಾಜನ ಮಗಳಾದ ಸತ್ಯವತಿಯನ್ನು ತಾನು ಮದುವೆಯಾದ. ತನ್ನ ಮಗ ಜಮದಗ್ನಿಗೆ ಅಯೋಧ್ಯೆಯ ರಾಜವಂಶದ ರೇಣುರಾಜನ ಮಗಳಾದ ರೇಣುಕೆಯೊಂದಿಗೆ ವಿವಾಹವನ್ನೂ ಮಾಡಿಸಿದ.

ಈ ರೀತಿಯಾಗಿ ಕನ್ಯಕುಬ್ಜ ಮತ್ತು ಅಯೋಧ್ಯೆಯ ಇಬ್ಬರು ರಾಜರು ಭಾರ್ಗವರ ಪರವಾಗಿ ನಿಂತರು.

ಜಮದಗ್ನಿ ಶಸ್ತ್ರವಿದ್ಯಾಪ್ರವೀಣನೂ, ವೀರನೂ ಆಗಿದ್ದ. ಆತನ ಮಗ ಪರಶುರಾಮ ತಂದೆಗಿಂತಲೂ ಹೆಚ್ಚಾಗಿ ಶಸ್ತ್ರಾಸ್ತ್ರ ಸಂಪತ್ತನ್ನು ಗಳಿಸಿದ್ದು ದೊಡ್ಡ ಪರಾಕ್ರಮಿಯಾಗಿದ್ದ.

ಪರಶುರಾಮ ತಪಸ್ಸಿಗಾಗಿ ಹೋಗಿದ್ದಾಗ ಕಾರ್ತವೀರ್ಯ ಅರ್ಜುನನು ಜಮದಗ್ನಿಯನ್ನು ನೋಡಲೆಂದು ಬಂದ. ಪರಶುರಾಮ ತಪಸ್ಸಿಗೆ ಹೋಗುವ ಮೊದಲು ತನ್ನಲ್ಲಿದ್ದ ಕಾಮಧೇನುವನ್ನು ತನ್ನ ತಂದೆಯ ಬಳಿ ಬಿಟ್ಟಿದ್ದ. ಕಾರ್ತವೀರ್ಯನು ಅದನ್ನು ಜಮದಗ್ನಿಯಿಂದ ಸೆಳೆದೊಯ್ಯಲು ಪ್ರಯತ್ನಿಸಿದ. ಕಾಮಧೇನುವಿನ ಶರೀರದಿಂದ ಉತ್ಪನ್ನವಾದ ಸಾವಿರಾರು ಮಂದಿ ಯೋಧರು ಕಾರ್ತವೀರ್ಯನ ವಧೆ ನಡೆಸಲು ಪ್ರಯತ್ನಿಸಿದರು. ಆದರೂ ಕಾರ್ತವೀರ್ಯನು ಜಮದಗ್ನಿಯನ್ನು ಬಡಿದು, ಆತನ ಆಶ್ರಮವನ್ನು ಸುಟ್ಟು, ಕಾಮಧೇನುವನ್ನು ತನ್ನೊಂದಿಗೆ ಸೆಳೆದುಕೊಂಡು ತನ್ನ ರಾಜ್ಯವನ್ನು ಸೇರಿಕೊಂಡ.

ತಪಸ್ಸಿನಿಂದ ಹಿಂತಿರುಗಿದ ಪರಶುರಾಮನಿಗೆ ಕಾರ್ತವೀರ್ಯನ ಅತಿಕ್ರಮಣ ಗೊತ್ತಾಗಿ, ಅವನನ್ನು ವಧಿಸುವುದಾಗಿ ಪ್ರತಿಜ್ಞೆಯನ್ನು ಮಾಡಿದ. ಆಗ ಜಮದಗ್ನಿಯು 'ಬ್ರಾಹ್ಮಣನಾದವನಿಗೆ ಈ ಕೆಲಸವು ಶೋಭೆತರುವುದಿಲ್ಲ' ಎಂದು ಹೇಳಿ ಈ ಬಗ್ಗೆ ಬ್ರಹ್ಮ ಮತ್ತು ಶಿವ ಇವರ ಅಂಗೀಕಾರವನ್ನು ಪಡೆದುಕೊಳ್ಳಬೇಕೆಂದು ಹೇಳಿದ. ಪರಶುರಾಮ ಅದೇ ಪ್ರಕಾರ ತಪಸ್ಸು ಮಾಡಿ ಅವರ ಒಪ್ಪಿಗೆಯನ್ನು ಪಡೆದುಕೊಂಡು, ಸರಸ್ವತೀ ನದಿಯ ದಂಡೆಯಲ್ಲಿದ್ದ ಅಗಸ್ತ್ಯ ಮಹರ್ಷಿಯ ಬಳಿಗೆ ಬಂದ. ಅವರ ಅಪ್ಪಣೆಯಂತೆ ಗಂಗಾನದಿಯ ಮೂಲದಲ್ಲಿ ಕುಳಿತು ತಪಸ್ಸುಮಾಡಿದ. ಈ ರೀತಿಯಾಗಿ ದೇವತೆಗಳ ಆಶೀರ್ವಾದವನ್ನು ಪಡೆದು ಪರಶುರಾಮ ನರ್ಮದೆಯ ತೀರಕ್ಕೆ ಬಂದ. ಅಲ್ಲಿಂದ ದೂತನನ್ನು ಕಳುಹಿಸಿ ಕಾರ್ತವೀರ್ಯನನ್ನು ಯುದ್ಧಕ್ಕೆ ಆಹ್ವಾನಿಸಿದ.

ಪರಶುರಾಮನ ಪ್ರತಿಜ್ಞೆಯನ್ನು ಅರಿತ ನಂತರ ಕಾರ್ತವೀರ್ಯನು ಯುದ್ಧದ ಕರೆಯನ್ನು ಅಂಗೀಕರಿಸಿದ. ಹಲವು ಅಕ್ಷೋಹಿಣಿ ಸೇನೆಯೊಂದಿಗೆ ಯುದ್ಧ ಭೂಮಿಗೆ ಬಂದ. ನರ್ಮದೆಯ ಉತ್ತರ ತೀರದಲ್ಲಿ ಇವರು ಯುದ್ಧಕ್ಕಾಗಿ ಸೇರಿದ್ದರು. ಮತ್ಸ್ಯರಾಜನು ಮೊದಲಿಗೆ ಪರಶುರಾಮನ ಮೇಲೆ ಆಕ್ರಮಣನಡೆಸಿದ. ಪರಶುರಾಮ ಬಹು ಸುಲಭವಾಗಿ ಅವನನ್ನು ವಧಿಸಿದ. ನಂತರ ಬೃಹದ್ಬಲ, ಸೋಮದತ್ತ ಹಾಗೂ ವಿದರ್ಭ, ಮಿಥಿಲಾ, ನಿಷಧ ಮತ್ತು ಮಗಧ ದೇಶಗಳ ಅರಸರನ್ನು ಪರಶುರಾಮ ಕೊಂದುಹಾಕಿದ. ಭದ್ರಕಾಳಿಯ ಕೃಪೆಯಿಂದ ಏಳು ಅಕ್ಷೌಹಿಣಿ ಸೈನ್ಯದೊಂದಿಗೆ ಬಂದಿದ್ದ ಸೂರ್ಯವಂಶದ ಸುಚಂದ್ರನನ್ನು ಪರಶುರಾಮನು ಸೋಲಿಸಿದ. ಸುಚಂದ್ರನ ಮಗ ಪುಷ್ಕರಾಕ್ಷನು ಈ ಹೋರಾಟದಲ್ಲಿ ಮಡಿದ.

ನಂತರ ಕಾರ್ತವೀರ್ಯ ಮತ್ತು ಅವನ ನೂರುಮಂದಿ ಮಕ್ಕಳೊಂದಿಗೆ ಯುದ್ಧನಡೆಯಿತು. ಪ್ರಾರಂಭಕ್ಕೆ ಪರಶರಾಮನನ್ನು ಪ್ರಜ್ಞಾಹೀನನಾಗುವಂತೆ ಹೊಡೆದ. ಆದರೆ ನಂತರ ಪರಶುರಾಮನು ಕಾರ್ತವೀರ್ಯನನ್ನು ಅವನ ಮಕ್ಕಳ ನೂರು ಅಕ್ಷೌಹಿಣಿ ಸೈನ್ಯವನ್ನು ಧ್ವಂಸಮಾಡಿದ (ಬ್ರಹ್ಮಾಂಡ ಪುರಾಣ ೩ : ೩೯ : ೧೧೯, ಮಹಾಭಾರತ, ದ್ರೋಣಪರ್ವ ೧ : ೮). ಮಹಾಭಾರತದ ಪ್ರಕಾರ ಪರಶುರಾಮನು ಕಾರ್ತವೀರ್ಯನ ಸಾವಿರ ತೋಳುಗಳನ್ನು ಕತ್ತರಿಸಿ ತೀರಾ ಸಾಮಾನ್ಯ ಪ್ರಾಣಿಯನ್ನು ಕೊಲ್ಲುವಂತೆ ಕೊಂದು ಹಾಕಿದ (ಮಹಾಭಾರತ, ಶಾಂತಿಪರ್ವ,

೪೫ : ೪೧). ಕಾರ್ತವೀರ್ಯನ ಪುತ್ರರಲ್ಲಿ ಶೂರ, ವೃಷಾಸ್ಯ, ವೃಷ, ಶೂರಸೇನ ಮತ್ತು ಜಯಧ್ವಜರೆಂಬ ಮಕ್ಕಳು, ಓಡಿಹೋಗಿ ಹಿಮಾಲಯದ ಕಾಡುಗಳಲ್ಲಿ ಅಡಗಿಕೊಂಡರು. ಪರಶುರಾಮನು ಯುದ್ಧವನ್ನು ಸಮಾಪ್ತಿಗೊಳಿಸಿದ.

ಕ್ಷತ್ರಿಯ ಹತ್ಯೆಯ ಪಾಪವನ್ನು ದೂರಮಾಡಿಕೊಳ್ಳಲು ಜಮದಗ್ನಿಯು ಪರಶುರಾಮನಿಗೆ ಹನ್ನೆರಡು ವರ್ಷ ತಪಸ್ಸು ಮಾಡಬೇಕೆಂದು ಸೂಚಿಸಿದ. ಅದರಂತೆ ಪರಶುರಾಮನು ಮಹೇಂದ್ರ ಪರ್ವತದ ಮೇಲೆ ತಪಸ್ಸು ನಡೆಸಿದ. ಮತ್ಸ್ಯಪುರಾಣದ (೩೬) ಪ್ರಕಾರ ಕೈಲಾಸ ಪರ್ವತದಲ್ಲಿ ಗಣೇಶನ ಆರಾಧನೆ ನಡೆಸಿದ. ಪರಶುರಾಮ ಹೋದ ಕಡೆಗಳಲ್ಲೆಲ್ಲಾ ಕ್ಷತ್ರಿಯರು ಭಯದಿಂದ ನಡುಗುತ್ತಾ ಆತನ ದೃಷ್ಟಿಗೆ ಬರದಂತೆ ಮರೆಯಲ್ಲಿ ಅಡಗಿಕೊಳ್ಳುತ್ತಿದ್ದರು. ಇತರರೆಲ್ಲರೂ ಈತನನ್ನು ಸ್ವಾಗತಿಸುತ್ತಾ ಜಯಕಾರ ಮಾಡುತ್ತಿದ್ದರು (ಬ್ರಹ್ಮಾಂಡ ಪುರಾಣ ೩. ೨೧. ೧೪ ).

ಪರಶುರಾಮ ತಪಸ್ಸಿನಲ್ಲಿದ್ದಾಗಲೇ ಕಾರ್ತವೀರ್ಯನ ಮಕ್ಕಳು ತಪಸ್ಸಿನಲ್ಲಿದ್ದ ಜಮದಗ್ನಿಯ ತಲೆಯನ್ನು ಕತ್ತರಿಸಿ ತಲೆಯೊಂದಿಗೆ ಓಡಿಹೋದರು. ಬ್ರಹ್ಮಾಂಡ ಪುರಾಣದ (೩ : ೨೯ : ೧೪) ಪ್ರಕಾರ ಜಮದಗ್ನಿಯ ವಧೆ ನಡೆಸಿದವನು ಕಾರ್ತವೀರ್ಯನ ಅಮಾತ್ಯನಾದ ಚಂದ್ರಗುಪ್ತನು.

ಹನ್ನೆರಡು ವರ್ಷಗಳ ತಪಸ್ಸಿನಿಂದ ಪರಶುರಾಮನು ಹಿಂದಿರುಗುತ್ತಿದ್ದಾಗ ಹಾದಿಯಲ್ಲಿಯೇ ತನ್ನ ತಂದೆಯ ಕೊಲೆಯ ವಿಷಯ ಗೊತ್ತಾಯಿತು. ಆಶ್ರಮಕ್ಕೆ ಬರುತ್ತಲೇ ತಾಯಿ ರೇಣುಕೆಯು ಇಪ್ಪತ್ತೊಂದು ಬಾರಿ ಎದೆಯನ್ನು ಬಡಿದುಕೊಂಡು ರೋದಿಸುತ್ತಾ ಈ ವಿಷಯವನ್ನು ಹೇಳಿದಳು. ಕೋಪಗೊಂಡ ಪರಶುರಾಮ ಕೇವಲ ಹೈಹಯೇರನ್ನು ಮಾತ್ರವಲ್ಲ ಭೂಮಂಡಲದ ಎಲ್ಲಾ ಕ್ಷತ್ರಿಯರನ್ನೂನಾಶಮಾಡುವ ಪ್ರತಿಜ್ಞೆಯನ್ನು ಕೈಗೊಂಡ.

ಪರಶುರಾಮನ ಈ ಪ್ರತಿಜ್ಞೆಯ ವಿವರಣೆ ರೇಣುಕಾ ಮಹತ್ಮ್ಯೆಯಲ್ಲಿ ಬೇರೆಯ ತೆರನಾಗಿ ಹೇಳಲಾಗಿದೆ. ಕಾರ್ತವೀರ್ಯನು ಕಾಮಧೇನುವನ್ನು ಕೊಂಡಯ್ಯಲು ಬಂದಾಗಲೇ ಜಮದಗ್ನಿಯ ವಧೆಯನ್ನು ಮಾಡಿದ, ಆಗ ತನ್ನ ತಂದೆಯ ಔರ್ಧ್ವ ದೈಹಿಕವನ್ನು ನಡೆಸಲು ಒಂದು ಡೋಲಿಯಲ್ಲಿ ಜಮದಗ್ನಿಯ ಶವ ಮತ್ತು ತಾಯಿ ರೇಣುಕೆಯನ್ನು ಇರಿಸಿಕೊಂಡು ಕನ್ಯಕುಬ್ಜದ ಆಶ್ರಮದಿಂದ ಹೊರಕ್ಕೆ ಹೊರಟ. ಹಲವು ತೀರ್ಥಕ್ಷೇತ್ರಗಳನ್ನು ಕಾಡುಗಳನ್ನು ದಾಟಿ ಪಶ್ಚಿಮಘಟ್ಟಗಳಲ್ಲಿಯ ಮಲ್ಲಿಕೀ ಎಂಬ ದತ್ತಾತ್ರೇಯ ಕ್ಷೇತ್ರಕ್ಕೆ ಬಂದ. ಅಲ್ಲಿಂದ ಮುಂದೆ ಹೊರಡಲು ಸಿದ್ಧವಾಗುತ್ತಿದ್ದಂತೆಯೇ ಆಕಾಶವಾಣಿಯು 'ನಿನ್ನ ತಂದೆಯ ಅಗ್ನಿಸಂಸ್ಕಾರ ಇಲ್ಲಿಯೇ ಮಾಡು' ಎಂದು ಹೇಳಿತು. ಅದೇ ಪ್ರಕಾರ ದತ್ತಾತ್ರೇಯನ ಅನುಮತಿಪಡೆದು ತನ್ನ ತಂದೆಯ ಅಗ್ನಿ ಸಂಸ್ಕಾರವನ್ನು ನಡೆಸಿದ. ರೇಣುಕೆಯೂ ಆ ಅಗ್ನಿಯಲ್ಲಿಯೇ ಸತಿಯಾದಳು.

ತಾಯಿ ತಂದೆಗಳನ್ನು ಮಮತೆಯಿಂದ ಪರಶುರಾಮ ಕರೆದಾಗ ಇಬ್ಬರೂ ಅಲ್ಲಿ ಪ್ರತ್ಯಕ್ಷರಾದರು. ಆ ಸ್ಥಾನದಲ್ಲಿ 'ಮಾತೃತೀರ್ಥ'ದ ಸ್ಥಾಪನೆಯಾಯಿತು. ಪ್ರಸ್ತುತ ಮಹಾರಾಷ್ಟ್ರದ ಮಾಹುರ್ ಈ ಕ್ಷೇತ್ರವೆಂದು ಗುರ್ತಿಸುತ್ತಾರೆ. ಈ ತೀರ್ಥದಲ್ಲಿ ರೇಣುಕಾದೇವಿ ವಾಸಿಸುತ್ತಾಳೆ.

ಆಕೆಯು ಪರಶುರಾಮನಿಗೆ ಕಾರ್ತವೀರ್ಯನನ್ನು ಇತರ ಕ್ಷತ್ರಿಯರನ್ನೂ ವಧಿಸುವಂತೆ ಅಪ್ಪಣೆನೀಡಿದ್ದು ಇಲ್ಲಿಯೇ.

ನರ್ಮದಾನದಿಯ ತೀರದಲ್ಲಿ ಮಾರ್ಕಂಡೇಯ ಋಷಿಯ ಆಶ್ರಮವಿತ್ತು. ಅಲ್ಲಿ ಮಾರ್ಕಂಡೇಯ ಋಷಿಯ ಆಶೀರ್ವಾದವನ್ನು ಪಡೆದು ಪರಶುರಾಮ ಕಾರ್ತವೀರ್ಯನ ವಧೆ ನಡೆಸಿದ. ಭೂಮಿಯ ಮೇಲೆ ಕ್ಷತ್ರಿಯರು ಇಲ್ಲದಂತೆ ಮಾಡುವ ತನ್ನ ಪ್ರತಿಜ್ಞೆಯನ್ನು ಕಾರ್ಯರೂಪಕ್ಕೆ ತರಲು ಇಲ್ಲಿಂದಲೇ ಮುಂದೆ ಹೊರಟ (ರೇಣುಕಾ ಮಹಾತ್ಮ್ಯೆ ೨೭ : ೪೦).

ತನ್ನ ಪ್ರತಿಜ್ಞೆಯನ್ನು ಪೂರೈಸಲು ಹೊರಡುವಾಗ ಮೊದಲಿಗೆ ತನ್ನ ಗುರು ಅಗಸ್ತ್ಯರನ್ನು ಸ್ಮರಿಸಿದ. ಅಗಸ್ತ್ಯಮಹರ್ಷಿಯು ಈತನಿಗೆ ಉತ್ತಮವಾದ ರಥ ಮತ್ತು ಆಯುಧಗಳನ್ನು ಕೊಟ್ಟ. ಸಹಸಹಾ ಎಂಬುವನು ಸಾರಥಿಯಾಗಿದ್ದ (ಬ್ರಹ್ಮಾಂಡ ಪುರಾಣ ೩ : ೪೬ : ೧೪). ಶಂಕರನು ದಯಪಾಲಿಸಿದ್ದ ಅಮಿತ್ರಜಿತ್ ಶಂಖವನ್ನು ಪರಶುರಾಮನು ಊದಿದನು.

ಕಾರ್ತವೀರ್ಯನ ಶೂರಸೇನಾದಿ ಪುತ್ರರು ಇತರ ಕ್ಷತ್ರಿಯ ಅರಸರ ನೆರವನ್ನು ಪಡೆದುಕೊಂಡು ಪರಶುರಾಮನನ್ನು ಎದುರಿಸುವ ಪ್ರಯತ್ನ ಮಾಡಿದರು. ಅವರನ್ನು ಕೊಂದು ಇತರ ಕ್ಷತ್ರಿಯರ ತಲೆ ತರಿದು ಕ್ಷತ್ರಿಯರ ವಧೆ ನಡೆಸುವ ತನ್ನ ಮಹಾಯಜ್ಞವನ್ನು ಪ್ರಾರಂಭಿಸಿದ. ಹೈಹಯರ ರಾಜಧಾನಿಯಾಗಿದ್ದ ಮಾಹಿಷ್ಮತಿಯನ್ನು ಪರಶುರಾಮನೇ ಸುಟ್ಟು ಭಸ್ಮಮಾಡಿದ. ಹೈಹಯರಲ್ಲಿ ಕೇವಲ ವೀತಿಹೋತ್ರ ಮಾತ್ರ ಉಳಿದುಕೊಂಡ. ಉಳಿದೆಲ್ಲಾ ಹೈಹಯರು ಕೊಲ್ಲಲ್ಪಟ್ಟರು.

ಹೈಹಯರ ವಿನಾಶ ನಡೆಸಿ ಪರಶುರಾಮ ಮಹೇಂದ್ರ ಪರ್ವತದ ಮೇಲೆ ತಪಸ್ಸು ಮಾಡಲು ಹೊರಟುಹೋದ. ಹೊಸ ಕ್ಷತ್ರಿಯರು ಹುಟ್ಟುತ್ತಲೇ ಅವರನ್ನು ಕೊಲ್ಲುವ ಪ್ರತಿಜ್ಞೆ ಕೈಗೊಂಡಿದ್ದ. ಹತ್ತುವರ್ಷಗಳ ಕಾಲ ಮಹೇಂದ್ರ ಪರ್ವತದ ಮೇಲೆ ತಪಸ್ಸು ಮಾಡುತ್ತಿದ್ದ. ಪ್ರತಿ ಎರಡು ವರ್ಷಗಳಿಗೂ ಪರ್ವತದಿಂದ ಇಳಿದು ಬಂದು ಹೊಸದಾಗಿ ಹುಟ್ಟಿದ್ದ ಕ್ಷತ್ರಿಯರನ್ನೆಲ್ಲಾ ಕೊಂದು ಹಾಕುತ್ತಿದ್ದ. ಹೀಗೆ ಭೂಮಿಯಲ್ಲಿ ಕ್ಷತ್ರಿಯರೇ ಇಲ್ಲದಂತೆ ಮಾಡಿದ (ಬ್ರಹ್ಮಾಂಡ ಪುರಾಣ ೩ : ೪೬)

ಈ ರೀತಿಯಾಗಿ ಪರಶುರಾಮನು ಈ ಭೂಮಿಯ ಮೇಲಿದ್ದ ಕೋಟ್ಯಾಂತರ ಕ್ಷತ್ರಿಯರನ್ನು ಕೊಂದುಹಾಕಿದ. ಅವರಲ್ಲಿ ಅನೇಕರು ಬ್ರಾಹ್ಮಣ ದ್ವೇಷಿಗಳಾಗಿದ್ದರು. ಅವರನ್ನೆಲ್ಲಾ ಕ್ರೂರಶಿಕ್ಷೆಗಳಿಂದ ವಧಿಸಿದ. ಒಂದು ಸಾವಿರ ವೀರರನ್ನು ಒನಕೆಯಿಂದ ಕುಟ್ಟಿಕೊಂದ. ಅಷ್ಟೇ ಸಂಖ್ಯೆಯ ಯೋಧರನ್ನು ನೀರಿನಲ್ಲಿ ಮುಳುಗಿಸಿ ಕೊಂದ. ಸಾವಿರಾರು ಮಂದಿಯ ತಲೆಯನ್ನು ಕತ್ತಿಯಿಂದ ತರಿದ. ಸಾವಿರಾರು ಮಂದಿಯನ್ನು ಮರದಿಂದ ನೇಣುಹಾಕಿ ತೂಗಿಬಿಟ್ಟು ಕೊಂದ. ಸಾವಿರಾರು ಮಂದಿಯ ಹಲ್ಲು ಉದುರಿಸಿ, ನಾಲಿಗೆ ಮತ್ತು ಕಿವಿಗಳನ್ನು ಕತ್ತರಿಸಿಹಾಕಿದ. ಉತ್ತರದಲ್ಲಿ ಗುಣವತಿ ಮತ್ತು ದಕ್ಷಿಣದಲ್ಲಿ ಖಾಂಡವಾರಣ್ಯಗಳಲ್ಲಿ ಕ್ಷತ್ರಿಯರೊಂದಿಗೆ ಪರಶುರಾಮ ಯುದ್ಧಮಾಡಿದ. ಅಲ್ಲಿಯ ಇಳುಜಾರುಗಳಲ್ಲಿ ಹತ್ತು

ಹತ್ತು ಸಾವಿರ ಮಂದಿಯನ್ನು ತಳ್ಳಿ ಕೊಂದ. ಕಾಶ್ಮೀರ, ದರದ್, ತಾಮ್ರಲಿಪ್ತ, ರಕ್ಷೋವಾಹ, ವೀತಿಹೋತ್ರ, ತ್ರಿಗರ್ತ, ಮಾರ್ತಿಕವತ್, ಶಿಬಿ ಇತ್ಯಾದಿ ಅನೇಕ ರಾಜ್ಯಗಳ ರಾಜರನ್ನು ಹುಳುಗಳನ್ನು ಹೊಸಕಿ ಹಾಕಿಕೊಲ್ಲುವಂತೆ ಕೊಂದ. ಈ ರೀತಿಯಾಗಿ ಕೊಂದದ್ದು ಸಾಲದೆ ಹತ್ತಿಪ್ಪತ್ತು ಸಾವಿರ ರಾಜರನ್ನು ಕುರುಕ್ಷೇತ್ರಕ್ಕೆ ಎಳೆದುತಂದ. ಅಲ್ಲಿ ಐದು ದೊಡ್ಡ ಕುಳಿಗಳನ್ನು ತೋಡಿಸಿ ಅವುಗಳನ್ನು ಸೆರೆಹಿಡಿದು ತಂದಿದ್ದ ಅರಸರ ರಕ್ತದಿಂದ ತುಂಬಿದ. ಅದರಲ್ಲಿ ರುಧಿರ ಸ್ನಾನವನ್ನು ಮಾಡಿ, ಆ ರಕ್ತದಿಂದ ತನ್ನ ಪಿತೃಗಳಿಗೆ ತರ್ಪಣವನ್ನು ಕೊಟ್ಟ. ಆ ಗುಂಡಿಗಳನ್ನು ಸಮಂತ ಪಂಚಕತೀರ್ಥವೆಂದು, ಪರಶುರಾಮ ಹ್ರದ ಎಂದು ಕರೆಯುತ್ತಾರೆ.

ನಂತರ ಗಯಾದಲ್ಲಿ ಚಂದ್ರಪಾದ ಎಂಬಲ್ಲಿ ಶ್ರಾದ್ಧವನ್ನು ಮಾಡಿದ (ಪದ್ಮಪುರಾಣ ಸ್ವರ್ಗಖಂಡ ೨೬). ಈ ರೀತಿಯಾಗಿ ಪರಶುರಾಮನು ತನ್ನ ಪ್ರತಿಜ್ಞೆಯಿಂದ ಮುಕ್ತನಾದ.

ಪಿತೃಗಳಿಗೆ ಈ ಕ್ಷತ್ರಿಯ ಹತ್ಯೆ ಇಷ್ಟವಾಗಲಿಲ್ಲ. ಪರಶುರಾಮನು ಈ ಪಾಪಕ್ಕೆ ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂದು ಅವರು ಹೇಳಿದರು (ಮಹಾಭಾರತ, ಆದಿಪರ್ವ ೨ : ೪ : ೧೨). ಪಿತೃಗಳ ಆಜ್ಞೆಯನ್ನು ಪಾಲಿಸಿ ತನ್ನ ಶಿಷ್ಯ ಅಕೃತವ್ರಣನೊಂದಿಗೆ ಸಿದ್ಧವನಕ್ಕೆ ಹೋದ. ರಥ, ಸಾರಥಿ, ಧನಸ್ಸು ಮುಂತಾದುವನ್ನು ತ್ಯಜಿಸಿ ಮತ್ತೆ ಬ್ರಾಹ್ಮಣ ಧರ್ಮವನ್ನು ಸ್ವೀಕರಿಸಿದ. ಎಲ್ಲಾ ತೀರ್ಥಗಳಲ್ಲೂ ಸ್ನಾನಮಾಡಿ ಮೂರುಬಾರಿ ಪೃಥ್ವಿಯ ಪ್ರದಕ್ಷಿಣೆಯನ್ನು ಮಾಡಿದ. ನಂತರ ಮಹೇಂದ್ರ ಪರ್ವತವನ್ನು ತನ್ನ ಸ್ಥಿರ ನಿವಾಸವನ್ನಾಗಿ ಏರ್ಪಡಿಸಿಕೊಂಡ.

ತಾನು ಗೆದ್ದಿದ್ದ ಭೂಮಿಯನ್ನೆಲ್ಲಾ ದಾನಮಾಡಲೆಂದು ಒಂದು ದೊಡ್ಡ ಅಶ್ವಮೇಧ ಯಜ್ಞವನ್ನು ಯೋಜಿಸಿದ. ಈ ಯಜ್ಞಕ್ಕಾಗಿ ಮುವ್ವತ್ತೆರಡು ಹಸ್ತ ಎತ್ತರದ ಸುವರ್ಣ ಯಜ್ಞವೇದಿಯನ್ನು ನಿರ್ಮಿಸಿದ. ಈ ಯಜ್ಞದಲ್ಲಿ ಕಶ್ಯಪನು ಆಚಾರ್ಯನಾಗಿ, ಗೌತಮನು ಉದ್ಗಾತೃವಾಗಿ, ವಿಶ್ವಾಮಿತ್ರನು ಹೋತೃವಾಗಿ ಮತ್ತು ಮಾರ್ಕಂಡೇಯನು ಬ್ರಾಹ್ಮಣನಾಗಿ ಆಚಾರ್ಯ ಪದವಿಗಳಲ್ಲಿ ಕುಳಿತಿದ್ದರು. ಭರದ್ವಾಜ, ಅಗ್ನಿವೇಶ್ಯ ಮುಂತಾದ ಋಷಿಗಳು ಈ ಯಜ್ಞದಲ್ಲಿ ಭಾಗವಹಿಸಿದ್ದರು. ಈ ಯಜ್ಞವನ್ನು ಮುಗಿಸಿ ತನ್ನ ಅಧಿಕಾರದಲ್ಲಿದ್ದ ಭೂಭಾಗವನ್ನೆಲ್ಲಾ ಕಶ್ಯಪ ಮಹರ್ಷಿಗೆ ದಾನಮಾಡಿದ (ಮಹಾಭಾರತ, ಶಾಂತಿಪರ್ವ ೪೯, ಅನುಶಾಸನ ಪರ್ವ ೧೩೭ : ೧೨). ಇದರ ತರುವಾಯ ದೀಪ ಪ್ರತಿಷ್ಠಾಖ್ಯ ಎಂಬ ವ್ರತವನ್ನು ಪರಶುರಾಮ ನಡೆಸಿದ (ಬ್ರಹ್ಮಾಂಡ ೩ : ೪೭).

ಪರಶುರಾಮನ ಕ್ಷತ್ರಿಯ ಹತ್ಯಾಕಾಂಡದಿಂದ ಜನರಲ್ಲಿ ಪರಶುರಾಮನ ಬಗ್ಗೆ ಜಿಗುಪ್ಸೆ ಮತ್ತು ತಿರಸ್ಕಾರಗಳು ಮೂಡಿದ್ದವು. ವಿಶ್ವಾಮಿತ್ರನ ಮೊಮ್ಮಗ ಹಾಗೂ ರೈಮ್ಯನ ಮಗನಾದ ಪರಾವಸುವು ತುಂಬಿದ ಸಭೆಯಲ್ಲಿ 'ಪೃಥ್ವಿಯ ಮೇಲಣ ಕ್ಷತ್ರಿಯರನ್ನೆಲ್ಲಾ ಕೊಲ್ಲುವುದಾಗಿ ನೀವು ಪ್ರತಿಜ್ಞೆಮಾಡಿದ್ದಿರಿ. ಆದರೆ ಯಯಾತಿಯ ಯಜ್ಞಕ್ಕಾಗಿ ಬಂದಿದ್ದ ಏಕತ್ರಿಪ್ರ, ಪ್ರತರ್ದನ ಮುಂತಾದವರನ್ನು ಕ್ಷತ್ರಿಯರಾಗಿರಲಿಲ್ಲವೇ? ನಿಮ್ಮ ಮನಸ್ಸಿಗೆ ಬಂದಂತೆ ನೀವು ಹೇಳಿದಿರಿ ಅಷ್ಟೆ. ನಿಜವೆಂದರೆ ಎಲ್ಲಾ ಕಡೆ ವ್ಯಾಪಿಸಿರುವ ಕ್ಷತ್ರಿಯರಿಗೆ ಈಗ ಹೆದರಿ ಬಂದು ನೀವು ಕಾಡಿನಲ್ಲಿ

ಅಡಗಿದ್ದೀರಿ!' ಎಂದು ಮೂದಲಿಸಿದ. ಇದರಿಂದ ಕೃದ್ಧಗೊಂಡ ಪರಶುರಾಮ ಮತ್ತೆ ಕೈಯಲ್ಲಿ ಅಸ್ತ್ರವನ್ನು ಹಿಡಿದ. ಮೊದಲಿಗೆ ನಿರಪರಾಧಿಗಳೆಂದು ಅಂಗೀಕರಿಸಿ ಉಳಿಸಿದ್ದವರನ್ನೆಲ್ಲಾ ಈ ಬಾರಿ ಮುಗಿಸುತ್ತಾ ಬಂದ. ಚಿಕ್ಕವರು ಎಂಬುದನ್ನು ಗಮನಿಸದೆ, ತಾಯಂದಿರ ಗರ್ಭದಲ್ಲಿರುವವರನ್ನೂ ತುಂಡರಿಸಿದ.

ಪರಶುರಾಮನ ಈ ಹತ್ಯಾಕಂಡದಲ್ಲಿ ಉಳಿದವರು ತೀರಾ ಕೆಲವರೇ. ಅವರ ವಿವರ ಇಂತಿದೆ :

೧. ಹೈಹಯ ರಾಜ ವೀತಿಹೋತ್ರ : ತನ್ನ ಅಂತಃಪುರದ ಸ್ತ್ರೀಯರ ಮಧ್ಯೆ ಸ್ತ್ರೀರೂಪದಲ್ಲಿ ಅಡಗಿಕೊಂಡಿದ್ದರಿಂದ ಉಳಿದುಕೊಂಡ.

೨. ಪೌರವ ರಾಜಾ ಋೂಕ್ಷವಾನ್ : ಈತನು ಋೂಕ್ಷವಾನ್ ಪರ್ವತದ ಸೀಳುಗಳಲ್ಲಿ ಅಡಗಿಕೊಂಡಿದ್ದರಿಂದ ಉಳಿದುಕೊಂಡ.

೩. ಅಯೋಧ್ಯೆಯ ರಾಜ ಸರ್ವಕರ್ಮನ್ : ಪರಾಶರ ಋಷಿಯು ಶೂದ್ರನಂತೆ ಈತನನ್ನು ನಡೆಸಿಕೊಂಡು ಈತನ ಜೀವವನ್ನು ಉಳಿಸಿದ.

೪. ಮಗಧರಾಜ ಬೃಹದ್ರಥ : ಗೃಧ್ರಕೂಟಪರ್ವತದ ಮೇಲೆ ಇದ್ದ ಕೋತಿಗಳು ಈತನನ್ನು ರಕ್ಷಿಸಿದವು.

೫. ಅಂಗರಾಜ ಚಿತ್ರರಥ : ಗಂಗಾನದಿಯ ತೀರದಲ್ಲಿದ್ದ ಗೌತಮ ಈತನ ರಕ್ಷಿಸಿದ.

೬. ಶಿಬಿರಾಜ ಗೋಪಾಲಿ : ಹಸುಗಳು ಈತನನ್ನು ಕಾಪಾಡಿದವು.

೭. ಪ್ರತರ್ದನ ಪುತ್ರ ವತ್ಸ : ಇವನನ್ನು ಕರುಗಳು ರಕ್ಷಿಸಿದವು.

೮. ಮರುತ್ತು : ಸಮುದ್ರವು ಈತನನ್ನು ರಕ್ಷಿಸಿತು.

ರಾಜರುಗಳೆಲ್ಲಾ ಮರಣಿಸಿದ್ದರಿಂದ ಅರಾಜಕತೆ ಎಲ್ಲಾ ದಿಕ್ಕುಗಳಲ್ಲೂ ಆಕ್ರಮಿಸಿತ್ತು. ಕಶ್ಯಪ ಮಹರ್ಷಿಯು ಕ್ಷತ್ರಿಯರನ್ನು ಹುಡುಕಿತಂದು ಮತ್ತೆ ಅವರಿಗೆ ರಾಜ್ಯಾಭಿಷೇಕವನ್ನು ನಡೆಸಿ ಸುರಾಜ್ಯ ಸ್ಥಾಪನೆಗಾಗಿ ಪ್ರಯತ್ನಿಸಿದ (ಮಹಾಭಾರತ, ಶಾಂತಿಪರ್ವ ೪೯ : ೫೭ - ೬೦).

ಉಳಿದಿದ್ದ ಕ್ಷತ್ರಿಯರನ್ನು ಕಾಪಾಡಲು ಕಶ್ಯಪ ಋಷಿಯು ಪರಶುರಾಮನನ್ನು ಪಶ್ಚಿಮ ಕರಾವಳಿಗೆ ಹೋಗಲು ಹೇಳಿದ. ಸಾಗರದಿಂದ ಕೇಳಿ 'ಶೂರ್ಪಾರಕ' ಎಂಬ ಭೂಭಾಗವನ್ನು ಪಡೆದುಕೊಳ್ಳಲಾಯಿತು. ಭೃಗುಕಚ್ಛ (ಭರೂಚ್) ನಿಂದ ಕನ್ಯಾಕುಮಾರಿಯ ತನಕ ಇರುವ ಪಶ್ಚಿಮ ಕರಾವಳಿ ಪ್ರದೇಶವು ಇದೇ ಕಾರಣಕ್ಕೆ ಪರಶುರಾಮ ದೇಶ ಅಥವ ಶೂರ್ಪಾರಕ ಎಂದು ಹೆಸರಾಯಿತು.

ಇದಕ್ಕೆ ಬೇರೊಂದು ಕಾರಣವನ್ನೂ ಹೀಗೆ ಹೇಳಲಾಗಿದೆ (ಬ್ರಹ್ಮಾಂಡ ಪುರಾಣ ೩ : ೫೬ : ೫೧ - ೫೭) : ಸಗರನ ಪುತ್ರರು ಗಂಗಾನದಿಗಾಗಿ ಅಗೆದಾಗ ಗೋಕರ್ಣವು ಸಮುದ್ರದಲ್ಲಿ ಮುಳುಗುವುದು ಖಚಿತವಾಯಿತು. ಇದರಿಂದ ಅಲ್ಲಿಯ ಜನರೆಲ್ಲರೂ ಮಹೇಂದ್ರ ಪರ್ವತಕ್ಕೆ ಹೋಗಿ ಪರಶುರಾಮನಲ್ಲಿ ಪ್ರಾರ್ಥಿಸಿದರು. ಪರಶುರಾಮನು ಗೋಕರ್ಣವನ್ನು ಉಳಿಸಲು ಸಮುದ್ರವನ್ನೇ ಹಿಂದಕ್ಕೆ ಹೋಗುವಂತೆ ಹೇಳಿದ. ಇದರಿಂದ ದಕ್ಷಿಣೋತ್ತರವಾಗಿ ನಾಲ್ಕುನೂರು

ಯೋಜನ ಉದ್ದದ ಶೂರ್ಪಾರಕ ದೇಶದ ಸ್ಥಾಪನೆಯಾಯಿತು.

ರಾಮಾಯಣದಲ್ಲಿ ಶ್ರೀರಾಮದಾಶರಥಿಯು ಸೀತೆಯ ಸ್ವಯಂವರದಲ್ಲಿರಿಸಿದ್ದ ಶಿವಧನಸ್ಸನ್ನು ಮುರಿದಿದ್ದರಿಂದ ಪರಶುರಾಮ ಕೋಪದಿಂದ ಶ್ರೀರಾಮನ ಮೇಲೆ ಯುದ್ಧಕ್ಕೆ ಬಂದ. ಈ ಯುದ್ಧದಲ್ಲಿ ಪರಶುರಾಮನೇ ಸೋತ (ವಾಲ್ಮೀಕಿ ರಾಮಾಯಣ, ಬಾಲಕಾಂಡ ೭೪ - ೭೬). ಮಹಾಭಾರತದಲ್ಲಿ ಹಲವು ಬಾರಿ ಪರಶುರಾಮನ ಉಲ್ಲೇಖಗಳು ದೊರೆಯುತ್ತವೆ (ಮಹಾಭಾರತ, ವನಪರ್ವ ೧೧೭ - ೧೧೮, ಉದ್ಯೋಗ ಪರ್ವ ೧೮೬ ಇತ್ಯಾದಿ).

ಐತಿಹಾಸಿಕ ದೃಷ್ಟಿಯಿಂದ ಪರಶುರಾಮನು, ರಾಮದಾಶರಥಿಗಿಂತಲೂ, ಶ್ರೀಕೃಷ್ಣನಿಗಿಂತಲೂ ತುಂಬಾ ಪ್ರಾಚೀನನಾದವನು. ಈ ಪರಶುರಾಮನ ಕಥೆಯಲ್ಲಿಯ ಅನೇಕ ಅಂಶಗಳು ಇತಿಹಾಸದಲ್ಲಿ ಪುರಾವೆಗಳಾಗಿ ನಿಂತಿವೆಯಾದರೂ ಕಥೆಯಲ್ಲಿ ಕೆಲವು ಉತ್ಪ್ರೇಕ್ಷೆಯ ಅಂಶಗಳು ಇಲ್ಲದೆ ಇಲ್ಲ. ಭಾರತದ ಪ್ರಾಚೀನ ಇತಿಹಾಸದ ಸ್ವಲ್ಪ ಭಾಗ ಈ ಕಥೆಯಲ್ಲಿ ಸ್ಪಷ್ಟವಾಗಿ ವಿವರಿತವಾಗುತ್ತದೆ.

ದತ್ತಾತ್ರೇಯನ ವರದಿಂದ ಸಾವಿರತೋಳುಗಳನ್ನು ಪಡೆದುಕೊಂಡಿದ್ದ ಕಾರ್ತವೀರ್ಯಮಹಾರಾಜನು ಅಹಂಕಾರ ವಶದಿಂದಲೂ, ಅತ್ಯಾಸೆಯಿಂದಲೂ ಜಮದಗ್ನಿಯನ್ನು ಕೊಂದು ಆತನ ಬಳಿ ಇದ್ದ ಸಬಲಾ ಕಾಮಧೇನುವನ್ನು ತೆಗೆದುಕೊಂಡಹೋದ. ಇದರಿಂದ ಪರಶುರಾಮ ಉದ್ರಿಕ್ತನಾಗಿ ಪ್ರಪಂಚವನ್ನು ೨೧ ಬಾರಿ ಸುತ್ತಿ ಕಂಡ ಕ್ಷತ್ರಿಯರನ್ನೆಲ್ಲಾ ಕೊಂದುಹಾಕಿದ ಎಂದು ಅಗ್ನಿಪುರಾಣವು ಹೇಳಿ ಕ್ಷತ್ರಿಯರ ಕುಕೃತ್ಯ, ಸ್ವೈರಾಚಾರ, ಅನೀತಿಗಳನ್ನು ತಡೆಯಲೆಂದು ಶ್ರೀ ಹರಿಯೇ ಪರಶುರಾಮನಾಗಿ ಜನಿಸಿದ ಎಂದು ಹೇಳುತ್ತದೆ.

ವಿಷ್ಣುಪುರಾಣವು ಬೇರೊಂದು ತೆರನಾಗಿ ವಿಷ್ಣುವಿನ ಅವತಾರಕ್ಕೆ ಕಾರಣವನ್ನು ಹೇಳುತ್ತದೆ. ಪುರೂರವರ ಸಂತತಿಯಲ್ಲಿ ಕುಶಂಬ ಹುಟ್ಟಿದಳು. ಇಂದ್ರನಂತಹ ಮಗ ತನಗೆ ಹುಟ್ಟಬೇಕೆಂದು ಆಕೆ ತಪಸ್ಸುಮಾಡುತ್ತಿದ್ದಳು. ಆಕೆಯ ತಪಸ್ಸಿನ ತೀವ್ರತೆಗೆ ಹೆದರಿದ ಇಂದ್ರನು ತಾನೇ ಆಕೆಯ ಮಗನಾಗಿ ಹುಟ್ಟಿದ. ಅವನ ಹೆಸರೇ ಗಾದಿ ಅಥವ ಕೌಶಿಕ. ಈತನಿಗೆ ಸತ್ಯವತಿ ಎಂಬ ಮಗಳಿದ್ದಳು. ಭೃಗು ಕುಲೋತ್ಪನ್ನನಾದ ಋಚೀಕನು ಈಕೆಯನ್ನು ವಿವಾಹವಾಗಬೇಕೆಂದು ಬಯಸಿದನಾದರೂ ರಾಜನಿಗೆ ಈ ಸಂಬಂಧ ಒಪ್ಪಿಗೆಯಾಗಿರಲಿಲ್ಲ. ಆದ್ದರಿಂದ ಒಂದು ಕಪ್ಪುಕಿವಿ ಇರುವ ಒಂದು ಸಾವಿರ ಬಿಳಿಯ ಕುದುರೆಗಳನ್ನು . ಕನ್ಯಾಶುಲ್ಕವಾಗಿ ತರಬೇಕೆಂದು ಹೇಳಿದ. ಋಚೀಕನು ಅಶ್ವತೀರ್ಥದ ಬಳಿ ವರುಣನನ್ನು ಕುರಿತು ತಪಸ್ಸುಮಾಡಿ ಒಂದು ಕಪ್ಪುಕಿವಿ ಇರುವ ಒಂದು ಸಾವಿರ ಬಿಳಿ ಕುದುರೆಗಳನ್ನು ಪಡೆದುಕೊಂಡು ತಂದ. ಆಗ ಮರುಮಾತಿಲ್ಲದೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಬೇಕಾಯಿತು.

ಋಚೀಕನು ಅಕ್ಕಿ, ಬೇಳೆ, ತುಪ್ಪ, ಹಾಲು, ಸಕ್ಕರೆಗಳನ್ನು ಬಳಸಿ ಪಾಯಸವನ್ನು ಸಿದ್ಧಪಡಿಸಿದ. ಇದನ್ನು ತಿನ್ನುವುದರಿಂದ ಮಗನು ಹುಟ್ಟುತ್ತಾನೆ ಎಂದು ಅವನು ತನ್ನ ಹೆಂಡತಿಗೆ ತಿಳಿಸಿದ್ದ. ಹೆಂಡತಿಯು ಇದೇ ರೀತಿಯ ಪಾಯಸವನ್ನು ತನ್ನ ತಾಯಿಗೂ ತಯಾರಿಸಿ

ಕೊಡಬೇಕೆಂದು ಕೇಳಿದ್ದಳು. ಆದರೆ ಆಕೆಯ ಮಗನು ಬಹು ಪರಾಕ್ರಮಿಯಾಗಿರಬೇಕೆಂಬುದನ್ನೂ ಸೂಚಿಸಿದ್ದಳು. ಅದೇ ಪ್ರಕಾರವೇ ಇನ್ನೊಂದು ಬಗೆಯ ಪಾಯಸವನ್ನು ಸಿದ್ಧಪಡಿಸಿ ಹೆಂಡತಿ ತಿನ್ನ ಬೇಕಾಗಿದ್ದ ಪಾಯಸ ಯಾವುದು, ಅತ್ತೆಯು ತಾಯಿ ತಿನ್ನಬೇಕಾಗಿದ್ದ ಪಾಯಸ ಯಾವುದು ಎಂಬುದನ್ನು ವಿವರಿಸಿ ಋಚೀಕನು ಕಾಡಿಗೆ ಹೋದ.

ಪಾಯಸ ತಿನ್ನಲು ಬಂದ ಕುಶಂಬ 'ಮಗಳೇ, ಪ್ರತಿಯೊಬ್ಬರೂ ಒಳ್ಳೆಯ ಗುಣಶಾಲಿಯಾದ ಮಗನನ್ನೇ ಪಡೆಯಲು ಬಯಸುತ್ತಾರೆ. ಸೋದರ ಮಾವನ ಗುಣಗಳು ತನ್ನ ಗುಣಗಳಿಗಿಂತಲೂ ಶ್ರೇಷ್ಠವಾಗಿರುವುದನ್ನು ಯಾವ ಮಗನೂ ಇಷ್ಟಪಡುವುದಿಲ್ಲ. ಆದ್ದರಿಂದ ನಿನಗೆಂದು ತಯಾರಿಸಿರುವ ಪಾಯಸ ನನಗೆ ಕೊಡು. ನನಗೆಂದು ತಯಾರಿಸಿರುವ ಪಾಯಸ ನೀನು ತೆಗೆದುಕೋ. ನಿನ್ನ ಮಗನು ರಾಜನಾಗಿರುತ್ತಾನೆ. ವಿದ್ಯಾವಂತನೂ, ಬಲಶಾಲಿಯೂ ಆದ ಬ್ರಾಹ್ಮಣ ಪುತ್ರನು ಯಾವ ಪ್ರಯೋಜನಕ್ಕೆ ಬರುತ್ತಾನೆ?' ಎಂದು ಹೇಳಿದಳು. ತಾಯಿಯ ಮಾತನ್ನು ಅಂಗೀಕರಿಸಿದ. ಸತ್ಯವತಿಯು ತನಗಾಗಿ ತಯಾರಿಸಿದ ಪಾಯಸವನ್ನು ತಾಯಿಗೆ ಕೊಟ್ಟು ತಾಯಿಯ ಪಾಲಿನ ಪಾಯಸವನ್ನು ತಾನು ತಿಂದಳು.

ಋಚೀಕನು ಕಾಡಿನಿಂದ ಬಂದ. ತನ್ನ ಹೆಂಡತಿಯನ್ನು ಕಂಡು 'ಪಾಪಿ, ಎಂಥಾ ಕೆಲಸಮಾಡಿದೆ ! ನೀನೇ ಭಯಂಕರವಾಗಿ ಕಾಣುತ್ತಿದ್ದೀಯೆ. ನಿನ್ನ ತಾಯಿಗೆಂದು ತಯಾರಿಸಿದ್ದ ಪಾಯಸವನ್ನು ನೀನು ತಿಂದಿದ್ದೀಯೆ. ಆ ಪಾಯಸದಲ್ಲಿ ಶೌರ್ಯ, ಬಲ, ಶಕ್ತಿ, ಅಧಿಕಾರಗಳು ಲಭಿಸುವಂತೆ ಮಂತ್ರಶಕ್ತಿ ನಿಕ್ಷಿಪ್ತಗೊಳಿಸಿದ್ದೆ. ನಿನಗಾಗಿ ಸಿದ್ಧಪಡಿಸದ್ದ ಪಾಯಸದಲ್ಲಿ ಜ್ಞಾನ, ವೈರಾಗ್ಯ, ಸದ್ಗುಣಗಳು ಬರುವಂತಹ ಸಿದ್ಧಿಯನ್ನು ಅದರಲ್ಲಿ ಆವಾಹಿಸಿದ್ದೆ. ಈಗ ಅದಲು ಬದಲಾಗಿದೆ. ಫಲಗಳೂ ಹಾಗೆಯೇ ಅದಲು ಬದಲಾಗುತ್ತವೆ' ಎಂದು ಅಬ್ಬರಿಸಿದ.

ಸತ್ಯವತಿಗೆ ತನ್ನ ತಪ್ಪಿನ ಅರಿವಾಯಿತು. ಗಂಡನ ಪಾದಗಳ ಮೇಲೆ ಬಿದ್ದು 'ಅಜ್ಞಾನದಿಂದ ಈ ತಪ್ಪುಮಾಡಿದೇನೆ. ನನ್ನನ್ನು ಕ್ಷಮಿಸಿ. ನನಗೆ ಶೂರನಾದ ಮಗ ಬೇಕಾಗಿಲ್ಲ. ಜ್ಞಾನಿಯೇ ಬೇಕು. ಒಂದುವೇಳೆ ಅನಿವಾರ್ಯವಾಗಿದ್ದರೆ ನನ್ನ ಮೊಮ್ಮಗನಿಗೆ ಆಗುಣಗಳು ಇರಲಿ' ಎಂದು ಪ್ರಾರ್ಥಿಸಿದಳು.

ಋಚಿಕನು 'ತಥಾಸ್ತು' ಎಂದ.

ನಂತರ ಸತ್ಯವತಿಯು ಜಮದಗ್ನಿಯನ್ನು, ಆಕೆಯ ತಾಯಿ ವಿಶ್ವಾಮಿತ್ರನನ್ನು ಹೆತ್ತರು. ನಂತರದಲ್ಲಿ ಜಮದಗ್ನಿಯು ಇಕ್ಷ್ವಾಕು ವಂಶದ ರಾಜನಾದ ರೇಣುವಿನ ಮಗಳಾದ ರೇಣುಕೆಯನ್ನು ಮದುವೆಯಾದ. ಆಕೆಯಲ್ಲಿ ವಿಷ್ಣುವಿನ ಅವತಾರವಾದ ಪರಶುರಾಮನು ಜನಿಸಿದ.

ಪರಶುರಾಮನಿಗೆ ನಾಲ್ಕುಮಂದಿ ಅಣ್ಣಂದಿರಿದ್ದರು. ಪರಶುರಾಮನ ತಾಯಿ ರೇಣುಕಾ ಸ್ನಾನಾಮಾಡುತ್ತಿದ್ದಾಗ ಸ್ವಲ್ಪದೂರದಲ್ಲಿ ಚಿತ್ರರಥನೆಂಬ ರಾಜನು ತನ್ನ ರಾಣಿಯೊಂದಿಗೆ ಸ್ನಾನ ಮಾಡುತ್ತಿರುವುದನ್ನು ಕಂಡಳು. ಮನದಲ್ಲಿ ತಾನೂ ಹಾಗೆ ಜಲಕ್ರೀಡೆಯಲ್ಲಿರವುದು ಸಾಧ್ಯವಿದಿದ್ದರೆ ಎಷ್ಟು ಸಂತೋಷವಾಗುತ್ತಿತ್ತು ಎಂದುಕೊಂಡಳು. ಇದರಿಂದ ಮನೆಗೆ ರೇಣುಕೆ

ತಡವಾಗಿ ಹಿಂತಿರುಗಿದಳು. ಕಾರಣವನ್ನು ಅರಿತುಕೊಂಡ ಜಮದಗ್ನಿಯು ತನ್ನ ಮಕ್ಕಳಿಗೆ ರೇಣುಕೆಯ ತಲೆಯನ್ನು ಕತ್ತರಿಸುವಂತೆ ಅಪ್ಪಣೆಮಾಡಿದ. ನಾಲ್ವರು ಈ ಆಜ್ಞೆಯನ್ನು ಅಂಗೀಕರಿಸಲಿಲ್ಲ. ಆದ್ದರಿಂದ ಪ್ರಜ್ಞಾಹೀನರಾಗಿ ಪಶುಗಳಂತಾದರು. ಪರಶುರಾಮ ಮಾತ್ರ ಮರುಮಾತಿಲ್ಲದೆ ತಾಯಿಯ ತಲೆಯನ್ನು ಕತ್ತರಿಸಿದ. ನಂತರ ತಂದೆಯನ್ನು ಪ್ರೀತಿಯಿಂದ ಒಲಿಸಿಕೊಂಡು ತಾಯಿಯನ್ನು ಬದುಕಿಸಿಕೊಂಡ. ತನ್ನ ಅಣ್ಣಂದಿರು ಯಥಾಪ್ರಕಾರದ ಸ್ಥಿತಿಗೆ ಬರುವಂತೆ ವರಪಡೆದ. ತಾನು ಇಚ್ಛಾಮರಣಿಯಾದ.

ಇದೇ ಕಥೆ ಭಾಗವತ ಪುರಾಣದಲ್ಲೂ ದೊರೆಯುತ್ತದೆ. ವಿಷ್ಣುಪುರಾಣದಂತೆಯೇ ಅಲ್ಲೂ ಪರಶುರಾಮನು ಶ್ರೀಮನ್ನಾರಾಯಣ ಅವತಾರವೆಂದು ಹೇಳಲಾಗಿದೆ. ಪರಶುರಾಮನು ಕರಿ ಜಿಂಕೆಯ ಚರ್ಮದ ಉತ್ತರೀಯವನ್ನು ತೊಟ್ಟು, ಜಟಾ ಮುಕುಟವನ್ನು ಧರಿಸಿ ಸೂರ್ಯತೇಜದೊಂದಿಗೆ ಶೋಭಾಯಮಾನಾಗಿರುತ್ತಾನೆ. ಬಿಲ್ಲು - ಬಾಣಗಳನ್ನು ಗಂಡು ಗೊಡಲಿಯನ್ನು ಇರಿಸಿಕೊಂಡಿರುತ್ತಾನೆ. ಈತನು ತನ್ನ ಶೌರ್ಯದಿಂದ ತಂದೆಗೆ ಸಪ್ತರ್ಷಿಗಳಲ್ಲಿ ಸ್ಥಾನವನ್ನು ಗಳಿಸಿಕೊಟ್ಟ.

ಈ ಮೂರ್ತಿಯ ಲಕ್ಷಣಗಳನ್ನು ಪಾಂಚರಾತ್ರಾಗಮವು ಇಂತು ಹೇಳುತ್ತದೆ.

ಕ್ಷಾತ್ರಾಂತ ಕರಣಂ ಘೋರ ಮುದ್ವಹನ್ ಪರಶುಂ ಕರೇ
ಜಾಮದಗ್ನ್ಯಶ್ಚ ಕರ್ತವ್ಯೋ ರಾಮ ಶ್ಶತ್ರು ನಿಷೂದನಃ ॥

ಪರಶುರಾಮನ ರೂಪವನ್ನು ಧರಿಸಿದ ವಿಷ್ಣು ಮೂರ್ತಿಯು ಕೈಯ್ಯಲ್ಲಿ ಪರಶುವನ್ನು ಧರಿಸಿದ್ದು ಶತ್ರುಗಳಾದ ಕ್ಷತ್ರಿಯರನ್ನು ಕೊಲ್ಲುತ್ತಿರುತ್ತಾನೆ. ಈತನ ಮೈ ಸ್ವರ್ಣಚ್ಛಾಯೆಯಲ್ಲಿರುತ್ತದೆ. ಈತನಿಗೆ ಎರಡು ತೋಳುಗಳಿರುತ್ತವೆ.

ಈ ಮೂರ್ತಿಯನ್ನು ಮಧ್ಯಮ ದಶತಾಲದಲ್ಲಿ (೧೨೦ ಅಂಗುಲಗಳು) ರೂಪಿಸಬೇಕು.

ಪಾದ್ಮಸಂಹಿತೆ (ಕ್ರಿ, ೧೮ : ೫೩ - ೬೦) ಯಲ್ಲಿ ಇನ್ನೊಂದು ಬಗೆಯ ವರ್ಣನೆ ಇಂತಿದೆ.

ಆಸೀನಂ ದ್ವಿಭುಜಂ ಶಾಂತಂ ಜಟಾಮಕುಟ ಧಾರಿಣಮ್ ॥
ಪರಶುಂ ಸಶರಂ ಚಾಪಂ ದಕ್ಷಿಣೋತ್ತರ ಹಸ್ತಯೋಃ
ಧಾರಯಂತಂ ಸುವರ್ಣಾಭಂ ಬ್ರಾಹ್ಮ್ಯಾ ಲಕ್ಷ್ಮ್ಯಾ ವಿರಾಜಿತಮ್ ॥
ಶ್ರೀವತ್ಸೇ ನಾಂಕತೋರಸ್ಕಂ ಸೋಪವೀತೋತ್ತರೀಯಕಮ್
ಸ್ಥಿತಂ ವಾ ಕಲ್ಪಯೇದ್ದೇವಮೇಕ ಬೇರಂ ವಿಧೇಃ ಪದೇ ॥
ಬಹುಬೇರೇ ಪದೇ ದಿವ್ಯೇ ದೇವೀಂ ವಾಮೇ ಪ್ರಕಲ್ಪಯೇತ್
ಚತುರ್ಭುಜಾ ಚ ಕರ್ಮಾರ್ಚಾ ಜಾಮದಗ್ನ್ಯೇನ ವಾ ಸಮಾ ॥
ಭಂಗ ತ್ರಯ ಸಮೋಪೇತಂ ತ್ರಯಸ್ತ್ರಿಂಶತ್ಸು ಲಕ್ಷಣಮ್
ಯದ್ವಾ ಚತುರ್ಭುಜಂ ಕುರ್ಯಾಜ್ಜಾಮದಗ್ನ್ಯಂ ಚತುರ್ಮುಖ ॥
ಶಂಖ ಚಕ್ರಧರಂ ಶಾರ್ಙ್ಗಶರ ಹಸ್ತಂ ಯಥಾ ಪುರಮ್

ಶಾಂತ ಮುಖಮುದ್ರೆಯಲ್ಲಿ ಪರಶುರಾಮ ಎರಡು ಭುಜಗಳಿರುವಂತೆ, ಜಟಾಮುಕುಟಧಾರಿಯಾಗಿ, ಬಲಹಸ್ತದಲ್ಲಿ ಪರಶು ಮತ್ತು ಎಡಹಸ್ತದಲ್ಲಿ ಬಿಲ್ಲು ಬಾಣಗಳನ್ನು ಹಿಡಿದಿರುವಂತೆ ರೂಪಿಸಬೇಕು. ಈ ಮೂರ್ತಿಯು ಕುಳಿತಿರಬೇಕು. ಸ್ವರ್ಣ ಶರೀರಛಾಯೆಯಲ್ಲಿ ಪ್ರಕಾಶವಂತನಾಗಿರುವ ಈ ಸ್ವಾಮಿಯು ಶ್ರೀವತ್ಸ, ಕೌಸ್ತುಭ, ವನಮಾಲಾದಿ ಚಿಹ್ನೆಗಳಿಂದ ಅಲಂಕೃತನಾಗಿರಬೇಕು. ಯಜ್ಞೋಪವೀತನನ್ನು ಉತ್ತರೀಯವನ್ನು ಧರಿಸಿರಬೇಕು. ಏಕಬೇರವಾಗಿದ್ದಾಗ ನಿಂತಿರುವ ಹಾಗೆ ದೇವನನ್ನು ರೂಪಿಸಬಹುದು.


ಬಹು ಬೇರವಾಗಿ ರೂಪಿಸುವಂತಿದ್ದರೆ ದೇವಿಗೆ ಎಡ ಪಾರ್ಶ್ವದಲ್ಲಿ ಸ್ಥಾನ ಕಲ್ಪಿಸಿ ಕೊಡಬೇಕು. ನಾಲ್ಕು ಭುಜಗಳನ್ನು ಪಡೆದುಕೊಂಡು ತ್ರಿಭಂಗಿಯಲ್ಲಿ ಸಕಲ ಸಲ್ಲಕ್ಷಣಗಳೊಂದಿಗೆ ಇರಬೇಕು. ಪರಶುರಾಮ ನಾಲ್ಕು ಹಸ್ತಗಳನ್ನು ಹೊಂದಿದ್ದು ಶಂಖ, ಚಕ್ರ, ಶಾರ್ಙ್ಗ (ಧನಸ್ಸು) ಮತ್ತು ಬಾಣಗಳನ್ನು ಧರಿಸಿ ನಿಂತಿರಬೇಕು.

ವಿಷ್ವಕ್ಸೇನ ಸಂಹಿತೆಯಲ್ಲಿ (೧೧ : ೭೨ - ೭೫) ಈ ರೀತಿಯ ಧ್ಯಾನ ಶ್ಲೋಕವು ದೊರೆಯುತ್ತದೆ :

**ಜಾಮದಗ್ನ್ಯ ರಾಮಸ್ಯ ರೂಪಂ ವಕ್ಷ್ಯಾಮ್ಯತಃ ಪರಮ್ ||**
**+ + + ತಸ್ಯ ವರ್ಣಾಭಂ ದ್ವಿಭುಜಂ ಶ್ವೇತರತ್ನಕಮ್**
**ಆಸೀನಂ ತು ಪ್ರಸನ್ನಾಸ್ಯಂ ಬ್ರಹ್ಮಲಕ್ಷ್ಮೀ ಸಮಾವೃತಮ್ ||**
**ಸರ್ವಲಕ್ಷಣ ಸಂಪೂರ್ಣಂ ಸರ್ವಾಭರಣ ಭೂಷಿತಮ್**
**ಸರ್ವಾಲಂಕಾರ ಸಂಯುಕ್ತಂ ಜಟಾಮಂಡಲ ಭೂಷಿತಮ್ ||**
**ಪರಶುಂ ದಕ್ಷಿಣ ಹಸ್ತೇ ವಾಮೇ ಚಾಪ + ಪತ್ರಿಣಮ್**
**ವಾಮೇ ಕಮಂಡಲುಂ ವಾಪಿ ಚಾಕ್ಷಸೂತ್ರಂ ತು ದಕ್ಷಿಣೇ ||**
**ಇತ್ಥಂ ರೂಪಂ ಮುನೇ ತುಭ್ಯಂ ಜಾಮದಗ್ನೇಸ್ತು ವರ್ಣಿತಮ್**

ಪರಶುರಾಮನ ರೂಪವನ್ನು ಹೇಳುತ್ತೇನೆ - ಬಿಳಿಯದಾಗಿ ರತ್ನ ವರ್ಣ ಛಾಯೆಯಿಂದ ಸುಶೋಭಿತನಾಗಿರುವ ಸ್ವಾಮಿ ಎರಡು ತೋಳುಗಳನ್ನು ಪಡೆದುಕೊಂಡಿರುತ್ತಾನೆ. ಕುಳಿತು ಪ್ರಸನ್ನ ಮುದ್ರೆಯಲ್ಲಿ ಬ್ರಹ್ಮ ಮತ್ತು ಲಕ್ಷ್ಮಿಯರೊಂದಿಗಿರುತ್ತಾನೆ. ಜಟಾಮಂಡಲ, ಸರ್ವಾಭರಣಗಳು, ಶ್ರೀವತ್ಸಾದಿ ಸಕಲಾಲಂಕಾರಗಳನ್ನು ಪಡೆದಿರುತ್ತಾನೆ. ಬಲಹಸ್ತದಲ್ಲಿ ಪರಶುವನ್ನು ಎಡಹಸ್ತದಲ್ಲಿ ಬಾಣವನ್ನು ಹಿಡಿದಿರುವಂತೆ ರೂಪಿಸಬಹುದು. ಅಥವ ಬಲಹಸ್ತದಲ್ಲಿ ಕಮಂಡಲುವನ್ನು, ಎಡಹಸ್ತದಲ್ಲಿ ಅಕ್ಷಮಾಲೆಯನ್ನು ಹಿಡದಿರುವಂತೆ ರೂಪಿಸಬಹುದು. ಈ ರೀತಿ ಪೂರ್ವದ ಮುನಿಗಳು ಪರಶರಾಮ ಜಾಮದಗ್ನಿಯ ರೂಪವನ್ನು ವರ್ಣಿಸಿದ್ದಾರೆ.

**ಜಾಮದಗ್ನ್ಯಂತು ಕುರ್ವೀತಂ ಜಟಾ ಮುಕುಟಮಂಡಿತಮ್**
**ಚತುರ್ಬಾಹುಂ ಮಹಾಭಾಗಂ ಸರ್ವಕ್ಷತ್ರಾಂತಕಂ ಪ್ರಭುಮ್ ||**
**ದಕ್ಷಿಣೇ ಪರಶುಂ ಹಸ್ತೇ ವಾಮೇ ದದ್ಯಾತ್ತಥಾ ಧನುಃ**
**ಖಡ್ಗಂ ದಕ್ಷಿಣಹಸ್ತೇ ತು ವಾಮಹಸ್ತೇ ತು ಖೇಟಕಮ್ ||**
**ಕುಠಾರ ಹಸ್ತಂ ದ್ವಿಭುಜಂ ಕುರ್ಯಾದ್ವಾ ರೇಣುಕಾ ಸುತಮ್**



ಚಿತ್ರ ೨೫ : ಪರಶುರಾಮ ಮೂರ್ತಿ - ೨

ಎಲ್ಲಾ ಕ್ಷತ್ರಿಯರನ್ನು ಕಡಿದುತುಂಡರಿಸಿದ ಮಹಾ ಶಕ್ತಿಶಾಲಿಯಾದ ಪರಶುರಾಮ ಜಾಮದಗ್ನಿಯು ನಾಲ್ಕು ತೋಳುಗಳನ್ನು ಹೊಂದಿದ್ದು ಜಟಮುಕುಟದಿಂದ ಅಲಂಕೃತನಾಗಿರುತ್ತಾನೆ. ಮೇಲಿನ ಬಲಹಸ್ತದಲ್ಲಿ ಪರಶು ಗಂಡು ಗೊಡ್ಡಲಿ, ಎಡಹಸ್ತದಲ್ಲಿ ಧನಸ್ಸು ಇರುತ್ತವೆ. ಮುಂದಿನ ಬಲ ಹಸ್ತದಲ್ಲಿ ಖಡ್ಗ, ಎಡ ಹಸ್ತದಲ್ಲಿ ಖೇಟಕ (ಗುರಾಣಿ) ಇರುತ್ತವೆ. ಅಥವ ಎರಡೇ ಭುಜಗಳಿರುವಂತೆ ರೂಪಿಸಿದಾಗ ಬಲ ಹಸ್ತದಲ್ಲಿ ಪರಶು ಇರುವಂತೆ ರೂಪಿಸಬಹುದು. ಇನ್ನೊಂದು ಹಸ್ತವನ್ನು ಕಟ್ಯಾವಲಂಬಿತಹಸ್ತವನ್ನಾಗಿ ಅಥವ ಸೂಚೀ ಮುದ್ರೆಯಲ್ಲಿ ರೂಪಿಸುವುದು ಪದ್ಧತಿ. ಇದು ಹಯಶೀರ್ಷಸಂಹಿತೆ (ಆದಿ ೨೪ : ೨೫ - ೨೭) ಯಲ್ಲಿ ದೊರೆಯುವ ವಿವರಣೆ.

ಕೆಲವು ಕಡೆ ಪರಶುರಾಮನು ಕೆಂಪು ವರ್ಣದಲ್ಲಿರಬೇಕೆಂಬ ಸೂಚನೆಗಳೂ ಇವೆ. ಆಗ ಆತನ ವಸ್ತ್ರಗಳು ಬಿಳಿಯದಾಗಿರಬೇಕು.

**ಜಾಮದಗ್ನ್ಯರಾಮಂ ಮಧ್ಯಮದಶತಾಲೇನ ಮಿತಂ ಸ ವಿಂಶತಿಶತಾಂಗುಲಂ ದ್ವಿಭುಜಂ ರಕ್ತಾಭಂ ಶ್ವೇತವಸ್ತ್ರಧರಂ ದಕ್ಷಿಣಹಸ್ತೇನ ಪರಶುಧರಮುದ್ದೇಶ್ಯವಾಮಕರಂ ಜಟಾಮಕುಟಧರಂ ಸೋಪವೀತಂ ಸರ್ವಾಭರಣ ಭೂಷಿತಮೇವಂ ಕಾರಯೇತ್। ಕೌತುಕಂ ತದ್ರೂಪಂ ವಿಷ್ಣುಂ ಚತುರ್ಭುಜಂ ವಾ ಕಾರಯೇತ್।**

**(ವೈಖಾನಸ ಆಗಮ)**

ಮಧ್ಯಮ ದಶತಾಲಮಾನದಲ್ಲಿ (೧೨೦ ಅಂಗುಳ) ಪರಶುರಾಮನನ್ನು ರೂಪಿಸಬೇಕು. ಎರಡು ತೋಳುಗಳಿದ್ದು ಕೆಂಪುಬಣ್ಣದ ಮೈಕಾಂತಿಯವನಾಗಿರಬೇಕು. ಬಿಳಿಯ ವಸ್ತ್ರಗಳನ್ನು ಧರಿಸಿರಬೇಕು. ಬಲಹಸ್ತದಲ್ಲಿ ಪರಶು ಎಡಹಸ್ತವು ಸೂಚಿಮುದ್ರೆಯಲ್ಲಿರಬೇಕು. ಜಟಾಮಕುಟಧಾರಿಯಾದ ಈ ಸ್ವಾಮಿಯು ಯಜ್ಞೋಪವೀತ ಧರಿಸಿದ್ದು ಸರ್ವಾಭರಣಭೂಷಿತನಾಗಿರುತ್ತಾನೆ.

ಅಗ್ನಿ ಪುರಾಣದಲ್ಲಿ ಪರಶುರಾಮನಿಗೆ ನಾಲ್ಕು ತೋಳುಗಳಿದ್ದು ಅವುಗಳಲ್ಲಿ ಪರಶು, ಖಡ್ಗ, ಬಾಣ ಮತ್ತು ಬಿಲ್ಲು ಇರಬೇಕೆಂದು ವರ್ಣಿಸಿದ್ದರೆ ವಿಷ್ಣುಧರ್ಮೋತ್ತರವು ಜಿಂಕೆಯ ಚರ್ಮವನ್ನು ಉತ್ತರೀಯವಾಗಿ ಧರಿಸಿರಬೇಕೆಂದು (**ಕುರ್ಯಾಸ್ತು ಭಾರ್ಗವೋ ರಾಮೋ ಜಟಾಮಂಡಲದುರ್ದ್ಧ್ವಶಃ। ಹಸ್ತೇಽಸ್ಯ ಪರಶುಃ ಕಾರ್ಯಃ ಕೃಷ್ಣಾಜಿನ ಧರಸ್ಯ ತು॥**) ಹೇಳುತ್ತದೆ.

ಕೌತುಕಬೇರವನ್ನು ಉಪರೋಕ್ತ ವರ್ಣನೆಗಳಂತೆ ಮಾಡಬಹುದು ಅಥವ ಸಾಧಾರಣ ವಿಷ್ಣುಮೂರ್ತಿಯಂತೆ ನಾಲ್ಕು ತೋಳುಗಳಲ್ಲಿ ಶಂಖ ಚಕ್ರ ಗದಾ ಪದ್ಮಗಳನ್ನು ಧರಿಸಿರುವಂತೆ ರೂಪಿಸಿಯೂ ಮಾಡಬಹುದು.

*ಇತಿ ಶ್ರೀ ಬ್ರಾಹ್ಮೀಯೇ ಚಿತ್ರ ಕರ್ಮ ಶಾಸ್ತ್ರೇ ಪ್ರಾದುರ್ಭಾವಕಾಂಡೇ ಜಾಮದಗ್ನ್ಯ ಲಕ್ಷಣಂ ನಾಮ ಷಷ್ಠೋಽಧ್ಯಾಯಃ*

### ಅಥ ಸಪ್ತಮೋಽಧ್ಯಾಯಃ

# ರಾಮ ದಾಶರಥಿ ಲಕ್ಷಣಮ್

ವಕ್ಷ್ಯೇಽ ಹಮಧುನಾ ದಾಶರಥಿರಾಮಸ್ಯ ಲಕ್ಷಣಮ್
ಸವಿಂಶತಿಶತಾಂಗುಲ್ಯಂ ದಶತಾಳಂ (ತು) ಪಾದತಃ ॥ ೧ ॥
ಮೂರ್ಧಾಂತಮಿತಿ ನಿರ್ದಿಷ್ಟಂ ಮೂರ್ಧಾ ಸದ್ವಿಯವಾಂಗುಲಃ
ತತಸ್ತ್ರಿಮಾತ್ರಂ ಕೇಶಾಂತಂ ತಸ್ಮಾನ್ನೇತ್ರಂ (ತ) ತಃ ಪುಟಮ್ ॥ ೨ ॥
ತಸ್ಮಾದ್ಧನ್ವಂತಂ ಸದ್ವಿಯವಂ ಭಾಗಂ ಪ್ರಕೀರ್ತಿತಮ್
ಅರ್ಧಾಂಗುಲಂ ಗಳಂ ಕಂಠಂ ತ್ರಿಮಾತ್ರಕಂ ಷಡ್ಯವಂ ಭವೇತ್ ॥ ೩ ॥
ತಸ್ಮಾತ್ ಹೃದಪರ್ಯಂತಂ ದ್ವಿಷ್ಷಣ್ಮಾತ್ರಂ ಸಷಡ್ಯವಮ್
ತಸ್ಮಾನ್ನಾಭಿಸ್ತತೋ ಮೇಢ್ರಂ ಸಾಂಗುಲಂ ತಾಲ ಮೇವ ಹಿ ॥ ೪ ॥

ಈಗ ರಾಮ ದಾಶರಥಿಯ ಮೂರ್ತಿ ಲಕ್ಷಣವನ್ನು ಹೇಳಲಾಗುತ್ತದೆ. ಪಾದದಿಂದ ಉಷ್ಣೀಷದ ವರೆವಿಗೂ ೧೨೦ ಅಂಗುಳ. ಎಂದರೆ ಮಧ್ಯಮ ದಶತಾಳಮಾನದಲ್ಲಿ ರಾಮ ದಾಶರಥಿಯನ್ನು ರೂಪಿಸಬೇಕು. ಉಷ್ಣೀಷವು ೧ ಅಂಗುಳ ೨ ಯವ. ಅಲ್ಲಿಂದ ಕೇಶಾಂತ ೩ ಅಂಗುಳ ಎತ್ತರವಾಗಿರುತ್ತದೆ. ಅಲ್ಲಿಂದ ನೇತ್ರ ಸೂತ್ರದವರೆವಿಗೂ ಇರುವ ದೂರವು ೪ ಅಂಗುಳ ೨ ಯವ. ನೇತ್ರಸೂತ್ರದಿಂದ ನಾಸಾಪುಟ ಸೂತ್ರದವರೆವಿಗೂ, ನಾಸಾಪುಟ ಸೂತ್ರದಿಂದ ಹನ್ವಂತದವರೆವಿಗೂ ಒಂದೊಂದು ೪ ಅಂಗುಳ ೨ ಯವ ದೂರವಾಗಿರುತ್ತವೆ.ಗಳವು ೪ ಯವ. ಕಂಠವು ೩ ಅಂಗುಳ ೬ ಯವ ಎತ್ತರವಾಗಿರುತ್ತದೆ. ಕಂಠದಿಂದ ಹೃದಯದವರೆವಿಗೂ ೧೨ ಅಂಗುಳ ೬ ಯವ. ಹೃದಯದಿಂದ ನಾಭಿಯವರೆವಿಗೂ ೧೩ ಅಂಗುಳ. ನಾಭಿಯಿಂದ ಮೇಢ್ರಮೂಲದ ವರೆವಿಗೂ ೧೩ ಅಂಗುಳ ದೂರವಾಗಿರುತ್ತದೆ.

ತಸ್ಮಾದೂರುಸ್ತಥಾ ಪಂಚವಿಂಶನ್ಮಾತ್ರಂ ಸಷಡ್ಯವಮ್
ಭಾಗಂ ಸದ್ವಿ(ತ) ಯಂ ಜಾನು ಜಂಘಾಚೋರು ಸಮಾಯತಾ ॥ ೫ ॥
ಚರಣಂ ದ್ವಿಯವಂ ಭಾಗಂ ಸಪ್ತದಶಾಂಗುಲಾಯತಮ್
ಲಲಾಟೇ ಪುರೋಗಮಿತ್ಯುಕ್ತಮರ್ಧಾಂಗುಲ ವಿಸ್ತೃತಮ್ ॥ ೬ ॥
ಉತ್‌ಕ್ಷೇಪಾತ್ ಪಾರ್ಶ್ವಯೋಸ್ತಾರವರ್ತಂ ಸ್ಯಾತ್ತು ಕಲಾದ್ವಯಮ್

ತಸ್ಮಾತ್ ಭ್ರೂಮಧ್ಯ (ಮಂ) ಮಾತ್ರದ್ವಯಂ ಸದ್ವಯವಂ ತಥಾ ॥ ೭ ॥
ತಸ್ಮಾತ್ತು ತತ್ಸಮಂ ಜ್ಯೋತಿರ್ಮಂಡಲಂ ಯತ್ ಸ್ಥಿತಾಸಿತಮ್
ತತ್ಸೂತ್ರಂ ನೇತ್ರ ಸೂತ್ರಂ ಸ್ಯಾತ್ ಶ್ರೋತ್ರ ಸ್ರೋತ ಸ್ಯತತ್ಸಮಮ್ ॥ ೮ ॥
ತಸ್ಮಾತ್ ಭ್ರೂಸೂತ್ರ ಪರ್ಯಂತ ಮೂರ್ಧ್ವ ಕರ್ಣ ಸ್ಯಾ ತುಂಗಕಮ್
ತಸ್ಮಾದಧಸ್ತಾತ್ತು ಕರ್ಣ ನಾಳ ಮೂಲಂ ಕಲಾಯವಮ್ (ಯವಾದ್ವಯಮ್) ॥ ೯ ॥

ಮೇಢ್ರಾಂತದಿಂದ ತೊಡೆಯ (ಊರು) ಉದ್ದವು ೨೫ ಅಂಗುಳ ೬ ಯವ. ಮೊಣಕಾಲಿನ (ಜಾನು) ಎತ್ತರವು ೪ ಅಂಗುಳ ೨ ಯವ. ಮುಂಗಾಲು (ಜಂಘ) ತೊಡೆಯಷ್ಟೇ ಉದ್ದವಾಗಿರುತ್ತದೆ. ಎಂದರೆ ೨೫ ಅಂಗುಳ ೬ ಯವ. ಪಾದದ ಕೀಲಿನಿಂದ ಪಾದತಲಕ್ಕೆ ಇರುವ ಎತ್ತರವು ೪ ಅಂಗುಳ ೨ ಯವ. ಪಾದದ ಉದ್ದವು ೧೬ ಅಂಗುಳ.

ಉಷ್ಣೀಷ (೧.೨) + ಕೇಶಾಂತ (೩) + ನೇತ್ರಸೂತ್ರ (೪.೨) + ನಾಸಪುರ (೪.೨) + ಹನ್ವಂತ (೪.೨) + ಗಳ (೦.೪) + ಕಂಠ (೩.೬) + ಹೃಯ (೧೨.೬) + ನಾಭಿ (೧೩) + ಮೇಢ್ರ (೧೩) + ಊರು (೨೫.೬) + ಜಾನು (೪.೨) + ಜಂಘ (೨೫.೬) + ಪಾದ (೪.೨) = ೧೨೦ ಅಂಗುಳ

ಹಣೆಯ ಅಗಲವು ೮ ಅಂಗುಳ ೪ ಯವ. ಹಣೆಯ ಅಗಲವನ್ನು ಎತ್ತರವಾಗಿ ರೂಪಿಸಬೇಕು. ಅದರ ಅಗಲವನ್ನು ಕೇಂದ್ರವಾಗಿರಿಸಿಕೊಂಡು ಒಂದು ವೃತ್ತವನ್ನು ಮೂಡಿಸಿದರೆ ಆ ವೃತ್ತವನ್ನು ತಾರಾವರ್ತ ಎನ್ನುತ್ತಾರೆ. ಈ ತಾರಾವರ್ತದದಿಂದ ಹೊರಗೆ ಇರುವ ಭಾಗವು ೪ ಅಂಗುಳ. ಅಲ್ಲಿಂದ ಭ್ರೂಮಧ್ಯವು ೨ ಅಂಗುಳ ೨ ಯವ. ಅಲ್ಲಿಂದ ಜ್ಯೋತಿ ಮಂಡಲವು ೨ ಅಂಗುಳ ೨ ಯವ ಇರುತ್ತದೆ. ಅದರ ಮೂಲಕ ರೇಖೆಯನ್ನು ಎಳೆದರೆ ಅದನ್ನು ನೇತ್ರಸೂತ್ರ ಎನ್ನಲಾಗುತ್ತದೆ. ಈ ನೇತ್ರಸೂತ್ರ ಕರ್ಣಸೂತ್ರವನ್ನು ಸ್ಪರ್ಶಿಸುತ್ತದೆ. ನೇತ್ರಸೂತ್ರಕ್ಕೂ ಭ್ರೂಸೂತ್ರಕ್ಕೂ ಇರುವ ವ್ಯತ್ಯಾಸವೇ ನೇತ್ರಸೂತ್ರದ ಮೇಲಿನ ಕಿವಿಯ ಎತ್ತರವಾಗಿರುತ್ತದೆ. ನೇತ್ರ ಸೂತ್ರದ ಕೆಳಗೆ ಕರ್ಣನಾಳದ ಮೂಲವು ೨ ಅಂಗುಳ ೧ ಯವ.

ವೇದಾಂಗುಲಂ ತಥಾ ಲಂಬಮರ್ಧಮಾತ್ರಂ ತಯೋಸ್ಸಮಮ್
ಚತುರಷ್ಟಯವ ವ್ಯಾಸೌ ನಾಳೌ ಪೂರ್ವಾಪರೌ ಮತಾ ॥ ೧೦ ॥
ಕರ್ಣಂ ಕಲಾ ವಿಶಾಲಂ ಸ್ಯಾತ್ ತ್ರಿಯವ್ಯೋ ನಂ ಮುಖಂ ಮುಖಮ್
ನೇತ್ರಸ್ಯ ತಾರದೀರ್ಘ್ಯಾಸ್ತಾವ ಷ್ಟಾದಶಸಷಡ್ಯವೈಃ ॥ ೧೧ ॥
ತಸ್ಯ ಮಧ್ಯೇಽಸಿತಂ ಪಂಚಯವ (ಯವಾರ್ಧ ಯವಂ) ಮರ್ಧೇನ ಸಂಯುತಮ್
ಶೇಷಂ ಸಿತಾಂಶಂ ಕ + + + + + + + + + + ॥ ೧೨ ॥
ಮಧ್ಯ ಜ್ಯೋತಿರ್ಯವಂ ದೃಷ್ಟಿರ್ಯೂಕಮಾತ್ರಂ ಕನೀನಿಕಾ
ಯವಾಯಾಮತತಾ ನೇತ್ರಾಪಾಂಗರಕ್ತಂ ಯವಾ ತತಮ್ ॥ ೧೩ ॥
ತದರ್ಧವಿಸ್ತೃತಂ ವರ್ಮ ಯವಾರ್ಧಂ ಸ್ಯಾದಧೋಗತಮ್
ಊರ್ಧ್ವಸ್ಯ ವರ್ಮಣಸ್ತಾರಂ ದ್ವಿಯವಂ ಸ್ಯಾತ್ ಯವಂ ಭ್ರೂವಃ ॥ ೧೪ ॥
ಅಶೀತಿರ್ವಾಕ್ಷರೋ ಮಾಣಿ ತ್ರಿವರ್ಣೇ ಲೋಚನೇ ಶುಭೇ
ಅಪಾಂಗಾತ್ಕರ್ಣ ಮೂಲಾಂತಂ ಸಪ್ತಾಂಗುಲ ಮುದೀರಿತಮ್ ॥ ೧೫ ॥

ಯವೋನ ಕೋಲಂಕಂ ಗೋಜಿ ಮೂಲಾನ್ನಾಸಾಗ್ರತುಂಗಮ್
ಪುಷ್ಕರಂ ಷಡ್ಯವೋತ್ಸೇಧಂ ತಸ್ಯ ತಾರಂ ಯವಂ ಭವೇತ್ ॥ ೧೬ ॥
ಮಾತ್ರಾರ್ಧ ಮಾತ್ರಕೌ ನಾಸಾಪುಟ ತಾರಾಯತೌ ಸ್ಮೃತೌ
ಪುಟಸ್ಯ ಬಹಲಂ (ಯವಂ) ಕಲಾ ನೇತ್ರಾಂತರಂ ಭವೇತ್ ॥ ೧೭ ॥
ಕ್ರಮೇಣ ಚತರುಷ್ಟಾಷ್ಟಾದಶಭಿರ್ಯವಭಿಸ್ತತಿಃ
ಮೂಲಮಧ್ಯಾಗ್ರ ನಾಸಾ ಸ್ಯಾತ್ ಗೋಜ್ಯಾಯಾಮಂ ಚತುರ್ಯವಮ್ ॥ ೧೮ ॥
ತದರ್ಧಂ ವಿಸ್ಮೃತಿ ಶ್ಚೋಕ್ತಮೋಷ್ಠತಾರಂ ಚತುರ್ಯವಮ್
ತ ದ್ವೈರ್ಘ್ಯಂ ಸಯವಂ ಭಾಗಂ ತಸ್ಯ ಪಾಲೀ ಯವಾ ತತಿಃ ॥ ೧೯ ॥
ಅಧರಂ ಸಯವಾಂಗುಲ್ಯಂ ತಾರಂ ತತ್‌ದ್ವಿಗುಣಾಯತಮ್
ತಸ್ಯ ಪಾಲೀ ಯವಾದ್ಯರ್ಧ ತಾರಾ ಶೇಷಂ ತು ರಕ್ತಭಾಕ್ ॥ ೨೦ ॥
ಷಡ್ಯವಂ ತಸ್ಯ ತುಂಗಂ ಸ್ಯಾತ್ ಸಯವಂ ಕೋಲಕಂ ಹನು
ತಸ್ಮಾದ್ಗಳಂ ಸದ್ವಿಯ (ವಂ) ಕಂಠಾಂತಂ ತು ದ್ವಿಮಾತ್ರಕಮ್
(ಮಾತ್ರಂ ಕರ್ಣಾಂತ ತಾಃ) ॥ ೨೧ ॥
ದ್ವಿಯವಂ ಕಂಠಮೂಲಂ ಸ್ಯಾತ್ ವಿಸ್ಸೃತಂ ನವಮಾತ್ರಕಮ್
ಗ್ರೀವಾ ತಾರ ಸಮಂ ಬಾಹುಮೂಲಂ ಸ್ಯಾಜ್ಜಾನು ಮಧ್ಯಮಮ್ ॥ ೨೨ ॥

ನಾಳದ ಉದ್ದವು ೪ ಅಂಗುಳ. ಪೂರ್ವನಾಳ ಮತ್ತು ಅಪರನಾಳಗಳ ಮಧ್ಯೆ ಇರುವ ನಾಳದ ಉದ್ದವು ೪ ಯವಗಳು. ಪೂರ್ವನಾಳದ ಅಗಲವು ೪ ಯವಗಳು. ಅಪರನಾಳದ ಅಗಲವು ೮ ಯವ. ಕರ್ಣದ ವೈಶಾಲ್ಯವು ೨ ಅಂಗುಳ. ಮುಖದ ಅಗಲವು ೧೧ ಅಂಗುಳ ೫ ಯವ. ನೇತ್ರದ ಅಗಲವು ೮ ಯವ. ಅದರ ಉದ್ದವು ೧೬ ಯವ. ನೇತ್ರದ ಮಧ್ಯದಲ್ಲಿರುವ ಕಣ್ಣಿನ ಭಾಗವು ಐದೂವರೆ ಯವ ಇರುತ್ತದೆ. ಕಣ್ಣಿನಲ್ಲಿ ಈ ಭಾಗವನ್ನು ಬಿಟ್ಟರೆ ಉಳಿದದ್ದು ಬಿಳಿಯ ಗುಡ್ಡೆ (ಇದರ ಅಳತೆಯನ್ನು ಹೇಳಿಲ್ಲ). ಮಧ್ಯದಲ್ಲಿರುವ ಜ್ಯೋತಿ ಮಂಡಲವು ಒಂದು ಯವ. ದೃಷ್ಟಿಯು ಒಂದು ಯೂಕದಷ್ಟಿರುತ್ತದೆ. ಕಣ್ಣಿನ ಪಾಪದ ಉದ್ದ ಮತ್ತು ಅಗಲ ೧ ಯವ ಇರುತ್ತದೆ. ಕೆಂಪಾಗಿರುವ ಕಣ್ಣಿನ ಕೊನೆಗಳ ಉದ್ದವು ೧ ಯವ ಮತ್ತು ಅಗಲವು ಅರ್ಧ ಯವ. ಕೆಳಗಿನ ರೆಪ್ಪೆಯ ಅಗಲವು ಅರ್ಧ ಯವ. ಮೇಲಿನ ರೆಪ್ಪೆಯ ಅಗಲವು ೨ ಯವ. ಹುಬ್ಬಿನ ಅಗಲವು ೧ ಯವ. ರೆಪ್ಪೆಯಲ್ಲಿ ರೋಮಗಳು ೮೦. ಕಣ್ಣು ಮೂರು ಬಣ್ಣಗಳಲ್ಲಿ ಇರುವುದು ಒಳ್ಳೆಯದು. ಕಣ್ಣಿನ ಕೊನೆಯಿಂದ ಕರ್ಣದ ಮೂಲದವರೆವಿಗೂ ಇರುವ ದೂರವು ೭ ಅಂಗುಳ. ಮೇಲ್ತುಟಿಯ ಮಧ್ಯಭಾಗದ ಮೇಲೆ ಇರುವ ತಗ್ಗು ಭಾಗವನ್ನು ಗೋಜಿ ಎನ್ನುತ್ತಾರೆ. ಇದು ತುಟಿಯ ಮೇಲ್ಭಾಗದಿಂದ ಮೂಗಿನ ತುದಿಭಾಗದ ಅಡಿಯಲ್ಲಿ ಕೊನೆಗೊಳ್ಳುತ್ತದೆ. ಗೋಜಿ ಮೂಲದಿಂದ ಮೂಗಿನ ತುದಿಯ ಚಾಚು ಎತ್ತರ ೧ ಅಂಗುಳ ೭ ಯವ. ಪುಷ್ಕರ (ಮೂಗಿನ ಪುಟಗಳನ್ನು ಒಳಗೊಂಡಿರುವ ಗೋಜಿಯ ಮೇಲ್ಭಾಗದಿಂದ ಭ್ರೂಮಧ್ಯಸ್ಥಾನದಲ್ಲಿ ಕೊನೆಗೊಳ್ಳುವ ಮೂಗಿನಭಾಗ) ಇದರ ಎತ್ತರದ ತುದಿ ಭಾಗವು ೬ ಯವ ಎತ್ತರದಲ್ಲಿರುತ್ತದೆ. ಅದರ ಅಗಲವು ೧ ಯವ. ನಾಸಾಪುಟದ ಅಗಲವು ೪ ಯವ. ಎತ್ತರವು ೧ ಅಂಗುಳ. ನಾಸಾ ಪುಟದ ದಪ್ಪ ೧ ಯವ. ಎರಡು ಕಣ್ಣುಗಳ ನಡುಭಾಗವು ೨ ಅಂಗುಳ. ಮೂಗಿನ ಪ್ರಾರಂಭದಲ್ಲಿ ಅದರ ಅಗಲವು ೪ ಯವ. ಮಧ್ಯಭಾಗದಲ್ಲಿ ಅದರ

ಅಗಲವು ೮ ಯವ (ಅಥವ ೧ ಅಂಗುಳ). ಮೂಗಿನ ತುದಿಭಾಗದಲ್ಲಿ ಅದರ ಅಗಲವು ೧೮ ಯವಗಳು (ಎಂದರೆ ೨ ಅಂಗುಳ ೨ ಯವ.) ಗೋಜಿಯ ಉದ್ದ ೪ ಯವ. ಅದರ ಅಗಲ ೨ ಯವ. ಮೇಲ್ತುಟಿಯ ಅಗಲ ೪ ಯವ. ಉದ್ದವು ೪ ಅಂಗುಳ ೧ ಯವ. ಮೇಲ್ತುಟಿಯ ಅಂಚಿನ ಅಗಲವು ೧ ಯವ. ಕೆಳತುಟಿಯ ಅಗಲವು ೧ ಅಂಗುಳ ೧ ಯವ.ಅದರ ಉದ್ದವು ೨ ಅಂಗುಳ ೨ ಯವ. ಅದರ ಅಂಚಿನ ಅಗಲವು ಒಂದೂವರೆ ಯವ. ತುಟಿಗಳು ಕೆಂಪಾಗಿರಬೇಕು. ಆ ರೀತಿಯಾಗಿ ಕೆಂಪಾಗಿರುವ ಭಾಗವು ೬ ಯವಗಳು. ಬಾಯಿಂದ ಚುಬುಕದ ದೂರವು ೨ ಅಂಗುಳ ೧ ಯವ. ಚುಬುಕದಿಂದ ಕೊರಳು ೧ ಅಂಗುಳ ೨ ಯವದ ದೂರದಲ್ಲಿರುತ್ತದೆ. ಅಲ್ಲಿಂದ ಕಂಠ ಭಾಗವು ೨ ಅಂಗುಳ ೨ ಯವ ಇರುತ್ತದೆ. ಕಂಠದ ಮೂಲದಲ್ಲಿ ಅಗಲವು ೯ ಅಂಗುಳ. ಬಾಹುಮೂಲ(ಕಂಕುಳಿನ ಮೇಲ್ಭಾಗ - ಭುಜ)ವು ಜಾನು ಮಧ್ಯಮ (ಮೊಣಕಾಲಿನ ನಡುಭಾಗವು), ಅಗಲದಲ್ಲಿ ಕಂಠಮೂಲಕ್ಕೆ ಸಮನಾಗಿರುತ್ತವೆ.

ಹಿಕ್ಕಾ ಸೂತ್ರಾದಧೋ ಬಾಹು ದೀರ್ಘಂ ಷಟ್ತ್ರಿಂಶದಂಗುಲಮ್
ಕೂರ್ಪರಂ ದ್ವ್ಯಂಗುಲಂ ತಸ್ಮಾತ್ ಪ್ರಕೋಷ್ಠಂ ದಶಕೋಲಕಮ್ ॥ ೨೩ ॥
ಮಣಿಬಂಧಾತ್ತಲಂ ಸಪ್ತಮಾತ್ರಂ ತಸ್ಮಾತ್ ಷಡಂಗುಲಮ್
ದೈರ್ಘ್ಯಂ ಸ್ಯಾನ್ಮಧ್ಯಮಂಗುಲ್ಯಾ ಷಡ್ಯವೋನಾ ಪ್ರದೇಶಿನೀ ॥ ೨೪ ॥
ತತ್ಸಮಾನಾಮಿಕಾ ಜ್ಞೇಯಾ ದ್ವಿಯವಂ ಸದ್ವಿಕೋಲಕಮ್
ಅಂಗುಷ್ಠಾಯಾಮಮೇವಂ ಸ್ಯಾತ್ ತತ್ಸಮಾ ಸ್ಯಾತ್ಕನಿಷ್ಠಿಕಾ ॥ ೨೫ ॥
ಭಾಗದ್ವಯಂ ಸಪ್ತಮಾತ್ರಂ ಪಂಚಾರ್ಧತ್ರ್ಯಂಗುಲಾರ್ಧಕಮ್
ಕ್ರಮೇಣ ಬಾಹುಮಧ್ಯಸ್ಯ ಕೂರ್ಪರಸ್ಯ ತಥೈವ ಹಿ ॥ ೨೬ ॥
ಪ್ರಕೋಷ್ಠ ಮಧ್ಯಮ ಸ್ಯಾಪಿ ಮಣಿಬಂಧಸ್ಯ ವಿಸ್ತೃತಮ್
ತಲಸ್ಯ ಸಾರ್ಧಷಣ್ಮಾತ್ರಂ ಬಹಲಂ ದ್ವ್ಯಂಗುಲಾರ್ಧಕಮ್ ॥ ೨೭ ॥
ಷಡಷ್ಟನವಭಿಶ್ಚಾಷ್ಟ ಯವೈರ್ದ್ವಾದಶಭಿರ್ಯವೈಃ
ಕನಿಷ್ಠಾದ್ಯಂಗುಷ್ಠಾಂತಾ ನಾಮಂಗುಲೀನಾಂ ತತಿಃ ಕ್ರಮಾತ್ ॥ ೨೮ ॥
ತ್ರಿಯವಾರ್ಧಂ ಪಂಚ ಪಂಚಾ (ರ್ಧ) ಪಂಚಾಷ್ಟಾಭಿರ್ಯವೈಃ ಕ್ರಮಾತ್
ನಖವಿಸ್ತಾರ ಮಿತ್ಯುಕ್ತ ಮಾಯಾಮಂ ದ್ವಿಯವಾಧಿಕಮ್ ॥ ೨೯ ॥
ತಿಸ್ರೋರೇಖಾಃ ಪಾಣಿ ತಲೇ ಶಂಖ ಚಕ್ರಯುತಾಸ್ತಥಾ
ಏಕೋನ ಚತ್ವಾರಿಂ ಶತ್ ಸ್ಯಾತ್ ಬಾಹು ಮಧ್ಯವಿಶಾಲಕಮ್
[ಏಕೋನ ಚತ್ವಾರ್ಯಶಂತ್ ಸ್ಯುಮಾತ್ರಬಾಹ್ವೋರ್ವಿಶಾಲಕಮ್] ॥ ೩೦ ॥
ವಕ್ಷಃ ಸ್ಥಲಸ್ಯ ವಿಸ್ತಾರಂ ಸಾಂಗುಲಂ ದಶಕೋಲಕಮ್
ಅಂಸಾತ್ಕಕ್ಷಂ ನವಾಂಗುಲ್ಯಂ ತಸ್ಮಾತ್ಕಕ್ಷಧರಃ ಕಲಾ ॥ ೩೧ ॥
ಹಿಕ್ಕಾಯಾ ಸ್ಸ್ಯಾಂಗುಲಂ ತಾಲಂ ಸ್ತನಾಕ್ಷಂ ತತ್ ಸ್ತನಾತ್ ಸ್ತನಮ್
ಪಂಚಾದಶಾಂಗುಲಾರ್ಧಂ ಸ್ಯಾತ್ ಕುಕ್ಷಿಸ್ತಸ್ಮಾತ್ಕಲಾಧಿಕಾ ॥ ೩೨ ॥
ಶ್ರೋಣೀ ತಸ್ಮಾತ್ಕಲಾಧಿಕ್ಯಾ ಕಟಿಶ್ಚೋರು ಮುಖಾಂಗುಲಮ್
ಲಿಂಗಂ ಪಂಚಾಂಗುಲಾ ಲಂಬಂ ವಿಸ್ತಾರಂ ದ್ವ್ಯಂಗುಲಂ ಭವೇತ್ ॥ ೩೩ ॥
ಮುಷ್ಕಾಲಂಬಂ ತಥಾ ಭಾಗಂ ವಿಸ್ತಾರಂ ತು ತಥೈವ ಹಿ

ಮೂರ್ಧ್ನಃ ಕೃಕಾಟಿಕಾ ಪೃಷ್ಠೇ ಕೇಶಾಂತಂ ಸಾಂಗುಲಂ ಮುಖಮ್ ॥ ೩೪ ॥
ತಸ್ಮಾತ್ ಗ್ರೀವಾ ಚತುರ್ಮಾತ್ರಾ ತಸ್ಮಾತ್ ಭಾಗಂ ಕಕುಸ್ತತಃ
ಕಟಿ ಸಂಧಿ ಸ್ತ್ರಯೋದಶ ಕಲಾ ಸ್ತಸ್ಮಾತ್ತು ಖಂಡಕಮ್ ॥ ೩೫ ॥
ಸಾಂಗುಲಂ ಷಟ್ ಕಲಂ ತಸ್ಮಾತ್ ಸ್ಫಿಜೌ ಮಾತ್ರಾ ಚತುಷ್ಟಯೌ
ಏಕಾದಶಾಂಗುಲಂ ಪೃಷ್ಠಶಿರಸ್ತಾರಂ ಚತುಷ್ಕಲಮ್ ॥ ೩೬ ॥

ಹಿಕ್ಕಾಸೂತ್ರದ ಕೆಳಗೆ (ಹಿಕ್ಕಾಸೂತ್ರ ಎಂದರೆ ಕಂಠದ ಕೆಳಗೆ ಇರುವ ಹಳ್ಳದ ಮೂಲಕ ಹಾದು ಎರಡೂ ಕಡೆಗಳಲ್ಲಿ ಭುಜಗಳ ಮೇಲ್ಭಾಗವನ್ನು ಸ್ಪರ್ಶಿಸುವ ಕಾಲ್ಪನಿಕ ರೇಖೆ) ಬಾಹುವಿನ (ಭುಜದ) ಉದ್ದವು ೨೬ ಅಂಗುಳ. ಮೊಣಕ್ಕೆ ಉದ್ದವು ೨ ಅಂಗುಳ. ಮೊಣಕ್ಕೆಯಿಂದ ಮಣಿ ಕಟ್ಟಿನವರೆವಿಗೂ ಉದ್ದವು ೨೦ ಅಂಗುಳ. ಮಣಿಕಟ್ಟಿನಿಂದ ಅಂಗೈ ಉದ್ದವು ೭ ಅಂಗುಳ. ನಡು ಬೆರಳಿನ ಉದ್ದವು ೬ ಅಂಗುಳ. ತರ್ಜನಿ (ತೋರುಬೆರಳು)ಯ ಉದ್ದವು ೫ ಅಂಗುಳ ೨ ಯವ. ಅನಾಮಿಕ (ಉಂಗುರ ಬೆರಳು) ೫ ಅಂಗುಳ ೨ ಯವ ಉದ್ದವಾಗಿರುತ್ತದೆ. ಹೆಬ್ಬೆರಳಿನ ಉದ್ದವು ೪ ಅಂಗುಳ ೨ ಯವ. ಕಿರುಬೆರಳಿನ ಉದ್ದವು ಹೆಬ್ಬೆರಳಿನಂತೆಯೇ ೪ ಅಂಗುಳ ೨ ಯವ. ಬಾಹುಮಧ್ಯ (ಮೇಲ್ತೋಳಿನ ಮಧ್ಯಭಾಗ)ದ ಸುತ್ತಳತೆ ೮ ಅಂಗುಳ. ಮೊಣಕ್ಕೆ ಬಳಿ ಸುತ್ತಳತೆ ೭ ಅಂಗುಳ. ಮುಂಗೈ ಸುತ್ತಳತೆ ೫ ಅಂಗುಳ ೪ ಯವ. ಮಣಿಕಟ್ಟಿನ ಸುತ್ತಳತೆ ೩ ಅಂಗುಳ ೪ ಯವ. ಅಂಗೈ ಅಗಲವು ೬ ಅಂಗುಳ ೪ ಯವ. ಅಂಗೈ ದಪ್ಪವು ೨ ಅಂಗುಳ ೪ ಯವ. ಕಿರು ಬೆರಳಿನಿಂದ ಮೊದಲುಗೊಂಡು ಹೆಬ್ಬೆರಳಿನ ತನಕ ಒಂದೊಂದು ಬೆರಳಿನ ಅಗಲವು ಕ್ರಮವಾಗಿ ೬, ೮, ೯, ೮ ಮತ್ತು ೧೨ ಯವಗಳಾಗಿರುತ್ತದೆ. ಕಿರುಬೆರಳಿನಿಂದ ಮೊದಲುಮಾಡಿ ಹೆಬ್ಬೆರಳಿನವರೆವಿಗೆ ಬೆರಳುಗಳಲ್ಲಿರುವ ಉಗುರುಗಳ ಅಗಲವು ಕ್ರಮವಾಗಿ ೩. ೫, ೫, ೫. ೫ ಮತ್ತು ೮ ಯವಗಳು. ಈ ಉಗುರುಗಳು ಉದ್ದದಲ್ಲಿ ಅವುಗಳ ಅಗಲಕ್ಕಿಂತ ೨ ಯವಗಳು ಹೆಚ್ಚಾಗಿರುತ್ತವೆ. ಅಂಗೈಯ್ಯಲ್ಲಿರುವ ಮೂರು ರೇಖೆಗಳಲ್ಲಿ ಶಂಖ, ಚಕ್ರ (ಗದೆ, ಪದ್ಮ)ಇವು ಕಾಣುವಂತೆ ರೂಪಿಸಬೇಕು.

ಎರಡು ಭುಜಗಳ ಮಧ್ಯ ವಿಸ್ತಾರವು ೪೯ ಅಂಗುಳ. ವಕ್ಷಸ್ಥಳದ ಅಗಲವು ೨೧ ಅಂಗುಳ. ಕಂಕುಳಿನಿಂದ ಉದ್ದವು ೯ ಅಂಗುಳ. ತೋಳಿನ ಅಗಲ ಮಾತ್ರ ೨ ಅಂಗುಳ. ಹಿಕ್ಕಾ ಸೂತ್ರದಿಂದ (ಕಂಠದಿಂದ) ಮೊದಲುಗೊಂಡು, ಸ್ತನ ಸೂತ್ರದವರೆವಿಗೂ ಇರುವ ಉದ್ದವು ೧೩ ಅಂಗುಳ. ಎರಡು ಸ್ತನಾಗ್ರಗಳ ಮಧ್ಯೆ ಇರುವ ವಿಸ್ತಾರವು ೧೩ ಅಂಗುಳ. ತೋಳಿನ ಮೊಣಕ್ಕೆ ಅಗಲ ೨ ಅಂಗುಳ. ಹೊಟ್ಟೆಯ ಅಗಲವು ೧೫ ಅಂಗುಳ ೪ ಯವ. ನಾಭಿಯ ಕೆಳಭಾಗದಲ್ಲಿರುವ ಶ್ರೋಣೀ ಪ್ರದೇಶದಲ್ಲಿ ಅಗಲವು ೧೭ ಅಂಗುಳ ೪ ಯವ. ಅಲ್ಲಿಂದ ಸೊಂಟದ ಅಗಲವು ೨ ಅಂಗುಳ ಹೆಚ್ಚಾಗಿರುತ್ತದೆ. ಎಂದರೆ ೧೯ ಅಂಗುಳ ೪ ಯವ. ಅಲ್ಲಿಂದ ತೊಡೆಯ ಮೂಲದಲ್ಲಿ ಅಗಲವು ೧೨ ಅಂಗುಳ. ಲಿಂಗದ ಉದ್ದ ೫ ಅಂಗುಳ. ಅದರ ಅಗಲ ೨ ಅಂಗುಳ. ವೃಷಣಕೋಶದ ಉದ್ದವು ೪ ಅಂಗುಳ. ಅದರ ಅಗಲವು ೪ ಅಂಗುಳ.

ಉಷ್ಣೀಷದಿಂದ ಪ್ರಾರಂಭಿಸಿ ಹನ್ವಂತರವರೆವಿಗೂ ಮುಖದ ಉದ್ದವು ೧೩ ಅಂಗುಳ. ಅಲ್ಲಿಂದ ಕಂಠ (ಕೊರಳು) ೪ ಅಂಗುಳ. ಅಲ್ಲಿಂದ ಕಕುತ್ (ಕೊರಳಿನ ಹಿಂಭಾಗ)ದವರೆವಿಗೂ ಉದ್ದ ೪ ಅಂಗುಳ. ತಲೆಯ ಹಿಂಭಾಗದ ಕೇಶಾಂತವು ಮುಖದಷ್ಟಿರುತ್ತದೆ. ಅಲ್ಲಿಂದ ಕಂಠ ೪ ಅಂಗುಳ. ಉಳಿದದ್ದು ಕಕುತ್. ಅಲ್ಲಿಂದ ಸೊಂಟದ ಸಂಧಿಯತನಕ ಉದ್ದವು ೨೬ ಅಂಗುಳ. ಅಲ್ಲಿಂದ ಸೊಂಟದ ಕೆಳಗೆ ಹಿಂಭಾಗದಲ್ಲಿ ಖಂಡಕಂ ಎನ್ನುವ ಮಾಂಸಖಂಡದ ಉದ್ದವು ೧೩

ಅಂಗುಳ. ಪೃಷ್ಠದ ಎತ್ತರವು ೪ ಅಂಗುಳ. ಪೃಷ್ಠದ ಅಗಲವು ೧೧ ಅಂಗುಲ.


ಗ್ರೀವಾ ನಾರಾಂ ತಥಾಧ್ಯರ್ಧಾಂಗುಲಂ ಕರ್ಣಾಸ್ಯಾ ಪೃಷ್ಠತಃ
ಪಂಚಾದಶಾಂಗುಲಂ ಕಕ್ಷಧರಸ್ಯ ವಿಸ್ತೃತಂ ಮತಮ್ ॥ ೩೭ ॥
ವಂಶದಂಡಂ ಕಲಾ ತಾರಂ ಸ್ಫಿಕ್ಪಿಂಡಂ (ತು ನವಾಂಗುಳಮ್)
ಚತುರಂಗುಲ ಮುತ್ಸೇಧಮೂರುಮೂಲಾತ್ಸುವೃತ್ತಕಮ್ ॥ ೩೮ ॥
ಏಕಾದಶಾಂಗುಲಾರ್ಧಂ ತು ಮಧ್ಯೋರೋರ್ವಿಸ್ತರಂ ಭವೇತ್
ಮಧ್ಯೆ ಸಪ್ತಾಂಗುಲಂ ಜಂಘಾ ಚತುರ್ಮಾತ್ರಂ ಯವದ್ವಯಮ್ ॥ ೩೯ ॥
ನಳಕಾವಿಸ್ತೃತಿ ಶ್ಚಾಕ್ಷಗುಲ್ಫಾಂತಂ ಪಂಚಮಾತ್ರಕಮ್
ಪಾರ್ಷ್ಣೀ ಸ್ಯಾತ್ ಚತುರಂಗುಲ ವಿಸ್ತಾರಯಾಮೌಕೌ ಸ್ಮೃತೌ ॥ ೪೦ ॥
ಪಂಚಾಂಗುಲಂ ಸದ್ವಿಯವಂ ಪಾದಮಧ್ಯಮ ವಿಸ್ತರಮ್
ಸಾರ್ಧಾಂಗುಲ ಷಡಂಗುಲ್ಯಂ ಪಾದಾಗ್ರತಲ ವಿಸ್ತರಮ್ ॥ ೪೧ ॥
ದ್ವಿಯವಂ ಭಾಗಮಂಗುಷ್ಠದೀರ್ಘಂ ತಾರಂ ದ್ವಿಮಾತ್ರಕಂ
ತಸ್ಮಾದ್ಧ್ಯವಾಧಿಕಾಯಾಮಾ ಸಯವಾಂಗುಲ ವಿಸ್ತೃತಾ ॥ ೪೨ ॥
ಪ್ರದೇಶಿನೀ ತ್ರಿಮಾತ್ರಾರ್ಧ ದೀರ್ಘಾಸ್ಸಾರ್ಧ ಯವಾತತಾ
ಮಧ್ಯಮಾಽನಾಮಿಕಾ ದ್ವ್ಯರ್ಧಕಲಾಯಾಮಾ ತತಾಂಗುಲಾ ॥ ೪೩ ॥
ದ್ವ್ಯರ್ಧ ಮಾತ್ರಾ ಸಪ್ತಯವಾಯಾಮ ತಾರಾ ಕನಿಷ್ಠಿಕಾ
ಅಷ್ಟಪಂಚ ಚತುಸ್ಸಾರ್ಧ ತ್ರಿಯವಾ ನಖ ವಿಸ್ತರಾಃ ॥ ೪೪ ॥
ಕ್ರಮಾತ್ತದರ್ಧ ದೀರ್ಘಾಃ ಸ್ಯುಃ (ಪಾದಾಂಗುಷ್ಠಾದಿಕಾ ನಖಾಃ)
ಅನುಕ್ತಮೇವ ಮೂಹ್ಯಂ ಯದಂಗ ನಿಮ್ನೋನ್ನತ ಕ್ರಿಯಾ ॥ ೪೫ ॥

ಕಂಠದ ಅಗಲವು ೮ ಅಂಗುಳ. ಕಿವಿಯ ಹಿಂಭಾಗದ ಅಗಲವು ೧ ಅಂಗುಳ ೪ ಯವ. ಎರಡು ಕಂಕುಳುಗಳ ಮಧ್ಯ ಇರುವ ದೂರವು ಅಗಲದಲ್ಲಿ ೧೫ ಅಂಗುಳ. ಇದು ವಂಶದಂಡದ ಅಗಲ. (ಮೂರ್ತಿಯನ್ನು ಮಣ್ಣಿನಲ್ಲಿ ನಿರ್ಮಿಸಬೇಕಾಗಿದ್ದಾಗ ಮರದಲ್ಲಿ ಒಂದು ಪಂಜರವನ್ನು ನಿರ್ಮಿಸಲಾಗುತ್ತದೆ. ಅದನ್ನು ಶೂಲ ಎನ್ನುತ್ತಾರೆ. ಆ ಶೂಲದ ಬೆನ್ನಿನಲ್ಲಿ ಬರುವ ಆಧಾರ. ಇದನ್ನು ವಂಶದಂಡಎಂದು ಕರೆಯುತ್ತಾರೆ). ಕಂಕುಳಿನ ಕುಳಿಯ ಆಳವು ೨ ಅಂಗುಳ. ಪೃಷ್ಠಗಳ ಅಗಲವು ೯ ಅಂಗುಳ. ತೊಡೆಯ ಮೇಲ್ಭೈಯಿಂದ ಪೃಷ್ಠದ ಎತ್ತರವು ೪ ಅಂಗುಳವಾಗಿರುತ್ತದೆ. ತೊಡೆಯ ಮಧ್ಯಭಾಗದ ಅಗಲವು ೧೧ ಅಂಗುಳ ೪ ಯವ. ಮುಂಗಾಲಿನ ನಡುಭಾಗದ ಅಲಗವು ೭ ಅಂಗುಳ. ಪಾದದ ಕೀಲಿನ ಬಳಿಯ ಅಗಲವು ೪ ಅಂಗುಳ ೨ ಯವ. ಗುಲ್ಫಗಳ ಮಧ್ಯದ ದೂರವು ೫ ಅಂಗುಳ. ಹಿಮ್ಮಡಿಯು ೪ ಅಂಗುಳ ಅಗಲ ಮತ್ತು ೪ ಅಂಗುಳ ಉದ್ದವಾಗಿರುತ್ತದೆ. ಪಾದ ಮಧ್ಯಭಾಗವು ೫ ಅಂಗುಳ ೨ ಯವ ಅಗಲವಾಗಿರುತ್ತದೆ. ಪಾದದ ಮುಂಭಾಗದ ಅಗಲವು ೬ ಅಂಗುಳ ೪ ಯವ. ಪಾದದ ಹೆಬ್ಬೆರಳು ೪ ಅಂಗುಳ ೨ ಯವ ಉದ್ದವಾಗಿರುತ್ತದೆ. ಅದರ ಅಗಲವು ೨ ಅಂಗುಳ. ಪ್ರದೇಶಿನಿ (ಹೆಬ್ಬೆರಳಿನ ಪಕ್ಕದ ಬೆರಳು) ಉದ್ದವು ಅಂಗುಷ್ಠಕ್ಕಿಂತಲೂ ಒಂದು ಯವ ಹೆಚ್ಚು. ಎಂದರೆ ೪ ಅಂಗುಳ ೩ ಯವ. ಅಗಲವು ೧ ಅಂಗುಳ ೧ ಯವ. ಕಾಲಿನ ಮಧ್ಯ ಬೆರಳು ೩ ಅಂಗುಳ ೪ ಯವ. ಉದ್ದವಾಗಿರುತ್ತದೆ. ಅಗಲವು ೪ ಯವ. ನಾಲ್ಕನೆಯ ಬೆರಳು (ಅನಾಮಿಕಾ) ಉದ್ದದಲ್ಲಿ ೨ ಅಂಗುಳ ೪ ಯವವಿದ್ದು

ಅಗಲ ೧ ಅಂಗುಲವಾಗಿರುತ್ತದೆ. ಕಿರುಬೆರಳಿನ ಉದ್ದವು ೨ ಅಂಗುಳ ೪ ಯವ. ಅಗಲ ೭ ಯವ. ಹೆಬ್ಬೆರಳಿನಿಂದ ಕಿರುಬೆರಳಿನ ತನಕ ಇರುವ ಉಗುರುಗಳ ಅಗಲಗಳು ಕ್ರಮವಾಗಿ ೮, ೫, ೪, ೩.೫ ಮತ್ತು ೩ ಯವಗಳು. ಅಗಲದ ಅರ್ಧಭಾಗವನ್ನು ಸೇರಿಸಿದರೆ ಆಯಾ ಬೆರಳುಗಳ ನಖಗಳ ಉದ್ದವು ಬರುತ್ತದೆ. ಈ ರೀತಿಯಾಗಿ ಅಂಗುಷ್ಠದಿಂದ ಕಿರುಬೆರಳಿನ ತನಕ ನಖಗಳ ಉದ್ದ ಕ್ರಮವಾಗಿ ಇಂತಿರುತ್ತವೆ ೧೨ ಯವಗಳು, ೭. ೫ ಯವಗಳು, ೬ ಯವಗಳು, ೫. ೨೫ ಯವಗಳು ಮತ್ತು ೪. ೫ ಯವಗಳು. ಅನುಕ್ತವಾಗಿರುವ ಅವಯವಗಳ ಅಳತೆಗಳನ್ನು ಚತುರನಾದ ಶಿಲ್ಪಿಯು ಕಲ್ಪಿಸಿಕೊಂಡು ಅವುಗಳ ನಿಮ್ನೋನ್ನತಗಳನ್ನು ಪ್ರಕೃತಿಯಲ್ಲಿ ಕಂಡು ಬರುವಂತೆ ರೂಪಿಸಿ ಮೂರ್ತಿಯ ಆಕರ್ಷಣೆ, ಅಂದಗಳು ವೃದ್ಧಿಗೊಳ್ಳುವಂತೆ ಮಾಡಬೇಕು. ಸ್ವಾಮಿಯನ್ನು ಕಿರೀಟ, ಮಕರ ಕುಂಡಲ, ರತ್ನಹಾರ, ವನಮಾಲೆ, ಶ್ರೀವತ್ಸ ಮುಂತಾದುವುಗಳಿಂದ ಅಲಂಕಾರ ಮಾಡಬೇಕು.

**ಸುಪ್ರತಿಷ್ಠಿತ ಮೇವಂ ಸ್ಯಾತ್ ಮೌಲಿರ್ಮಕರ ಕುಂಡಲಮ್**
**ರತ್ನೋಪಗ್ರೀವ ಮೇವಂ ಸ್ಯಾತ್ ಹಾರಂ ಶ್ರೀವತ್ಸಕಂ ಭವೇತ್ ॥ ೪೬ ॥**
**ಇಂದ್ರ ಛಂದಂ ತಥಾ ಬಾಹ್ವೋರಂಗದಂ ಭುಜಭೂಷಣಮ್**
**ಮಣಿ ಬಂಧ ಮಂಡನಂ ರತ್ನ ಕಟಕ ತ್ರಯಮೇವ ಹಿ ॥ ೪೭ ॥**
**ಮುದ್ರಿಕಾ ಪದ್ಮ ಕರ್ಣೀ ಸ್ಯಾತ್ ಶುದ್ಧ ಮುಕ್ತಾ ಕಲಾಪಕಮ್**
**ಛನ್ನವೀರಂ ಪ್ರಶಸ್ತಂ ಸ್ಯಾತ್ ಮತ್ಸ್ಯಾವಯವ ಮೇವ ಹಿ ॥ ೪೮ ॥**
**ಉದರಬಂಧನಮೇವಂ ಸ್ಯಾತ್ ರತ್ನಾವಯವ ಮೇವ ಹಿ**
**ಕಟಿಬಂಧಂ ಕೃತ್ರಿಮಂ ಪಾಶಂ ಕಟಿಸೂತ್ರಂ ರತ್ನಮಂಡಿತಮ್ ॥ ೪೯ ॥**
**ರತ್ನಾರಂಜಿತಮೇವಂ ಸ್ಯಾತ್ ಪಾದಜಾಲಂ ಸುಶೋಭನಮ್**
**ಪಾದಾಗುಂಲೀಯಕಾ ರತ್ನಮುದ್ರಿಕಾ ಇತಿ ಕೀರ್ತಿತಾಃ ॥ ೫೦ ॥**

ಪೂರ್ವೋಕ್ತ ಅಳತೆಗಳಲ್ಲಿ ಮೂರ್ತಿಯನ್ನು ನಿರ್ಮಿಸಬೇಕು. ನಂತರ ಪ್ರತಿಮೆಯ ತಲೆಯ ಮೇಲೆ ಕೀರಿಟ. ಕಿವಿಗಳಲ್ಲಿ ಮಕರ ಕುಂಡಲ. ಕೊರಳಿನಲ್ಲಿ ವಜ್ರಗಳ ಕಂಠ ಮಾಲೆಗಳು. ಶ್ರೀವತ್ಸ. ಇಂದ್ರಛಂದ ಎಂದು ಕರೆಯಲ್ಪಡುವ ಆಭರಣ. ಅಂಗದ ಎಂದು ಕರೆಯಲ್ಪಡುವ ಭುಜಗಳನ್ನು ಅಲಂಕರಿಸುವ ತೋಳ್ಬಂದಿ. ಮುಂಗೈ ಮಣಿಕಟ್ಟಿನಲ್ಲಿರುವ ಮೂರು ವಲಯಗಳುಳ್ಳ ಕಡಗದಂತಹ ಆಭರಣಗಳು. ತಾವರೆಯ ದಳಗಳಂತಹ ಉಂಗುರಗಳು. ಶುದ್ಧವಾದ ಮುತ್ತುಗಳನ್ನು ಪೋಣಿಸಿ ತಯಾರಿಸಿದ ಛನ್ನವೀರ ಎನ್ನುವ ಮುತ್ತಿನಮಾಲೆ, ಮೀನಿನ ಮುಖದ ರೀತಿಯಲ್ಲಿಯ ಭಾಗಗಳನ್ನು ಪೋಣಿಸಿ ಅಲಂಕಾರವಾಗಿ ರೂಪಿಸಿರುವ ಉದರಬಂಧ. ವಜ್ರಖಚಿತವಾದ ವಡ್ಯಾಣ. ನವರತ್ನಗಳಿಂದ ಶೋಭಾಯಮಾನವಾಗಿದ್ದು ಸೊಂಟವನ್ನು ಅಲಂಕರಿಸಿರುವ ಕಟಿಬಂಧ, ಕಾಲಿನ ಪಾದಗಳ ಮೇಲೆ ಬೆಲೆಬಾಳು ಮಣಿಗಳನ್ನು ಹುದುಗಿಸಿಕೊಂಡು ರೂಪುಗೊಂಡಿರುವ ಅಂದಿಗೆಗಳು, ಜಾಲಕಗಳು ಇರುತ್ತವೆ. ಇವುಗಳೊಂದಿಗೆ ಕಾಲ್ಬೆರಳುಗಳಲ್ಲಿ ಬಗೆಬಗೆಯ ಉಂಗುರಗಳು ಅಲಂಕೃತಗೊಂಡಿರುತ್ತವೆ. ಮೂರ್ತಿಯನ್ನು ಅಲಂಕರಿಸುವ ಮುಖ್ಯವಾದ ಆಭರಣಗಳು ಇವು.



ಚಿತ್ರ ೨೬ : ಶ್ರೀರಾಮ

ತ್ರಿಭಂಗಾಂಗಯುತಂ ತ್ವೇವಂ ವೈಶಾಖಸ್ಥಾನಕಂ ತು ತತ್
ಆಭಂಗಂ ಸಮಭಂಗಂ ಚಾಪ್ಯತಿ ಭಂಗಮಿತಿ ತ್ರಿಧಾ || ೫೧ ||
ಕ್ರಮೇಣ ನತಮಾನಂ ಸ್ಯಾದಗ್ನಿವೇದಶರಾಂಗುಲಮ್
ರಂಧ್ರ ಪಂಕ್ತಿ ಕಲಾ ರುದ್ರ ಕಲಾ ಚೇತಿ ತ್ರಿಧಾ ಭವೇತ್ || ೫೨ ||
ಆಭಂಗಾದಿ ತ್ರಿಭಂಗಾನಾಂ ಪಾದಾಂಗುಷ್ಠಾಂತರಂ ಭವೇತ್
ತತ್ತತ್ ತ್ರಿಭಾಗ ಭಾಗ್ಯೈಕಾಂತರಂ ಪಾರ್ಷ್ಣ್ಯೋರುದಾಹೃತಹೃತಮ್ || ೫೩ ||

ಮೂರ್ತಿಯು ಮೂರು ಭಂಗಿಗಳಲ್ಲಿ ಇರಬಹುದು. ಈ ಭಂಗಿಗಳು ಆಭಂಗ, ಸಮಭಂಗ, ಅತಿಭಂಗಗಳೆಂದು ಕರೆಯಲ್ಪಡುತ್ತವೆ. ಈ ಮೂರೂ ಭಂಗಿಗಳಲ್ಲೂ ವೈಶಾಖ ಸ್ಥಾನಕದಲ್ಲಿ ರೂಪಿಸಬೇಕು. ಈ ಭಂಗಿಗಳಿಗೆ ನತಮಾನವನ್ನು ಅದೇ ಅಳತೆಗಳ ಪ್ರಕಾರವೇ ೩, ೪, ೫ ಅಂಗುಳಗಳೆಂದು ಹೇಳಲಾಗಿದೆ. ಆಭಂಗದಲ್ಲಿ ನತಮಾನ ೩ ಅಂಗುಳ ಮತ್ತು ಎರಡು ಪಾದಗಳ ಹೆಬ್ಬೆರಳುಗಳ ಮಧ್ಯೆ ಇರುವ ಅಂತರವು ೧೮ ಅಂಗುಳಗಳು. ಸಮಭಂಗದಲ್ಲಿ ನತಮಾನ ೪ ಅಂಗುಳಗಳು ಮತ್ತು ಎರಡು ಪಾದಗಳ ಹೆಬ್ಬೆರಳುಗಳ ಮಧ್ಯೆ ಇರುವ ಅಂತರವು ೨೦ ಅಂಗುಳಗಳು. ಅತಿಭಂಗದಲ್ಲಿ ನತಮಾನವು ೫ ಅಂಗುಳ ಮತ್ತು ಎರಡು ಪಾದಗಳ ಹೆಬ್ಬೆರಳುಗಳ ಮಧ್ಯೆ ಇರುವ ಅಂತರವು ೨೨ ಅಂಗುಳ. ಆಯಾ ಪಾದಾಂಗುಷ್ಠಗಳ ಮಧ್ಯೆ ಇರುವ ಅಂತರದ ಮೂರನೆಯ ಒಂದು ಭಾಗದಷ್ಟು ಆಯಾ ಹಿಮ್ಮಡಿಗಳ ಮಧ್ಯೆ ಇರುವ ಅಂತರವಾಗಿರುತ್ತದೆ.

ಮೂರ್ಧ್ನಿ ಪಾರ್ಶ್ವೇ ವಾಮನೇತ್ರೇ ಸಿತೇ ವಾಮಪುಟೋಽಧರೇ
ಹನೌ ಸವ್ಯಸ್ತನೇ ಸವ್ಯಪಾರ್ಶ್ವೇ ನಾಭೇಶ್ಚ ದಕ್ಷಿಣೇ || ೫೪ ||
ವಾಮೋರು ಪಾರ್ಶ್ವೇ ವಾಮಾಂಘ್ರಿ ಪಾರ್ಷ್ಣಿ ಪಾರ್ಶ್ವೇ ಪ್ರಲಂಬಯೇತ್
ಆಭಂಗ ಸೂತ್ರಮಿತ್ಯುಕ್ತಂ ಸಮಭಂಗಸ್ಯ ಚೋಚ್ಯತೇ || ೫೫ ||
ಮುಖೇ ಪೂರ್ವವದುದ್ದಿಷ್ಟಂ ಸ್ತನಪೀಠಸ್ಯ ವಾಮಕೇ
ನಾಭೇಶ್ಚ ಮಧ್ಯಮೇ ಪಾರ್ಷ್ಣ್ಯೋರ್ಮಧ್ಯಮೇ ತು ಪ್ರಲಂಬಯೇತ್ || ೫೬ ||
ನಾಭಿವಾಮೇಥ ವಾಮೋರುಮಧ್ಯೇ ಪಾರ್ಷ್ಣ್ಯಂತರೇ ತಥಾ
ಲಂಬಯೇದತಿಭಂಗಸ್ಯ ಶೇಷಂ ಪೂರ್ವವದೇವ ಹಿ || ೫೭ ||

ನೆತ್ತಿಯ ಎಡಭಾಗದಲ್ಲಿ, ಎಡಗಣ್ಣಿನ ಬಿಳಿಭಾಗದಲ್ಲೂ, ಮೂಗಿನ ಎಡಭಾಗದ ಪುಟದಲ್ಲೂ, ಕೆಳ ತುಟಿಯ ಎಡಪಕ್ಕದಲ್ಲಿ, ಚಿಬುಕದ ಎಡಭಾಗದಲ್ಲಿ, ಎಡಭಾಗದ ಸ್ತನದ ಮೇಲೆ ನಂತರ ಎಡ ಪಾರ್ಶ್ವದಲ್ಲಿ ಮುಂದೆ ಸಾಗಿ ಹೊಕ್ಕಳಿನ ಎಡಗಡೆಗೆ ಎಡ ತೊಡೆಯ ಪಾರ್ಶ್ವದಲ್ಲಿ ಸಾಗಿ ಎಡಗಾಲಿನ ಹಿಮ್ಮಡಿಯ ಎಡಭಾಗದಲ್ಲಿ ಪ್ರಲಂಬಸೂತ್ರವು ಕೊನೆಗೊಂಡು ತೂಗಾಡುತ್ತಿರುತ್ತದೆ ಎಂದು ಹೇಳಲಾಗಿದೆ. ಇದನ್ನು ಆಭಂಗ ಸೂತ್ರ ಎಂದು ಹೇಳಲಾಗುತ್ತದೆ. ಸಮಭಂಗ ಸೂತ್ರ ಎನ್ನುವುದು ಮುಖದಲ್ಲಿ ಈ ಮೊದಲೇ ಹೇಳಲಾಗಿರುವ ಸ್ಥಳಗಳಿಂದ ಸ್ತನಪೀಠದಿಂದ ಎಡ ಭಾಗದಲ್ಲಿ, ನಾಭಿಯ ನಡು ಭಾಗದಲ್ಲಿ, ಹಿಮ್ಮಡಿಯ ನಡು ಭಾಗದಲ್ಲಿ ಇರುತ್ತದೆ.

ಸೂತ್ರಾತ್ ಸ್ತನಂ ತ್ರಿಮಾತ್ರಂ ಸ್ಯಾತ್ ಸೂತ್ರ ಸ್ನಾಭಿರ್ದ್ವಯಾಂಗುಲಮ್

ಸೂತ್ರಾ ನ್ಮಾತ್ರಾರ್ಧಕಂ ಜಾನು ನಿಷ್ಕಂ ಸ್ಯಾದತಿಭಂಗಕೇ ॥ ೫೮ ॥

ಏವ ಮನ್ಯತ್ರ ಕರ್ತವ್ಯಂ ಸೂತ್ರಾನ್ನೀವ್ರಂ ಸ್ವಯುಕ್ತಿತಃ

ಸಬಾಣಸವ್ಯ ಹಸ್ತಸ್ಯ ತಾಲಾಗ್ರಂ ನಾಭಿದಘ್ನಕಮ್ ॥ ೫೯ ॥

ಅತಿಭಂಗ ಸೂತ್ರ ಎನ್ನುವುದು ಮೇಲ್ಭಾಗದಲ್ಲಿ ಈ ಮೊದಲೇ ಹೇಳಿರುವಂತೆಯೂ, ನಾಭಿಗೆ ಎಡಭಾಗದಲ್ಲಿ, ಎಡತೊಡೆಯ ಮಧ್ಯಭಾಗದಲ್ಲೂ ಎಡ ಹಿಮ್ಮಡಿಯ ಮಧ್ಯಭಾಗದಲ್ಲಿ ಹಾದು ಬರುವ ಸೂತ್ರವನ್ನು ಲಂಬ ಸೂತ್ರ ಎನ್ನಲಾಗುತ್ತದೆ. ಉಳಿದುದೆಲ್ಲಾ ಈ ಮೊದಲೇ ಹೇಳಿರುವಂತೆ ಇರುತ್ತದೆ.

ಸೂತ್ರದಿಂದ ಸ್ತನವು ೩ ಅಂಗುಳ. ನಾಭಿ ೨ ಅಂಗುಳ, ಮೊಣಕಾಲು ನಡುಭಾಗವು ೧ ಅಂಗುಳ ೪ ಯವ ದೂರದಲ್ಲಿರುತ್ತವೆ. ಇದರ ಅನುಸಾರವಾಗಿಯೇ ಇತರ ಭಾಗಗಳಲ್ಲೂ ಸೂತ್ರದಿಂದ ಇರಬೇಕಾಗಿರುವ ದೂರವನ್ನು ಶಿಲ್ಪಿಯಾದವನು ಊಹಿಸಿಕೊಂಡು ಮೂರ್ತಿಯನ್ನು ನಿರ್ಮಿಸಬೇಕು. ಬಾಣವನ್ನು ಹಿಡಿದಿರುವ ಎಡತೋಳಿನ ಭುಜದ ಅಗ್ರಭಾಗವು ಮೂಗಿಗೆ ಸಮಾನಾಂತರ ಎತ್ತರದಲ್ಲಿ ಇರಬೇಕು.

ಪಾರ್ಷ್ಣ್ಯಂತರ ಸಮಂ ನೀವ್ರಂ ಶ್ರೋಣೀಕರ್ಣಾತ್ತು ಕೂರ್ಪರಮ್

ವಾಮಾಂಸಕಾರ್ಮುಕಂ ಹಸ್ತಮುಷ್ಟೀಷಂ ಚ ಯವೋನ್ನತಮ್ ॥ ೬೦ ॥

ದ್ವಿಮುಖಂ ತಸ್ಯ ನೀವ್ರಂ ಸ್ಯಾತ್ ಮೌಳೀಪಾರ್ಶ್ವಾದ್ಧನುಸ್ತಥಾ

ದಕ್ಷಿಣೇಽ ದಕ್ಷಿಣೇ ಸೀತಾ ಲಕ್ಷ್ಮಣೌ ಸ್ತಾಮನುಕ್ರಮಾತ್ ॥ ೬೧ ॥

ಸೊಂಟದ ಕೆಳಭಾಗವಾದ ಕಿಬ್ಬೊಟ್ಟೆಯ ಪ್ರದೇಶವು, ಕಿವಿಯ ಸೂತ್ರದಿಂದ ಬಾಣವನ್ನು ಹಿಡಿದಿರುವ ಎಡ ಮೊಣಕೈಯ ಸಾಧಾರಣವಾಗಿರುವ ರೀತಿಯಲ್ಲಿಯೇ ಇರುತ್ತದೆ. ಎರಡು ಹಿಮ್ಮಡಿಗಳ ಮಧ್ಯೆ ಇರುವ ದೂರವು ಸ್ವಲ್ಪ ಹೆಚ್ಚಾಗಿರಬೇಕು.

ಬಿಲ್ಲನ್ನು ಎಡಗಡೆಯ ತೋಳಿನಲ್ಲಿ ಹಿಡಿದುಕೊಂಡು, ಎಡಭಾಗಕ್ಕೆ ತೂಗಿಬಿದ್ದಿರುವ ಬತ್ತಳಿಕೆಯಿಂದ ಬಲಗೈಯಿಂದ ಬಾಣವನ್ನು ತೆಗೆದಾಗಲೂ ಕಿರೀಟವು ಆ ಕೈಯಿಂದ ಒಂದು ಅಂಗುಳ ಹೆಚ್ಚು ಎತ್ತರವಾಗಿರುವಂತೆ ಇರಬೇಕು. ಬಿಲ್ಲನ್ನು ಹಿಡಿದ ಕೈಯು ಕಿರೀಟದಿಂದ ೨೪ ಅಂಗುಳ ದೂರದಲ್ಲಿ ಇರುತ್ತದೆ. ಕಿರೀಟದ ಪಕ್ಕದಿಂದ ಬಿಲ್ಲಿನ ದೂರವು ೨೧ ಅಂಗುಳವಾಗರುತ್ತದೆ. ಶ್ರೀರಾಮಮೂರ್ತಿಯ ಬಲಭಾಗದಲ್ಲಿ ಲಕ್ಷ್ಮಣಸ್ವಾಮಿಯು, ಎಡಗಡೆಗೆ ಸೀತಾದೇವಿಯು ಇರಬೇಕು.

## ಲಕ್ಷ್ಮಣ ಮತ್ತು ಸೀತಾ ಮೂರ್ತಿಗಳ ಪ್ರಮಾಣಗಳು

ಅಸ್ಯ ಸೂತ್ರ ಸಮಂ ಮಾತ್ರಂ ಸೌಮಿತ್ರೇ (ಃ) ಪ್ರವಿಧೀಯತಾಮ್

ಕನಿಷ್ಠ ದಶತಾಲೇನ ಮಾನೋನ್ಮಾನ ಪ್ರಮಾಣಕಮ್ ॥ ೬೨ ॥

ದ್ವಾದಶಾರ್ಧಾಂಗುಲಂ ವಿದ್ಯಾನ್ಮುಖ ಮಾನಂ ತು ಸರ್ವತಃ

ಸ್ವಕೀಯ ಮುಖ ಮಾನಾಷ್ಟ (ವಕ್ತ್ರಂ) ಗುಣಂ ಭಾಗಂ ಚತುಷ್ಟಯಮ್ ॥ ೬೩ ॥

ಏವ ಮೂಹ್ಯ ವಿಧಾತವ್ಯಮಂಗಪ್ರತ್ಯಂಗ ವಿಸ್ತರಮ್

ಯುವರಾಜ ಮಂಡನೋ ಪೇತ ಸ್ಸೌಮಿತ್ರಿಸ್ಸಮ ಭಂಗವಾನ್ ॥ ೬೪ ॥

ಶ್ರೀರಾಮನ ಬಾಯಿಯ ಎತ್ತರಕ್ಕೆ ಇರುವ ಸೂತ್ರಕ್ಕೆ ಸಮನಾಗಿ ಲಕ್ಷ್ಮಣಸ್ವಾಮಿಯ ಎತ್ತರವು ಇರಬೇಕು. ಅಧಮ ದಶತಾಲದಲ್ಲಿ ಮಾನ, ಉನ್ಮಾನ, ಪ್ರಮಾಣಗಳನ್ನು ಅನುಸರಿಸಿ ಮೂರ್ತಿಯನ್ನು ರೂಪಿಸಬೇಕು. ಮುಖದ ಎತ್ತರ ೧೨ ಅಂಗುಳ ೪ ಯವ. ಈ ಅಳತೆಯನ್ನು ಆಧಾರವಾಗಿರಿಸಿಕೊಂಡು ಅದನ್ನು ಎಂಟರಿಂದ ಗುಣಿಸಿ ನಾಲ್ಕು ನಾಲ್ಕುಗಳನ್ನು ಕೂಡುವುದರಿಂದ ೧೧೬ ಅಂಗುಳ ಎತ್ತರವು ನಿರ್ಣಯವಾಗುತ್ತದೆ. ಲಕ್ಷ್ಮಣ ಸ್ವಾಮಿಯ ಎತ್ತರವು ಶ್ರೀರಾಮನ ಪಾದದಿಂದ ಬಾಯಿಯತನಕ ಇರವ ಎತ್ತರವಾಗಿರುತ್ತದೆ. ಅದನ್ನು ೧೧೬ ಸಮಭಾಗಗಳನ್ನಾಗಿ ಮಾಡಬೇಕು. ಅದೇ ಉಷ್ಣೀಷ (ನೆತ್ತಿ) ದಿಂದ ಪಾದಾಂತ್ಯದ ವರೆವಿಗಿನ ಎತ್ತರವಾಗಿರುತ್ತದೆ. ಅದರಲ್ಲಿ ಹನ್ನೆರಡುವರೆ ಅಂಗುಳ ಎತ್ತರ ಮುಖವನ್ನು ರೂಪಿಸಬೇಕು. ಇದರಿಂದ ತಾಲಮಾನ ಕ್ರಮದಲ್ಲಿ ತಿಳಿಸಿರುವಂತೆ ಇತರ ಅಂಗಾಂಗಗಳ ವಿಸ್ತಾರ, ಎತ್ತರಗಳನ್ನು ಅನುಸರಿಸಬೇಕು. ಅನುಕ್ತಮಾನಗಳನ್ನು ಶಿಲ್ಪಿಯಾದವನು ಮೂರ್ತಿಯ ವೈಗನುಸಾರವಾಗಿ ಆಯಾ ಅಂಗಾಂಗಗಳನ್ನು ಕಲ್ಪಿಸಿಕೊಂಡು ರೂಪಿಸಬೇಕು. ಲಕ್ಷ್ಮಣಮೂರ್ತಿಯನ್ನು ಯುವರಾಜನಿಗೆ ಸಲ್ಲುವ ಎಲ್ಲಾ ಆಭರಣಗಳಿಂದ ಅಲಂಕರಿಸಬೇಕು. ಸ್ವಾಮಿಯು ಸಮಭಂಗದಲ್ಲಿರಬೇಕು.

**ನವಾರ್ಧ ತಾಲ ಮೇವಂ ಸ್ಯಾತ್ ಸೀತಾ ಬಾಹು ಸಮೋದಯಾ**
**ಪಾದಂ ಭಾಗಂ ತತೋ ಜಂಘಾ ದ್ವಿಮುಖಂ ತು ಚತುರ್ಯವಮ್ ॥ ೬೫ ॥**
**ಜಾನು ಭಾಗಂ (ಭವ್ಯೆ) ದೂರು ಜಂಘಾ ತುಲ್ಯಂ ಮುಖ ತ್ರಯಮ್**
**ಸಷಡ್ಯವಂ ತತೋ ಹಿಕ್ಕಾ ತಸ್ಮಾತ್ ಕಂಠಂ ದ್ವಿಕೋಲಕಮ್ ॥ ೬೬ ॥**
**ಹನೋರ್ನಾಸಾ ಪುಟಾಂತಂ ಸ್ಯಾತ್ ಸಾರ್ಧ ತ್ರ್ಯಂಗುಲಕಂ ಮತಮ್**
**ತಸ್ಮಾತ್ತು ಸಂಗಕಂ ಭಾಗಂ ದ್ವಿಯವಾಧಿಕ ಮುಚ್ಯತೇ ॥ ೬೭ ॥**
**ಸಂಗಮಾತ್ (ಕೇಶ) ಸೀಮಾಂತಂ ವೇದಾಂಗುಲ ಚತುರ್ಯವಮ್**
**(ಸಂಗ ಮಾತ್ಕೋಶಸೀಮಾಂ ಚತುರ್ಯವಂ ಚತುರಂಗುಲಮ್)**
**ತಸ್ಮಾಚ್ಛಿರ ಸ್ತ್ರಿಮಾತ್ರಂ ಸ್ಯಾದುಷ್ಣೀಷಂ ತು ಯವಾಂಗುಲಮ್**
**(ತಸ್ಮಾಚ್ಛಿರ ಸ್ತ್ರಿ ಮಾತ್ರಂ ಸ್ಯಾತ್ ಉಷ್ಣೀಷಾತ್ತು ಯವಾಧಿಕಾಂಗುಲ) ॥ ೬೮ ॥**

ಶ್ರೀರಾಮನ ಭುಜಗಳ ಎತ್ತರಕ್ಕೆ ಸಮನಾಗಿ ಸೀತಾದೇವಿಯ ಎತ್ತರವು ಇರಬೇಕು. ಸೀತೆಯನ್ನು ನವಾರ್ಧತಾಲಮಾನಕ್ರಮದಲ್ಲಿರೂಪಿಸಬೇಕು. ಎಂದರೆ ಶ್ರೀರಾಮನ ಪಾದ ತಲದಿಂದ ಭುಜಗಳ ತನಕ ಇರುವ ಒಟ್ಟು ಎತ್ತರವನ್ನು ೯ X ೧೨ = ೧೦೮ + ೬ = ೧೧೪ ಸಮಭಾಗಗಳಾಗಿ ವಿಭಜಿಸಬೇಕು. ಒಂದು ಭಾಗವು ಒಂದು ಅಂಗುಳ. ಸೀತಾದೇವಿಯ ವಿಗ್ರಹದ ಅಳತೆಯು ಇಂತಿರಬೇಕು. ಪಾದದ ಎತ್ತರವು ೪ ಅಂಗುಳ. ಅದರಮೇಲೆ ಮುಂಗಾಲಿನ ಎತ್ತರವು ೨೪ ಅಂಗುಳ ೪ ಯವ. ಮೊಣಕಾಲಿನ ಎತ್ತರವು ೪ ಅಂಗುಳ. ತೊಡೆಯ ಎತ್ತರವು ಮುಂಗಾಲಿನಷ್ಟೇ ಇರುತ್ತದೆ. ಎಂದರೆ ೨೪ ಅಂಗುಳ ೪ ಯವ. ತೊಡೆಯ ಮೇಲಿಂದ ಹಿಕ್ಕಾವರೆವಿಗೂ (ಕಂಠದ ಕೆಳ ಭಾಗದಲ್ಲಿರುವ ಸಣ್ಣದಾದ ಗುಳಿ) ಇರುವ ಎತ್ತರವು ೩೬ ಅಂಗುಳ ೬ ಯವ. ಅದರ ಮೇಲೆ ಕಂಠದ ಎತ್ತರವು ೪ ಅಂಗುಳ. ಚುಬುಕದಿಂದ ಮೂಗಿನ

ತುದಿಯತನಕ ಇರುವ ಎತ್ತರವು ೩ ಅಂಗುಳ ೪ ಯವ. ಅದರ ಮೇಲೆ ನೇತ್ರಗಳವರೆವಿಗೂ ಇರುವ ಎತ್ತರವು ೪ ಅಂಗುಳ ೨ ಯವ. ನೇತ್ರದಿಂದ ಕೇಶಾಂತದವರೆವಿಗೂ ಎತ್ತರ ೪ ಅಂಗುಳ ೪ ಯವ. ಕೇಶಾಂತದಿಂದ ಉಷ್ಣೀಷದ ತನಕ ೩ ಅಂಗುಳ. ಉಷ್ಣೀಷವು ೧ ಅಂಗುಳ ೧ ಯವ.

ಉಷ್ಣೀಷ (೧.೧) + ಕೇಶಾಂತ (೪) + ನೇತ್ರಾಂತ (೪.೨) + ನಾಸಾಪುಟಾಂತ (೩.೪) + ಕಂಠ (೪) + ಹಿಕ್ಕಾ ಸೂತ್ರದಿಂದ ಮೇಢ್ರಮೂಲ (೩೬.೬) + ಊರು (೨೪.೪) + ಜಾನು (೪) + ಜಂಘ (೨೪.೪) + ಪಾದ (೪) = ೧೧೪ ಅಂಗುಳ

**ಮುಖಸ್ಯ ವಿಸ್ತೃತಿ ಸ್ಸಾರ್ಧ ಪಂಕ್ತಿಮಾತ್ರಂ ಷಡರ್ಧಕಮ್**
**ಗ್ರೀವಾ ತಾರಂ ತಥಾ ಬಾಹುಮೂಲಂ ಪಂಚಾಂಗುಲಾಂತಕಮ್ || ೧೯ ||**
**ಕೂರ್ಪರಸ್ಯ ಪ್ರಕೋಷ್ಠಸ್ಯ ತಾರಂ ಭಾಗಂ ತ್ರಿಮಾತ್ರಕಮ್**
**ಮಣಿಬಂಧಂ ಬಾಹುಸೀಮಾ ಸ್ಯಾದೇಕೋನ ತ್ರಿಂಶದಂಗುಲೈಃ || ೨೦ ||**

ಮುಖದ ಅಗಲ ೧೦ ಅಂಗುಳ ೪ ಯವ. ಕಂಠದ ಅಗಲ ೬ ಅಂಗುಳ ೪ ಯವ. ಬಾಹು ಮೂಲ (ತೋಳಿನ ಅಗಲ ಭುಜದ ಮೇಲ್ಭಾಗದಲ್ಲಿ) ೬ ಅಂಗುಳ ೪ ಯವ. ಮೊಣಕೈ ಅಗಲವು ೫ ಅಂಗುಳ. ಮುಂತೋಳಿನ ಅಗಲವು ೪ ಅಂಗುಳ. ಮಣಿಕಟ್ಟಿನ ಅಗಲ ೩ ಅಂಗುಳ. ಎರಡು ತೋಳುಗಳ ಮಧ್ಯೆ ಇರುವ ಅಗಲವು ೨೯ ಅಂಗುಳ.

**ದ್ವಿರಷ್ಟದ್ವಿಶ್ಚತುರ್ದೀ ಷ್ಷಟ್ (ದ್ವಿಪ) ಂತದ್ವಿರ್ದಶ ಕ್ರಮಾತ್**
**ವಕ್ಷ(ಸ್ಥಲ) ಸ್ತನಸ್ತಾ ರ ಮಧ್ಯ ಶ್ರೋಣಿ ವಿಶಾಲತಾ || ೨೧ ||**
**ದ್ವಿರ್ದ್ವಾದಶ ಚ ದ್ವಾದಶ ಸಪ್ತ ಷಟ್ ಚತುರಂಗುಲೈಃ**
**ಕಟ್ಯೂರುಜಾನು ಜಂಘಾನಾಂ ನಳಕಾಯಾಸ್ತತೀಃ ಕ್ರಮಾತ್ || ೨೨ ||**

**ಏವ ಮೂಹ್ಯ ವಿಧಾತವ್ಯ ಮಂಗಪ್ರತ್ಯಂಗ ವಿಸ್ತರಮ್**

ವಕ್ಷಸ್ಥಳದ ಅಗಲ ೧೬ ಅಂಗುಳ. ಸ್ತನ ಚೂಚಕ (ಎಂದರೆ ಹಿಕ್ಕಾ ಸೂತ್ರದಿಂದ ಸ್ತನದ ತುದಿಯ ತನಕ ಇರುವ) ಎತ್ತರವು ೮ ಅಂಗುಳ. ಎರಡು ಸ್ಥನಗಳ ಶಿಖರಗಳ ಮಧ್ಯೆ ಇರುವ ಅಂತರವು ೧೨ ಅಂಗುಳ. ಹೊಟ್ಟೆಯ ಮಧ್ಯಭಾಗದಲ್ಲಿ ಅಗಲ ೧೦ ಅಂಗುಳ. ಶ್ರೋಣಿ (ನಾಭಿಸೂತ್ರದ ಮೇಲೆ) ಅಗಲವು ೨೦ ಅಂಗುಳ. ಸೊಂಟದ ಅಗಲ ೨೪ ಅಂಗುಳ. ತೊಡೆಯ ಅಗಲ ೧೨ ಅಂಗುಳ. ಮೊಣಕ್ಕಾಲಿನ ಅಗಲ ೭ ಅಂಗುಳ. ಮುಂಗಾಲಿನ ಮಧ್ಯಭಾಗದಲ್ಲಿ ಅಗಲ ೬ ಅಂಗುಳ. ಇದೇ ರೀತಿಯಾಗಿ ಅಂಗ ಉಪಾಂಗಗಳನ್ನು ಕಲ್ಪಿಸಿಕೊಂಡು ಮೂರ್ತಿಯ ಮೈಗೆ ಹೊಂದುವಂತೆ ರೂಪಿಸಬೇಕು.

**ದಿವ್ಯಸ್ತ್ರೀಮಂಡನೋ ಪೇತಾ ಸಾರ್ಧ ವೈಶಾಖ ಸಂಸ್ಥಿತಾ || ೨೩ ||**
**ಸಸ್ಯಶ್ಯಾಮ ನಿಭೋ ರಕ್ತಾಂಬರೋ ರಾಮಸ್ಸು [ಸ್ವ]ವರ್ಣಭಾಕ್**
**ಸೌಮಿತ್ರಿ ಶ್ಯಾಮವಾಸಸ್ಕೋ ಜಾನಕೀ ರುಕ್ಮಸನ್ನಿಭಾ || ೨೪ ||**
**ಶುಚಿ ಪೀತಾಂ (ಶುವಿಂಬಾಂ) ಬರಾ ಚಿತ್ರಾಂಬರಾ ವಾ ಪಂಕಜಾಸನ**
**ನಾಸಿಕಾ ಹನುಪರ್ಯಂತೌ ಭರತ ಶತ್ರುಘ್ನಕಾವುಭೌ || ೨೫ ||**




ಚಿತ್ರ ೨೭ : ಸೀತಾದೇವಿ

ಸ್ತನದ್ವಯ ಸದೀರ್ಘ ಸ್ಯಾದ್ಧನುಮಾನ್ ರಾಘವಸ್ಯ ಚ
ಸಪ್ತತಾಲಂ ಭವೇನ್ಮಾನಂ ಚತುರಶೀತಿಮಾತ್ರಕಮ್ || ೭೬ ||
ಭವೇನ್ಮಧ್ಯಂ ಸಪ್ತತಾಲಂ ಕಲಾ ಮೂರ್ಧ್ನೀ ಹನೂಮತಃ
ಭ್ರೂಸ್ತು ತಸ್ಮಾತ್ತು ದೃಕ್ಕಲಾ ಕೇಶಾಂತಾ ತು ತ್ರಿಮಾತ್ರಕಮ್ || ೭೭ ||
(ನಾಸಾ ಪುಟಾಂತಂ ತು ಭವೇತ್ ತಥಾ ಚಾಸ್ಯಂ ತ್ರಿಮಾತ್ರಕಂ)
ತತೋ ಮಾತ್ರಾಧರೋ ಮಾತ್ರ ತ್ರಯಂ (ಚೈವ ಭವೇತ್ತತಃ) || ೭೮ ||
ಕಂಠಂ ತಸ್ಮಾದ್ದಶಾಂಗುಲ್ಯಂ ಹೃ(ಚ್ಚ) ತಸ್ಮಾತ್ತು ತಾವತೀ
ನಾಭೀರ್ನಾಭೇರ್ಮತಂ ತಾವನ್ಮೇಢ್ರಂ ತಸ್ಮಾತ್ಕಲಾದಶ || ೭೯ ||
ಊರು ಸ್ಯಾತ್ ದ್ವ್ಯಂಗುಲಂ ಜಾನು ಜಂಘಾ ಸಪ್ತದಶಾಂಗುಲಾ
ತತಃ ಕಲಾ ತಲಂ ಪಂಚಕಲಾಯಾಮಂ ತದೇವ ಹೀ || ೮೦ ||

ದೇವಲೋಕದ ಮಾತೃಗಳ ಸಕಲ ಅಲಂಕಾರಗಳನ್ನೂ, ಆಭರಣಗಳನ್ನು ಧರಿಸಿರುವ ಸೀತೆಯು ಅರ್ಧವೈಶಾಖ ಸ್ಥಾನದಲ್ಲಿರುತ್ತಾಳೆ. ರಾಮನು ಪಯರಿನ ಹಸಿರು ಬಣ್ಣದ ಮೈಕಾಂತಿಯವನಾಗಿದ್ದು ರಕ್ತ ವರ್ಣದ ಉಡುಗೆಗಳನ್ನು ಧರಿಸಿರುತ್ತಾನೆ. ಲಕ್ಷ್ಮಣನು ಹಳದಿ ಮೈಬಣ್ಣವನ್ನು ಪಡೆದಿದ್ದು ಶ್ಯಾಮಲ ಬಣ್ಣದ ವಸ್ತ್ರಗಳನ್ನು ಧರಿಸಿರುತ್ತಾನೆ. ಜಾನಕಿಯು ಸ್ವರ್ಣವರ್ಣೆ. ಶುದ್ಧವಾದ ಪೀತಾಂಬರ ಅಥವ ಹಲವು ಬಣ್ಣಗಳನ್ನು ಒಳಗೊಂಡ ವಸ್ತ್ರವನ್ನು ಧರಿಸಿರುತ್ತಾಳೆ. ಭರತನು ಮತ್ತು ಶತ್ರುಘ್ನ ಇವರು ಕ್ರಮವಾಗಿ ರಾಮನ ನಾಸಾಪುಟದ, ಹನ್ವಂತದ ಮಟ್ಟದಷ್ಟು ಎತ್ತರವಾಗಿರುತ್ತಾರೆ. ರಾಮನ ಸ್ತನದ ಮಟ್ಟಕ್ಕೆ ಹನುಮಂತನು ಇರುತ್ತಾನೆ. ಹನುಮಂತನನ್ನು ಮಧ್ಯಮ ಸಪ್ತತಾಲದಲ್ಲಿ ರೂಪಿಸಬೇಕು. ಎಂದರೆ ಎತ್ತರವು ೮೪ ಅಂಗುಳ ಮಾನದಲ್ಲಿರುತ್ತದೆ.

ಹನುಮಂತನ ಕೇಶಾಂತ ೨ ಅಂಗುಳ. ಕೇಶಾಂತದಿಂದ ಹುಬ್ಬು ೨ ಅಂಗುಳ. ಅಲ್ಲಿಂದ ನೇತ್ರ ೨ ಅಂಗುಳ. ಅಲ್ಲಿಂದ ಮೂಗು ೩ ಅಂಗುಳ. ಬಾಯಿ ೩ ಅಂಗುಳ. ಬಾಯಿಂದ ತುಟಿಯು ೧ ಅಂಗುಳ. ಅಲ್ಲಿಂದ ಕಂಠವು ೩ ಅಂಗುಳ. ಅಲ್ಲಿಂದ ಹೃದಯವು ೧೦ ಅಂಗುಳ. ಹೃದಯದಿಂದ ನಾಭಿಯು ೧೦ ಅಂಗುಳ. ನಾಭಿಯಿಂದ ಮೇಢ್ರ ೧೦ ಅಂಗುಳ. ಅಲ್ಲಿಂದ ತೊಡೆಯು ೧೨ ಅಂಗುಳ. ಮೊಣಕಾಲು ೨ ಅಂಗುಳ. ಮುಂಗಾಲು ೧೭ ಅಂಗುಳ. ಪಾದದ ಎತ್ತರವು ೨ ಅಂಗುಳ.

ಕರಸ್ಯ ಚ ಚತುರ್ಭಾಗಂ ಪ್ರಕೋಷ್ಠಂ ಸ್ಯಾತ್ ಕಲಾ ದಶ
ಬಾಹುದೀರ್ಘಂ ಭವೇತ್ ವಾಲಂ ಬಾಹುದೀರ್ಘ ಸಮಾಯತಮ್ || ೮೧ ||
ನರೋಕ್ತತಾರಮಾತ್ರೋನಮುರೋ ಬಾಹು ಕಟೀತತಿ:
[ನರೋಕ್ತ ತಾರೋನ್ಮಾತ್ರೋನಂ ಮುನ್ನುರೋ ಬಾಹು ಕಟಿಸ್ತತಿಃ]
ಮಧ್ಯ ಶ್ರೋಣ್ಯೋಃ ಕಲೋನಂಸ್ಯಾತ್ ಪಾದಂ ಮಾತ್ರ ವಿಹೀನತಮ್ || ೮೨ ||
ಹಸ್ತೋಽರ್ಧ ಮಾತ್ರವಿಹೀನ ಮಂಗುಲೀಕ್ಷು ಯವ ದ್ವಯಮ್
ಉಕ್ತತಾರಾ ದ್ವಿಹಿಃ ಕಾರ್ಯಂ ರೋಮಾಣ್ಯೂಹಂ ತು ಯತ್ಪರಮ್
[ರೋಮಾಣ್ಯೋ ವರ್ಮತೋ ಮಧ್ಯೆ] || ೮೩ ||




ಚಿತ್ರ ೨೮ : ಹನುಮಂತ

ಪಾದದ ನೀಳವು ೧೦ ಅಂಗುಳ. ಮೇಲ್‌ತೋಳಿನ ಉದ್ದವು ೨೦ ಅಂಗುಳ. ಬಾಲದ ಉದ್ದವು ಮೇಲ್ತೊತೋಳಿನ ಉದ್ದಕ್ಕೆ ಸಮನಾಗಿರುತ್ತದೆ. ಸೊಂಟ ಮುಂತಾದವನ್ನು ೧ ಅಂಗುಳದಷ್ಟು ಕಡಿಮೆ ಮಾಡಿಕೊಳ್ಳಬೇಕು. ಮಧ್ಯೋದರ, ಶ್ರೋಣಿ ಮುಂತಾದವುಗಳ ಅಗಲಗಳಲ್ಲಿ ಒಂದೊಂದು ಅಂಗುಳ ಕಡಿಮೆಯಾಗಬೇಕು. ಪಾದದಲ್ಲಿ ಒಂದೊಂದು ಅಂಗುಳವನ್ನು ಕಡಿಮೆಮಾಡಬೇಕು. ಅಂಗೈ ಅಗಲದಲ್ಲಿ ೪ ಯವ ಕಡಿಮೆಮಾಡಬೇಕು. ಬೆರಳುಗಳ ಅಗಲದಲ್ಲಿ ೨ ಯವ ಕಡಿಮೆ ಮಾಡಿಕೊಳ್ಳಬೇಕು. ಈ ಪ್ರಮಾಣಗಳ ಮೇಲೆ ರೋಮಗಳು ಇರುತ್ತವೆ. ಉಳಿದವನ್ನೆಲ್ಲಾ ಸೂಕ್ಷ್ಮಜ್ಞನಾದ ಶಿಲ್ಪಿಯು ಕಲ್ಪಿಸಿಕೊಂಡು ರೂಪಿಸಿ ಮೂರ್ತಿಯು ಸುಂದರವಾಗಿರುವಂತೆ ಮಾಡಬೇಕು.

**ಸುಗ್ರೀವ ವಾಲೀಪುತ್ರೌ ತೌ ನೃತನೂಕಪಿವಕ್ತ್ರ (ನೃತ್ತನೌಕಪವಿತ್ರ)ಕೌ**
**ಭರತಸ್ಯ(ಚ )ಶತ್ರುಘ್ನಸ್ಯೋತ್ತಮಂ ನವತಾಲಕಂ ॥ ೮೪ ॥**
**ಸರ್ವತಾಲ ವಿಭಾಗಂ ತು ಪಶ್ಚಾದ್ವಕ್ಷ್ಯಾಮ್ಯಶೇಷತಃ**
**ಮಾನುಷೇ ಸ್ಥಾನಕಂ ಕಾರ್ಯಂ ಬ್ರಹ್ಮ ಸೂತ್ರಾದಸವ್ಯಕೇ ॥ ೮೫ ॥**
**ಬದ್ಧ [ಬಂಧ] ಪ್ರತಿಸರಃ ಸೀತಾ ಲಕ್ಷ್ಮಣಾಭ್ಯಾಂ ಸಮನ್ವಿತಃ**
**ವಸಿಷ್ಠವಾಮದೇವಾದ್ಯೈ ಸಹಿತಃ ಸ್ಥಿತ ವಾನ್ (ಸ) ದಾ ॥ ೮೬ ॥**
**ದಿವ್ಯೈರಾಭರಣೈರ್ಯುಕ್ತೋ [ದೇವ್ಯಾಷರ + + ಷಿತೋ] ಲಕ್ಷ್ಮಣೇನ ಸಮಾರುತಿಃ**
**ಕಿಷ್ಕಿಂಧಾದ್ರೌ ಕಪೀಂದ್ರೇಣ ಕಪಿಭಿಃ ಸ್ಥಿತವಾಂಸ್ತತಃ ॥ ೮೭ ॥**
**ಪ್ರವಿಶ್ಯ ತು ಪುರೀಂ ಪಶ್ಚಾದಭಿಷಿಕ್ತಸ್ಸುಮಂಗಲಃ**
**ಬ್ರಾತೃಭಿರ್ಮುನಿಭಿಸ್ಸಾರ್ಧಂ ದೇವ್ಯಾ ಹನುಮತಾ ಸಹ ॥ ೮೮ ॥**
**ರಕ್ಷೋಧಿಪ [ರಾಕ್ಷಸಾಧಿಪ] ಕಪೀಂದ್ರಾಭ್ಯಾಂ ಕಪಿಭಿಸ್ಸಹಿತಃ ಸ್ಥಿತಃ**
**ರಕ್ಷೋಧಿಪಃ ಕಪೀಂದ್ರಶ್ಚ ಸಹಜಾಶ್ಚಾಪಿ ವಾಮಭಾಕ್ ॥ ೮೯ ॥**
**ದಕ್ಷಿಣೇಽಥ ವಶಿಷ್ಠಾದ್ಯಾ ಹನುಮಾನ್ ಪುರತಃ ಸ್ಥಿತಃ**
**ಅಂಬರಾಭರಣೈರನ್ಯೈರನೂರೂಪೈಃ ಪ್ರಶೋಭಿತಃ ॥ ೯೦ ॥**

ಸುಗ್ರೀವ, ವಾಲಿಯ, ಪುತ್ರನಾದ ಅಂಗದ ಇವರು ಮಾನವದೇಹದೊಂದಿಗೆ ಮಂಗನ ಮುಖದೊಂದಿಗೆ ಇರುತ್ತಾರೆ. ಭರತ ಮತ್ತು ಶತ್ರುಘ್ನರನ್ನು ಉತ್ತಮ ನವತಾಲದಲ್ಲಿ ರೂಪಿಸಬೇಕು. ಎಂದರೆ ೧೧೨ ಅಂಗುಳ ಮಾನದಲ್ಲಿ ರೂಪಿಸಬೇಕು. ಬ್ರಹ್ಮ ಸೂತ್ರದ ಎಡಭಾಗದಲ್ಲಿಯ ಮಾನುಷಸ್ಥಾನದಲ್ಲಿ ಇವರನ್ನು ಸ್ಥಾಪಿಸಬೇಕು. ಕೈಯ್ಯಲ್ಲಿ ಕಂಕಣವನ್ನು ಕಟ್ಟಿಕೊಂಡಿರುವ ರಾಮ, ಸೀತೆ, ಲಕ್ಷ್ಮಣ ಇವರು ವಸಿಷ್ಠ ವಾಮದೇವ ಇವರೊಂದಿಗೆ ನಿಂತಿರುತ್ತಾರೆ. ದಿವ್ಯಾಭರಣಗಳು, ಹಾರ ಕೇಯೂರಗಳು, ರತ್ನಾಂಗುಳೀಯಗಳಿಂದ ಅಲಂಕೃತರಾಗಿರುತ್ತಾರೆ.

ರಾಮ ಪಟ್ಟಾಭಿಷೇಕದ ಮಂಗಲ ಸಮಾರಂಭಕ್ಕೆ ಕಿಷ್ಕಿಂಧೆಯಿಂದ ಹಲವು ವಾನರರು ಅಯೋಧ್ಯಾನಗರವನ್ನು ಪ್ರವೇಶಿಸಿ ಅರಮನೆಯಲ್ಲಿ ಸ್ಥಿತವಾಸವನ್ನು ಏರ್ಪಡಿಸಿಕೊಂಡಿದ್ದರು. ಶ್ರೀರಾಮನು ತನ್ನ ಸೋದರರು, ಮುನಿಗಳು, ದೇವಿ ಸೀತಾಮಾತೆ ಹನುಮಂತನೊಂದಿಗೆ ಇದ್ದ.



ಚಿತ್ರ ೨೯ : ಸೀತಾ ಲಕ್ಷ್ಮಣ ಸಮೇತ ಶ್ರೀ ರಾಮಚಂದ್ರ

ರಾಕ್ಷಸಾಧಿಪನಾದ ವಿಭೀಷಣನು, ಸುಗ್ರೀವ, ಶ್ರೀ ರಾಮಸಹೋದರರು ಎಡ ಪಾರ್ಶ್ವದಲ್ಲೂ, ವಸಿಷ್ಠ ವಾಮದೇವಾದಿ ಮುನಿಗಳು ಬಲಪಾರ್ಶ್ವದಲ್ಲೂ, ಮುಂಭಾಗದಲ್ಲಿ ಹನುಮಂತನೂ ಇರುತ್ತಾರೆ. ಎಲ್ಲರೂ ಸೂಕ್ತ ವಸ್ತ್ರ ಆಭರಣಗಳನ್ನು ಧರಿಸಿಕೊಂಡಿರುತ್ತಾರೆ.

## *ವಿಶೇಷ ವಿವರ*

ಶ್ರೀರಾಮ ಅಯೋಧ್ಯೆಯ ಬಹು ವಿಖ್ಯಾತ ಸಾಮ್ರಾಟ. ಭಾರತೀಯರಿಗೆ ಪ್ರಾತಃ ಸ್ಮರಣೀಯ ವಿಭೂತಿಗಳಲ್ಲಿ ಅಗ್ರಮಾನ್ಯನಾಗಿರುವ ಪುರುಷೋತ್ತಮ. ಅಯೋಧ್ಯೆಯ ಮಹಾರಾಜನಾಗಿದ್ದ ದಶರಥನ ನಾಲ್ಕು ಮಕ್ಕಳಲ್ಲಿ ಹಿರಿಯ. ಕ್ರಿಪೂ. ೨೩೫೦ - ೧೯೫೦ ಕಾಲವನ್ನು ಭಾರತೀಯ ಚರಿತ್ರೆಯಲ್ಲಿ ಅಯೋಧ್ಯೆಯ ರಘುವಂಶದ ರಾಜರ ಕಾಲವೆಂದು ಹೇಳಲಾಗುತ್ತದೆ. ಅವರ ವೈಭವದ ಪರಮೋಚ್ಚ ಸ್ತರವನ್ನು ಶ್ರೀರಾಮ ದಾಶರಥಿಯ ಕಾಲದಲ್ಲಿ ತಲುಪಿತ್ತು.

ವಾಲ್ಮೀಕಿ ರಾಮಾಯಣದಲ್ಲಿ ಒಬ್ಬ ಆದರ್ಶ ಪುರುಷ ಶ್ರೇಷ್ಠನಾಗಿ ಶ್ರೀರಾಮನು ಚಿತ್ರಿತವಾಗಿದ್ದಾನೆ. ಆದರ್ಶ ಪುತ್ರ, ಆದರ್ಶ ತಂದೆ, ಆದರ್ಶ ರಾಜ ಈ ಮೂರು ಆದರ್ಶಗಳ ಅದ್ವಿತೀಯ ಸಂಗಮವು ರಾಮನ ಜೀವನ ಚರಿತ್ರೆಯಲ್ಲಿ ಕಂಡು ಬರುತ್ತದೆ. ಒಂದೇ ಮಾತು, ಒಂದೇ ಬಾಣ, ಒಬ್ಬಳೇ ಪತ್ನಿ ಈ ವ್ರತವನ್ನು ನಿಷ್ಠಾಪೂರ್ವಕವಾಗಿ ಆಚರಣೆಯಲ್ಲಿರಿಸಿಕೊಂಡಿದ್ದ ರಾಮನು ಎಲ್ಲರಿಗೂ ಆದರ್ಶಪ್ರಾಯನಾದ ವ್ಯಕ್ತಿಯಾಗಿದ್ದಾನೆ. ಶ್ರೀರಾಮನ ಬದುಕೇ ಆದರ್ಶದ ಒಂದು ಮೇರು. ಅಹಿಂಸೆ, ದಯೆ, ಅಧ್ಯಯನ, ಸದ್ಗುಣ, ಇಂದ್ರಿಯನಿಗ್ರಹ, ಮನಃ ಸ್ಥೈರ್ಯ ಈ ಆರು ಗುಣಗಳ ಆದರ್ಶವ್ಯಕ್ತಿಯ ಜೀವನವನ್ನು ವಾಲ್ಮೀಕಿ ರಾಮಾಯಣವು ಬಿಂಬಿಸುತ್ತದೆ. ವಾಲ್ಮೀಕಿ ರಾಮಾಯಣದ ಪ್ರಾರಂಭದಲ್ಲಿ ವಾಲ್ಮೀಕಿ ಋಷಿಯು ನಾರದನನ್ನು ಇಂತು ಕೇಳುತ್ತಾನೆ -

**ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ।**

(ಈ ಪೃಥ್ವಿಯಲ್ಲಿ ಗುಣಸಂಪನ್ನನು, ಪರಾಕ್ರಮಿಯು, ಧರ್ಮಜ್ಞನು, ಸತ್ಯ ವಾಕ್ಯನು, ದೃಢವ್ರತಿಯು, ಸುಚರಿತನು, ಜ್ಞಾನಿ, ಲೋಕಪ್ರಿಯನು, ಸಂಯಮಿ, ತೇಜಸ್ವಿ ಯಾಗಿರುವ ವ್ಯಕ್ತಿಯ ಜೀವನ ಚರಿತೆಯನ್ನು ಕೇಳಲು ನಾನು ಆಶಿಸಿದ್ದೇನೆ.)

ಈ ರೀತಿಯಾಗಿ ವೈಕ್ತಿಕ ಸದ್ಗುಣಗಳ ಶ್ರೇಷ್ಠ ಆದರ್ಶವನ್ನು ಸಮಾಜದ ಮುಂದೆ ಇರಿಸಬೇಕೆಂಬುದು ವಾಲ್ಮೀಕಿ ರಾಮಾಯಣದ ಪ್ರಮುಖ ಉದ್ದೇಶವಾಗಿದೆ.

ಭಾರತದ ಪ್ರಾಚೀನ ಕ್ಷತ್ರಿಯ ಸಮಾಜವು ಬಹುಪತ್ನೀತ್ವವನ್ನು ರೂಢಿಯಲ್ಲಿರಿಸಿ ಕೊಂಡಿದ್ದಾಗ ಏಕ ಪತ್ನೀವ್ರತದ ಆದರ್ಶವನ್ನು ಶ್ರೀರಾಮನು ಸ್ಥಾಪಿಸಿದ. ಪರಶುರಾಮನ ಕುಠಾರದಿಂದ ಅಶೇಷ ಕ್ಷತ್ರಿಯ ಸಂಕುಲವು ನಿರ್ವೀರ್ಯವಾಗಿ ತತ್ತರಿಸುತ್ತಿದ್ದಾಗ ಆದರ್ಶ ಕ್ಷತ್ರಿಯನ ಹಾಗೂ ಆದರ್ಶ ರಾಜನ ನಡತೆ ಹೇಗಿರಬೇಕು ಎಂಬುದರ ದರ್ಶನವು ರಾಮನು ತನ್ನ ಬದುಕಿನಿಂದಲೇ ಎಲ್ಲಾ ಕ್ಷತ್ರಿಯರ ಮುಂದಿಂಸಿದ. ರಾವಣನ ಆಕ್ರಮಣಗಳಿಂದ ಕೇವಲ

ದಕ್ಷಿಣಭಾರತ ಮಾತ್ರವೇ ಅಲ್ಲ, ಗಂಗಾನದಿಯ ಹರಿವಿನ ಪ್ರದೇಶದಲ್ಲೂ ಭಯ ವ್ಯಾಪಿಸಿತ್ತು. ಶ್ರೀರಾಮ ತನ್ನ ಪರಾಕ್ರಮದ ಬಲದಿಂದ ಈ ಸಂಪೂರ್ಣ ಪ್ರದೇಶವನ್ನು ಭಯದಿಂದ ಮುಕ್ತಿಗೊಳಿಸಿದ. ಈ ರೀತಿ ವೈಯಕ್ತಿಕವಾಗಿ ಹಾಗೂ ರಾಜನಾಗಿ ಶ್ರೀರಾಮನು ನಡೆಸಿದ ಕಾರ್ಯಗಳು ಅದ್ವಿತೀಯ ಐತಿಹಾಸಿಕ ಮಹತ್ವವನ್ನು ಪಡೆದಿವೆ.

ವಾಲ್ಮೀಕಿ ರಾಮಾಯಣದಲ್ಲಿ ಬಹುಳವಾಗಿ ರಾಮ ಎಂಬ ಹೆಸರೇ ಬಳಸಿದ್ದರು ರಾಮಾಯಣದ ಉತ್ತರಕಾಲದಲ್ಲಿ ರಾಮಚಂದ್ರ ಎಂಬ ಹೆಸರು ಸಾಹಿತ್ಯದಲ್ಲಿ ಬಳಕೆಗೆ ಬಂದಿದೆ. ರಾಮಾಯಣದಲ್ಲಿ ಒಮ್ಮೆ ಮಾತ್ರ ಚಂದ್ರನೊಂದಿಗೆ ರಾಮನ ಸಾದೃಶ್ಯವನ್ನು ಹೇಳಲಾಗಿದೆ (ವಾಲ್ಮೀಕಿ ರಾಮಾಯಣ, ಯುದ್ಧಕಾಂಡ ೧೦೨ : ೩೨)

ದಶರಥ ಮಹಾರಾಜನಿಗೆ ಕೌಸಲ್ಯ, ಸುಮಿತ್ರ ಮತ್ತು ಕೈಕೇಯಿ ಎಂಬ ಮುವ್ವರು ಹೆಂಡತಿಯರು. ಅವರಿಗೆ ಬಹುಕಾಲ ಮಕ್ಕಳಿರಲಿಲ್ಲ. ಸಂತಾನವನ್ನು ಬಯಸಿ ಋಷ್ಯಶೃಂಗ ಋಷಿಯಿಂದ ಪುತ್ರಕಾಮೇಷ್ಠಿಯ ಯಜ್ಞವನ್ನು ಮಾಡಿಸಿದ. ಯಜ್ಞದ ಚರುವನ್ನು ಅರ್ಧಭಾಗ ಕೌಸಲ್ಯೆಗೆ ಕೊಟ್ಟ. ಅದರ ಫಲವಾಗಿ ಯಜ್ಞಕಾಲದ ಒಂದುವರ್ಷದ ನಂತರ ಚೈತ್ರ ಶುಕ್ಲ ನವಮಿ ಮಧ್ಯಾಹ್ನ ಐದು ಗ್ರಹಗಳು ಉಚ್ಛದಲ್ಲಿದ್ದಾಗ ಪುನರ್ವಸು ನಕ್ಷತ್ರದಲ್ಲಿ ಕರ್ಕಲಗ್ನದಲ್ಲಿ ಗುರು ಚಂದ್ರ ಯೋಗವಿದ್ದಾಗ ರಾಮನ ಜನ್ಮನವಾಯಿತು.

ಪೌರಾಣಿಕ ಸಾಹಿತ್ಯದಲ್ಲಿ ಇದು ಶ್ರೀ ಮಹಾವಿಷ್ಣುವಿನ ಏಳನೆಯ ಅವತಾರವೆಂದು ಹೇಳಲಾಗಿದೆ. ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮನು ವಿಷ್ಣುವಿಗೆ ಸರಿಸಮನಾದ ಪರಾಕ್ರಮಿ ಎಂದು ಹೇಳಲಾಗಿದೆ (ವಾ. ರಾ. ಬಾಲಕಾಂಡ ೧ : ೩೮). ಆದರೆ ಎಲ್ಲೂ ವಿಷ್ಣುವಿನ ಅವತಾರವೆಂದು ಹೇಳಿಲ್ಲ. ಒಂದೇ ಒಂದು ಕಡೆ ಈ ರೀತಿಯ ವಾಕ್ಯವಿದೆ (ವಾ. ರಾ. ಯುದ್ಧಕಾಂಡ ೧ : ೧೭). ಆದರೆ ಆ ಭಾಗವು ಪ್ರಕ್ಷಿಪ್ತ ಎಂಬ ಅನುಮಾನ ವಿದ್ವಾಂಸರಲ್ಲೂ ಇದೆ.

ನಂತರದ ಕಾಲದಲ್ಲಿ ರಾಮಭಕ್ತಿ ವಿಕಸಿತವಾದಂತೆಲ್ಲಾ ರಾಮನು ಅವತಾರ ಪುರುಷ ಎಂಬ ಕಲ್ಪನೆಯು ದೃಢಗೊಳ್ಳುತ್ತಾ ಬಂತು. ರಾಮ ತಾಪನೀಯ ಉಪನಿಷತ್ತಿನಿಂದ ಪ್ರಾರಂಭಿಸಿ ಆಧ್ಯಾತ್ಮ ರಾಮಾಯಣದವರೆವಿಗೂ ರಾಮಭಕ್ತಿಯನ್ನು ಪ್ರಧಾನ ವಿಷಯವಾಗಿ ಉಳ್ಳ ಎಲ್ಲಾ ಕೃತಿಗಳಲ್ಲೂ ರಾಮನನ್ನು ಕೇವಲ ವಿಷ್ಣುವಿನ ಅವತಾರವೆಂದಲ್ಲ ಪರಮಾತ್ಮನ ಅವತಾರವೆಂದೇ ಅಂಗೀಕರಿಸಲಾಯಿತು (ಅದ್ಭುತ ರಾಮಾಯಣ, ಬಾಲಕಾಂಡ: ೧). ಈ ಗ್ರಂಥಗಳ ಅನುಸಾರ ಹುಟ್ಟುತ್ತಲೇ ಕೌಸಲ್ಯಾದೇವಿಗೆ ಮಹಾವಿಷ್ಣುವಿನ ರೂಪದಲ್ಲಿ ದರ್ಶನ ನೀಡಿದನಂತೆ (ಅ.ರಾ. ಬಾ. ೧ : ೩ : ೨೩ - ೨೫; ಪದ್ಮ ಪುರಾಣ, ಉತ್ತರಖಂಡ ೨೪೫ : ೮೦; ಆನಂದ ರಾಮಾಯಣ ೧ : ೨ : ೪). ಮಹಾಭಾರತದ ಪ್ರಕಾರ ರಾಮನು ಮಾರ್ಕಂಡೇಯನ ಅಂಶದಿಂದಲೂ, ಹರಿವಂಶದ ಪ್ರಕಾರ ವಿಶ್ವಾಮಿತ್ರನ ಅಂಶದಿಂದಲೂ ಹುಟ್ಟಿದ. ದೇವೀ ಭಾಗವತವು ರಾಮ - ಲಕ್ಷ್ಮಣರು ನರ ನಾರಾಯಣರ ಅವತಾರವೆಂದೇ ಹೇಳುತ್ತದೆ.

ಶ್ರೀರಾಮನ ಸ್ವರೂಪ ವರ್ಣನೆಯು ವಾಲ್ಮೀಕಿ ರಾಮಾಯಣದಲ್ಲಿ ದೊರೆಯುತ್ತದೆ.

ಇಂದಿಗೂ ಶ್ರೀರಾಮ ಭಕ್ತರು ಬಹು ಶ್ರದ್ಧೆಯಿಂದ ಇದನ್ನು ನಿತ್ಯಸ್ತೋತ್ರದಲ್ಲಿ ಅಳವಡಿಸಿಕೊಂಡು ಪಠಿಸುತ್ತಾರೆ.

> **ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವೋ ಮಹಾಹನುಃ**
> **ಮಹೋರಸ್ಕೋ ಮಹೇಷ್ವಾಸೋ ಗೂಢಜತ್ರುರರಿಂದಮಃ ||**
> **ಆಜಾನುಬಾಹುಃ ಸುಶಿರಾಃ ಸುಲಲಾಟಃ ಸುವಿಕ್ರಮಃ**
> **ಸಮಃ ಸಮವಿಭಕ್ತಾಂಗಃ ಸ್ನಿಗ್ಧವರ್ಣಃ ಪ್ರತಾಪವಾನ್ ||**
> **ಪೀನವಕ್ಷಾ ವಿಶಾಲಾಕ್ಷೋ ಲಕ್ಷ್ಮೀವಾನ್ ಶುಭಲಕ್ಷಣಃ**
> **ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ ||**
> **ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ ಪ್ರಿಯದರ್ಶನಃ**
> **ಕಾಲಾಗ್ನಿಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ ||**

(ವಾ. ರಾ. ಬಾ. ೧ : ೧೦ - ೧೭)

ರಾಮನು ಎತ್ತರವಾದ ಹೆಗಲಿನಿಂದ ಕೂಡಿದ್ದಾನೆ. ಬಾಹುಗಳು ದುಂಡಾಗಿವೆ. ಕೊರಳು ಶಂಖದಂತೆ ಇದ್ದು ತ್ರಿವಳಿಗಳಿಂದ ಕೂಡಿದೆ. ಕಪೋಲಗಳ ಮೇಲ್ಭಾಗವು ಪುಷ್ಟವಾಗಿದೆ. ವಿಶಾಲವಾದ, ಕಠಿಣವಾಗಿರುವ ಉನ್ನತ ವಕ್ಷ ಕ್ಷೇತ್ರವಿದೆ. ಮಹಾಧನಸ್ಸು ಧರಿಸಿರುತ್ತಾನೆ. ಕೊರಳ ಎರಡೂ ಕಡೆ ಅಡಿಭಾಗದ ಮೂಳೆಗಳು (ಜತ್ರು) ಕಾಣಿಸದಂತೆ ಪುಷ್ಟವಾಗಿ ತುಂಬಿಕೊಂಡಿವೆ. ಅರಿಷಡ್ವರ್ಗಗಳೆನಿಸಿದ ಕಾಮ - ಕ್ರೋಧ - ಲೋಭ - ಮೋಹ - ಮದ-ಮಾತ್ಸರ್ಯಗಳನ್ನು ದಮನ ಮಾಡಿರುವವನು. ಬಾಹುಗಳು ಮೊಣಕಾಲುಗಳ ತನಕ ವ್ಯಾಪಿಸಿದ್ದು ನೀಳವಾಗಿರುತ್ತವೆ. ತಲೆಯು ಒಪ್ಪವಾಗಿರುತ್ತದೆ. ಹಣೆಯು ಎತ್ತರವಾಗಿದೆ. ನಡಿಗೆಯು ಗಜಗಮನ ದಂತಿರುತ್ತದೆ. ಬಹು ಎತ್ತರವೂ ಅಲ್ಲದ ಕುಬ್ಜನೂ ಅಲ್ಲದಹಾಗೆ ಇದ್ದಾನೆ. ಲಕ್ಷಣಶಾಸ್ತ್ರದ ಪ್ರಕಾರ ತೊಂಬತ್ತಾರು ಅಂಗುಲ ಎತ್ತರವಿದ್ದಾನೆ. ಶರೀರದ ಅಂಗಾಂಗಗಳು ಯುಕ್ತಪ್ರಮಾಣದಲ್ಲಿವೆ. ಶ್ಯಾಮಲ ವರ್ಣನು ; ಮಹಾತೇಜಸ್ವಿ. ಆತನ ಶರೀರದಲ್ಲಿ ಸಕಲವಿಧವಾದ ಶುಭ ಸೂಚಕ ಚಿಹ್ನೆಗಳೂ ಇವೆ. ಶರಣಾಗತರ ರಕ್ಷಣಾ ಧರ್ಮವನ್ನು ಚೆನ್ನಾಗಿ ಅರಿತವನು ; ಸತ್ಯ ಪ್ರತಿಜ್ಞನು. ಸದಾ ಪ್ರಜೆಗಳ ಹಿತರಕ್ಷಣೆಯನ್ನು ಗಮನದಲ್ಲಿ ಇರಿಸಿ ಕೊಂಡಿರುವವನು. ಸರ್ವಶಾಸ್ತ್ರಗಳನ್ನು ಬಲ್ಲವನು. ಸಕಲ ಕಲ್ಯಾಣಗುಣ ಸಂಪೂರ್ಣನು. ಗಾಂಭೀರ್ಯದಲ್ಲಿ ಸಮುದ್ರಕ್ಕೆ ಸಮನಾದವನು. ಪರಾಕ್ರಮದಲ್ಲಿ ವಿಷ್ಣುವಿಗೆ ಸಮಾನನಾದವನು. ಪೂರ್ಣಚಂದ್ರನನ್ನು ನೋಡುತ್ತಿದ್ದಂತೆಲ್ಲಾ ಹೇಗೆ ಇನ್ನೂ ನೋಡಬೇಕೆಂದು ಆಸೆಯುಂಟಾಗುವುದೋ ಅದೇ ರೀತಿಯಾಗಿ ರಾಮನನ್ನು ನೋಡಿದಂತೆಲ್ಲಾ ಇನ್ನೂ ನೋಡಬೇಕೆಂಬ ಬಯಕೆಯುಂಟಾಗುತ್ತದೆ. ಕೋಪ ಬಂದಾಗ ಕಾಲಾಗ್ನಿಯಂತೆ ಪ್ರಪಂಚವನ್ನೇ ದಹಿಸಿಬಿಡುವ ಉಜ್ವಲ ತೇಜಸ್ವೀ ; ಭೂಮಿಯಂತೆ ಕ್ಷಮಾಗುಣ ಪರಿಪೂರ್ಣನು.

ಕುಲಗುರು ವಸಿಷ್ಠ ರಾಮಸ್ಯ ಲೋಕ ರಾಮಸ್ಯ ಎಂದು ಹೇಳಿ ರಾಮ ಎಂದು ಹೆಸರಿಟ್ಟರು (ವಾ. ರಾ. ಬಾ. ೧೮ - ೧೯). ನಾಮಕರಣ ಮತ್ತು ಉಪನಯನದ ನಂತರ ಶಸ್ತ್ರ ಮತ್ತು

ಶಾಸ್ತ್ರಾಭ್ಯಾಸ ಮಾಡಿಸಿದರು (ವಾ.ರಾ.ಬಾ. ೧೮ : ೩೬ - ೩೭). ಯಜುರ್ವೇದದ ತಿಳಿವೂ ಇತ್ತು (ವಾ. ರಾ. ಸುಂದರಕಾಂಡ ೩೫ : ೧೪)

ವಸಿಷ್ಠರಲ್ಲಿ ಹದಿನೇಳು ವರ್ಷಗಳ ವಿದ್ಯಾಭ್ಯಾಸ ಮಾಡಿ ತೀರ್ಥಯಾತ್ರೆಯನ್ನೂ ಮುಗಿಸಿ ಬಂದ ನಂತರ ರಾಮನ ಮನದಲ್ಲಿ ಇದ್ದಕ್ಕಿದ್ದಂತೆಯೇ ವಿರಕ್ತ ಭಾವ ಉಂಟಾಯಿತು. ಧನ, ರಾಜ್ಯ, ಮಾತಾಪಿತೃಗಳನ್ನು ತೊರೆದು ಪ್ರಾಣತ್ಯಾಗವನ್ನು ಮಾಡಬೇಕೆಂಬ ವಿಚಾರ ಬಾರಿ ಬಾರಿಗೆ ಬರತೊಡಗಿತು.

**ಕಿಂ ಧನೇನ ಕಿಮಂಬಾಭಿಃ ಕಿಂ ರಾಜ್ಯೇನ ಕಿಮೀಹಯಾ**
**ಇತಿ ನಿಶ್ಚಯಮಾಪನ್ನ ಪ್ರಾಣತ್ಯಾಗಪರಃ ಸ್ಥಿತಃ ||** (ಯೋಗ ವಾಸಿಷ್ಠ ೧ : ೧೦ : ೪೬)

ರಾಮನ ಈ ವಿಲಕ್ಷಣ ವೈರಾಗ್ಯವನ್ನು ಕಂಡ ವಸಿಷ್ಠ ಮಹರ್ಷಿ ಆತನಿಗೆ ಜ್ಞಾನ ಕರ್ಮ ಸಮುಚ್ಚಯಾತ್ಮಕ ಉಪದೇಶವನ್ನು ಮಾಡಿದರು. ಅದೇ **ಯೋಗ ವಾಸಿಷ್ಠ** ವೆಂದು ನಂತರದಲ್ಲಿ ಪ್ರಖ್ಯಾತವಾಯಿತು.

ಆತ್ಮಜ್ಞಾನ ಮತ್ತು ಮೋಕ್ಷ ಪ್ರಾಪ್ತಿಗಾಗಿ ನಮ್ಮ ದೈನಂದಿನ ವ್ಯವಹಾರ ಮತ್ತು ಕರ್ತವ್ಯವನ್ನು ದೂರೀಕರಿಸಬೇಕಾಗಿಲ್ಲ. ಬದುಕಿನಲ್ಲಿ ಯಶಸ್ವಿಯಾಗಲು ಕರ್ತವ್ಯವನ್ನು ನಿರ್ವಹಿಸುವುದು ಆತ್ಮಜ್ಞಾನವನ್ನು ಗಳಿಸುವಷ್ಟೇ ಮುಖ್ಯವಾಗಿರುತ್ತದೆ.

**ಉಭಾಭ್ಯಮೇವ ಪಕ್ಷಾಭ್ಯಾಂ ಯಥಾ ಖೇ ಪಕ್ಷಿಣಾಂ ಗತಿಃ**
**ತಥೈವ ಜ್ಞಾನಕರ್ಮಾಭ್ಯಾಂ ಜಾಯತೇ ಪರಮಂ ಪದಮ್ ||**
**ಕೇವಲಾತ್ಕರ್ಮಣೋ ಜ್ಞಾನಾನ್ನಹಿ ಮೋಕ್ಷೋಭಿಜಾಯತೇ**
**ಕಿಂತುಭಾಭ್ಯಾಂ ಭವೇನ್ಮೋಕ್ಷಃ ಸಾಧನಂ ತೂಭಯಂ ವಿದುಃ ||**

(ಯೋ. ವಾ. ೧ : ೧ : ೭ - ೮)

(ಬಾನಿನಲ್ಲಿ ಹಾರಾಡುವ ಹಕ್ಕಿಯು ಯಾವ ರೀತಿಯಾಗಿ ತನ್ನ ಎರಡು ರೆಕ್ಕೆಗಳನ್ನು ಬಳಸಿಕೊಂಡು ತೇಲುತ್ತದೆಯೋ, ಅದೇ ರೀತಿಯಾಗಿ ಜ್ಞಾನ ಮತ್ತು ಕರ್ಮದ ಮಿಶ್ರಣದಿಂದಲೇ ಮನುಷ್ಯನಿಗೆ ಪರಮ ಪದವಿಯು ದೊರೆಯುತ್ತದೆ. ಕೇವಲ ಜ್ಞಾನ ಅಥವ ಕೇವಲ ಕರ್ಮದಿಂದ ಮಾತ್ರವೇ ಉಪಾಸನೆಯನ್ನು ನಡೆಸಿದರೆ ಮೋಕ್ಷಪ್ರಾಪ್ತಿಯು ಅಸಾಧ್ಯ. ಆದ್ದರಿಂದ ಇವೆರಡರ ಸಮನ್ವಯದಿಂದಲೇ ಜ್ಞಾನಿಯಾದವನು ಮೋಕ್ಷವನ್ನು ಗಳಿಸಕೊಳ್ಳುತ್ತಾನೆ).

ಶ್ರೀರಾಮ ಯುವಾವಸ್ಥೆಗೆ ಪ್ರವೇಶಿಸಿದ. ಆಗ ವಿಶ್ವಾಮಿತ್ರನು ದಶರಥನನ್ನು ಅರಮನೆಯಲ್ಲಿ ಕಂಡು 'ದಂಡಕಾರಣ್ಯದಲ್ಲಿ ನಾನೊಂದು ಯಜ್ಞವನ್ನು ನಡೆಸಲು ಉದ್ಯುಕ್ತನಾಗಿದ್ದೇನೆ. ಆದರೆ ಮಾರೀಚ ಮತ್ತು ಸುಬಾಹು ಎಂಬ ಇಬ್ಬರು ರಾಕ್ಷಸರ ಉಪಟಳದಿಂದ ಯಜ್ಞಕ್ಕೆ ಬಹುವಾದ ಉಪಟಳ ಒದಗಿದೆ. ಈ ಇಬ್ಬರೂ ಕೊಳೆತ ವಸ್ತುಗಳನ್ನು, ರಕ್ತ ಮಾಂಸಗಳನ್ನು ಯಜ್ಞದಲ್ಲಿ ಹಾಕಿ ಯಜ್ಞವು ನಿಲ್ಲುವಂತೆಮಾಡುತ್ತಿದ್ದಾರೆ. ಅವರನ್ನು ನಿನ್ನ ಪುತ್ರರಾದ ರಾಮ - ಲಕ್ಷ್ಮಣರು ಮಾತ್ರವೇ ಎದುರಿಸಬಲ್ಲರು. ನನಗೆ ಸಹಾಯಮಾಡಲು ಅವರನ್ನು ದಂಡಕಾರಣ್ಯಕ್ಕೆ ನನ್ನೊಂದಿಗೆ ಕಳುಹಿಸಬೇಕು' ಎಂದು ಕೇಳಿದ.


ವಸಿಷ್ಠರ ಒಪ್ಪಿಗೆಯ ಮೇರೆಗೆ ರಾಮ ಲಕ್ಷ್ಮಣರನ್ನು ದಶರಥನು ವಿಶ್ವಾಮಿತ್ರರ ಕೋರಿಕೆಯ ಪ್ರಕಾರ ಅವರೊಂದಿಗೆ ಕಳುಹಿಸಿಕೊಟ್ಟ. ಸೊಂಟದಲ್ಲಿ ಕತ್ತಿಯನ್ನು ಹೆಗಲಿಗೆ ಧನುಸ್ಸನ್ನು ಏರಿಸಿ, ಬೆನ್ನಿಗೆ ಬತ್ತಳಿಕೆಯನ್ನು ಕಟ್ಟಿಕೊಂಡು ರಾಮಲಕ್ಷ್ಮಣರು ದಂಡಕಾರಣ್ಯಕ್ಕೆ ನಡೆದರು.

ದಂಡ ಕಾರಣ್ಯಕ್ಕೆ ಹೋಗುವಾಗ ಮೊದಲಿಗೆ ಸರಯೂ ನದಿಯ ತೀರದಲ್ಲಿ ರಾಮ ಲಕ್ಷ್ಮಣರಿಗೆ ವಿಶ್ವಾಮಿತ್ರನು ಬಲ ಮತ್ತು ಅತಿಬಲ ಎಂಬ ಎರಡು ಮಂತ್ರಗಳನ್ನು ಉಪದೇಶಿಸಿದ. ಈ ಮಂತ್ರಗಳಿಂದ ಹಸಿವು ನೀರಡಿಕೆಗಳನ್ನು ನಿಗ್ರಹಿಸುವ ಶಕ್ತಿ ಬರುತ್ತಿತ್ತು. ನಂತರ ಗಂಗಾನದಿಯನ್ನು ದಾಟಿ ದಂಡಕಾರಣ್ಯವನ್ನು ಇವರು ಪ್ರವೇಶಿಸಿದರು. ಆಗ ದಂಡಕಾರಣ್ಯದ ಕಥೆಯನ್ನು ವಿಶ್ವಾಮಿತ್ರ ರಾಮನಿಗೆ ವಿವರಿಸಿ 'ಈಗ ದಟ್ಟವಾದ ಕಾಡನ್ನು ನೋಡುತ್ತಿದ್ದಿರಿ. ಇದು ಮೊದಲಿಗೆ ಅಗಸ್ತ್ಯಮಹರ್ಷಿಯ ಸಂಪನ್ನ ದೇಶವಾಗಿತ್ತು . ಸುಂದ ರಾಕ್ಷಸನ ಪತ್ನಿ ತಾಟಕಿ ಮತ್ತು ಅವಳ ಮಗ ಮಾರೀಚನಿಂದ ಇದು ಹಾಳಾಗಿ ಈಗ ಕಾಡಾಗಿದೆ. ತಾಟಕಿಗೆ ಇಪ್ಪತ್ತು ಆನೆಗಳ ಶಕ್ತಿ ಇದೆ. ಆದ್ದರಿಂದ ಮನುಷ್ಯರೆಲ್ಲರೂ ಅವಳನ್ನು ಕಂಡರೆ ಹೆದರುತ್ತಾರೆ. ಋಷಿಗಳಿಗೆ ಉಪಟಳ ನೀಡುವ ಅವರನ್ನು ಕೊಲ್ಲಬೇಕೆಂದೇ ನಿಮ್ಮನ್ನು ಇಲ್ಲಿಗೆ ಕರೆತಂದಿದ್ದೇನೆ' ಎಂದು ಹೇಳಿದ.

ತಾಟಕಿ ಹೆಣ್ಣಾಗಿದ್ದುದರಿಂದ ಅವಳ ಕೈಗಳನ್ನು ಕತ್ತರಿಸಬೇಕೆಂದು ಮೊದಲಿಗೆ ರಾಮ ಭಾವಿಸಿದನಾದರೂ, ತಾಟಕಿಯು ಆಕಾಶದಿಂದ ಕಲ್ಲುಗಳ ಮಳೆಸುರಿಸಿದ್ದರಿಂದ ರಾಮನು ಬಾಣ ಪ್ರಯೋಗಿಸಿ ಮಹಾಕಾಯಳೂ, ಕುರೂಪಿಯೂ ಆಗಿದ್ದ ಆ ರಾಕ್ಷಸಿಯನ್ನು ವಧೆಮಾಡಿದ. ಅವಳು ಉಧ್ವಸ್ಥಗೊಳಿಸಿದ್ದ ರಾಜ್ಯಗಳಾದ ಮಲದ ಮತ್ತು ಕಾಪುರುಷ ರಾಜ್ಯಗಳು ಮತ್ತೆ ವರ್ಧನೆಗೆ ಬರುವಂತೆ ಮಾಡಿದ.

ವಿಶ್ವಾಮಿತ್ರನು ರಾಮ - ಲಕ್ಷ್ಮಣರೊಂದಿಗೆ ಸಿದ್ಧಾಶ್ರಮಕ್ಕೆ ಬಂದ. ಅಲ್ಲಿ ಆತನ ಯಜ್ಞನಡೆಯುತ್ತಿತ್ತು. 'ಬಲಿ ವೈರೋಚನನನ ವಧೆಗಾಗಿ ಮಹಾವಿಷ್ಣು ವಾಮನಾವತಾರ ವನ್ನು ಧರಿಸಿದ್ದ ಸ್ಥಳವು ಇದೇ. ನನ್ನ ಆಶ್ರಮವು ಇದೇ ಸ್ಥಳದಲ್ಲಿದೆ. ಯಜ್ಞವನ್ನೂ ನಾನು ಪ್ರಾರಂಭಿಸಿ ನಡೆಸುತ್ತಿದ್ದೇನೆ. ಆದರೆ ಮಾರೀಚ ಮತ್ತು ಸುಬಾಹುಗಳಿಂದ ಯಜ್ಞವು ಮುಂದುವರಿಸುವದು ಕಷ್ಟವಾಗುತ್ತಿದೆ. ಆದ್ದರಿಂದ ಅವರೊಂದಿಗೆ ನೀವು ಯುದ್ಧಮಾಡಿ ಅವರನ್ನು ಸೋಲಿಸ ಬೇಕು' ಎಂದು ಕೇಳಿಕೊಂಡ.

ವಿಶ್ವಾಮಿತ್ರನ ಬಯಕೆಯಂತೆ ರಾಮ - ಲಕ್ಷ್ಮಣರು ಆರು ದಿನಗಳ ಕಾಲ ನಿರಂತರವಾಗಿ ಯಜ್ಞ ಮಂಟಪವನ್ನು ಕಾದರು. ಏಳನೆಯ ದಿನ ಬೆಳಗ್ಗೆ ಮಾರೀಚ ಮತ್ತು ಸುಬಾಹು ಇಬ್ಬರೂ ಆಕ್ರಮಣ ನಡೆಸಿದರು. ರಾಮ ಮಾನವಾಸ್ತ್ರವನ್ನು ಪ್ರಯೋಗಿಸಿ ಮಾರೀಚನನ್ನು ಒಂದು ನೂರು ಯೋಜನ ದೂರ ಒಯ್ದು ಸಾಗರದಲ್ಲಿ ಮುಳುಗುವಂತೆ ಮಾಡಿದ. ಅಗ್ನಿ ಅಸ್ತ್ರದಿಂದ ಸುಬಾಹುವನ್ನು ಕೊಂದ.



ಚಿತ್ರ ೩೦ : ಶಿವಧನುರ್ಭಂಗ

ಈ ರೀತಿಯಾಗಿ ವಿಶ್ವಾಮಿತ್ರನು ಕೋರಿದ ಕೆಲಸವನ್ನು ಮಾಡಿ ಅಯೋಧ್ಯಾ ನಗರಕ್ಕೆ ಹಿಂತಿರುಗಿದರು. ಮಾರ್ಗದಲ್ಲಿ ಕನ್ಯಕುಬ್ಜ, ಶೋಣಾ, ಭಾಗೀರಥಿ ನದಿಗಳನ್ನು ದಾಟಿ ವಿಶಾಲನಗರ ಮುಂತಾದ ತೀರ್ಥಸ್ಥಾನಗಳ ದರ್ಶನದ ನಂತರ ಮಿಥಿಲಾನಗರದ ಬಳಿಯಿದ್ದ ಗೌತಮ ಆಶ್ರಮಕ್ಕೆ ಬಂದರು. ಅಲ್ಲಿ ವಿಶ್ವಾಮಿತ್ರನು ಅಹಲ್ಯೆಯ ಕಥೆಯನ್ನು ಹೇಳಿದ. ರಾಮನು ಶಪಿತ ಸ್ತ್ರೀಯನ್ನು ಉದ್ಧರಿಸಿದ (ವಾ. ರಾ. ಬಾಲಕಾಂಡ ೨೭)

ಅನೇಕ ವಿದ್ವಾಂಸರ ಪ್ರಕಾರ ರಾಮನು ನಡೆಸಿದ ತಾಟಕಿಯ ವಧೆ ಮತ್ತು ಅಹಲ್ಯೋದ್ಧಾರವು ಕೇವಲ ಸಂಕೇತಾತ್ಮಕವಾದುದು. ದಂಡಕಾರಣ್ಯವು ಪ್ರಾಚೀನ ಕಾಲದಲ್ಲಿ ಗಂಗಾನದಿಯವರೆವಿಗೂ ಹರಡಿತ್ತು. ಅದನ್ನು ರಾಕ್ಷಸರ ಪೀಡೆಯಿಂದ ಮುಕ್ತಗೊಳಿಸಿ ಬಂಜರಾಗಿದ್ದ ಭೂಮಿಯನ್ನು ಮತ್ತೆ ಫಲವತ್ತಾಗಿ ಮಾಡಿದ ಎಂಬುದೇ ಈ ಆಖ್ಯಾಯಿಕೆಗಳ ಸಾರ ಎಂದು ವಿದ್ವಾಂಸರು ಭಾವಿಸುತ್ತಾರೆ.

ನಂತರ ವಿಶ್ವಾಮಿತ್ರನ ಸೂಚನೆಯ ಅನುಸಾರ ಜನಕ ರಾಜನ ಮಿಥಿಲಾ ನಗರದಲ್ಲಿ ಸೀತೆಯ ಸ್ವಯಂವರದಲ್ಲಿ ಭಾಗವಹಿಸಲು ಹೊರಟರು. ಅಲ್ಲಿ ಜನಕನು ಸ್ವಯಂವರಕ್ಕಾಗಿ ಇರಿಸಿದ್ದ ಶಿವಧನುಸ್ಸನ್ನು ಎತ್ತಿ ಹೆದೆ ಏರಿಸುತ್ತಿದ್ದಾಗಲೇ ಆ ಧನಸ್ಸು ಮುರಿದುಬಿತ್ತು. ನಂತರ ಜನಕ ಮಹಾರಾಜನು ಸೀತೆಯ ವಿವಾಹವನ್ನು ನಡೆಸಿಕೊಟ್ಟು ಇಂತು ಹೇಳಿದ :

**ಇಯಂ ಸೀತಾ ಮಮ ಸುತಾ ಸಹಧರ್ಮಚಾರೀ ತವ ||**
**ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ**
**ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ ||**

(ವಾ. ರಾ. ಬಾ. ೭೩ : ೨೬ - ೨೭)

(ಇಂದಿನಿಂದ ನನ್ನ ಮಗಳಾದ ಸೀತೆಯು ಧರ್ಮಮಾರ್ಗದಲ್ಲಿ ನಡೆಯು ನಿನಗೆ ಸಹಧರ್ಮಿಣಿಯಾಗಿರುತ್ತಾಳೆ ನಿನ್ನ ನೆರಳಿನಂತೆ ನಿನ್ನನ್ನು ಅನುಸರಿಸುತ್ತಾಳೆ. ಅವಳನ್ನು ನೀನು ಸ್ವೀಕರಿಸು).

ಉತ್ತರ ಭಾರತದಲ್ಲಿ ಈ ಶ್ಲೋಕಗಳನ್ನು ಬಹುಶ್ರದ್ಧೆಯಿಂದ ಮದುವೆಯ ಸಮಯದಲ್ಲಿ ಪಠಿಸಲಾಗುತ್ತದೆ. ರಾಮನ ಮದುವೆಯ ಸಂದರ್ಭದಲ್ಲಿಯೇ ಲಕ್ಷ್ಮಣ ವಿವಾಹವನ್ನು ಊರ್ಮಿಳಾ ಜತೆಯಲ್ಲಿ, ಭರತನ ಮದುವೆಯನ್ನು ಮಾಂಡವಿಯೊಂದಿಗೂ, ಶತೃಘ್ನನ ವಿವಾಹವನ್ನು ಶ್ರುತಕೀರ್ತಿಯೊಂದಿಗೂ ಜನಕಮಹಾರಾಜನು ನಡೆಸಿದ. ಊರ್ಮಿಳಾ ಜನಕ ರಾಜನ ಮಗಳು. ಮಾಂಡವಿ ಮತ್ತು ಶ್ರುತಕೀರ್ತಿ ಇವರು ಜನಕನ ತಮ್ಮ ಕುಶಧ್ವಜನ ಮಕ್ಕಳು.

ವಾಲ್ಮೀಕಿ ರಾಮಾಯಣದಲ್ಲಿಯೇ ಬೇರೆಯ ಕಡೆ ಲಕ್ಷ್ಮಣನಿಗೆ ಮದುವೆಯೇ ಆಗದಿರುವಂತೆ, ಭರತನ ಮದುವೆ ಸೀತೆಯ ಸ್ವಯಂವರಕ್ಕೂ ಮೊದಲೇ ಆಗಿದ್ದಂತೆ ಉಲ್ಲೇಖಗಳಿವೆ (ವಾ. ರಾ. ಅರಣ್ಯಕಾಂಡ, ೧೮ : ೩, ಬಾಲಕಾಂಡ ೨೩ : ೪). ಇದರ ಅನ್ವಯ ರಾಮನ ಮದುವೆಯೊಂದಿಗೆ ಇತರ ಮದುವೆಗಳು ನಡೆಯಿತು ಎಂಬುದು ಪ್ರಕ್ಷಿಪ್ತ ಎಂದು

ಹಲವರು ಭಾವಿಸುತ್ತಾರೆ.

ವಿವಾಹದ ನಂತರ ರಾಮನು ಅಯೋಧ್ಯೆಗೆ ಹಿಂತಿರುಗುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಪರಶುರಾಮ ಎದುರಾದ. 'ನನ್ನ ಗುರು ಶಿವನ ಧನುಸ್ಸನ್ನು ಮುರಿದು ನೀನು ಅಪಮಾನಮಾಡಿದ್ದೀಯೆ. ನನ್ನ ಕೈಯ್ಯಲ್ಲಿರುವ ವಿಷ್ಣುಧನಸ್ಸನ್ನೂ ಮುರಿದು ನಿನ್ನ ಶಕ್ತಿಯ ಪರಿಚಯವನ್ನು ಮಾಡಿಸು' ಎಂದು ರಾಮನಿಗೆ ಹೇಳಿದ.

ಈ ಮಾತನ್ನು ಕೇಳಿದ ರಾಮನು 'ನಿಮ್ಮ ತಂದೆಯವರ ಹತ್ಯೆಗೆ ಬದಲಾಗಿ ಭೂಮಿಯ ಮೇಲೆ ಇರುವ ಎಲ್ಲಾ ಕ್ಷತ್ರಿಯರನ್ನೂ ನಾಶಮಾಡಲು ನೀವು ಉದ್ಯುಕ್ತರಾಗದ್ದೀರಿ. ಆದರೆ ನಾನು ಇತರ ಕ್ಷತ್ರಿಯರಂತೆ ನಿಮ್ಮ ಶರಣುಕೋರುವುದಿಲ್ಲ' ಎಂದು ಹೇಳಿ ಪರಶುರಾಮನು ಹಿಡಿದಿದ್ದ ಧನಸ್ಸನ್ನು ಮುರಿದ. ಪರಶುರಾಮನು ರಾಮನ ಶರಣಾದ. ಈ ರೀತಿ ಕ್ಷತ್ರಿಯ ಸಂಹಾರ ಕಾರ್ಯವನ್ನು ತಪಸ್ಸಿನಂತೆ ನಡೆಸುತ್ತಿದ್ದ ಪರಶುರಾಮ ಸೋತ. ಭೂಮಿಯ ಮೇಲೆ ಉಳಿದ್ದ ಕ್ಷತ್ರಿಯರ ರಕ್ಷಣೆಯು ನಡೆಯಿತು (ವಾ.ರಾ. ಬಾ ೭೩ - ೭೭).

ಆಯೋಧ್ಯೆಗೆ ಬಂದ ನಂತರ ಹನ್ನೆರಡು ವರ್ಷಗಳಕಾಲ ಸೀತಾ ರಾಮರ ಜೀವನ ಆನಂದಮಯವಾಗಿಯೇ ಕಳೆಯಿತು. ತನ್ನ ಸದ್ಗುಣ ಹಾಗೂ ಧರ್ಮಪರಾಯಣತೆಯಿಂದ ರಾಮನು ಲೋಕಪ್ರಿಯನಾದ.

ರಾಮನಿಗೆ ಇಪ್ಪತ್ತೇಳು ವರ್ಷಗಳಾದವು. ದಶರಥ ಮಹಾರಾಜನು ಯುವರಾಜನನ್ನಾಗಿ ರಾಮನಿಗೆ ಪಟ್ಟಾಭಿಷೇಕವನ್ನು ನಡೆಸಬೇಕೆಂದುಕೊಂಡು ತನ್ನ ಸಭಾಜನರಲ್ಲಿ ಹೀಗೆ ಹೇಳಿದ: 'ರಾಮನು ರಾಜಾಕರಣದಲ್ಲಿ ಜಾಣನಾಗಿದ್ದಾನೆ. ಶೌರ್ಯ ಸಾಹಸಗಳಲ್ಲಿ ಅದ್ವಿತೀಯ ಎಂದು ಎಲ್ಲರಿಂದಲೂ ಮೆಚ್ಚುಗೆ ಪಡೆದಿದ್ದಾನೆ. ಆದ್ದರಿಂದ ನನ್ನ ಮಕ್ಕಳಲ್ಲಿ ರಾಮನೇ ಯುವರಾಜ ಪಟ್ಟಾಭಿಷೇಕಕ್ಕೆ ಸೂಕ್ತನಾದವನೆಂದು ಭಾವಿಸುತ್ತೇನೆ '

ಹೀಗೆ ಯುವರಾಜ ಪಟ್ಟಾಭಿಷೇಕದ ದಿನವನ್ನು ಚೈತ್ರಮಾಸದ ಪುಷ್ಯ ನಕ್ಷತ್ರವೆಂದು ನಿಗದಿ ಪಡಿಸಲಾಯಿತು. ಹಿಂದಿನ ರಾತ್ರಿ ರಾಮ ಸೀತೆಯರು ಉಪವಾಸಮಾಡಿ ದರ್ಭಾಸನದ ಮೇಲೆ ಮಲಗಿದ್ದರು. ಮರುದಿನ ಯುವರಾಜ್ಯಾಭಿಷೇಕಕ್ಕೆ ಹೊರಡಲು ಉದ್ಯುಕ್ತರಾಗುತ್ತಿದ್ದಂತೆಯೇ ಸುಮಂತನು ದಶರಥ ಮಹಾರಾಜರು ಕರೆಯುತ್ತಿದ್ದಾರೆಂಬ ಕರೆಯನ್ನು ತಂದ.

ಈ ಕರೆಯಂತೆ ಕೈಕೇಯಿಯ ಅರಮನೆಯಲ್ಲಿದ್ದ ದಶರಥನನ್ನು ರಾಮ ಕಂಡಾಗ ಆತ ಏನೂ ಮಾತನಾಡಲಿಲ್ಲ. ಕೈಕೇಯಿಯೇ 'ಮಹಾರಾಜರು ನಿನಗೆ ಹೇಳಬೇಕೆಂದು ಬಯಸುತ್ತಿರುವುದನ್ನು ನಿನ್ನ ಮೇಲಿನ ಪ್ರೇಮದಿಂದ ಹೇಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವರ ಬಯಕೆಯನ್ನು ಪಾಲಿಸುವುದು ನಿನ್ನ ಕರ್ತವ್ಯ' ಎಂದು ಹೇಳಿದಳು.

ತಂದೆಯ ಬಯಕೆಯನ್ನು ಪೂರೈಸುವುದೇ ತನ್ನ ದೃಢ ಸಂಕಲ್ಪವೆಂದು ರಾಮ ಇಂತು ಹೇಳಿದ :

ಅಹಂ ಹಿ ವಚನಾದ್ರಾಜ್ಞಃ ಪತೇಯಮಪಿ ಪಾವಕೇ ||
ಭಕ್ಷೇಯಂ ವಿಷಂ ತೀಕ್ಷ್ಣಂ ಪತೇಯಮಪಿ ಚಾರ್ಣವೇ
ನಿಯುಕ್ತೋ ಗುರುಣಾ ಪಿತ್ರಾ ನೃಪೇಣ ಚ ಹಿತೇನ ಚ ||
ತದ್ ಬ್ರೂಹಿ ವಚನಂ ದೇವಿ ರಾಜ್ಞೋ ಯದಭಿಕಾಂಕ್ಷಿತಮ್
ಕರಿಷ್ಯೇ ಪ್ರತಿಜಾನೇ ಚ ರಾಮೋ ದ್ವಿರ್ನಾಭಿಭಾಷತೇ ||

(ವಾ. ರಾ. ಅಯೋಧ್ಯಾಕಾಂಡ, ೧೭ : ೨೭ - ೩೦)

(ದಶರಥಮಹಾರಾಜರು ಅಪ್ಪಣೆ ಮಾಡಿದ್ದೇ ಆದರೆ ನಾನು ಅಗ್ನಿಪ್ರವೇಶಕ್ಕಾಗಲಿ, ತೀಕ್ಷ್ಣವಿಷ ಭಕ್ಷಣೆಗಾಗಲಿ ಸಿದ್ಧನಾಗಿದ್ದೇನೆ. ಏಕೆಂದರೆ ಅವರು ನನ್ನ ಪಿತೃಪಾದರು; ಗುರುಗಳು; ನನ್ನ ಹಿತೈಷಿಗಳು. ಆದ್ದರಿಂದ ಮಹಾರಾಜರ ಮನೋಗತವನ್ನು ತಿಳಿಸುವ ಕೃಪೆ ಮಾಡಿ. ಅದನ್ನು ಕೂಡಲೇ ಪಾಲಿಸುತ್ತೇನೆ. ಅದೇ ಉದ್ದೇಶದಿಂದಲೇ ನಾನು ಇಲ್ಲಿಗೆ ಬಂದಿದ್ದೇನೆ. ನಾನು ಸತ್ಯವಚನಿ. ಹೇಳಿದಂತೆ ನಡೆದುಕೊಳ್ಳುವುದನ್ನು ನನ್ನ ಧರ್ಮವನ್ನಾಗಿ ಸ್ವೀಕರಿಸಿದ್ದೇನೆ).

ರಾಮನ ಈ ಮಾತನ್ನು ಕೇಳಿದ ಕೈಕೇಯಿ ದೇವಾಸುರರ ಕಾಳಗದಲ್ಲಿ ದಶರಥ ಭಾಗವಹಿಸಿದ್ದ ಸಂದರ್ಭದಲ್ಲಿ ದಶರಥ ಮಹಾರಾಜ ಕೊಟ್ಟಿದ್ದ ಎರಡು ವರಗಳ ಬಗ್ಗೆ ಹೇಳಿ, 'ಆ ವರಗಳನ್ನು ಇಂದು ನಾನು ಮಹಾರಾಜರಿಂದ ಕೋರಿದ್ದೇನೆ. ಅದರ ಅನುಸಾರ ಅಯೋಧ್ಯಾರಾಜ್ಯವು ನನ್ನ ಪುತ್ರ ಭರತನಿಗೆ ಸಲ್ಲಬೇಕು. ನೀನು ಹದಿನಾಲ್ಕುವರ್ಷ ವನವಾಸ ಮಾಡಬೇಕು' ಎಂದು ವಿವರಿಸಿದಳು.

ಈ ಮಾತು ಕೇಳಿದ ರಾಮನು ಜೀವನ್ಮುಕ್ತ ಸಿದ್ಧನಂತೆ ರಾಜಭೂಷಣಗಳನ್ನು ತ್ಯಜಿಸಿ, ಸ್ವಜನ ಪರಿವಾರದವರಿಂದ ಬೀಳ್ಕೊಂಡು ಕಾಡಿನ ಕಡೆಗೆ ಹೊರಡಲು ಸಿದ್ಧನಾದ (ವಾ. ರಾ. ಅಯೋಧ್ಯಾಕಾಂಡ ೨೦ : ೩೨ - ೩೪).

ರಾಮನ ಈ ತೀರ್ಮಾನವನ್ನು ಕೇಳಿದ ತಾಯಿ ಕೌಸಲ್ಯೆ ಮತ್ತು ತಮ್ಮ ಲಕ್ಷ್ಮಣ ಈ ತೀರ್ಮಾನವನ್ನು ಬದಲಿಸಲು ಬಹುವಾಗಿ ಪ್ರಯತ್ನಿಸಿದರು. ವೃದ್ಧಾಪ್ಯದ ಕಾರಣದಿಂದ ಇದು ಅರಳು ಮರುಳಿನ ಮಾತು. ಈ ಮಾತನ್ನು ಪಾಲಿಸುವ ಅವಶ್ಯಕತೆಯೇ ಇಲ್ಲ ಎಂದು ಲಕ್ಷ್ಮಣ ವಾದಿಸಿದ. ಈ ಆಕ್ಷೇಪಣೆಗಳಿಗೆ ಉತ್ತರಿಸುತ್ತಾ ತನ್ನ ಜೀವನ ತಾತ್ತ್ವಿಕ ಭೂಮಿಕೆಯನ್ನು ವಿವರಿಸುತ್ತಾ ರಾಮನು ಇಂತು ಹೇಳಿದ :

ಧರ್ಮೋಹಿ ಪರಮೋ ಲೋಕೇ ಧರ್ಮೇ ಸತ್ಯಂ ಪ್ರತಿಷ್ಠಿತಮ್
ಧರ್ಮ ಸಂಶ್ರಿತಮ ಪ್ಯೇತ ತ್ಪಿತುರ್ವಚನ ಮುತ್ತಮ್ ||

(ವಾ. ರಾ. ಅಯೋಧ್ಯಾಕಾಂಡ ೨೧ : ೪೧)

(ಈ ಪ್ರಪಂಚದಲ್ಲಿ ಧರ್ಮವೇ ಪರಮಶ್ರೇಷ್ಠವಾದುದು. ಧರ್ಮವೇ ಸತ್ಯಕ್ಕೆ ಅಡಿಗಲ್ಲು. ನನ್ನ ತಂದೆ ನನಗೆ ಕೊಟ್ಟಿರುವ ಆಜ್ಞೆಯನ್ನು ನಾನು ಇದೇ ಧರ್ಮದ ಅನ್ವಯ ಅನುಸರಿಸುತ್ತಿದ್ದೇನೆ.)

'ರಾಜನು ಸದಾ ಸತ್ಯ ಪಥದಲ್ಲಿಯೇ ನಡೆಯಬೇಕು. ಅದೇ ಅವನ ಕರ್ತವ್ಯ. ರಾಜನು ಅಸತ್ಯ ಮಾರ್ಗದಲ್ಲಿ ನಡೆದರೆ ಅವನ ಪ್ರಜೆಗಳೂ ಅಸತ್ಯ ಮಾರ್ಗದಲ್ಲಿ ನಡೆಯುವ ಸಾಧ್ಯತೆಗಳಿವೆ' ಎಂದೂ ವಿವರಿಸಿದ.

ರಾಮನು ವನವಾಸಕ್ಕೆ ಹೊರಟಾಗ ಅವನೊಂದಿಗೆ ತಮ್ಮ ಲಕ್ಷ್ಮಣ, ಹೆಂಡತಿ ಸೀತಾ ಕೂಡ ಹೊರಟರು. ಸಂಜೆಯ ಸಮಯದಲ್ಲಿ ಈ ಮೂವ್ವರೂ ಕಾಲುನಡಿಗೆಯಲ್ಲಿಯೇ ತಮಸಾ ನದಿಯ ಬಳಿಗೆ ಬಂದರು. ಅಲ್ಲಿಗೆ ಅಯೋಧ್ಯೆಯ ಸಮಸ್ತ ಪೌರರು ವನವಾಸ ಗಮನೋದ್ದೇಶದಿಂದ ಬಂದು ಸೇರಿದ್ದರು. ಬೆಳಿಗ್ಗೆಯೇ ವನವಾಸಕ್ಕೆ ಹೋಗುತ್ತಾರೆ ಅವರನ್ನು ಹಿಂಬಾಲಿಸಬಹುದೆಂದು ಅವರು ಅಲ್ಲಿ ಸೇರಿದ್ದರು. ಈ ಜನರ ಕಣ್ತಪ್ಪಿಸಿ ಸಂಜೆಯಲ್ಲಿ ವನವಾಸಕ್ಕೆ ಹೊರಟರು. ನಂತರ ವೇದಶ್ರುತಿ, ಸ್ಯಂದಿಕಾ, ಗೋಮತಿ ಮುಂತಾದ ನದಿಗಳನ್ನೂ ಅವರು ದಾಟಿ ದಕ್ಷಿಣ ದಿಕ್ಕಿಗೆ ಹೊರಟರು (ವಾ. ರಾ ಅಯೋಧ್ಯಾಕಾಂಡ, ೪೧). ಅಯೋಧ್ಯಾರಾಜ್ಯದ ಎಲ್ಲೆಯನ್ನು ಮುಟ್ಟುತ್ತಲೇ ಅಲ್ಲಿಯ ದೇವತೆಗಳಿಗೆ ಮತ್ತೊಮ್ಮೆ ವಂದಿಸಿದರು. ಅಲ್ಲಿಂದ ಶೃಂಗವೇರಪುರದ ಬಳಿಯ ಭಾಗೀರಥೀ ನದಿಯನ್ನು ದಾಟಿಸಿದ ನಿಷಾದ ರಾಜನಾದ ಗುಹನು ಇವರನ್ನು ದಕ್ಷಿಣಕ್ಕೆ ತಲುಪಿಸಿದ. ಅಲ್ಲಿಗೆ ತಲುಪುತ್ತಲೇ ಲಕ್ಷ್ಮಣನಿಗೆ ಅಯೋಧ್ಯೆಗೆ ಹಿಂತಿರುಗಲು ಮತ್ತೊಮ್ಮೆ ಹೇಳಿದ. ಆದರೆ ಲಕ್ಷ್ಮಣನು ತನ್ನ ತೀರ್ಮಾನವನ್ನು ಬದಲಿಸಲಿಲ್ಲ.

ನಂತರ ಪ್ರಯಾಗಕ್ಕೆ ಬಂದು ಭರದ್ವಾಜ ಋಷಿಯನ್ನು ಭೇಟಿಯಾಗಿ ವನವಾಸದ ಹದಿನಾಲ್ಕು ವರ್ಷಗಳನ್ನು ಶಾಂತವಾಗಿ ಎಲ್ಲಿ ಕಳೆಯುವುದು ಸಾಧ್ಯವಿದೆ ಎಂಬುದರ ಬಗ್ಗೆ ಸಲಹೆ ಕೇಳಿದರು. ಚಿತ್ರಕೂಟ ಪರ್ವತದಲ್ಲಿ ಒಂದು ಕುಟಿಯನ್ನು ನಿರ್ಮಿಸಿ ಅಲ್ಲಿಯೇ ವಾಸಮಾಡಲು ಭರದ್ವಾಜ ಋಷಿ ಸೂಚಿಸಿದ. ಕಾಳಿಂದೀ ನದಿಯನ್ನು ದಾಟಿ ಚಿತ್ರಕೂಟ ಪರ್ವತವನ್ನು ಸೇರಿ ಅಲ್ಲಿ ಪರ್ಣಕುಟಿ ಯನ್ನು ನಿರ್ಮಿಸಿಕೊಂಡು ವಾಸಿಸತೊಡಗಿದರು.

ನಂತರದಲ್ಲಿ ಭರತನು ಭರದ್ವಾಜ ಋಷಿಯನ್ನು ಕರೆದುಕೊಂಡು ಚಿತ್ರಕೂಟಕ್ಕೆ ಬಂದ. ದಶರಥ ಮಹಾರಾಜನು ಸ್ವರ್ಗಸ್ಥನಾದ ವಿಷಯವನ್ನು ತಿಳಿಸಿದ. ಅಯೋಧ್ಯೆಗೆ ಹಿಂತಿರುಗಬೇಕೆಂದು ಒತ್ತಾಯ ಪೂರ್ವಕವಾಗಿ ಹಲವು ಬಾರಿ ಬೇಡಿದ. 'ಆಗಿರುವುದಕ್ಕೆ ನಾನೇ ಕಾರಣ ಎಂದು ನೀನು ದುಃಖಿಸಬೇಡ. ಇಂದಿನ ಪರಿಸ್ಥಿತಿಗೆ ಮನುಷ್ಯರ್ಯಾರೂ ಕಾರಣರಲ್ಲ. ಇದೆಲ್ಲಾ ಪರಮಾತ್ಮನ ಲೀಲೆ. ಆದ್ದರಿಂದ ವ್ಯರ್ಥವಾಗಿ ಶೋಕಿಸುತ್ತಾ ಕೂಡಬೇಡ. ಮೊದಲು ಹೋಗಿ ರಾಜ್ಯಾಡಳಿತ ಸೂತ್ರಗಳನ್ನು ನಿಯಂತ್ರಣಕ್ಕೆ ತೆಗೆದುಕೋ. ಇದೇ ನಿನ್ನ ಕರ್ತವ್ಯ' ಎಂದು ರಾಮ ಭರತನಿಗೆ ಹೇಳಿದ.

ಭರತನು ಅಯೋಧ್ಯೆಗೆ ಹೋದ ನಂತರ ಚಿತ್ರಕೂಟದಲ್ಲಿರುವುದು ರಾಮನಿಗೆ ತೃಪ್ತಿಕೊಡಲಿಲ್ಲ. ಆದ್ದರಿಂದ ದಕ್ಷಿಣದಲ್ಲಿದ್ದ ದಂಡಕಾರಣ್ಯವನ್ನು ಪ್ರವೇಶಿಸಿದ. ಅಲ್ಲಿ ಮೊದಲಿಗೆ ಅತ್ರಿಮಹರ್ಷಿಯ ಆಶ್ರಮಕ್ಕೆ ಹೋಗಿ ಅತ್ರಿ ಮತ್ತು ಅನಸೂಯ ದೇವಿಯರ ದರ್ಶನವನ್ನು ಪಡೆದ.



ಚಿತ್ರ ೩೧ : ನದಿ ದಾಟಿಸುತ್ತಿರುವ ಗುಹ

ಮುಂದಕ್ಕೆ ಭಯಂಕರವಾದ ಅರಣ್ಯವಿತ್ತು. ಅದರಲ್ಲಿ ಮುಂದೆ ಸಾಗುತ್ತಾ ಹಾದಿಯಲ್ಲಿ ವಿರಾಧ ಎಂಬ ರಾಕ್ಷಸನನ್ನು ಕೊಂದು ನಂತರ ಶರಭಂಗಋಷಿಯ ಆಶ್ರಮವನ್ನು ತಲುಪಿದರು. ಆ ಋಷಿಯು ತನ್ನೆಲ್ಲಾ ತಪಸ್ಸಿನ ಫಲವನ್ನು ಧಾರೆಯೆರೆದು ರಾಮನಿಗೆ ರಾಜ್ಯವನ್ನು ದೊರಕಿಸಿಕೊಡುವುದಾಗಿ ಆಶ್ವಾಸನೆ ನೀಡಿದ. ಆದರೆ ರಾಮನು ಬಹುಗೌರವ ಮರ್ಯಾದೆಗಳಿಂದ ಅದನ್ನು ನಿರಾಕರಿಸಿ ಅಲ್ಲಿಂದ ಸುತೀಕ್ಷ್ಣ ಮುನಿಯ ಆಶ್ರಮಕ್ಕೆ ಹೋದ. ಹಾದಿಯಲ್ಲಿ ರಾಕ್ಷಸರ ಕ್ರೌರ್ಯಕ್ಕೆ ತುತ್ತಾಗಿ ಪ್ರಾಣತೆತ್ತಿದ್ದ ಋಷಿಗಳ ಮೂಳೆಗಳ ರಾಶಿ ಕಾಣಿಸಿತು. ಅಲ್ಲಿದ್ದ ಋಷಿಗಳನ್ನು ಕುರಿತು 'ನಾನು ಇಲ್ಲಿಯೇ ಇದ್ದು ನಿಮ್ಮನ್ನು ರಾಕ್ಷಸರ ಪೀಡೆಯಿಂದ ಮುಕ್ತ ಗೊಳಿಸುತ್ತೇನೆ' ಎಂದು ಹೇಳಿದ (ವಾ. ರಾ. ಅರಣ್ಯಕಾಂಡ, ೭).

ರಾಕ್ಷಸರನ್ನು ಕೊಲ್ಲುವ ಈ ಪ್ರತಿಜ್ಞೆಯನ್ನು ಕೇಳಿದ ಸೀತೆಯು ಈ ಮಾತನ್ನು ಹಿಂದಕ್ಕೆ ಪಡೆಯಬೇಕೆಂದು ಪ್ರಾರ್ಥಿಸಿದಳು. 'ರಾಕ್ಷಸರನ್ನು ಕೊಂದು ಋಷಿ - ಮುನಿಗಳ ರಕ್ಷಣೆ ಮಾಡುವುದು ಚತುರಂಗ ಬಲ ಇರುವ ರಾಜನ ಕೆಲಸ. ಶಸ್ತ್ರವಿಹೀನರಾದ ನಮ್ಮಂತಹ ವನವಾಸಿಗಳಿಗೆ ಈ ಕೆಲಸವು ಸರಿಯಾದುದಲ್ಲ. ಕೇವಲ ಆತ್ಮರಕ್ಷಣೆಗೆ ಮಾತ್ರವೇ ನಾವು ರಾಕ್ಷಸ ಸಂಹಾರವನ್ನು ನಡೆಸಬೇಕೇ ಹೊರತು ಬೇರೆಯ ಕಾರಣಗಳಿಗಾಗಿ ಅಲ್ಲ' ಎಂದು ಸೀತೆ ಅರಿಕೆ ಮಾಡಿಕೊಂಡಳು.

'ಋಷಿ - ಮುನಿಗಳಿಗೆ, ಬ್ರಾಹ್ಮಣರಿಗೆ ಅಭಯದಾನ ಮಾಡುವುದು, ಅವರ ರಕ್ಷಣೆ ನಡೆಸುವುದು ಪ್ರತಿಯೊಬ್ಬ ಕ್ಷತ್ರಿಯನ ಕರ್ತವ್ಯ. ಇದಕ್ಕೆ ಅವನು ರಾಜನಾಗಿರಬೇಕಾಗಿಲ್ಲ. ಈಗ ನಾನು ಅಭಯವನ್ನು ಕೊಟ್ಟಾಗಿದೆ. ಇನ್ನು ಆಕಾಶವೇ ಕಳಚಿಬಿದ್ದರೂ ನನ್ನ ಮಾತನ್ನು ನಾನು ಬದಲಿಸುವುದಿಲ್ಲ' ಎಂದ ರಾಮ. ಈ ಮಾತೇ ಮುಂದಿನ ಎಲ್ಲಾ ವಿಪತ್ತುಗಳ ಪರಂಪರೆಗೂ ನಾಂದಿಯಾಯಿತು.

ದಂಡಕಾರಣ್ಯದ ಋಷಿಗಳೊಂದಿಗೆ ರಾಮ ಹತ್ತು ವರ್ಷಗಳ ಕಾಲವನ್ನು ಕಳೆದ. ಅನೇಕ ಆಶ್ರಮಗಳಲ್ಲಿ ಎರಡು ತಿಂಗಳುಗಳಿಂದ ಒಂದು ವರ್ಷದವರೆವಿಗೂ ಇದ್ದ. ರಾಮ ಹೋದ ಕಡೆಯಲ್ಲೆಲ್ಲಾ ಅದ್ಭುತವಾದ ಸ್ವಾಗತ ದೊರೆಯುತ್ತಿತ್ತು.

ಹತ್ತುವರ್ಷಗಳ ನಂತರ ಅಗಸ್ತ್ಯ ಮತ್ತು ಲೋಪಾಮುದ್ರೆಯರನ್ನು ದರ್ಶಿಸಲು ಅಗಸ್ತ್ಯಮಹರ್ಷಿಗಳ ಆಶ್ರಮಕ್ಕೆ ಹೊರಟ. ಅಗಸ್ತ್ಯಮಹರ್ಷಿಯು ಭಗವಾನ್ ವಿಷ್ಣುವಿಗಾಗಿ ದೇವತೆಗಳ ಶಿಲ್ಪಿಯಾದ ವಿಶ್ವಕರ್ಮಶಿಲ್ಪರ್ಷಿಯು ತಯಾರಿಸಿಕೊಟ್ಟಿದ್ದ ದಿವ್ಯ ಧನಸ್ಸನ್ನು, ಅಕ್ಷಯ ತೂಣೀರವನ್ನೂ ರಾಮನಿಗೆ ಅರ್ಪಿಸಿದ. ಪಂಚವಟಿಯಲ್ಲಿದ್ದು ರಾಕ್ಷಸರನ್ನು ಸಂಪೂರ್ಣವಾಗಿ ನಾಶಮಾಡಬೇಕೆಂದು ಹೇಳಿದ (ವಾ. ರಾ. ಅರಣ್ಯಕಾಂಡ ೧೨ : ೨೪ - ೩೦).

ಪಂಚವಟಿಯಲ್ಲಿ ಕುಟೀರವನ್ನು ನಿರ್ಮಿಸಿಕೊಂಡು ಅಲ್ಲಿಯೇ ವಾಸಿಸತೊಡಗಿದರು. ಅಲ್ಲಿ ಗರುಡನ ಸೋದರನಾದ, ಅರುಣನ ಪುತ್ರನಾಗಿದ್ದ ಜಟಾಯು ರಾಮನನ್ನು ಕಂಡ. ರಾಮ

ಲಕ್ಷ್ಮಣರು ಆಶ್ರಮದಲ್ಲಿ ಇಲ್ಲದ ವೇಳೆಯಲ್ಲಿ ಸೀತೆಯನ್ನು ರಕ್ಷಿಸುವ ಹೊಣೆಯನ್ನು ಹೊತ್ತುಕೊಂಡ (ವಾ. ರಾ. ಅರಣ್ಯಕಾಂಡ, ೧೪).

ರಾಮ ಪಂಚವಟಿಯಲ್ಲಿದ್ದಾಗಲೇ ರಾವಣನ ಸೋದರಿ ಶೂರ್ಪಣಖೆಯು ರಾಮನನ್ನು ಕಂಡು ಕಾಮವಾಸನೆಯಿಂದ ಪೀಡಿತಳಾಗಿ ತನ್ನನ್ನು ಮದುವೆಯಾಗಬೇಕೆಂದು ಕೋರಿದಳು. ರಾಮನ ಅಪ್ಪಣೆಯ ಮೇರೆಗೆ ಆ ರಾಕ್ಷಸಿಯ ಮೂಗು, ಕಿವಿಗಳನ್ನು ಲಕ್ಷ್ಮಣನು ಕತ್ತರಿಸಿದ. ನಂತರ ಅವಳ ಸೋದರ ಖರ ಮತ್ತು ದೂಷಣರನ್ನೂ, ತ್ರಿಶಿರಸ್ ಮುಂತಾದ ಹದಿನಾಲ್ಕು ಮಂದಿ ಸೇನಾಪತಿಗಳನ್ನೂ ಲಕ್ಷ್ಮಣನೇ ಕೊಂದುಹಾಕಿದ. ಅಕಂಪನ ಎಂಬ ರಾಕ್ಷಸನೊಬ್ಬನೇ ಅವರಲ್ಲಿ ಉಳಿದುಕೊಂಡು, ಅವನು ಮತ್ತು ಶೂರ್ಪಣಖೆ ಇಬ್ಬರೂ ಲಂಕಾಧಿಪತಿಯಾದ ರಾವಣನಿಗೆ ಪಂಚವಟಿ ಗ್ರಾಮದ ಜನಸ್ಥಾನವೆಂಬ ಪ್ರದೇಶದಲ್ಲಿ ನಡೆದ ರಾಕ್ಷಸರ ಸಂಹಾರವನ್ನು ವಿವರಿಸಿದರು.

ಇದನ್ನೆಲ್ಲಾ ಆಲಿಸಿದ ರಾವಣನು ಕಾಮರೂಪಿಯಾದ (ಬಯಸಿದ ರೂಪವನ್ನು ಧರಿಸಬಲ್ಲವನು) ಮಾರೀಚನನ್ನು ಸ್ವರ್ಣ ಮೃಗವಾಗಲು ಹೇಳಿ ಪಂಚವಟಿಗೆ ತಾಪಸಿಯ ರೂಪದಲ್ಲಿ ಬಂದ. ಸ್ವರ್ಣಮೃಗದ ನೆರವಿನಿಂದ ರಾಮ ಲಕ್ಷ್ಮಣರನ್ನು ಕುಟೀರದಿಂದ ಬಹುದೂರ ಹೋಗುವಂತೆ ಮಾಡಿ ಋಷಿಯ ವೇಷದಲ್ಲಿ ಸೀತೆಯನ್ನು ಅಪಹರಿಸಿದ. ಸೀತೆಯ ಕೂಗನ್ನು ಕೇಳಿ ಜಟಾಯು ಕೂಡಲೇ ಬಂದು ರಾವಣನನ್ನು ತಡೆದ. ಆದರೆ ರಾವಣನು ಜಟಾಯುವಿನ ಎರಡೂ ರೆಕ್ಕೆಗಳನ್ನು ಕತ್ತರಿಸಿದ. ಜಟಾಯು ಮೂರ್ಛಿತನಾದ.

ನಂತರದಲ್ಲಿ ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತಾ ಹೊರಟಾಗ ರಾವಣನು ಸೀತೆಯನ್ನು ಬಲಾತ್ಕಾರದಿಂದ ಕೊಂಡೊಯ್ದುದ್ದನ್ನು ವಿವರಿಸಿ ಅವನು ದಕ್ಷಿಣದ ಕಡೆಗೆ ಹೋದ ಎಂಬುದನ್ನು ತಿಳಿಸಿ ಜಟಾಯು ದೇಹತ್ಯಾಗ ಮಾಡಿದ. ಜಟಾಯುವಿನ ಈ ಸಾವಿಗಾಗಿ ರಾಮನು ಬಹುವಾಗಿ ದುಃಖಿಸಿದ. ತನ್ನ ತಂದೆಯೆಂದೇ ಭಾವಿಸಿ ಜಟಾಯುವಿನ ದಹನ ಸಂಸ್ಕಾರವನ್ನು ನಿರ್ವಹಿಸಿದ (ವಾ. ರಾ. ಅರಣ್ಯಕಾಂಡ, ೬೨). ತರುವಾಯ ಅವರು ಅಗಸ್ತ್ಯಾಶ್ರಮದ ಕಡೆಗೆ ನಡೆದರು. ಮಾರ್ಗದಲ್ಲಿ ಕಬಂಧ ಎಂಬ ರಾಕ್ಷಸನು ಅವರ ಮೇಲೆರಗಿದ. ರಾಮನು ಕಬಂಧನನ್ನು ಕೊಂದ. ಸಾಯುವಮುನ್ನ ಕಬಂಧನು ಸೀತೆಯನ್ನು ಬಿಡಿಸಿಕೊಳ್ಳಲು ಋಷ್ಯಮೂಕ ಪರ್ವತದ ಪಂಪಾ ಸರೋವರ ತೀರದಲ್ಲಿ ವನವಾಸಿಯಾಗಿರುವ ಸುಗ್ರೀವ ವಾನರನ ಸಹಾಯವನ್ನು ಪಡೆದುಕೊಳ್ಳಬೇಕೆಂದು ಸಲಹೆಕೊಟ್ಟ. ಅದರ ಪ್ರಕಾರವೇ ರಾಮ ಋಷ್ಯಮೂಕ ಪರ್ವತದ ಕಡೆಗೆ ಹೊರಟರು. ಹಾದಿಯಲ್ಲಿ ಮತಂಗಾಶ್ರಮದಲ್ಲಿ ಮತಂಗ ಮುನಿಯ ಶಿಷ್ಯೆಯಾದ ಶಬರಿಯ ಆಥಿತ್ಯವನ್ನು ಸ್ವೀಕರಿಸಿದರು.

ಸಪ್ತಸಾಗರ ತೀರ್ಥವನ್ನು ಹಾದು, ಋಷ್ಯಮೂಕ ಪರ್ವತವನ್ನು ಸೇರಿ ಪಂಪಾ ಸರೋವರದತ್ತ ನಡೆದರು. ತನ್ನ ಅಣ್ಣ ವಾಲಿಯಿಂದ ಪೆಟ್ಟುತಿಂದಿದ್ದ ಸುಗ್ರೀವನಿಗೆ ರಾಮನನ್ನು ಕಂಡು ಸಂಶಯವುಂಟಾಯಿತು. ಆದ್ದರಿಂದ ತನ್ನ ಮಂತ್ರಿ ಹನುಮಂತನನ್ನು ರಾಮನ ಬಳಿಗೆ

ಕಳುಹಿಸಿದ. ಹನುಮಂತನು ಬಹು ಜಾಣ್ಮೆಯಿಂದ ಪರಿಚಯವನ್ನು ಕೇಳಿ ಕೊನೆಗೆ ತನ್ನ ಭುಜದ ಮೇಲೆ ಕುಳ್ಳಿರಿಸಿಕೊಂಡು ಸುಗ್ರೀವನ ಬಳಿಗೆ ಕರೆದುತಂದ. ಸುಗ್ರೀವ ಮತ್ತು ರಾಮ ಮಾತನಾಡಿಕೊಂಡು ಅಗ್ನಿ ಸಾಕ್ಷಿಯಾಗಿ ಪರಸ್ಪರ ಸಹಾಯ ಮಾಡುವುದಾಗಿ ಪ್ರತಿಜ್ಞೆ ಕೈಗೊಂಡರು. ಸೀತಾಹರಣದ ಸಂದರ್ಭದಲ್ಲಿ ಕೆಳಗೆ ಬಿದ್ದಿದ್ದ ಆಭರಣಗಳನ್ನು ಸುಗ್ರೀವ ತೋರಿಸಿದ. ಆಗ ವಾಲಿಯ ವಧೆಯನ್ನು ಮಾಡುವುದಾಗಿ ರಾಮನು ಪ್ರತಿಜ್ಞೆ ಕೈಗೊಂಡ.

ವಾಲಿ ಮತ್ತು ಸುಗ್ರೀವರ ಮಧ್ಯೆ ಭಯಂಕರವಾದ ಯುದ್ಧ ನಡೆಯಿತು. ಸದವಕಾಶವನ್ನು ಗಮನಿಸಿ ಮರದ ಮರೆಯಲ್ಲಿ ನಿಂತು ಬಾಣವನ್ನು ಬಿಟ್ಟು ವಾಲಿಯನ್ನು ಕೊಂದ (ವಾ. ರಾ. ಕಿಷ್ಕಿಂದಾಕಾಂಡ, ೨೩ : ೨೪).

ವಾಲಿಯನ್ನು ಕೊಂದಾಗ ರಾಮನು ಅನುಸರಿಸಿದ ಕಪಟನೀತಿಯು ಕ್ಷತ್ರಿಯ ಯುದ್ಧನೀತಿಗೆ ವಿರುದ್ಧವಾದುದೆಂದು ಅಂಗೀಕರಿಸಲಾಗಿದೆ. ಈ ಯುದ್ಧಕ್ಕೆ ಮೊದಲು ವಾಲಿಯು ತನ್ನ ಹೆಂಡತಿ ತಾರೆಯೊಂದಿಗೆ ರಾಮನ ಬಗ್ಗೆ ಇಂತು ಹೇಳುತ್ತಾನೆ

ಧರ್ಮಜ್ಞಶ್ಚ ಕೃತಜ್ಞಶ್ಚ ಕಥಂ ಪಾಪಂ ಕರಿಷ್ಯತಿ । (ವಾ. ರಾ. ಕಿಷ್ಕಿಂದಾಕಾಂಡ, ೧೬)

(ರಾಮನು ಧರ್ಮವನ್ನು ಬಲ್ಲವನು; ಕೃತಜ್ಞನಾದವನು. ಆದ್ದರಿಂದ ಅವನ ಕೈಗಳಿಂದ ಯಾವ ರೀತಿಯ ಪಾಪ ಕರ್ಮವೂ ಆಗುವುದು ಅಸಂಭವ)

ಆದ್ದರಿಂದ ಮರಣೋನ್ಮುಖನಾದ ವಾಲಿಯು ರಾಮನ ಕಪಟ ವರ್ತನೆಯನ್ನು ಬಹುತೀವ್ರವಾಗಿ ಖಂಡಿಸಿದ. ಈ ಖಂಡನೆಗೆ ರಾಮನು ಉತ್ತರಿಸುವುದು ಸಾಧ್ಯವಾಗಲಿಲ್ಲ. ರಾಮ ಇಷ್ಟುಮಾತ್ರವೇ ನುಡಿದ : ' ನಿನ್ನ ಸೋದರನ ರಾಜ್ಯ ಮತ್ತು ಪತ್ನಿಯ ಅಪಹಾರವನ್ನು ನಡೆಸಿರುವ ನೀನು ಅತ್ಯಂತ ಘೋರ ಪಾತಕಿಯಾಗಿರುವೆ. ಆದ್ದರಿಂದ ನಿನ್ನನ್ನು ನಾನು ಕೊಂದಿದ್ದೇನೆ ' (ವಾ. ರಾ. ಕಿ, ೨೭ - ೨೮). ಕೆಲವು ವಿದ್ವಾಂಸರ ಪ್ರಕಾರ ರಾಮ ವಾಲಿಯರ ಸಂವಾದದ ಅಧ್ಯಾಯಗಳು ಪ್ರಕ್ಷಿಪ್ತ.

ವಾಲಿಯ ಮರಣದ ನಂತರ ಕಿಷ್ಕಿಂಧೆಯ ರಾಜ್ಯಕ್ಕೆ ಸುಗ್ರೀವನನ್ನು ಅರಸನನ್ನಾಗಿ ಪಟ್ಟಾಭಿಷೇಕವನ್ನು ಮಾಡಿದರು. ನಂತರದ ನಾಲ್ಕು ತಿಂಗಳು (ಶ್ರಾವಣದಿಂದ ಕಾರ್ತೀಕದ ವರೆವಿಗೂ) ಪ್ರಸ್ರವಣಗಿರಿಯಲ್ಲಿಯ ಒಂದು ಗುಹೆಯಲ್ಲಿ ಕಳೆದರು (ವಾ. ರಾ. ಕಿ, ೨೭ - ೨೮).

ಮಳೆಗಾಲ ಕಳೆದ ನಂತರವೂ ಸುಗ್ರೀವನು ಸೀತೆಯ ಶೋಧನೆಯ ಕಾರ್ಯವನ್ನು ಕೈಗೆತ್ತಿಕೊಳ್ಳದೆ ಇದ್ದುದರಿಂದ ಲಕ್ಷ್ಮಣನ ಮೂಲಕ ಸುಗ್ರೀವನನ್ನು ಬಹುವಾಗಿ ರಾಮನು ಮೂದಲಿಸಿದ. ನಂತರ ಸುಗ್ರೀವ ಸೀತಾನ್ವೇಷಣೆಗಾಗಿ ಎಲ್ಲಾ ದಿಕ್ಕುಗಳಲ್ಲಿಯೂ ವಾನರರನ್ನು ಕಳುಹಿಸಿಕೊಟ್ಟ. ಉತ್ತರ ದಿಕ್ಕಿಗೆ ಶತಬಲಿ. ಪೂರ್ವ ದಿಕ್ಕಿಗೆ ವಿನತ. ಪಶ್ಚಿಮ ದಿಕ್ಕಿಗೆ ಸುಷೇಣ. ದಕ್ಷಿಣ ದಿಕ್ಕಿಗೆ ಹನುಮಂತ, ತಾರ ಮತ್ತು ವಾಲಿಪುತ್ರ ಅಂಗದ. ಹನುಮಂತ ನೊಡನೆ ಹೋದ ವಾನರ ಸೈನ್ಯದಲ್ಲಿ ಅನಂಗ, ನೀಲ, ಸುಹೋತ್ರ, ಶರಾರಿ, ಶರಗುಲ್ಮ, ನಜ, ಗವಾಕ್ಷ, ಗವಯ,

ವೃಷಭ, ಸುಷೇಣ, ಮೈಂದ, ದ್ವಿವಿಧ, ಗಂಧಮಾದನ, ಉಲ್ಕಾಮುಖ, ಜಾಂಬವಂತ ಮುಂತಾದವರಿದ್ದರು (ವಾ. ರಾ. ಕಿ. ४೧).

ಇವರೆಲ್ಲರಲ್ಲಿ ಹನುಮಂತನ ಶಕ್ತಿಸಾಮರ್ಥ್ಯಗಳನ್ನು ಅರಿತ ರಾಮನು ತನ್ನ ಗುರುತು ಖಚಿತಗೊಳಿಸಲು ನೆರವಾಗುವಂತೆ ತನ್ನ ಹೆಸರು ಕೆತ್ತಿರುವ ಉಂಗುರವನ್ನು ಕೊಟ್ಟ (ವಾ. ರಾ. ಕಿ. ४४. ೧೨).

ವಿಂಧ್ಯಾಚಲಗಳ ಗುಹೆಗಳಲ್ಲಿ ಸೀತೆಗಾಗಿ ಹುಡುಕಿ ಆಕೆ ಕಾಣಿಸದೆ ಹೋದಾಗ ನಿರುತ್ಸಾಹಿತರಾಗಿ ಅಗ್ನಿಪ್ರವೇಶ ಮಾಡಲು ಸಿದ್ಧರಾದರು. ಆಗ ಜಟಾಯುವಿನ ಸೋದರ ಸಂಪಾತಿಯು ನೂರು ಯೋಜನೆಗಳ ದೂರದ ಸಾಗರದಲ್ಲಿ ತನ್ನ ನಿವಾಸವನ್ನು ಏರ್ಪಡಿಸಿಕೊಂಡಿದ್ದ ರಾವಣನ ಬಗ್ಗೆ ವಿವರಿಸಿದ. ಇವರೆಲ್ಲಾ ಸಾಗರತೀರವನ್ನು ಸೇರಿದರು. ಹನುಮಂತನು ಸಾಗರವನ್ನು ಹಾರಿ ಸೀತೆಯನ್ನು ಹುಡುಕಿದ. ಈ ಅವಧಿಯಲ್ಲಿ ಎಲ್ಲಾ ವಾನರರು ಒಂದೇ ಕಾಲಿನ ಮೇಲೆ ನಿಂತು ತಪಸ್ಸನ್ನು ಆಚರಿಸುತ್ತಿದ್ದರು (ವಾ. ರಾ.ಕಿ, ೬೭ : ३४).

ಸೀತೆಯನ್ನು ಹುಡುಕಿದ್ದಕ್ಕಾಗಿ ರಾಮ ಹನುಮಂತನನ್ನು ಬಹುವಾಗಿ ಮೆಚ್ಚಿಕೊಂಡ. ಲಂಕೆಯ ಬಗ್ಗೆ ಅನೇಕ ವಿವರಗಳನ್ನು ತಿಳಿದುಕೊಂಡ. ಶಿಲ್ಪಿಯಾದ ನೀಲನನ್ನು ಸೇನಾಧಿಪತಿಯನ್ನಾಗಿ ಮಾಡಿಕೊಂಡು ಸುಮುಹೂರ್ತದಲ್ಲಿ ರಾಮನು ಲಂಕೆಯತ್ತ ಪ್ರಯಾಣಮಾಡಿದ.

ಹನುಮಂತನು ಸೀತೆಯನ್ನು ಭೇಟಿಯಾಗಿ ಬಂದಾಗ ಅವನ ಪರಾಕ್ರಮವನ್ನು ಕಂಡ ರಾವಣನ ಮಂತ್ರಿಮಂಡಲದಲ್ಲಿ ಕೋಲಾಹಲವೇ ಉಂಟಾಯಿತು. ರಾವಣನ ಕಿರಿಯ ತಮ್ಮ ಸೀತೆಯನ್ನು ಕೂಡಲೇ ಹಿಂತಿರುಗಿಸುವುದು ಶ್ರೇಯಸ್ಕರವೆಂದು ನೇರವಾಗಿ ಹೇಳಿದ. ರಾವಣನು ಈ ಸಲಹೆಯನ್ನು ಅಂಗೀಕರಿಸಲಿಲ್ಲ. ಆಗ ವಿಭೀಷಣನು ಅನಲ, ಪನಸ, ಸಂಪಾತಿ ಮತ್ತು ಪ್ರಮತಿ ಎಂಬ ನಾಲ್ವರು ಪ್ರಧಾನರೊಂದಿಗೆ ರಾಮನ ಪಕ್ಷಕ್ಕೆ ಸೇರಲು ಸಿದ್ಧನಾಗಿ ಬಂದ.

ರಾಮನು ವಿಭೀಷಣನನ್ನು ತನ್ನ ಕಡೆಯ ಸೈನ್ಯದಲ್ಲಿ ಸೇರಿಸಿಕೊಂಡಿದ್ದಕ್ಕೆ ಪ್ರಾರಂಭದಲ್ಲಿ ವಾನರರೆಲ್ಲರೂ ಬಹುವಾಗಿ ಕೋಪಕೊಂಡಿದ್ದರು. ಆಗ ರಾಮನು ಇಂತು ಹೇಳಿದ :

**ಬದ್ಧಾಂಜಲಿ ಪುಟಂ ದೀನಂ ಯಾಚತಂ ಶರಣಾಗತಮ್ ।**
**ನ ಹನ್ಯಾದಾ ನೃಶಂಸ್ಯಾರ್ಥಮಪಿ ಶತ್ರುಂ ಪರಂತಪ ॥**

**(ವಾ. ರಾ. ಯುದ್ಧಕಾಂಡ, ೧೭. ३೭)**

(ಶರಣಾಗತನಾದ ಯಾವುದೇ ವ್ಯಕ್ತಿಯ ಎಲ್ಲಾ ತಪ್ಪುಗಳನ್ನೂ ಮನ್ನಿಸಿ ಅವನಿಗೆ ರಕ್ಷಣೆಯ ಅಭಯದಾನ ಮಾಡುವುದನ್ನು ನನ್ನ ಕರ್ತವ್ಯವೆಂದು ನಾನು ಭಾವಿಸಿದ್ದೇನೆ)

ಮುಂದುವರಿದು 'ಈ ಸಮಯದಲ್ಲಿ ರಾವಣನೇ ಬಂದರೂ ಅವನಿಗೂ ಇದೇ ಅಭಯವನ್ನು ಕೊಡುತ್ತೇನೆ ' ಎಂದೂ ಹೇಳಿದ. ವಿಭೀಷಣನು ರಾವಣನ ಪಕ್ಷವನ್ನು ಬಿಟ್ಟು ಬಂದದ್ದು, ರಾಮನು ಕೊಟ್ಟ ಅಭಯದಾನ ಇವೆರಡೂ ಪ್ರಸಂಗಗಳನ್ನು ವೈಷ್ಣವ ಧರ್ಮ ಪರಂಪರೆಯಲ್ಲಿ ಭಗವದ್ಗೀತೆಗೆ ಸಮಾನವಾಗಿ ಬಹು ಮಹತ್ವಪೂರ್ಣ ವಾದ ಹಾಗೂ

ಪವಿತ್ರವಾದ ಪ್ರಸಂಗವೆಂಬುದಾಗಿ ಭಾವಿಸುತ್ತಾರೆ.

ನಂತರ ರಾವಣವಧೆಯನ್ನು ನಡೆಸಿ ವಿಭೀಷಣನನ್ನು ಲಂಕೆಯ ಅರಸನನ್ನಾಗಿ ಪಟ್ಟಾಭಿಷೇಕ ಮಾಡುವುದಾಗಿ ಮಾತುಕೊಟ್ಟ. ಆಗ ವಿಭೀಷಣನು ರಾವಣವಧೆಗೆ ನೆರವಾಗುವುದಾಗಿ ಹೇಳಿದ (ವಾ. ರಾ. ಯುದ್ಧಕಾಂಡ, ೧೭ - ೧೯).

ರಾಮನು ಲಂಕೆಯ ಮೇಲೆ ಯುದ್ಧಸಾರುವ ಮುನ್ನವೇ ರಾವಣನು ತನ್ನ ಶುಕನೆಂಬ ಗುಪ್ತಚರನ ಮೂಲಕ ಸುಗ್ರೀವನನ್ನು ಹಿಂದಕ್ಕೆ ಕರೆಯಿಸಿ ಕೊಳ್ಳಲು ಬಹು ಯತ್ನ ಮಾಡಿದ. ಆದರೆ ಸುಗ್ರೀವನು ಆ ಕರೆಯನ್ನು ಉಪೇಕ್ಷಿಸಿದ.

ಲಂಕೆಯನ್ನು ತಲುಪಬೇಕಾಗಿದ್ದರೆ ಸಾಗರವನ್ನು ದಾಟುವುದು ಅನಿವಾರ್ಯವಾಗಿತ್ತು. ಸಾಗರದಲ್ಲಿ ದಾರಿಯನ್ನು ಪಡೆಯಲು ರಾಮನು ಕುಶಾಸನದ ಮೇಲೆ ಕುಳಿತು ಮೂರು ದಿನಗಳ ಕಾಲ ಸಮುದ್ರನ ಆರಾಧನೆಯನ್ನು ಮಾಡಿದ. ಆದರೆ ಸಮುದ್ರವು ಹಾದಿಯನ್ನು ಕೊಡಲಿಲ್ಲ. ಆಗ ಕೋಪಗೊಂಡು ಸಮುದ್ರನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದ (ವಾ. ರಾ. ಯು, ೨೧). ನಂತರ ಸಾಗರನು ರಾಮನಿಗೆ ಶರಣಾದ.ಅವನೇ ಸಾಗರದ ಮೇಲೆ ವಿಶ್ವಕರ್ಮ ವಂಶಜರಾದ ನಳ ಮತ್ತು ನೀಲರಿಂದ ಸಮುದ್ರದ ಮೇಲೆ ಮರ ಮತ್ತು ಕಲ್ಲುಗಳಿಂದ ಸೇತುವೆಯ ನಿರ್ಮಾಣವನ್ನು ಮಾಡಬಹುದೆಂದು ಸಲಹೆ ನೀಡಿದ.

ನೀಲನು ನಿರ್ಮಿಸಿದ ಸೇತುವೆಯು ನೂರು ಯೋಜನಗಳಷ್ಟಿತ್ತು. ಅದನ್ನು ಅವನು ಐದುದಿನಗಳಲ್ಲಿ ಪೂರ್ಣಗೊಳಿಸಿದ. ಈ ಸೇತುವೆಯ ಮೂಲಕ ಸೈನ್ಯವೆಲ್ಲಾ ಲಂಕೆಯನ್ನು ಸಮೀಪಿಸಿತು (ವಾ. ರಾ.ಯು, ೨೨ : ೪೧ - ೭೭). ಅಲ್ಲಿಯ ಸುವೇಲ ಪರ್ವತದ ಬಳಿ ಇವರು ಬಿಡಾರ ನಿರ್ಮಾಣಮಾಡಿದರು (ವಾ. ರಾ.ಯು, ೨೩ - ೨೪).

ವಾನರ ಸೇನೆ ಸಮುದ್ರವನ್ನು ದಾಟಿದ ನಂತರ ರಾವಣನು ತನ್ನ ಗುಪ್ತಚರ ವಿಭಾಗದ ಶುಕ, ಸಾರಣ ಮತ್ತು ಶಾರ್ದೂಲರೆಂಬುವವರನ್ನು ವಾನರರ ವೇಷದಲ್ಲಿ ಹೋಗಿ ರಾಮಸೇನೆಯಲ್ಲಿ ಸೇರಿಕೊಂಡು ವಾನರ ಸೈನ್ಯ ಬಲವನ್ನು ಲೆಕ್ಕಿಸಲು ಹೇಳಿದ. ಆದರೆ ವಿಭೀಷಣನು ಅವರನ್ನು ಗುರ್ತಿಸಿ ಹಿಡದು ರಾಮನ ಮುಂದೆ ನಿಲ್ಲಿಸಿದ. ಶರಣಾಗತರಾದ ಈ ಗುಪ್ತಚಾರರಿಗೆ ರಾಮನು ಜೀವದಾನ ನೀಡಿದ (ವಾ. ರಾ.ಯು, ೨೫ - ೨೭).

ಯುದ್ಧ ಸಾರುವ ಮುನ್ನ ರಾಮ ತನ್ನ ಸೈನ್ಯವನ್ನು ಸುಸಂಘಟಿತಗೊಳಿಸಿದ. ಅಂಗದನು ಲಂಕೆಯ ದಕ್ಷಿಣ ದ್ವಾರವನ್ನೂ, ಹನುಮಂತನು ಪಶ್ಚಿಮ ದ್ವಾರವನ್ನು, ನೀಲನು ಪೂರ್ವ ದ್ವಾರವನ್ನೂ ಆಕ್ರಮಿಸಿ ಹೋರಾಡಬೇಕೆಂದು ತೀರ್ಮಾನವಾಯಿತು. ಉತ್ತರ ದ್ವಾರದಲ್ಲಿ ಲಕ್ಷ್ಮಣನ ನೆರವಿನಿಂದ ರಾಮನೇ ರಾವಣನನ್ನು ಎದುರಿಸುವಂತೆ ಯೋಜಿಸಲಾಯಿತು (ವಾ. ರಾ.ಯು; ೩೭).

ಯುದ್ಧ ಪ್ರಾರಂಭಿಸುವ ಮುನ್ನ ಸುವೇಲ ಪರ್ವತ ಶಿಖರವನ್ನು ಏರಿ ಲಂಕೆಯನ್ನು ರಾಮ ವೀಕ್ಷಿಸಿದ. ಸುಗ್ರೀವನು ಶಿಖರದ ಮೇಲಿಂದ ಲಂಕೆಯ ಗೋಪುರಕ್ಕೆ ಹಾರಿ ಏಕಾಂಗಿಯಾಗಿ

ರಾವಣನೊಂದಿಗೆ ದ್ವಂದ್ವ ಯುದ್ಧವನ್ನು ನಡೆಸಿ ರಾವಣನನ್ನು ಸೋಲಿಸಿದ (ವಾ. ರಾ.ಯು, ೪೦).

ನಂತರ ವಿಭೀಷಣನ ಸಲಹೆಯ ಪ್ರಕಾರ ರಾಮನು ಅಂಗದನ ಮುಖಾಂತರ ರಾವಣನಿಗೆ ಈ ರೀತಿ ಸುದ್ದಿಯನ್ನು ಕಳುಹಿಸಿದ: 'ಸೀತೆಯನ್ನು ಹಿಂತಿರುಗಿಸದೆ ಇದ್ದರೆ ಎಲ್ಲಾ ರಾಕ್ಷಸರೊಂದಿಗೆ ನಿನ್ನನ್ನೂ ಕೊಲ್ಲುತ್ತೇನೆ '

ಅಂಗದನಿಂದ ಈ ಸುದ್ದಿ ಕೇಳಿದ ರಾವಣನು ಅಂಗದನನ್ನು ಕೊಲ್ಲುವಂತೆ ಅಪ್ಪಣೆಮಾಡಿದ. ಅಂಗದನನ್ನು ನಾಲ್ವರು ರಾಕ್ಷಸರು ಹಿಡಿದರು. ಆದರೆ ಅಂಗದ ಆ ನಾಲ್ವರೊಂದಿಗೆ ಒಂದು ಭವನದ ಮೇಲಕ್ಕೆ ಹಾರಿದ. ನಿಸ್ಸಹಾಯಕರಾದ ಆ ನಾಲ್ಕು ಮಂದಿಯೂ ನೆಲಕ್ಕೆ ಬಿದ್ದರು. ನಂತರ ಅಂಗದ ಅಲ್ಲಿಂದ ಸುರಕ್ಷಿತವಾಗಿ ರಾಮನ ಬಳಿಗೆ ಹಿಂತಿರುಗಿದ. ಯುದ್ಧ ಅನಿವಾರ್ಯವೆಂಬುದು ಖಚಿತವಾಗುತ್ತಲೇ ಸೇನಾಧಿಪತಿ ನೀಲನಿಗೆ ಯುದ್ಧವನ್ನು ಸಾರಬೇಕೆಂದು ರಾಮನು ಅಪ್ಪಣೆಮಾಡಿದ (ವಾ. ರಾ. ಯು, ೪೧ - ೪೨).

ಯುದ್ಧದ ಮೊದಲ ದಿನ ಲಂಕೆಗೆ ಬರುತ್ತಿರುವ ವಾನರ ಸೇನೆಯನ್ನು ತಡೆಯಲು ರಾವಣನು ತನ್ನ ಸೇನೆಯನ್ನು ಕಳುಹಿಸಿದ. ಈ ಯುದ್ಧದಲ್ಲಿ ರಾಮನಿಂದ ಅಗ್ನಿಕೇತು, ರಶ್ಮಿಕೇತು, ಯಜ್ಞಕೇತು ಮತ್ತು ಮಿತ್ರಘ್ನ ಕೊಲ್ಲಲ್ಪಟ್ಟರು. ಪ್ರಜಂಘನು ಸಂಪಾತಿಯನ್ನು, ಸುಗ್ರೀವ ಪ್ರಘಸನನ್ನು, ಲಕ್ಷ್ಮಣನು ವಿರೂಪಾಕ್ಷನನ್ನು, ಮೈಂದನು ವಜ್ರಮುಷ್ಟಿಯನ್ನು, ನೀಲನು ನಿಕುಂಭನನ್ನು, ದ್ವಿವಿದನು ಅಶನಪ್ರಭನನ್ನು, ಸುಷೇಣನು ವಿದ್ಯುನ್ಮಾಲಿನ್‌ನನ್ನು, ಗಜವರನು ತಪನನನ್ನು, ಹನುಮಂತನು ಜಂಬುಮಾಲಿನ್‌ನನ್ನು, ನಳನು ಪ್ರತಪನನನ್ನು ಕೊಂದರು (ವಾ. ರಾ. ಯು, ೪೩).

ಸಂಜೆಗೆ ಮೊದಲ ದಿನದ ಯುದ್ಧವು ಮುಗಿಯಿತು. ಆದರೆ ರಾಕ್ಷಸರು ಯುದ್ಧವನ್ನು ಮತ್ತೆ ಪ್ರಾರಂಭಿಸಿದ್ದರಿಂದ ರಾಮನು ಯಜ್ಞಶತ್ರು, ಮಹಾಪಾರ್ಶ್ವ, ಮಹೋದರ, ಶುಕ, ಸಾರಣ ಮುಂತಾದವರನ್ನು ಸೋಲಿಸಿದ.

ರಾವಣನ ಪುತ್ರ ಇಂದ್ರಜಿತ್ ಅಂಗದನೊಂದಿಗೆ ಯುದ್ಧಮಾಡಿ ಸೋತ. ಆದರೆ ಬ್ರಹ್ಮನ ವರದ ಶಕ್ತಿಯಿಂದ ಅದೃಶ್ಯನಾಗಿ ರಾಮ ಲಕ್ಷ್ಮಣರನ್ನು ನಾಗಮಯ ಶರಗಳಿಂದ ಘಾತಿಸಿದ. ಇದರ ಫಲವಾಗಿ ಇಬ್ಬರೂ ನಿಶ್ಚೇಷ್ಟಿತರಾಗಿ ಕೆಳಕ್ಕೆ ಬಿದ್ದರು. ಇದರಿಂದ ಇಬ್ಬರೂ ಸತ್ತರೆಂದು ಭಾವಿಸಿದ ಇಂದ್ರಜಿತ್ ಅದೇ ರೀತಿಯಾಗಿ ರಾವಣನಿಗೆ ಸುದ್ದಿಯನ್ನೂ ಕಳುಹಿಸಿದ (ವಾ. ರಾ. ಯು, ೪೨ - ೪೩).

ಈ ಸುದ್ದಿ ಕೇಳಿದ ರಾವಣನು ಸೀತೆ ಮತ್ತು ತ್ರಿಜಟಾ ಇವರನ್ನು ಪುಷ್ಪಕವಿಮಾನದಲ್ಲಿ ಕೂರಿಸಿಕೊಂಡು ರಣಭೂಮಿಯಲ್ಲಿ ಮೂರ್ಛಿತರಾಗಿದ್ದ ರಾಮ - ಲಕ್ಷ್ಮಣರನ್ನು ತೋರಿಸಿದ. ಸೀತೆಯು ಅವರು ಸತ್ತಿದ್ದಾರೆಂದು ವಿಲಪಿಸತೊಡಗಿದಾಗ ತ್ರಿಜಟೆಯು ವಾಸ್ತವಸ್ಥಿತಿಯನ್ನು ತಿಳಿಸಿ ಸಂತೈಸಿದಳು (ಅದೇ, ೪೭ : ೪೮).

ರಾಮನಿಗೆ ಎಚ್ಚರವಾಯಿತು. ಲಕ್ಷ್ಮಣ ಮೂರ್ಛಿತನಾಗಿರುವುದನ್ನು ಕಂಡು ವಿಲಪಿಸತೊಡಗಿದ (ಅದೇ, ೪೯). ಸುಷೇಣನು ರಾಮನಿಗೆ ಹೇಳಿ ಹನುಮಂತನು ಮೂಲಿಕೆಗಳನ್ನು ತರಲು ದ್ರೋಣಾಚಲಕ್ಕೆ ಕಳುಹಿಸಿದ. ಆದರೆ ಅದೇ ಸಮಯಕ್ಕೆ ಗರುಡನು ಅಲ್ಲಿಗೆ ಬಂದ. ಅವನನ್ನು ನೋಡುತ್ತಲೇ ನಾಗಪಾಶದ ಎಲ್ಲಾ ನಾಗಗಳು ಓಡಿದವು. ಗರುಡನ ಸ್ಪರ್ಶದಿಂದಲೇ ರಾಮ ಲಕ್ಷ್ಮಣರು ಸ್ವಸ್ಥರಾದರು.

ಎರಡನೆಯ ದಿನದಂದು ಹನುಮಂತನು ಧೂಮ್ರಾಕ್ಷನನ್ನು ಕೊಂದ. ಮೂರನೆಯ ದಿನ ಅಂಗದನು ವಜ್ರದಂಷ್ಟ್ರ ಮುಂತಾದವರನ್ನು ಕೊಂದ. ನಾಲ್ಕನೆಯ ದಿನ ಹನುಮಂತನು ಅಕಂಪನ ಮುಂತಾದವರನ್ನು ಕೊಂದ. ಐದನೆಯ ದಿನ ರಾವಣನ ಪ್ರಮುಖಸೇನಾಧಿಪಗಳಾದ ಪ್ರಹಸ್ತ, ಅಗ್ನಿಪುತ್ರ ಮತ್ತು ನರಾಂತಕ, ಮಹಾನಂದ, ಕುಂಭ, ಹನು ಮುಂತಾದವರು ನಳನಿಂದ ಕೊಲ್ಲಲ್ಪಟ್ಟರು.

ಆರನೆಯ ದಿನ ರಾವಣನೇ ತನ್ನ ಮಗ ಇಂದ್ರಜಿತ್ ಮತ್ತು ಅತಿಕಾಯರೊಂದಿಗೆ ಯುದ್ಧಭೂಮಿಯನ್ನು ಪ್ರವೇಶಿಸಿದ. ಸುಗ್ರೀವ, ಗವಾಕ್ಷರನ್ನು ಸೋಲಿಸಿದ. ನೀಲನನ್ನು ಅಗ್ನಿ ಅಸ್ತ್ರದಿಂದ ಸೋಲಿಸಿದ. ನಂತರ ಲಕ್ಷ್ಮಣನೊಂದಿಗೆ ರಾವಣನು ಯುದ್ಧಮಾಡಿ ಬ್ರಹ್ಮಾಸ್ತ್ರದ ಪ್ರಯೋಗದೊಂದಿಗೆ ಲಕ್ಷ್ಮಣನನ್ನು ಮೂರ್ಛಿತನನ್ನಾಗಿಮಾಡಿದ. ಅವನನ್ನು ರಾವಣ ಎತ್ತಿಕೊಂಡು ಹೋಗಲು ಉದ್ಯುಕ್ತನಾಗುತ್ತಿರುವಂತೆಯೇ ಹನುಮಂತನು ತಡೆದು ಲಕ್ಷ್ಮಣನನ್ನು ರಾಮನ ಬಳಿಗೆ ತೆಗೆದುಕೊಂಡು ಬಂದ. ನಂತರ ರಾಮನು ಹನುಮಂತನ ಭುಜವನ್ನೇರಿ ಕುಳಿತು ರಾವಣನೊಂದಿಗೆ ಯುದ್ಧಮಾಡಿದ. ಈ ಸಂದರ್ಭದಲ್ಲಿ ರಾವಣನ ಮುಕುಟವು ರಾಮನ ಬಾಣಕ್ಕೆ ತಾಕಿ ಕೆಳಕ್ಕ ಉರುಳಿಬಿತ್ತು. ನಂತರ ರಾವಣನು ರಣರಂಗದಿಂದ ಪಲಾಯನ ಮಾಡಬೇಕಾಯಿತು (ವಾ. ರಾ. ಯು, ೫೯).

ಅದೇ ದಿನ ಸಂಜೆಗೆ ರಾಮನು ಕುಂಭಕರ್ಣನ ಬಾಹುಗಳನ್ನು ಮೊದಲು ಕತ್ತರಿಸಿದ. ನಂತರ ಕಾಲುಗಳನ್ನು ಕತ್ತರಿಸಿದ. ಕೊನೆಗೆ ಕೊರಳನ್ನು ಕತ್ತರಿಸಿ ಕೊಂದ.

ಯುದ್ಧದ ಏಳನೆಯ ದಿನದಂದು ವಾನರ ಸೈನ್ಯವು ದೇವಾಂತಕ, ನರಾಂತಕ, ತ್ರಿಶಿರಸ್ ಮತ್ತು ಅತಿಕಾಯ ಎಂಬ ನಾಲ್ವರು ರಾವಣನ ಪುತ್ರರನ್ನು ಕೊಂದು ಹಾಕಿತು. ಮಹೋದರ, ಮಹಾಪಾರ್ಶ್ವ ಎಂಬ ಇಬ್ಬರು ರಾವಣನ ಸೋದರರೂ ಕೊಲ್ಲಲ್ಪಟ್ಟರು.

ಯುದ್ಧದ ಎಂಟನೆಯ ದಿನದಲ್ಲಿ ರಾವಣನ ಪುತ್ರರಾದ ಇಂದ್ರಜಿತ್ ಅದೃಶ್ಯ ರೂಪದಲ್ಲಿ ರಣರಂಗಕ್ಕೆ ಬಂದು ವಾನರ ಸೇನೆಯ ಮೇಲೆ ಆಕ್ರಮಣ ನಡೆಸಿದ. ಈ ಯುದ್ಧದಲ್ಲಿ ಸಾವಿರಾರು ಮಂದಿ ವಾನರರು ಸತ್ತರು. ಇಂದ್ರಜಿತ್ ಬಿಟ್ಟ ಬ್ರಹ್ಮಾಸ್ತ್ರದಿಂದ ರಾಮ ಲಕ್ಷ್ಮಣರು ಮೂರ್ಛಿತರಾದರು.

ರಾತ್ರಿಯಲ್ಲಿ ವಿಭೀಷಣ ಮತ್ತು ಹನುಮಂತ ಪಂಜನ್ನು ಹಿಡಿದು ಯುದ್ಧ ಭೂಮಿಯಲ್ಲಿ ಬಂದು ಸತ್ತವರು ಯಾರು ಬದುಕಿರುವವರು ಯಾರು ಎಂಬುದನ್ನು ಪರಿಶೀಲಿಸತೊಡಗಿದರು.

ಹನುಮಂತನಿಗೆ ಜಾಂಬುವಂತ ಸಿಕ್ಕಿದ. ಅವನು 'ಕೂಡಲೇ ನೀನು ಹಿಮಾಲಯಕ್ಕೆ ಹೋಗಿ ಅಲ್ಲಿಂದ ಸಂಜೀವಿನೀ, ವಿಶಲ್ಯಕರಿಣೀ, ಸುವರ್ಣಕರಿಣೀ ಮತ್ತು ಸಂಧಾನಿ ಎಂಬ ನಾಲ್ಕು ಮೂಲಿಕೆಗಳನ್ನು ತಾ' ಎಂದು ಹೇಳಿದ. ಹನುಮಂತನು ಮೂಲಿಕೆಗಳನ್ನು ತರುತ್ತಲೇ ರಾಮ ಲಕ್ಷ್ಮಣರು ಮೂರ್ಛೆಯಿಂದ ಎಚ್ಚರಗೊಳ್ಳುವಂತೆ ಮಾಡಿದ. ಪೂರ್ಣ ವಾನರ ಸೇನೆಯು ಬದುಕುವಂತೆ ಮಾಡಿದ.

ಯುದ್ಧದ ಒಂಬತ್ತನೆಯ ದಿನ ವಾನರ ಸೇನೆಯು ಲಂಕಾನಗರವನ್ನು ಪ್ರವೇಶಿಸಿತು. ಕುಂಭ, ನಿಕುಂಭ, ಯೂಪಾಕ್ಷ ರಾಕ್ಷಸರನ್ನು ಕೊಂದು ಲಂಕೆಗೆ ಬೆಂಕಿ ಇರಿಸಿತು. ಅದೇ ದಿನವೇ ರಾಮನಿಂದ ಮಕರಾಕ್ಷ ಎಂಬ ರಾಕ್ಷಸ ಕೊಲ್ಲಲ್ಪಟ್ಟ.

ನಂತರ ಇಂದ್ರಜಿತ್ ತನ್ನ ಮಾಯಾವಿ ಯುದ್ಧದ ಕಾರಣದಿಂದಾಗಿ ವಾನರಸೇನೆಯಲ್ಲಿ ಹಾಹಾಕಾರ ಮೂಡುವಂತೆಮಾಡಿದ. ಅವರ ಮುಂದೆ ಸೀತೆಯನ್ನು ಕೊಂದ ದೃಶ್ಯವೊಂದನ್ನು ತನ್ನ ಮಾಯಾಶಕ್ತಿಯ ಬಲದಿಂದ ತೋರಿಸಿದ. ನಂತರ ನಿಕುಂಭಿಲಾ ಎಂಬ ಸ್ಥಳದಲ್ಲಿ ವಾನರ ಸೇನಾ ಸಂಹಾರಕ್ಕಾಗಿ ಆಸುರೀ ಯಜ್ಞವನ್ನು ಪ್ರಾರಂಭಿಸಿದ. ವಿಭಿಷಣನ ಸಲಹೆಯಪ್ರಕಾರ ಲಕ್ಷ್ಮಣನು ಅಲ್ಲಿಗೆ ಹೋಗಿ ಇಂದ್ರಾಸ್ತ್ರವನ್ನು ಪ್ರಯೋಗಿಸಿ ಅವನನ್ನು ಕೊಂದ. ಈ ಯುದ್ಧದಲ್ಲಿ ಮೂರ್ಛಿತರಾಗಿದ್ದ, ಸತ್ತುಹೋಗಿದ್ದ ವಾನರರನ್ನು ಸುಷೇಣ ಬದುಕಿಸಿದ.

ಇಂದ್ರಜಿತ್‌ನ ಮರಣವಾರ್ತೆ ಕೇಳಿದ ರಾವಣನು ಬಹು ಕೃದ್ಧನಾದ. ಸೀತೆಯನ್ನು ಕೊಲ್ಲಲು ತನ್ನ ಖಡ್ಗವನ್ನು ತೆಗೆದ. ಬಳಿಯಲ್ಲಿದ್ದ ಸುಪಾರ್ಶ್ವ ಎಂಬ ಅಮಾತ್ಯನು ಈ ಪಾಪಕರ್ಮವನ್ನು ಮಾಡದಂತೆ ತಡೆದ. ಚೈತ್ರ ಕೃಷ್ಣ ಚತುರ್ದಶಿಯಂದು ಯುದ್ಧದ ಸಿದ್ಧತೆ ಮಾಡಿಕೊಂಡು ಅಮಾವಸ್ಯೆಯಂದು ರಾಮನೊಂದಿಗೆ ನಿರ್ಣಾಯಕ ಯುದ್ಧ ನಡೆಸಲು ಸಲಹೆ ನೀಡಿದ (ವಾ. ರಾ. ಯು, ೯೨ - ೯೩ ).

ಚೈತ್ರ ಅಮಾವಸ್ಯೆಯಂದು ರಾವಣನು ರಾಕ್ಷಸರ ವಿಜಯಕ್ಕಾಗಿ ಯಜ್ಞವನ್ನು ಪ್ರಾರಂಭಿಸಿದ. ಆದರೆ ವಾನರರು ಆ ಯಜ್ಞಕ್ಕೆ ತಡೆಯೊಡ್ಡಿದರು. ಇದರಿಂದ ಕೋಪದಿಂದ ಕಿಡಿಕಿಡಿಯಾಗಿ ರಾವಣನು ತನ್ನ ಸೇನಾಧಿಪತಿಗಳಾದ ಮಹಾಪಾರ್ಶ್ವ, ಮಹೋದರ ಮತ್ತು ವಿರೂಪಾಕ್ಷ ಈ ಮುವ್ವರೊಂದಿಗೆ ಯುದ್ಧಭೂಮಿಯನ್ನು ಪ್ರವೇಶಿಸಿದ. ರಾಮ ಅವನೊಂದಿಗೆ ಯುದ್ಧಮಾಡಿದ. ರಾವಣನು ರಾಮನ ನೆರವಿಗೆ ಬಂದ ವಿಭೀಷಣ ಮತ್ತು ಲಕ್ಷ್ಮಣರನ್ನು ಮೂರ್ಛಿತಗೊಳಿಸಿದ. ಸುಷೇಣ ಹಿಮಾಲಯದಿಂದ ತಂದಿದ್ದ ಮೂಲಿಕೆಗಳಿಂದ ಇಬ್ಬರನ್ನೂ ಸ್ವಸ್ತಗೊಳಿಸಿದ (ವಾ. ರಾ. ಯುದ್ಧಕಾಂಡ ೧೦೨).

ನಂತರದಲ್ಲಿ ಇಂದ್ರನು ಕೊಟ್ಟಿದ್ದ ದಿವ್ಯರಥದಲ್ಲಿ ರಾಮನು ಕುಳಿತ. ಅಗಸ್ತ್ಯರು ಕೊಟ್ಟಿದ್ದ ಬ್ರಹ್ಮಾಸ್ತ್ರವು ರಾವಣನ ಎದೆಯನ್ನು ಚುಚ್ಚುವಂತೆ ಪ್ರಯೋಗಿಸಿ ಬಡಿದು ಕೊಂದ (ವಾ. ರಾ. ಯುದ್ಧಪರ್ವ, ೧೧೦, ಮಹಾಭಾರತ, ವನಪರ್ವ, ೨೭೪ : ೨೭). ವಾಲ್ಮೀಕಿ ರಾಮಾಯಣದ ದಾಕ್ಷಿಣಾತ್ಯ ಪಾಠದ ಪ್ರಕಾರ ಅಗಸ್ತ್ಯಋಷಿಯು ಆದಿತ್ಯ ಹೃದಯವನ್ನು

ಉಪದೇಶಿಸಿದ್ದ. ಅದರ ಪಠಣದಿಂದ ರಾವಣನನ್ನು ಕೊಲ್ಲುವುದರಲ್ಲಿ ರಾಮನು ಯಶಸ್ವಿಯಾದ.

ರಾಮ - ರಾವಣರ ಈ ಅಂತಿಮಯುದ್ಧಲ್ಲಿ ರಾವಣನ ತಲೆ ಕತ್ತರಿಸಿದರೆ ಮತ್ತೆ ಮೂಡುತ್ತಿದ್ದುದರ ಉಲ್ಲೇಖ ವಾಲ್ಮೀಕಿ ರಾಮಾಯಣದಲ್ಲಿದೆ. ಇದರ ಅನುಸಾರ ರಾಮನು ರಾವಣನ ಒಂದು ನೂರು ತಲೆಗಳನ್ನು ಕತ್ತರಿಸಿದ (**ಏಕಮೇವ ಶತಂ ಛಿನ್ನಂ ಶಿರಸಾ ತುಲ್ಯ ವರ್ಚಸಃ!** ವಾ. ರಾ. ಯುದ್ಧಕಾಂಡ ೧೦೭ : ೫೭)

ಆಧ್ಯಾತ್ಮ ರಾಮಾಯಣದ ಅನುಸಾರ ರಾವಣನ ನಾಭಿಪ್ರದೇಶದಲ್ಲಿ ಅಮೃತ ಕುಂಭ ಇತ್ತು. ವಿಭೀಷಣನ ಸಲಹೆಯ ಪ್ರಕಾರ ರಾಮನು ಆಗ್ನೇಯ ಅಸ್ತ್ರವನ್ನು ಬಿಟ್ಟು ಅಮೃತವು ಹೊರಚೆಲ್ಲುವಂತೆ ಮಾಡಿದ. ನಂತರ ರಾವಣನನ್ನು ವಧಿಸಿದ (ಆಧ್ಯಾತ ರಾಮಾಯಣ, ಯುದ್ಧಕಾಂಡ ೧೧. ೫೩ ; ಆನಂದ ರಾಮಾಯಣ ೧ : ೧೧ : ೨೭೮)

ಮಹಾಭಾರತದ (ವನಪರ್ವ ೨೭೪.೮ ; ೩೧) ಪ್ರಕಾರ ರಾವಣನು ತನ್ನ ಅಂತಿಮ ಯುದ್ಧದ ಸಮಯದಲ್ಲಿ ರಾಮ ಮತ್ತು ಲಕ್ಷ್ಮಣರಂತೆಯೇ ಕಾಣುತ್ತಿದ್ದ ಅನೇಕ ಮಾಯಾವಿ ಯೋಧರನ್ನು ನಿರ್ಮಿಸಿದ್ದ. ಆದರೆ ರಾಮನು ತನ್ನ ಬ್ರಹ್ಮಾಸ್ತ್ರದಿಂದ ಅವರೆಲ್ಲರನ್ನೂ ರಾವಣನೊಂದಿಗೆ ಸುಟ್ಟು ಭಸ್ಮಮಾಡಿದ. ಮಾಯಾವಿಗಳಾದ ಕಾರಣ ಅವರ ಭಸ್ಮವೂ ಉಳಿದಿರಲಿಲ್ಲ.

ರಾವಣನ ವಧೆಯ ನಂತರ ಯುದ್ಧವು ಕೊನೆಗೊಂಡಿತು. ರಾಮನ ಸಲಹೆಯ ಮೇರೆಗೆ ವಿಭೀಷಣನು ರಾವಣನಿಗೆ ಅಗ್ನಿಸಂಸ್ಕಾರವನ್ನು ಮಾಡಿದ (ವಾ. ರಾ. ಯು. ೧೧೧). ಮಂಡೋದರಿ ಮುಂತಾದವರಿಗೆ ಸಾಂತ್ವನ ಹೇಳಿ ಲಂಕೆಗೆ ಕಳುಹಿಸಿಕೊಡಲಾಯಿತು. ವಿಭೀಷನನ್ನು ಲಂಕಾರಾಜ್ಯದ ರಾಜನನ್ನಾಗಿ ಪಟ್ಟಾಭಿಷೇಕ ಮಾಡಿದರು. ನಂತರ ಲಂಕೆಗೆ ನಿರ್ಮಿಸಿದ್ದ ಸೇತುವೆಯನ್ನು ರಾಮನೇ ಮುರಿದು ಆ ರಾಜ್ಯಕ್ಕೆ ಪರಕೀಯರ ದುರಾಕ್ರಮಣ ನಡೆಯದಂತೆ ಮಾಡಿದ (ಪದ್ಮಪುರಾಣ, ಸೃಷ್ಟಿಖಂಡ, ೩೮)

ವಿಭೀಷಣನು ಸೀತೆಯನ್ನು ಮೇನೆಯಲ್ಲಿ ಕುಳ್ಳರಿಸಿಕೊಂಡು ರಾಮನ ಬಳಿಗೆ ಕರೆತಂದ. ಆಗ ರಾಮನು ಹೇಳಿದ 'ರಾವಣನೊಂದಿಗೆ ಯುದ್ಧಮಾಡಿ ಗೆದ್ದು ಇಂದು ನಿನ್ನನ್ನು ಮುಕ್ತಳನ್ನಾಗಿ ಮಾಡಿದ್ದೇನೆ. ಈ ಯುದ್ಧವನ್ನು ನಿನ್ನ ಮೇಲಣ ಆಸಕ್ತಿಯಿಂದ ಅಲ್ಲ ಕ್ಷತ್ರಿಯನಾದ ಕಾರಣ ನನ್ನ ಕರ್ತವ್ಯವನ್ನು ನಿರ್ವಹಿಸಲು ಮಾಡಿದ್ದೇನೆ. ಆದರೂ ನಿನ್ನನ್ನು ಇಷ್ಟು ಕಾಲದ ನಂತರ ಈಗ ನೋಡುತ್ತಿರುವುದರಿಂದ ನನಗೆ ಸಂತೋಷವಾಗುತ್ತಿದೆ. ಪರಪುರುಷನ ಮನೆಯಲ್ಲಿದ್ದ ನಿನ್ನನ್ನು ನಾನು ಸ್ವೀಕರಿಸುವುದಂತು ಅಸಂಭವ '.

ರಾಮನ ಈ ಮಾತು ಕೇಳಿದ ಸೀತೆಯು ತನ್ನ ಪಾತಿವ್ರತ್ಯದ ಮೇಲೆಯೇ ಆಣೆಯಿಟ್ಟು, ಲಕ್ಷ್ಮಣನಿಂದ ಚಿತೆಯನ್ನು ಸಿದ್ಧಗೊಳಿಕೊಂಡು ಅಗ್ನಿಪರೀಕ್ಷೆಗಾಗಿ ಸಿದ್ಧಳಾದಳು (ವಾ. ರಾ. ಯು, ೧೧೬). ಅಷ್ಟರಲ್ಲಿ ಅನೇಕ ದೇವತೆಗಳ ಸಮ್ಮುಖದಲ್ಲಿ ಸೀತೆಯ ಪಾತಿವ್ರತ್ಯದ ಬಗ್ಗೆ

ಅಗ್ನಿದೇವನೇ ಸಾಕ್ಷಿ ನುಡಿದು ಆಕೆಯನ್ನು ಸ್ವೀಕರಿಸುವಂತೆ ರಾಮನನ್ನು ಒತ್ತಾಯಿಸಿದ. ಆಗ ರಾಮನು ಈ ಅಗ್ನಿಪರೀಕ್ಷೆಯ ಹಿನ್ನೆಲೆಯನ್ನು ವಿವರಿಸುತ್ತಾ 'ನನಗೆ ಸೀತೆಯ ಮೇಲೆ ಸಂದೇಹವಿಲ್ಲ ಇದಕ್ಕೆ ಮೊದಲು ಇರಲೂ ಇಲ್ಲ. ಇಷ್ಟೆಲ್ಲಾ ನಾನು ಹೇಳಿದ್ದು ಕೇವಲ ಆಕೆಯ ಚಾರಿತ್ರ್ಯವನ್ನು ಬೇರೆಯಾರಾದರೂ ಸರಿಯೇ ಸಂಶಯದಿಂದ ಕಾಣದಿರಲಿ ಎಂಬ ಕಾರಣಕ್ಕಾಗಿಯೇ' ಎಂದು ಹೇಳಿದ (ವಾ. ರಾ. ಯು. ೧೧೮).

ಹನ್ನೆರಡೂವರೆ ವರ್ಷಗಳ ಕಾಲ ಚಿತ್ರಕೂಟದಲ್ಲಿ ತಪಸ್ವಿಯಂತೆ ಜೀವನವನ್ನು ಕಳೆದ ರಾಮ ಉಳಿದ ಒಂದೂವರೆ ವರ್ಷವನ್ನು ರಾಕ್ಷಸರೊಂದಿಗೆ ಯುದ್ಧಮಾಡುವುದರಲ್ಲಿ ಕಳೆದ. ಇದರಿಂದ ರಾವಣನು ಸ್ಥಾಪಿಸಿದ್ದ ಲಂಕಾ ಸಾಮ್ರಾಜ್ಯ ನಷ್ಟವಾಯಿತು. ದಕ್ಷಿಣ ಭಾರತವೆಲ್ಲಾ ರಾಕ್ಷಸರ ಭಯದಿಂದ ಮುಕ್ತಗೊಂಡಿತು. ದಕ್ಷಿಣದಲ್ಲಿ ವಾನರ ಸಾಮ್ರಾಜ್ಯವು ಸ್ಥಾಪಿತವಾಯಿತು. ಹೀಗೆ ರಾಮನ ವನವಾಸ ಕೇವಲ ವನವಾಸವಾಗಿರದೆ ದಕ್ಷಿಣ ದೇಶದ ದಿಗ್ವಿಜಯವಾಗಿ ಪರಿಣಮಿಸಿತು.

ಯುದ್ಧದ ತರುವಾಯ ರಾಮನು ಸೀತೆ, ಲಕ್ಷ್ಮಣರೊಂದಿಗೆ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಹೊರಟ. ಆಗ ಅಲ್ಲಿದ್ದ ವಾನರರೆಲ್ಲಾ ಅಯೋಧ್ಯೆಯಲ್ಲಿ ರಾಮನ ಪಟ್ಟಾಭಿಷೇಕವನ್ನು ನೋಡಬೇಕೆಂದು ಆಶಿಸಿದರು. ಆದ್ದರಿಂದ ಅವರೆಲ್ಲರನ್ನೂ ಕರೆದುಕೊಂಡು ಅಯೋಧ್ಯೆಗೆ ಬಂದರು.

ಹದಿನಾಲ್ಕು ವರ್ಷಗಳಲ್ಲಿ ಇನ್ನೂ ಒಂದು ದಿನ ಉಳಿದಿತ್ತು. ಆದ್ದರಿಂದ ಅವರು ಭಾರದ್ವಾಜ ಋಷಿಯ ಆಶ್ರಮದಲ್ಲಿ ತಂಗಿದ್ದು ಹನುಮಂತನ ಮುಖಾಂತರ ತಾವು ಬರುತ್ತಿರುವುದರ ಸಂದೇಶವನ್ನು ಕಳುಹಿಸಿಕೊಟ್ಟರು. ಮರುದಿನ ನಂದಿಗ್ರಾಮದಲ್ಲಿ ಭರತನ ಭೇಟಿಯಾಯಿತು. ನಂತರ ಅಯೋಧ್ಯೆಗೆ ಹೋಗಿ ಅಲ್ಲಿ ತಾಯಂದಿರನ್ನು ವಸಿಷ್ಠ ಮುಂತಾದ ಗುರುಜನರನ್ನು ಇತರರನ್ನು ದರ್ಶಿಸಿದರು.

ವೈಶಾಖ ಶುಕ್ಲ ದಶಮಿಯಂದು ರಾಮ ಮತ್ತು ಭರತನು ಮಂಗಳಸ್ನಾನವನ್ನು ಮಾಡಿದ ನಂತರ ರಾಮ ಪಟ್ಟಾಭಿಷೇಕವನ್ನು ಭರತನಿಗೆ ಯುವ ರಾಜ್ಯಾಭಿಷೇಕವನ್ನು ವಸಿಷ್ಠರೇ ನೆರವೇರಿಸಿದರು. ರಾಮನು ಲಕ್ಷ್ಮಣನನ್ನು ಯುವರಾಜನನ್ನಾಗಿ ಮಾಡಬೇಕೆಂದು ಬಯಸಿದರೂ ಲಕ್ಷ್ಮಣನು ನಿರಾಕರಿಸಿದ್ದರಿಂದ ಭರತನನ್ನು ಯುವರಾಜನನ್ನಾಗಿ ಮಾಡಬೇಕಾಯಿತು. ನಂತರ ರಾಮನು ಬಹುಕುಶಲತೆಯಿಂದ ರಾಜ್ಯಭಾರವನ್ನು ನಡೆಸಿದ. ಅದರ ಫಲವಾಗಿ ಇಂದಿಗೂ ರಾಮರಾಜ್ಯವನ್ನು ಆದರ್ಶರಾಜ್ಯವೆಂದು ಜನರು ಹೇಳುತ್ತಾರೆ (ವಾ. ರಾ. ಯು, ೧೨೭).

ರಾವಣವಧೆಯೊಂದಿಗೆ ರಾಮನ ದೈವಾವತಾರವು ಸಮಾಪ್ತಗೊಂಡಿತೆಂದು ಅನೇಕರು ಭಾವಿಸುತ್ತಾರೆ. ಆದ್ದರಿಂದಲೇ ವಾಲ್ಮೀಕಿ ಚಿತ್ರಿಸಿರುವ ಈ ರಾಮನಿಗೂ ಉತ್ತರಕಾಂಡದಲ್ಲಿ ಚಿತ್ರಿತವಾಗಿರುವ ರಾಮನಿಗೂ ಬಹಳವಾದ ಅಂತರವನ್ನು ನಾವು ಕಾಣುತ್ತೇವೆ. ಸಾಧಾರಣವಾಗಿ ನಂತರದ ಅನೇಕ ರಾಮಾಯಣಗಳೂ ಕೂಡ ರಾವಣನ ಪರಾಜಯ, ಸೀತೆಯ ಪುನಃ ಪ್ರಾಪ್ತಿಯೊಂದಿಗೇ ಮುಗಿಯುತ್ತವೆ. ಆದ್ದರಿಂದ ಉತ್ತರ ರಾಮಾಯಣವು ವಾಲ್ಮೀಕಿಯ ನಂತರದ ಕವಿಗಳಿಂದ ಸೇರ್ಪಡೆಯಾಗಿರುವ ಭಾಗವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಉತ್ತರಕಾಂಡದ ಕತೆಯು ಇಂತಿದೆ :

ಕೆಲವು ಕಾಲದ ನಂತರ ಸೀತೆಯು ಗರ್ಭವತಿಯಾದಳು. ವನಪ್ರದೇಶದಲ್ಲಿ ಸುತ್ತಿಬರಬೇಕೆಂದು ಬಯಸಿದಳು. ಮರುದಿನ ತಪೋವನಕ್ಕೆ ಕಳುಹಿಸುವ ವ್ಯವಸ್ಥೆಮಾಡುವುದಾಗಿ ರಾಮನೂ ಹೇಳಿದ. ರಾಜ್ಯದ ವಿಚಾರದಲ್ಲಿ ಜನಾಭಿಪ್ರಾಯವನ್ನು ವಿಚಾರಿಸುತ್ತಾ ತನ್ನ ಸಚಿವರೊಂದಿಗೆ ಕುಳಿತಿದ್ದ.ಆಗ ರಾಮನು ಭದ್ರಎಂಬ ಮಿತ್ರನನ್ನು 'ನನ್ನ ಬಗ್ಗೆ, ಸೀತೆ ಮತ್ತು ಭರತನ ಬಗ್ಗೆ ಜನ ಏನು ಹೇಳುತ್ತಿದ್ದಾರೆ?' ಎಂದು ಕೇಳಿದ. ಸೀತೆಯ ಬಗ್ಗೆ ಇರುವ ಲೋಕಾಪವಾದ, ಅದರಿಂದ ಆಗಿರುವ ಕೆಟ್ಟ ಪ್ರಭಾವವನ್ನು ವಿವರಿಸಿ ಇಂತು ಹೇಳಿದ.

**ಅಸ್ಮಾಕಮಪಿ ದಾರೇಷು ಸಹನೀಯಂ ಭವಿಷ್ಯತಿ**

**ಯಥಾ ಹಿ ಕುರುತೇ ರಾಜಾ ಪ್ರಜಾಸ್ತಮನುವರ್ತತೇ ॥**

(ವಾ. ರಾ. ಉತ್ತರಕಾಂಡ, ೪೩ : ೧೯) 1

(ರಾಮನಿಂದ ಸೀತೆಯು ಸ್ವೀಕೃತವಾದ ಕಾರಣದಿಂದಾಗಿ ನಾವೂ ಕೂಡ ಇದೇ ಆಚರಣೆಯನ್ನು ಸಹಿಸುವುದು ಅನಿವಾರ್ಯವಾಗಿದೆ. ಏಕೆಂದರೆ ರಾಜನು ವರ್ತಿಸುವಂತೆಯೇ ಪ್ರಜೆಗಳು ವರ್ತಿಸಬೇಕಾಗಿರುತ್ತದೆ.)

ಲೋಕಾಪವಾದದ ಈ ಮಾತು ಕೇಳಿದ ರಾಮ ಬಹುವ್ಯಾಕುಲನಾದ. ಮರುದಿನ ಲಕ್ಷ್ಮಣನನ್ನು ಕರೆದು ಸೀತೆಯನ್ನು ಗಂಗಾನದಿಯ ಇನ್ನೊಂದು ದಂಡೆಯಲ್ಲಿ ಬಿಟ್ಟು ಬರಲು ಹೇಳಿದ. ಲಕ್ಷ್ಮಣನು ತಪೋವನವನ್ನು ತೋರಿಸುವ ನೆಪದಲ್ಲಿ ಸೀತೆಯನ್ನು ಕರೆದುಕೊಂಡು ಹೋದ. ವಾಲ್ಮೀಕಿ ಆಶ್ರಮದ ಬಳಿ ಸೀತೆಯನ್ನು ಬಿಟ್ಟು ಬಂದ. ಆಗ ಲೋಕಾಪವಾದದ ಕಾರಣದಿಂದಾಗಿ ಸೀತೆಯನ್ನು ರಾಮನು ಬಿಡುತ್ತಿದ್ದಾನೆ ಎಂಬ ವಿಷಯವನ್ನು ಲಕ್ಷ್ಮಣನು ಸೀತೆಯಲ್ಲಿ ಬಹು ದುಃಖದಿಂದ ಅರಿಕೆ ಮಾಡಿಕೊಂಡ (ವಾ. ರಾ. ಯು. ೬೯).

ಕಾಳಿದಾಸನು ರಘುವಂಶದಲ್ಲಿ ಭದ್ರನನ್ನು ರಾಮನ ಗುಪ್ತಚರ ಎಂದು ಹೇಳಿದ್ದಾನೆ (ರಘುವಂಶ, ೧೪). ಕಥಾಸರಿತ್ಸಾಗರ ಮತ್ತು ಭಾಗವತದಲ್ಲಿ ಒಬ್ಬ ಅಗಸನ ಉದಾಹರಣೆ ಕೊಟ್ಟು ಈ ಲೋಕಾಪವಾದವನ್ನು ಹೇಳಲಾಗಿದೆ (ಕಥಾ ಸರಿತ್ಸಾಗರ, ೯ : ೧ : ೬೬; ಭಾಗವತ, ೯ : ೧೧ : ೯)

ವಾಲ್ಮೀಕಿ ಆಶ್ರಮದಲ್ಲಿ ಸೀತೆಯು ಇಬ್ಬರು ಮಕ್ಕಳಿಗೆ ಜನ್ಮನೀಡಿದಳು. ಅವರಿಗೆ ವಾಲ್ಮೀಕಿಯು ಕುಶ ಮತ್ತು ಲವ ಎಂಬ ಹೆಸರನ್ನು ಕೊಟ್ಟ (ವಾ. ರಾ. ಉ, ೬೬). ನಂತರ ಇವರಿಬ್ಬರೂ ವಾಲ್ಮೀಕಿಯ ಶಿಷ್ಯರಾದರು. ಅವರಿಗೆ ರಾಮಾಯಣವನ್ನೆಲ್ಲಾ ಪಾಠ ಮಾಡಿಸಿದ. ಇಬ್ಬರೂ ಸಭೆ ಸಮಾರಂಭಗಳಲ್ಲಿ ರಾಮಾಯಣವನ್ನು ಹಾಡುತ್ತಿದ್ದರು. ಅಯೋಧ್ಯೆಯ ರಾಜಮಾರ್ಗದಲ್ಲಿ ರಾಮಾಯಣವನ್ನು ಹಾಡುತ್ತಿರುವುದನ್ನು ನೋಡಿದ ರಾಮ ಇವರನ್ನು ಅರಮನೆಗೆ ಕರೆಯಿಸಿ ಎಲ್ಲರೊಂದಿಗೂ ಕುಳಿತು ರಾಮಾಯಣವನ್ನು ಕೇಳಿದ (ವಾ. ರಾ. ಬಾಲಕಾಂಡ, ೪).

ಅಗ್ನಿದೇವನೇ ಸಾಕ್ಷಿ ನುಡಿದು ಆಕೆಯನ್ನು ಸ್ವೀಕರಿಸುವಂತೆ ರಾಮನನ್ನು ಒತ್ತಾಯಿಸಿದ. ಆಗ ರಾಮನು ಈ ಅಗ್ನಿಪರೀಕ್ಷೆಯ ಹಿನ್ನೆಲೆಯನ್ನು ವಿವರಿಸುತ್ತಾ 'ನನಗೆ ಸೀತೆಯ ಮೇಲೆ ಸಂದೇಹವಿಲ್ಲ ಇದಕ್ಕೆ ಮೊದಲು ಇರಲೂ ಇಲ್ಲ. ಇಷ್ಟೆಲ್ಲಾ ನಾನು ಹೇಳಿದ್ದು ಕೇವಲ ಆಕೆಯ ಚಾರಿತ್ರ್ಯವನ್ನು ಬೇರೆಯಾರಾದರೂ ಸರಿಯೇ ಸಂಶಯದಿಂದ ಕಾಣದಿರಲಿ ಎಂಬ ಕಾರಣಕ್ಕಾಗಿಯೇ' ಎಂದು ಹೇಳಿದ (ವಾ. ರಾ. ಯು. ೧೧೮).

ಹನ್ನೆರಡೂವರೆ ವರ್ಷಗಳ ಕಾಲ ಚಿತ್ರಕೂಟದಲ್ಲಿ ತಪಸ್ವಿಯಂತೆ ಜೀವನವನ್ನು ಕಳೆದ ರಾಮ ಉಳಿದ ಒಂದೂವರೆ ವರ್ಷವನ್ನು ರಾಕ್ಷಸರೊಂದಿಗೆ ಯುದ್ಧಮಾಡುವುದರಲ್ಲಿ ಕಳೆದ. ಇದರಿಂದ ರಾವಣನು ಸ್ಥಾಪಿಸಿದ್ದ ಲಂಕಾ ಸಾಮ್ರಾಜ್ಯ ನಷ್ಟವಾಯಿತು. ದಕ್ಷಿಣ ಭಾರತವೆಲ್ಲಾ ರಾಕ್ಷಸರ ಭಯದಿಂದ ಮುಕ್ತಗೊಂಡಿತು. ದಕ್ಷಿಣದಲ್ಲಿ ವಾನರ ಸಾಮ್ರಾಜ್ಯವು ಸ್ಥಾಪಿತವಾಯಿತು. ಹೀಗೆ ರಾಮನ ವನವಾಸ ಕೇವಲ ವನವಾಸವಾಗಿರದೆ ದಕ್ಷಿಣ ದೇಶದ ದಿಗ್ವಿಜಯವಾಗಿ ಪರಿಣಮಿಸಿತು.

ಯುದ್ಧದ ತರುವಾಯ ರಾಮನು ಸೀತೆ, ಲಕ್ಷ್ಮಣರೊಂದಿಗೆ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಹೊರಟ. ಆಗ ಅಲ್ಲಿದ್ದ ವಾನರರೆಲ್ಲಾ ಅಯೋಧ್ಯೆಯಲ್ಲಿ ರಾಮನ ಪಟ್ಟಾಭಿಷೇಕವನ್ನು ನೋಡಬೇಕೆಂದು ಆಶಿಸಿದರು. ಆದ್ದರಿಂದ ಅವರೆಲ್ಲರನ್ನೂ ಕರೆದುಕೊಂಡು ಅಯೋಧ್ಯೆಗೆ ಬಂದರು.

ಹದಿನಾಲ್ಕು ವರ್ಷಗಳಲ್ಲಿ ಇನ್ನೂ ಒಂದು ದಿನ ಉಳಿದಿತ್ತು. ಆದ್ದರಿಂದ ಅವರು ಭಾರದ್ವಾಜ ಋಷಿಯ ಆಶ್ರಮದಲ್ಲಿ ತಂಗಿದ್ದು ಹನುಮಂತನ ಮುಖಾಂತರ ತಾವು ಬರುತ್ತಿರುವುದರ ಸಂದೇಶವನ್ನು ಕಳುಹಿಸಿಕೊಟ್ಟರು. ಮರುದಿನ ನಂದಿಗ್ರಾಮದಲ್ಲಿ ಭರತನ ಭೇಟಿಯಾಯಿತು. ನಂತರ ಅಯೋಧ್ಯೆಗೆ ಹೋಗಿ ಅಲ್ಲಿ ತಾಯಂದಿರನ್ನು ವಸಿಷ್ಠ ಮುಂತಾದ ಗುರುಜನರನ್ನು ಇತರರನ್ನು ದರ್ಶಿಸಿದರು.

ವೈಶಾಖ ಶುಕ್ಲ ದಶಮಿಯಂದು ರಾಮ ಮತ್ತು ಭರತನು ಮಂಗಳಸ್ನಾನವನ್ನು ಮಾಡಿದ ನಂತರ ರಾಮ ಪಟ್ಟಾಭಿಷೇಕವನ್ನು ಭರತನಿಗೆ ಯುವ ರಾಜ್ಯಾಭಿಷೇಕವನ್ನು ವಸಿಷ್ಠರೇ ನೆರವೇರಿಸಿದರು. ರಾಮನು ಲಕ್ಷ್ಮಣನನ್ನು ಯುವರಾಜನನ್ನಾಗಿ ಮಾಡಬೇಕೆಂದು ಬಯಸಿದರೂ ಲಕ್ಷ್ಮಣನು ನಿರಾಕರಿಸಿದ್ದರಿಂದ ಭರತನನ್ನು ಯುವರಾಜನನ್ನಾಗಿ ಮಾಡಬೇಕಾಯಿತು. ನಂತರ ರಾಮನು ಬಹುಕುಶಲತೆಯಿಂದ ರಾಜ್ಯಭಾರವನ್ನು ನಡೆಸಿದ. ಅದರ ಫಲವಾಗಿ ಇಂದಿಗೂ ರಾಮರಾಜ್ಯವನ್ನು ಆದರ್ಶರಾಜ್ಯವೆಂದು ಜನರು ಹೇಳುತ್ತಾರೆ (ವಾ. ರಾ. ಯು, ೧೨೭).

ರಾವಣವಧೆಯೊಂದಿಗೆ ರಾಮನ ದೈವಾವತಾರವು ಸಮಾಪ್ತಗೊಂಡಿತೆಂದು ಅನೇಕರು ಭಾವಿಸುತ್ತಾರೆ. ಆದ್ದರಿಂದಲೇ ವಾಲ್ಮೀಕಿ ಚಿತ್ರಿಸಿರುವ ಈ ರಾಮನಿಗೂ ಉತ್ತರಕಾಂಡದಲ್ಲಿ ಚಿತ್ರಿತವಾಗಿರುವ ರಾಮನಿಗೂ ಬಹಳವಾದ ಅಂತರವನ್ನು ನಾವು ಕಾಣುತ್ತೇವೆ. ಸಾಧಾರಣವಾಗಿ ನಂತರದ ಅನೇಕ ರಾಮಾಯಣಗಳೂ ಕೂಡ ರಾವಣನ ಪರಾಜಯ, ಸೀತೆಯ ಪುನಃ ಪ್ರಾಪ್ತಿಯೊಂದಿಗೇ ಮುಗಿಯುತ್ತವೆ. ಆದ್ದರಿಂದ ಉತ್ತರ ರಾಮಾಯಣವು ವಾಲ್ಮೀಕಿಯ ನಂತರದ ಕವಿಗಳಿಂದ ಸೇರ್ಪಡೆಯಾಗಿರುವ ಭಾಗವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಉತ್ತರಕಾಂಡದ ಕತೆಯು ಇಂತಿದೆ :

ಕೆಲವು ಕಾಲದ ನಂತರ ಸೀತೆಯು ಗರ್ಭವತಿಯಾದಳು. ವನಪ್ರದೇಶದಲ್ಲಿ ಸುತ್ತಿ ಬರಬೇಕೆಂದು ಬಯಸಿದಳು. ಮರುದಿನ ತಪೋವನಕ್ಕೆ ಕಳುಹಿಸುವ ವ್ಯವಸ್ಥೆ ಮಾಡುವುದಾಗಿ ರಾಮನೂ ಹೇಳಿದ. ರಾಜ್ಯದ ವಿಚಾರದಲ್ಲಿ ಜನಾಭಿಪ್ರಾಯವನ್ನು ವಿಚಾರಿಸುತ್ತಾ ತನ್ನ ಸಚಿವರೊಂದಿಗೆ ಕುಳಿತಿದ್ದ. ಆಗ ರಾಮನು ಭದ್ರಎಂಬ ಮಿತ್ರನನ್ನು 'ನನ್ನ ಬಗ್ಗೆ, ಸೀತೆ ಮತ್ತು ಭರತನ ಬಗ್ಗೆ ಜನ ಏನು ಹೇಳುತ್ತಿದ್ದಾರೆ?' ಎಂದು ಕೇಳಿದ. ಸೀತೆಯ ಬಗ್ಗೆ ಇರುವ ಲೋಕಾಪವಾದ, ಅದರಿಂದ ಆಗಿರುವ ಕೆಟ್ಟ ಪ್ರಭಾವವನ್ನು ವಿವರಿಸಿ ಇಂತು ಹೇಳಿದ.

**ಅಸ್ಮಾಕಮಪಿ ದಾರೇಷು ಸಹನೀಯಂ ಭವಿಷ್ಯತಿ**

**ಯಥಾ ಹಿ ಕುರುತೇ ರಾಜಾ ಪ್ರಜಾಸ್ತಮನುವರ್ತತೇ ॥**


(ವಾ. ರಾ. ಉತ್ತರಕಾಂಡ, ೪೩ : ೧೯) 1

(ರಾಮನಿಂದ ಸೀತೆಯು ಸ್ವೀಕೃತವಾದ ಕಾರಣದಿಂದಾಗಿ ನಾವೂ ಕೂಡ ಇದೇ ಆಚರಣೆಯನ್ನು ಸಹಿಸುವುದು ಅನಿವಾರ್ಯವಾಗಿದೆ. ಏಕೆಂದರೆ ರಾಜನು ವರ್ತಿಸುವಂತೆಯೇ ಪ್ರಜೆಗಳು ವರ್ತಿಸಬೇಕಾಗಿರುತ್ತದೆ.)

ಲೋಕಾಪವಾದದ ಈ ಮಾತು ಕೇಳಿದ ರಾಮ ಬಹುವ್ಯಾಕುಲನಾದ. ಮರುದಿನ ಲಕ್ಷ್ಮಣನನ್ನು ಕರೆದು ಸೀತೆಯನ್ನು ಗಂಗಾನದಿಯ ಇನ್ನೊಂದು ದಂಡೆಯಲ್ಲಿ ಬಿಟ್ಟು ಬರಲು ಹೇಳಿದ. ಲಕ್ಷ್ಮಣನು ತಪೋವನವನ್ನು ತೋರಿಸುವ ನೆಪದಲ್ಲಿ ಸೀತೆಯನ್ನು ಕರೆದುಕೊಂಡು ಹೋದ. ವಾಲ್ಮೀಕಿ ಆಶ್ರಮದ ಬಳಿ ಸೀತೆಯನ್ನು ಬಿಟ್ಟು ಬಂದ. ಆಗ ಲೋಕಾಪವಾದದ ಕಾರಣದಿಂದಾಗಿ ಸೀತೆಯನ್ನು ರಾಮನು ಬಿಡುತ್ತಿದ್ದಾನೆ ಎಂಬ ವಿಷಯವನ್ನು ಲಕ್ಷ್ಮಣನು ಸೀತೆಯಲ್ಲಿ ಬಹು ದುಃಖದಿಂದ ಅರಿಕೆ ಮಾಡಿಕೊಂಡ (ವಾ. ರಾ. ಯು. ೬೯).

ಕಾಳಿದಾಸನು ರಘುವಂಶದಲ್ಲಿ ಭದ್ರನನ್ನು ರಾಮನ ಗುಪ್ತಚರ ಎಂದು ಹೇಳಿದ್ದಾನೆ (ರಘುವಂಶ, ೧೪). ಕಥಾಸರಿತ್ಸಾಗರ ಮತ್ತು ಭಾಗವತದಲ್ಲಿ ಒಬ್ಬ ಅಗಸನ ಉದಾಹರಣೆ ಕೊಟ್ಟು ಈ ಲೋಕಾಪವಾದವನ್ನು ಹೇಳಲಾಗಿದೆ (ಕಥಾ ಸರಿತ್ಸಾಗರ, ೯ : ೧ : ೬೬; ಭಾಗವತ, ೯ : ೧೧ : ೯)

ವಾಲ್ಮೀಕಿ ಆಶ್ರಮದಲ್ಲಿ ಸೀತೆಯು ಇಬ್ಬರು ಮಕ್ಕಳಿಗೆ ಜನ್ಮನೀಡಿದಳು. ಅವರಿಗೆ ವಾಲ್ಮೀಕಿಯು ಕುಶ ಮತ್ತು ಲವ ಎಂಬ ಹೆಸರನ್ನು ಕೊಟ್ಟ (ವಾ. ರಾ. ಉ, ೬೬). ನಂತರ ಇವರಿಬ್ಬರೂ ವಾಲ್ಮೀಕಿಯ ಶಿಷ್ಯರಾದರು. ಅವರಿಗೆ ರಾಮಾಯಣವನ್ನೆಲ್ಲಾ ಪಾಠ ಮಾಡಿಸಿದ. ಇಬ್ಬರೂ ಸಭೆ ಸಮಾರಂಭಗಳಲ್ಲಿ ರಾಮಾಯಣವನ್ನು ಹಾಡುತ್ತಿದ್ದರು. ಅಯೋಧ್ಯೆಯ ರಾಜಮಾರ್ಗದಲ್ಲಿ ರಾಮಾಯಣವನ್ನು ಹಾಡುತ್ತಿರುವುದನ್ನು ನೋಡಿದ ರಾಮ ಇವರನ್ನು ಅರಮನೆಗೆ ಕರೆಯಿಸಿ ಎಲ್ಲರೊಂದಿಗೂ ಕುಳಿತು ರಾಮಾಯಣವನ್ನು ಕೇಳಿದ (ವಾ. ರಾ. ಬಾಲಕಾಂಡ, ೪).



ಚಿತ್ರ ೩.೧ : ಸೀತೆಯ ಅಗ್ನಿಪ್ರವೇಶ

ರಾವಣನು ಮಹಾಬ್ರಾಹ್ಮಣನಾಗಿದ್ದ. ಆದ್ದರಿಂದ ರಾವಣವಧೆಯಿಂದ ರಾಮನು ಬ್ರಹ್ಮಹತ್ಯಾಪಾತಕವನ್ನು ಗಳಿಸಿಕೊಂಡಿದ್ದ. ಈ ಪಾಪವನ್ನು ಕಳೆದುಕೊಳ್ಳಲು ಅಗಸ್ತ್ಯ ಋಷಿಯ ಸಲಹೆಯ ಮೇರೆಗೆ ಅಶ್ವಮೇಧ ಯಜ್ಞವನ್ನು ಮಾಡಬೇಕೆಂದು ಸಿದ್ಧವಾದ (ಪದ್ಮ ಪುರಾಣ, ಪಾತಾಳಖಂಡ ೮ - ೧೦). ಈ ಮೊದಲು ರಾಜಸೂಯಯಾಗವನ್ನು ಮಾಡಬಯಸಿದ. ಆದರೆ ಈ ಯಜ್ಞದ ಫಲವಾಗಿ ರಾಜವಂಶದ ನಷ್ಟ ಬಗ್ಗೆ ಭರತನು ಹೇಳಿದ್ದರಿಂದ ಹತ್ತು ಅಶ್ವಮೇಧ ಯಾಗಗಳನ್ನು ನಡೆಸಲು ರಾಮನು ತೀರ್ಮಾನಿಸಿದ. ಈ ತೀರ್ಮಾನವನ್ನು ಲಕ್ಷ್ಮಣನೂ ಅಂಗೀಕರಿಸಿದ (ವಾ. ರಾ. ಉ, ೮೩ - ೮೪).

ಅಶ್ವಮೇಧಯಾಗ ನಡೆಸಲು ಪತ್ನಿಯ ಅವಶ್ಯಕತೆಯುಂಟು. ಅದಕ್ಕಾಗಿ ಸೀತೆಯ ಸ್ವರ್ಣಮೂರ್ತಿಯನ್ನು ಮಾಡಿಸಿ ಪಕ್ಕದಲ್ಲಿರಿಸಿಕೊಂಡು ಯಜ್ಞವನ್ನು ನಡೆಸಿದ. ಇದೇ ಸಂದರ್ಭದಲ್ಲಿ ವಾಲ್ಮೀಕಿಯು ಕುಶ ಲವರನ್ನು ಕರೆದುಕೊಂಡು ಬಂದು ರಾಮಾಯಣವನ್ನು ಹಾಡಿಸಿದ. ಅವರಿಗೆ ವಾಲ್ಮೀಕಿಯು ರಾಮನ ಪರಿಚಯವನ್ನು ಮಾಡಿಸಿದ.

ತನ್ನ ಮಕ್ಕಳನ್ನು ಕಂಡ ರಾಮನು ಸೀತೆಗೆ ಬರಲು ಹೇಳಿಕಳುಹಿಸಿದ. ಸೀತೆಯನ್ನು ಕರೆದುಕೊಂಡು ವಾಲ್ಮೀಕಿಯೇ ಬಂದ. ವಾಲ್ಮೀಕಿಯೇ ಸೀತೆಯ ಪಾತಿವ್ರತ್ಯದ ಬಗ್ಗೆ ಸಾಕ್ಷಿ ಹೇಳಿದ. ನಂತರ ರಾಮನೇ ಸೀತೆಯನ್ನು ತನ್ನ ಪಾತಿವ್ರತ್ಯದ ಬಗ್ಗೆ ಪ್ರಮಾಣಿಕರಿಸಲು ಒತ್ತಾಯಿಸಿದ. ಆಗ ಸೀತೆ ತಾನು ಯಾವ ಪಾಪವನ್ನು ಮಾಡಿರುವಳಲ್ಲ ಎಂದು ಹೇಳುತ್ತಾ ಭೂಮಿಯನ್ನು ಪ್ರವೇಶಿಸಿದಳು.

ಇದಿಷ್ಟು ಸಂಗ್ರಹವಾಗಿ ರಾಮಾಯಣದ ಕಥೆ. ಎಲ್ಲಾ ವೈಷ್ಣವರಿಗೂ ರಾಮ ಬಹುಪ್ರಿಯವೂ, ಪೂಜ್ಯವೂ ಆಗಿರುವ ಅವತಾರ ಸ್ವರೂಪ.ಆದ್ದರಿಂದ ಪಾಂಚರಾತ್ರಾಗಮ ದಲ್ಲಿ ರಾಮನ ವಿಗ್ರಹದ ನಿರ್ಮಾಣದ ಬಗ್ಗೆ ಬಹು ವಿವರಗಳು ದೊರೆಯುತ್ತವೆ. ಪಾದ್ಮಸಂಹಿತೆ (ಕ್ರಿ ೧೭ : ೬೦ - ೧೦೩) ಈ ಸಂಬಂಧದದಲ್ಲಿ ಇಂತು ವಿವರಿಸುತ್ತದೆ :

**ರಾಮಸ್ಯ ರಾಘವಸ್ಯಾಥ ಲಕ್ಷಣಂ ವಕ್ಷ್ಯತೇಽಧುನಾ ||**
**ತ್ರಿಭಂಗಂ ದ್ವಿಭುಜಂ ರಮ್ಯಂ ಶ್ಯಾಮವರ್ಣಂ ಕಿರೀಟಿನಮ್**
**ಶ್ರೀವತ್ಸಾಂಕಂ ಪ್ರಸನ್ನಾಭಂ ಯದ್ವಾ ರಾಮಂ ಚತುರ್ಭುಜಮ್ ||**
**ಋಜುಸ್ಥಿತಂ ದಕ್ಷಿಣೇನ ಚರಣೇನೇತರೇಣ ತು**
**ಕುಂಚಿತೇನಾಂಘ್ರಿಣಾ ಸ್ತೋಕಂ ಶರಶಾರ್ಙ್ಗ ಧನುರ್ಧರಮ್ ||**
**ಉದ್ಧರೇಚ್ಚ ಲಲಾಟಾಂತಂ ವಾಮಹಸ್ತಂ ಧ[illegible]ರಮ್**
**ಅಂತರಾಲಂ ಮುಖಮಿತಂ ಶರಹಸ್ತಂ ತು ದಕ್ಷಿಣ[illegible] ||**
**ಕಟಿಸೂತ್ರ ಸಮಂ ಕುರ್ಯಾನ್ಮುಖ[illegible]ನಂ ಸಗೋಲಕಮ್**
**ಅಂತರಾಲಂ ಭವೇನ್ಮುಷ್ಟೇಃ ಕಟಿ[illegible]ತ್ರಸ್ಯ [illegible] ದ್ವಯೋಃ ||**
**ಅಪರಾಭ್ಯಾಂ ಚ ಹಸ್ತಾಭ್ಯಾಂ ಶಂಖ[illegible]ಕ[illegible] ಚ ಧಾರಯೇತ್**
**ಮುಖಂ ದಕ್ಷಿಣತೋ ಭಂಗಂ ಮಧ್ಯಕಾಯಂ ತು ವಾ[illegible]ತಃ ||**
**ಕಟ್ಯಾಂ ದಕ್ಷಿಣತೋ ಭಂಗಃ ಕಿಂಚಿದ್ಭಂಗ ತ್ರಯಂ ಮತಮ್**


ಕಂಬುಗ್ರೀವಂ ಮಹೋರಸ್ಕಂ ತ್ರಯ ಸ್ತ್ರಿಂ ಶತ್ಸುಲಕ್ಷಣಮ್ ॥

ರಘು ಕುಲೋತ್ಪನ್ನನಾದ ಶ್ರೀರಾಮನ ಲಕ್ಷಣಗಳನ್ನು ಹೇಳುತ್ತೇನೆ. ಶ್ಯಾಮಲವರ್ಣ ದೇಹಿಯಾದ ಈ ಸ್ವಾಮಿಯು ಎರಡು ಬಾಹುಗಳೊಂದಿಗೆ ತ್ರಿಭಂಗದಲ್ಲಿರಬೇಕು. ಕಿರೀಟ, ಶ್ರೀವತ್ಸಗಳ ಅಲಂಕರಣದೊಂದಿಗೆ ಪ್ರಸನ್ನ ಮುಖಮುದ್ರೆಯಲ್ಲಿರುತ್ತಾನೆ. ಎಡಗೈಯಲ್ಲಿ ಧನಸ್ಸು ಬಲಗೈಯಲ್ಲಿ ಬಾಣವನ್ನು ಹಿಡಿದಿರುತ್ತಾನೆ.

ರಾಮ ಮೂರ್ತಿಯು ಚತುರ್ಭುಜಗಳನ್ನು ಹೊಂದಿದ್ದರೆ ಬಲಗಾಲನ್ನು ಬಲವಾಗಿ ಊರಿ ಎಡಗಾಲನ್ನು ಸ್ವಲ್ಪ ಮಡಚಿರುವಂತೆ ನಿಂತಿರಬೇಕು. ಎಡ ಹಸ್ತವನ್ನು ನೊಸಲಿನ ಮಟ್ಟಕ್ಕೆ ಎತ್ತಿದ್ದು ಆ ಹಸ್ತದಲ್ಲಿ ಶಾರ್ಙ್ಗ (ಅಥವ ಕೋದಂಡ) ಎಂಬ ಧನುಸ್ಸು ಹಿಡಿದಿರಬೇಕು. ಬಲ ಹಸ್ತವು ಕಟಿಸೂತ್ರದ ಸಮಕ್ಕೆ ಎತ್ತಿದ್ದು ಆ ಹಸ್ತವು ಮುಷ್ಟಿಯಂತೆ ಮಡಚಿದ್ದು ಬಾಣವಿರಬೇಕು. ಮೇಲಿನ ಹಸ್ತಗಳಲ್ಲಿ ಬಲಹಸ್ತದಲ್ಲಿ ಚಕ್ರವನ್ನು, ಎಡಹಸ್ತದಲ್ಲಿ ಶಂಖವನ್ನು ಧರಿಸಿರಬೇಕು. ಮುಖವು ಬಲಭಾಗಕ್ಕೆ ಸ್ವಲ್ಪ ವಾಲಿದ್ದು, ಮಧ್ಯಕಾಯವು ಎಡಕ್ಕೆ ಸರಿದಿರಬೇಕು. ಸೊಂಟ ಬಲಗಡೆಗೆ ಸರಿದಿರಬೇಕು. ಈ ರೀತಿಯಾಗಿ ತ್ರಿಭಂಗಿಯನ್ನು ರೂಪಿಸಿರಬೇಕು. ಶಂಖ, ದಂತ, ಕಂಠವನ್ನು ವಿಶಾಲವಾದ ವಕ್ಷವನ್ನು ಪಡೆದಿರುವ ಈ ಸ್ವಾಮಿಯಲ್ಲಿ ಮುವ್ವತ್ಮೂರು ಸುಲಕ್ಷಣಗಳು ಇರಬೇಕು.

ಪಂಚದೀರ್ಘಂ ಚತುರ್ಹ್ರಸ್ವಂ ಪಂಚಸೂಕ್ಷ್ಮಂ ಷಡುನ್ನತಮ್
ಸಪ್ತರಕ್ತಂ ತ್ರಿಗಂಭೀರಂ ತ್ರಿವಿಸ್ತೀರ್ಣಂ ಪ್ರಶಸ್ಯತೇ ॥
ಬಾಹುನೇತ್ರಾಂತರಂ ಚೈವ ಹನುರ್ನಾಸಾ ತಥೈವ ಚ
ಸ್ತನಯೋರಂತರಂ ಚೈವ ಪಂಚದೀರ್ಘಂ ಪ್ರಶಸ್ಯತೇ ॥
ಗ್ರೀವಾ ಪ್ರಜನನಂ ಪೃಷ್ಠಂ ಹ್ರಸ್ವೇ ಜಂಘೇ ಚ ಪೂಜ್ಯತೇ
ಸೂಕ್ಷ್ಮಾಣ್ಯಂಗುಲೀಪರ್ವಾಣೀ ಕೇಶ ದಂತ ನಖ ತ್ವಚಃ ॥
ಇಮಾನಿ ಪಂಚ ಸೂಕ್ಷ್ಮಾಣಿ ಕಥಿತಾನಿ ಮಯಾನಘ
ಕಕ್ಷಃ ಕುಕ್ಷಿಶ್ಚ ವಕ್ಷಶ್ಚ ಘ್ರಾಣಂ ಸ್ಕಂದೋ ಲಲಾಟಿಕಾ ॥
ಷಡುನ್ನತಮಿದಂ ಪ್ರೋಕ್ತಂ ಸಪ್ತರಕ್ತಮತಃ ಶೃಣು
ಪಾಣಿ ಪಾದತಲಂ ರಕ್ತಂ ನೇತ್ರಾದ್ಯಂತಂ ನಖಾನಿ ಚ ॥
ತಾಲುಜಿಹ್ವಾಧರೋಷ್ಠಂ ಚ ಸಪ್ತ ರಕ್ತಾ ಇಮೇ ಸ್ಮೃತಾಃ
ಸ್ವರಃ ಸತ್ವಂ ಚ ನಾಭಿಶ್ಚ ತ್ರಿಗಂಭೀರಂ ಪ್ರಶಸ್ಯತೇ ॥
ಉರಶ್ಶಿರೋ ಲಲಾಟಶ್ಚ ತ್ರಿವಿಸ್ತೀರ್ಣ ಪ್ರಕೀರ್ತಿತಮ್
ಏವಂ ಲಕ್ಷಣ ಸಂಯುಕ್ತಂ ಸರ್ವಲೋಕ ಸುಖಾವಹಂ ॥
ಕುರ್ಯಾದ್ದಾಶರಥಿಂ ರಾಮಂ ಮಾನಾದಿ ತ್ರಯ ಸಂಯುತಮ್

ಈ ಮುವ್ವತ್ಮೂರು ಸುಲಕ್ಷಣಗಳನ್ನು ಪಂಚದೀರ್ಘಂ (ನೀಳವಾದುವು ಐದು), ಚತುರ್ಹ್ರಸ್ವಂ (ಹ್ರಸ್ವವಾಗಿರುವುವು ನಾಲ್ಕು) , ಪಂಚಸೂಕ್ಷ್ಮಂ (ಸೂಕ್ಷ್ಮವಾದುವು ಐದು), ಷಡುನ್ನತಂ (ಉನ್ನತವಾದುವು ಆರು), ಸಪ್ತರಕ್ತಂ (ಕೆಂಪಾಗಿರುವುವು ಏಳು), ತ್ರಿಗಂಭೀರಂ (ಆಳವಾದುವು ಮೂರು) ಮತ್ತು ತ್ರಿವಿಸ್ತೀರ್ಣಂ (ವಿಶಾಲವಾದುವು ಮೂರು) ಎಂದು ಸೂತ್ರೀಕರಿಸಲಾಗಿದೆ.



ಚಿತ್ರ ೩೩ : ಶ್ರೀ ರಾಮ ಚಂದ್ರ

*ಪಂಚ ದೀರ್ಘಂ*: ನೀಳವಾಗಿರುವುವು ಐದು. ಅವು ತೋಳುಗಳು, ಕಣ್ಣುಗಳು, ಮೂಗು, ಹನು ಮತ್ತು ಸ್ತನಗಳ ಮಧ್ಯೆ ಇರುವ ಅಂತರ.

*ಚತುರ್ಹ್ರಸ್ವಂ* : ಉದ್ದ ಕಡಿಮೆ ಎನಿಸಿ ಕುಳ್ಳಾಗಿವೆ ಎನಿಸುವುವು ನಾಲ್ಕು. ಅವು ಕಂಠ, ಪುರುಷಾಂಗ, ಪೃಷ್ಠಗಳು ಮತ್ತು ಮುಂಗಾಲುಗಳು.

*ಪಂಚಸೂಕ್ಷ್ಮಂ* : ಬಹು ಸೂಕ್ಷ್ಮವಾಗಿರುವುವು ಐದು. ಅವು ಬೆರಳುಗಳ ಪರ್ವಗಳು (ಗೆಣ್ಣುಗಳು), ತಲೆಗೂದಲು, ಹಲ್ಲುಗಳು, ಉಗುರುಗಳು ಮತ್ತು ಚರ್ಮ

*ಷಡುನ್ನತಂ*: ಎತ್ತರವಾಗಿರುವಂತಹವು ಆರು. ಅವು ಕಂಕುಳು, ಹೊಟ್ಟೆ, ವಕ್ಷ, ಮೂಗು, ಭುಜಗಳು ಮತ್ತು ಹಣೆ.

*ಸಪ್ತರಕ್ತಂ* : ಕೆಂಪಾಗಿರುವುವು ಏಳು. ಅವು ಅಂಗೈ, ಅಂಗಾಲು, ಕಣ್ಣಿನ ಕೊನೆಗಳು ಉಗುರುಗಳು, ನಾಲಿಗೆ, ಕೆನ್ನೆಗಳು ಮತ್ತು ತುಟಿಗಳು.

*ತ್ರಿಗಂಭೀರಂ*: ಇಳಿತವಿದ್ದು ಕುಳಿಯಾಗಿರುವುವು ಮೂರು. ಕಂಠದ ಅಡಿಭಾಗದಲ್ಲಿರುವ ಹಿಕ್ಕಾ, ವಕ್ಷ ಪ್ರದೇಶದಲ್ಲಿರುವ ಹೃದಯಸ್ಥಾನ ಮತ್ತು ಹೊಕ್ಕುಳು.

*ತ್ರಿವಿಸ್ತೀರ್ಣಂ* : ವಿಶಾಲವಾಗಿರುವುವು ಮೂರು. ಅವು ವಕ್ಷ ಪ್ರದೇಶ, ಶಿರಸ್ಸು ಮತ್ತು ನೊಸಲು.

ಇವು ಒಟ್ಟು ಮುವ್ವತ್ಮೂರು (೫ + ೪ + ೫ + ೬ + ೭ + ೩ + ೩ = ೩೩).

ಹೀಗೆ ರಾಮ ದಾಶರಥಿಯನ್ನು ತಾಲಮಾನ ಪ್ರಮಾಣಾನುಸಾರವಾಗಿ, ಮಾನ - ಉನ್ಮಾನ - ಪ್ರಮಾಣಗಳು ಸೂಕ್ತವಾಗಿರುವಂತೆ ರೂಪಿಸಬೇಕು.

**ಲಕ್ಷ್ಮಣಂ ಕಾರಯೇದ್ವಾಮೇ ತಥಾಲಕ್ಷಣ ಲಕ್ಷಿತಮ್ ||**
**ಜಾನಕೀಂ ದಕ್ಷಿಣೇ ಪಾರ್ಶ್ವೇ ದೇವೀಂ ವೇದಿಸಮುತ್ಥಿತಾಮ್**
**ಭರತಂ ದಕ್ಷಿಣೇ ಭಿತ್ತೌ ಸಸುಗ್ರೀವ ವಿಭೀಷಣಮ್ ||**
**ಶತ್ರುಘ್ನಂ ಚಾಂಗದಂ ಚೈವ ಹನೂಮಂತಂ ಚ ವಾಮತಃ**
**ದಿವ್ಯೇ ಭಾಗೇ ಸ್ಥಿತಸ್ಯೈವ ಪರಿವಾರಾದಿಕಲ್ಪನಮ್ ||**

ಎಡಭಾಗದಲ್ಲಿರುವ ಲಕ್ಷ್ಮಣನನ್ನು ಸಲಕ್ಷಣವಾಗಿ ಶ್ರೀರಾಮನ ಅಲಂಕರಣಗಳಿಗೆ ಸಮಾನವಾಗಿ ಅಲಂಕರಿಸಬೇಕು. ಬಲಭಾಗದಲ್ಲಿ ಸೀತಾದೇವಿಯು ಇರಬೇಕು. ಇವು ವಿಗ್ರಹಗಳಾಗಿರುತ್ತವೆ. ಇತರ ಪರಿವಾರವನ್ನು ಹಿಂಭಾಗದ ಗೋಡೆಯ ಮೇಲೆ ಉಬ್ಬುಚಿತ್ರವಾಗಿ ಅಥವ ಚಿತ್ರವಾಗಿ ಚಿತ್ರಿಸಬೇಕು. ಗೋಡೆಯ ಬಲಗಡೆಗೆ ಭರತ, ಸುಗ್ರೀವ, ವಿಭೀಷಣ ಇರಬೇಕು. ಎಡಭಾಗದಲ್ಲಿ ಶತ್ರುಘ್ನ, ಅಂಗದ, ಹನುಮಂತ ಇರಬೇಕು. ಪರಿವಾರವು ಈ ರೀತಿಯಾಗಿ ಇರುವಂತೆ ರೂಪಿಸಬೇಕು.

**ಭದ್ರಾಸನೇ ಸಮಾಸೀನಂ ತ್ಯಕ್ತ್ವಾ ತತ್ ಸಶರಂ ಧನುಃ**
**ಅಭಯೋ ದಕ್ಷಿಣೋ ಹಸ್ತೋ ವಾಮಸ್ತು ವರದೋ ಭವೇತ್ ||**
**ಜಾನಕೀ ತು ಸುಖಾಸೀನಾ ಭವೇದ್ದಕ್ಷಿಣ ಪಾರ್ಶ್ವತಃ**

ರಾಮಮೂರ್ತಿಯು ಭದ್ರಾಸನದಲ್ಲಿ ಕುಳಿತಿದ್ದರೆ ಆಗ ಧನುಸ್ಸು - ಶರಗಳು ಇರುವುದಿಲ್ಲ. ಬಲಹಸ್ತದಲ್ಲಿ ಅಭಯ ಮುದ್ರೆ, ಎಡಹಸ್ತದಲ್ಲಿ ವರದಮುದ್ರೆ ಇರುತ್ತದೆ. ಸೀತಾದೇವಿಯು ಸುಖಾಸನದಲ್ಲಿ ಸ್ವಾಮಿಯ ಬಲಗಡೆಗೆ ಕುಳಿತಿರುತ್ತಾಳೆ. ಎಡಪಾರ್ಶ್ವದಲ್ಲಿ ಲಕ್ಷ್ಮಣನು ಅಂಜಲಿ ಬದ್ಧನಾಗಿ ನಿಂತಿರುತ್ತಾನೆ.


ಯದ್ವಾ ಮಹಾರ್ಹಶಯನೇ ಶಯಾನಂ ಪರಿಕಲ್ಪಯೇತ್
ಪೃಷ್ಠತೋ ಮೌಲಿಪಾರ್ಶ್ವೇ ತು ಜಾನಕೀ ಸ್ಯಾತ್ ಸುಖಾಸನಾ ||
ಕುಜ್ಯಸ್ಥಾ: ಪೂರ್ವವತ್ಸರ್ವೇ ಕರ್ತವ್ಯಾ ಲಕ್ಷ್ಮಣಾದಯಃ
ಪವನಾತ್ಮಜಮಾರೂಢೋ ಯಾನಂ ವಾ ಸಶರಾಸನಃ ||

ರಾಮಚಂದ್ರ ಮೂರ್ತಿಯು ಶಯನ ಭಂಗಿಯಲ್ಲಿದ್ದರೆ ಸ್ವಾಮಿಯ ಕಿರೀಟದ ಬಳಿ ಹಿಂಭಾಗದಲ್ಲಿ ಸೀತಾದೇವಿಯು ಸುಖಾಸದಲ್ಲಿ ಮಂಡಿಸಿರುತ್ತಾಳೆ. ದೇವಿಯನ್ನು - ಸ್ವಾಮಿಯನ್ನು ಈ ಮೊದಲೇ ಹೇಳಿರುವ ರೀತಿಯಲ್ಲಿ ರೂಪಿಸಬೇಕು. ಲಕ್ಷ್ಮಣಾದಿಗಳನ್ನು ರೂಪಿಸಬಹುದು. ಹನುಮಂತನು ಯಾನಾಸನದಲ್ಲಿ ಅಥವ ಶರಾಸನದಲ್ಲಿ ಇರುವಂತೆ ರೂಪಿಸಬೇಕು.

ಏಕ ಬೇರ ವಿಧಾನೇ ತು ರಾಘವೋ ಬ್ರಹ್ಮಣಃ ಪದೇ
ಶರಚಾಪಧರಂ ಕುರ್ಯಾತ್ ಸ್ಥಿತಂ ಲಕ್ಷಣ ಲಕ್ಷಿತಮ್ ||
ಅಥವಾಽಭಯದಂ ಹಸ್ತಂ ದಕ್ಷಿಣಂ ದಕ್ಷಿಣೇತರಮ್
ಕಟಿಸ್ಪೃಶಂ ಕರಂ ಕುರ್ಯಾತ್ ವರದಂ ವಾ ಯಥಾರುಚಿ ||
ದಕ್ಷಿಣೋತ್ತರಯೋರ್ಭಿತ್ತ್ಯೋಃ ಪರಿವಾರಾ ಯಥಾ ಪುರಮ್

ರಾಮನ ಪ್ರತಿಮೆಯೊಂದನ್ನೇ ಸ್ಥಾಪಿಸುವಂತಿದ್ದರೆ ಸ್ವಾಮಿಯನ್ನು ಗರ್ಭಗುಡಿಯ ಬ್ರಹ್ಮಭಾಗದಲ್ಲಿ ಪ್ರತಿಷ್ಠಿಸಬೇಕು. ಸ್ವಾಮಿ ನಿಂತಿರುವಂತಿದ್ದರೆ ಬಿಲ್ಲು - ಬಾಣಗಳನ್ನು ಹಿಡಿದಿರುವಂತೆ ಚಿತ್ರಿಸಬೇಕು. ಅಥವ ಬಲಹಸ್ತವು ಅಭಯ ಮುದ್ರೆಯನ್ನು ಧರಿಸಿರುವಂತೆ ಚಿತ್ರಿಸಿ ಎಡ ಹಸ್ತವು ಕಟ್ಯಾವಲಂಬಿತಹಸ್ತವಾಗಿ ರೂಪಿಸಬಹುದು ಅಥವ ಎಡಹಸ್ತವು ವರದ ಮುದ್ರೆಯಲ್ಲಿರುವಂತೆಯೂ ರೂಪಿಸಬಹುದು. ಹಿಂಭಾಗದ ಗೋಡೆಯ ಮೇಲೆ ಪರಿವಾರವನ್ನೆಲ್ಲಾ ಉಬ್ಬುಚಿತ್ರವಾಗಿ ಅಥವ ಕೇವಲ ವರ್ಣ ಚಿತ್ರವಾಗಿ ಚಿತ್ರಿಸಬಹುದು.

ರಾಮಸ್ಯ ಭ್ರೂಪ್ರದೇಶಾಂತಂ ಭರತಂ ಪರಿಕಲ್ಪಯೇತ್ ||
ಲಕ್ಷ್ಮಣಂ ಚ ಕಪೋಲಾಂತಂ ಚುಬುಕಾಂತಮಥಾಽಪಿ ವಾ
ಶತ್ರುಘ್ನಂ ಕಂಠಮಧ್ಯಾಂತಂ ಸರ್ವೇ ಚಾಪ ಶರಾನ್ವಿತಾಃ ||
ಭಂಗಾದಯಶ್ಚ ತದ್ವಸ್ತು್ಯಃ ಕೇಶಬಂಧಸಮನ್ವಿತಾಃ
ಮುಖಾದ್ವಿಗುಣಮಾಯಾಮಮಧ್ಯರ್ಧಂ ವಾ ಸಮುನ್ನತಮ್ ||
ಕೇಶ ಬಂಧೋ ಭವೇದೇಷಾಂ ಶ್ರೀವತ್ಸರಹಿತಾಸ್ತಥಾ
ವಾಮಂ ಮುಷ್ಟಿಧರಂ ಹಸ್ತಂ ದಕ್ಷಿಣಂ ಭರತಸ್ಯ ವಾ ||
ವಾಮಂ ದೇವ್ಯಾ ಭುಜೇ ನ್ಯಸ್ತಂ ಸ್ವಾತಂತ್ರ್ಯೇ ಪರಿಕಲ್ಪಯೇತ್
ಶತ್ರುಘ್ನೋ ಲಕ್ಷ್ಮಣಶ್ಚಾಪಿ ಸ್ವಾತಂತ್ರ್ಯೇ ಭರತೋ ಯಥಾ ||




ಚಿತ್ರ ೩೪ : ಶ್ರೀ ರಾಮ ಸೀತಾ ಲಕ್ಷ್ಮಣ ಹನುಮಂತ ಮೂರ್ತಿಗಳು

ಭರತನು ರಾಮನ ಹುಬ್ಬುಗಳ ಎತ್ತರದಷ್ಟಿರಬೇಕು. ಲಕ್ಷ್ಮಣನು ಬಾಯಿಯ ಎತ್ತರದಷ್ಟು ಇರಬೇಕು. ಶತ್ರುಘ್ನನು ಕಂಠದ ಮಧ್ಯಭಾಗದಷ್ಟು ಎತ್ತರಕ್ಕಿರಬೇಕು. ಇವರೆಲ್ಲರೂ ಧನುರ್ಬಾಣಗಳನ್ನು ಧರಿಸಿರಬೇಕು. ಮೇಲಕ್ಕೆ ಎತ್ತಿ ಕಟ್ಟಿರುವಂತಹ ಕೇಶಬಂಧಗಳನ್ನು ಹೊಂದಿರುವ ಇವರೆಲ್ಲರೂ ಸಮ ಭಂಗದಲ್ಲಿರಬೇಕು. ಇವರ ಮಧ್ಯದೇಹವು ಮುಖದ ಎರಡರಷ್ಟಿದ್ದು ಉನ್ನತವಾಗಿರಬೇಕು. ಆದರೆ ಇವರಿಗೆ ಶ್ರೀವತ್ಸ ಮಾತ್ರ ಇರಕೂಡದು. ಭರತನ ಎಡಹಸ್ತವು ಮಡಚಿರಬೇಕು. ದೇವಿಯ ಎಡಪಾರ್ಶ್ವಕ್ಕೆ ಇರುವಂತೆ ಭರತನನ್ನು ಕಲ್ಪಿಸಬೇಕು. ಶತ್ರುಘ್ನ ಲಕ್ಷ್ಮಣರು ಬೇರೆಯ ಕಡೆ ಎಲ್ಲಿಯಾದರೂ ಇರಬಹುದು.

**ಭರತಃ ಶ್ಯಾಮಲಾಕಾರೋ ಲಕ್ಷ್ಮಣಃ ಕನಕಪ್ರಭಃ**
**ಶತ್ರುಘ್ನೋ ರಕ್ತವರ್ಣಾಭಃ ಶ್ರೀಮಲ್ಲಕ್ಷ್ಮಣ ಸಂಯುತಃ ||**
**ಮಾಂಡವೀ ಭರತಸ್ಯ ಸ್ಯಾದೂರ್ಮಿಲಾ ಲಕ್ಷ್ಮಣಸ್ಯ ತು**
**ಶ್ರುತಕೀರ್ತಿರ್ಭವೇದ್ದೇವೀ ಶತ್ರುಘ್ನಸ್ಯಾಽಂಬುಜಾಸನ ||**
**ಸೀತಾ ಶ್ರೀರಿವ ಕರ್ತವ್ಯಾ ಕಲ್ಯಾಣ ಬಹುಲಕ್ಷಣಾ**
**ಕರಂಡಿಕಾ ಮೌಲಿಧರಾ ಕಬರೀವಾಲ ಕೈರ್ಯುತಾ ||**
**ಬಿಭ್ರಾಣ ವಾಮಹಸ್ತೇನ ಸರಸೀರುಹ ಕುಡ್ಮಲಮ್**
**ಊರು ಪ್ರದೇಶವಿಶ್ರಾಂತ ವಾಮೇತರ ಭುಜಾಽಥವಾ ||**
**ಊರು ಪ್ರದೇಶ ವಿಶ್ರಾಂತ ಸವ್ಯಹಸ್ತ ಸರೋರುಹಾ**
**ಸವ್ಯೇತರೇಣ ಬಿಭ್ರಾಣಾ ರಕ್ತ ಕಂಚುಕ ಬಂಧನಾ ||**
**ಹಿರಣ್ಯವರ್ಣಾ ಸೀತಾ ಸ್ಯಾನ್ಮಾಂಡವೀ ಪಾಟಲ ಪ್ರಭಾ**
**ಊರ್ಮಿಲಾ ಶ್ಯಾಮವರ್ಣಾಭಾ ಶ್ರುತಕೀರ್ತಿಃ ಸಿತಪ್ರಭಾ ||**
**ಧಮ್ಮಿಲ್ಲ ಸಂಯುತಾ ದೇವ್ಯೋ ಭರತಾದೇಶ್ಚತುರ್ಮುಖಿ**

ಭರತನು ಶ್ಯಾಮಲವರ್ಣದೇಹಿ. ಲಕ್ಷ್ಮಣನು ಸ್ವರ್ಣವರ್ಣದೇಹಿ. ಶತ್ರುಘ್ನನು ರಕ್ತವರ್ಣದವನು. ಇವರೆಲ್ಲರೂ ಸಲ್ಲಕ್ಷಣ ಸಂಯುತರು. ಮಾಂಡವಿಯು ಭರತನೊಂದಿಗೆ, ಊರ್ಮಿಳೆಯು ಲಕ್ಷ್ಮಣನೊಂದಿಗೆ, ಶ್ರುತಕೀರ್ತಿಯು ಶತ್ರುಘ್ನ ನೊಂದಿಗೆ ಇರುವಂತೆ ರೂಪಿಸಬಹುದು. ಸೀತಾದೇವಿಯು ಶ್ರೀರಾಮನೊಂದಿಗೆ ಇರಬೇಕು. ಇವರೆಲ್ಲಾ ಶುಭಲಕ್ಷಣಗಳನ್ನು ಹೊಂದಿರುವಂತೆ ರೂಪಿಸಬೇಕು. ಕರಂಡ ಮಕುಟವನ್ನು ಧರಿಸಿದ್ದು ಎಡಹಸ್ತದಲ್ಲಿ ತಾವರೆಯನ್ನು ಹಿಡಿದಿರಬೇಕು. ಬಲಹಸ್ತವು ನೀಳವಾಗಿ ಜೋತಾಡುತ್ತಿರುವಂತಿರಬೇಕು. ತಾವರೆಯನ್ನು ಬಲಹಸ್ತದಲ್ಲಿ ಹಿಡಿದಿದ್ದರೆ ಎಡಹಸ್ತವು ನೀಳವಾಗಿ ಜೋತಾಡುತ್ತಿರಬೇಕು. ಕೆಂಪು ಕಂಚುಕವನ್ನು ಧರಿಸಿರಬೇಕು.

ಸೀತಾದೇವಿಯು ಚಿನ್ನದ ಮೈಕಾಂತಿ ಪಡೆದಿದ್ದರೆ ಮಾಂಡವಿಯು ಪಾಟಲ (ಕಂದು) ವರ್ಣದ ಮೈಕಾಂತಿಯಿಂದ ಶೋಭಯಮಾನಳಾಗಿರುತ್ತಾಳೆ. ಊರ್ಮಿಳೆಯು ಶ್ಯಾಮಲವರ್ಣದವಳು. ಶ್ರುತಕೀರ್ತಿ ಶ್ವೇತವರ್ಣದ ಮೈಕಾಂತಿಯಿಂದಿರುತ್ತಾಳೆ. ಇವರೆಲ್ಲರೂ ಕೂಡಿ ಒಂದಾಗಿರುವಂತೆ ರೂಪಿಸಬಹುದು. ಇವರು ಧಮ್ಮಿಲ್ಲ ಮಕುಟವನ್ನು ಧರಿಸಿರುತ್ತಾರೆ.



ಚಿತ್ರ ೩೫ : ಸೀತಾದೇವಿ



ಚಿತ್ರ ೩೬ : ಸೀತಾರಾಮ ಮೂರ್ತಿ

ಹನುಮಾನ್ವಾನರಾಕಾರಃ ಕರ್ತವ್ಯೋ ಹೇಮಸನ್ನಿಭಃ ||
ಕುಂಚಿತಾಗ್ರಮಹಾಬಲಂ ಪ್ರಹ್ವಾಕಾಯಮವಸ್ಥಿತಮ್
ಆಸ್ಯಂ ಪಿಧಾಯ ಹಸ್ತೇನ ದಕ್ಷಿಣೇನೇತರೇಣ ತು ||
ವಸ್ತ್ರ ಪ್ರದೇಶಮಾಚ್ಛಾದ್ಯ ವಿನೀತವದವಸ್ಥಿತಮ್
ಕೇಶೇ ಬಂಧಯುತಂ ಕುರ್ಯಾದುಧಾಯಸ್ತಸ್ಯ ವಕ್ಷ್ಯತೇ ||
ರಾಮಸ್ಯ ಬಾಹು ಪರ್ಯಂತ ಮುನ್ಮಾನಂ ತ್ರ್ಯಂಶಮೇವ ವಾ
ಅರ್ಧಂ ವಾ ಪಾದಮಥವಾ ಯಥಾವಿಭವಮುನ್ನತಿಃ ||
ಸುಗ್ರೀವಂ ವಾನರಾಕಾರಂ ರಾಮ ಬಾಹು ಸಮುಚ್ಛ್ರಯಮ್
ಪ್ರಾಂಜಲಿಂ ವೇತ್ರಸಹಿತಂ ಸ್ಥಿತಂ ಮುಕುಟಧಾರಿಣಮ್ ||
ಹಾರಾದಿ ಭೂಷಣೈರ್ಯುಕ್ತಂ ಕುರ್ಯಾತ್ಕನಕ ಪಿಂಗಳಮ್
ಅಂಗದಂ ವಾನರಾಕಾರಂ ರಾಮ ಮಾನಾರ್ಧಮುನ್ನತಮ್ ||
ಕೃತಾಂಜಲಿ ಪುಟಂ ವೇತ್ರಕ್ಷುರಿಕಾ ಮೌಳಿಧಾರಿಣಮ್
ಕೇಶಬಂಧಯುತಂ ವಾಪಿ ಬಂಧುಜೀವಸಮದ್ಯುತಿಮ್ ||
ವಿಭೀಷಣಂ ಮಹಾಕಾಯಂ ಘೋರಂ ಕಾಲಾಯ ಸಪ್ರಭಮ್
ದಂಷ್ಟ್ರಾಕರಾಲವದನಂ ಭ್ರುಕುಟೀಕುಟಿಲೇಕ್ಷಣಮ್ ||
ರಕ್ತಾಕ್ಷಂ ಮುಕುಟೋಪೇತಂ ಕೃತಾಂಜಲಿಪುಟಂ ಸ್ಥಿತಮ್
ರಾಮಸ್ಯ ಬಾಹುಪರ್ಯಂತಂ ಸಮುಚ್ಛ್ರಾಯಂ ಪ್ರಕಲ್ಪಯೇತ್ ||
ಕೃತಾಂಜಲಿ ಪುಟಂ ಸೌಮ್ಯಂ ನಿಷಾದಾಧಿಪತಿಂ ಗುಹಮ್
ನೀಲನೀರದ ಸಂಕಾಶಂ ರಾಮ ಮಾನಾರ್ಧಮುನ್ನತಮ್ ||

ವಾನರಾಕಾರದಲ್ಲಿ ಹನುಮಂತನು ಸ್ವರ್ಣಕಾಂತಿಯಿಂದ ಶೋಭಾಯಮಾನವಾಗಿರುತ್ತಾನೆ. ಮಹಾಬಲಶಾಲಿಯಾಗಿರುವ ಈತನು ಬಹುವಿನೀತನಾಗಿ ಬಗ್ಗಿದ್ದು ಸೊಂಟದ ಬಳಿ ಕೈಕಟ್ಟಿಕೊಂಡು ಒಡೆಯನ ಮಾತನ್ನು ಕೂಡಲೇ ನೆರವೇರಿಸಲು ಸನ್ನದ್ಧನಾಗಿರುವಂತಿರುತ್ತಾನೆ. ಈತನ ಎತ್ತರವು ರಾಮನ ಬಾಹುಗಳಿಗೆ ಸಮನಾಗಿರುತ್ತದೆ. ಶರೀರದ ದಪ್ಪವು ಎತ್ತರಕ್ಕೆ ಸೂಕ್ತವಾಗಿರುತ್ತದೆ.

ಸುಗ್ರೀವನು ರಾಮನ ಬಾಹುಗಳತನಕ ಎತ್ತರವಾಗಿದ್ದು ಮುಕುಟವನ್ನು ಧರಿಸಿರುತ್ತಾನೆ. ಸೊಂಟಕ್ಕೆ ವಸ್ತ್ರಕಟ್ಟಿಕೊಂಡಿದ್ದು ಅಂಜಲೀಬದ್ಧನಾಗಿದ್ದು ಆಭೂಷಣ, ಹಾರಾದಿಕೇಯೂರಾದಿಗಳನ್ನು ಧರಿಸಿರುತ್ತಾನೆ.

ಅಂಗದನು ವಾನರಾಕಾರದಲ್ಲಿದ್ದು ರಾಮನ ಎತ್ತರದಲ್ಲಿ ಅರ್ಧಭಾಗದಷ್ಟು ಎತ್ತರವಾಗಿರುತ್ತಾನೆ. ಕೈಜೋಡಿಸಿ ನಮಸ್ಕರಿಸುತ್ತಿರುತ್ತಾನೆ. ಕೀರಿಟ - ಆಭರಣಾದಿಗಳಿಂದ ಅಲಂಕೃತನಾಗಿರುತ್ತಾನೆ. ಕತ್ತಿಯನ್ನು ಸೊಂಟದಲ್ಲಿ ಧರಿಸಿದ್ದು ಅದರ ಮೇಲೆ ವಸ್ತ್ರವನ್ನು ಕಟ್ಟಿಕೊಂಡಿರುತ್ತಾನೆ.

ವಿಭೀಷಣನು ಮಹಾಕಾಯನಾಗಿದ್ದು ಶ್ಯಾಮಲವರ್ಣದಲ್ಲಿರುತ್ತಾನೆ. ಕೋರೆಗಳಿದ್ದು ಕರಾಳವಾದ ಮುಖದವನಾಗಿರುತ್ತಾನೆ. ಬಹುದಪ್ಪವಾದ ಹುಬ್ಬುಗಳನ್ನು ಪಡೆದಿದ್ದು, ಕೆಂಗಣ್ಣಿನ

ಈತನು ಕೈ ಮುಗಿದು ನಿಂತಿರುತ್ತಾನೆ. ಮುಕುಟವನ್ನು ಧರಿಸಿರುತ್ತಾನೆ. ರಾಮನ ಬಾಹುಗಳಷ್ಟು ಎತ್ತರ ಇರುವಂತೆ ರೂಪಿಸಬೇಕು.

ನಿಷಾದ ರಾಜನಾದ ಗುಹನು ಸೌಮ್ಯಭಾವದಲ್ಲಿ ಕೈಮುಗಿದು ನಿಂತಿರುತ್ತಾನೆ. ನೀಲ, ನಳ, ನೀರದ ಇವರೆಲ್ಲಾ ರಾಮನ ಎತ್ತರದಲ್ಲಿ ಅರ್ಧಭಾಗ ಮಾತ್ರವೇ ಇರುತ್ತಾರೆ.

ಇದಿಷ್ಟು ವಿವರಣೆಯ ಪಾದ್ಮಸಂಹಿತೆಯದು. ಇಲ್ಲಿ ರಾಮ ನಿಂತಿರುವಂತೆ, ತ್ರಿಭಂಗಯಲ್ಲಿರುವಂತೆ, ಕುಳಿತಿರುವಂತೆ, ಸಿಂಹಾಸನದಮೇಲೆ ಕುಳಿತಿರುವಂತೆ, ಮಲಗಿರುವಂತೆ ತನ್ನ ಪರಿವಾರದವರೊಂದಿಗೆ ಇರುವಂತೆ ಚಿತ್ರಿಸಬಹುದು. ಇದರಲ್ಲಿ ಹಲವು ಬಗೆಯಲ್ಲಿ ರೂಪಿಸುವ ಮುಕ್ತ ಅವಕಾಶಗಳನ್ನು ಕಲ್ಪಿಸಿದೆ. ರಾಮ, ಲಕ್ಷ್ಮಣ, ಸೀತೆ, ಹನುಮಂತ ಮಾತ್ರವೇ ವಿಗ್ರಹಗಳಾಗಿದ್ದು ಉಳಿದವರೆಲ್ಲರನ್ನೂ ಉಬ್ಬು ಚಿತ್ರಗಳನ್ನಾಗಿ ಅಥವ ಕೇವಲ ಚಿತ್ರಗಳನ್ನಾಗಿ ರೂಪಿಸುವ ಅವಕಾಶ ನೀಡಲಾಗಿದೆ. ರಾಮನ ಸೋದರರ ಮತ್ತು ಪರಿವಾರದ ಇತರರ ಎತ್ತರಗಳನ್ನು ಇಲ್ಲಿ ಸೂಚಿಸಲಾಗಿದೆ. ದಕ್ಷಿಣ ಭಾರತದ ಶಿಲ್ಪಿಗಳು ಬಹುವ್ಯಾಪಕವಾಗಿ ಈ ನಿಯಮಗಳನ್ನು ಅನುಸರಿಸುತ್ತಾರೆ.

ಹಯಶೀರ್ಷಸಂಹಿತೆ (ಆದಿ, ೨೦ : ೨೮ - ೩೧) ರಲ್ಲಿ ರಾಮನ ಚತುರ್ಭುಜ ಮತ್ತು ದ್ವಿಭುಜರೂಪವನ್ನು ವಿವರಿಸುತ್ತಾ ಸಕಲ ಇಷ್ಟಾರ್ಥಸಿದ್ಧಿಗಾಗಿ ಈ ಸ್ವಾಮಿಯ ಪ್ರತಿಷ್ಠೆಯನ್ನು ಮಾಡಬಹುದು ಎಂದು ನಿರ್ದೇಶಿಸುತ್ತದೆ

**ಕುರ್ಯಾದ್ದಾಶರಥಿಂ ರಾಮಂ ದಶತಾಲಂ ಚತುರ್ಭುಜಮ್ ||**
**ಶರಕಾರ್ಮುಕ ಹಸ್ತಂ ಚ ಶಂಖ ಚಕ್ರಧರಂ ಪ್ರಭುಮ್**
**ದಕ್ಷಿಣೋರ್ಧ್ವೇ ಭವೇಚ್ಚಕ್ರಂ ವಾಮೋರ್ಧ್ವೇ ಶಂಖಮೇವ ಚ ||**
**ದಕ್ಷಿಣಾಧೋ ಭವೇದ್ಬಾಣೋ ವಾಮಾಧೋ ಧನುರೇವ ಚ**
**ದ್ವಿಭುಜಂ ಶರಹಸ್ತಂ ವಾ ವಾಮಂ ಕುರ್ಯಾತ್ ಸಕಾರ್ಮುಕಮ್ ||**
**ಕೃತ್ವೈವಂ ರಾಘವಂ ರಾಮಂ ಸರ್ವಲಕ್ಷಣ ಸಂಯುತಮ್**
**ಕ್ರೂರಶತ್ರುವಿನಾಶಾಯ ಸ್ಥಾಪಯೇತ್ಸರ್ವಕಾಮದಮ್ ||**

ರಾಮನ ವಿಗ್ರಹವನ್ನು ಮಧ್ಯಮ ದಶತಾಲದಲ್ಲಿ ನಿರ್ಮಿಸಬೇಕು. ನಾಲ್ಕು ಭುಜಗಳಿರುವಾಗ ಬಲ ಪಾರ್ಶ್ವದ ಮೇಲಿನ ಹಸ್ತದಲ್ಲಿ ಚಕ್ರವನ್ನು, ಎಡ ಪಾರ್ಶ್ವದ ಮೇಲಿನ ಹಸ್ತದಲ್ಲಿ ಶಂಖವನ್ನು ಹಿಡಿದಿರಬೇಕು. ಬಲಗಡೆಯ ಮುಂದಿನ ಹಸ್ತದಲ್ಲಿ ಬಾಣವನು ಎಡಗಡೆಯ ಮಂದಿನ ಹಸ್ತದಲ್ಲಿ ಬಿಲ್ಲನ್ನು ಧರಿಸಿರಬೇಕು. ಎರಡೇ ತೋಳುಗಳು ಇರುವಂತ ರೂಪಿಸುವಾಗ ಎಡ ಹಸ್ತದಲ್ಲಿ ಧನುಸ್ಸು, ಬಲಹಸ್ತದಲ್ಲಿ ಬಿಲ್ಲು ಇರುವಂತೆ ರೂಪಿಸಬೇಕು. ಸರ್ವ ಲಕ್ಷಣ ಸಂಪನ್ನವಾಗಿದ್ದು ಸರ್ವಾಭರಣಭೂಷಿತನಾಗಿರುವ ಸ್ವಾಮಿಯನ್ನು ಸಕಲ ಇಷ್ಟಾರ್ಥಗಳ ಸಿದ್ಧಿಗಾಗಿಯೂ, ಶತ್ರು ವಿನಾಶದ ಉದ್ದೇಶದಿಂದಲೂ ಸ್ಥಾಪಿಸಬಹುದು.

ವೀರಾಸನದಲ್ಲಿ ರಾಮ ಕುಳಿತಿರುವುದರ ವರ್ಣನೆ ಅಗಸ್ತ್ಯಸಂಹಿತೆಯಲ್ಲಿ ಈ ರೀತಿಯಾಗಿ ದೊರೆಯುತ್ತದೆ

ಸಾಧು ವಕ್ಷ್ಯಾಮಿ ಸರ್ವಂ ತೇ ಶೃಣು ಹ್ಯಾವಹಿತೋ ಮುನೇ
ಸೀತಾಲಂಕೃತವಾಮಾಂಗಂ ದ್ವಿಭುಜಂ ಚಾರುಲೋಚನಮ್ ||
ವಾಮಹಸ್ತೇನ ಸೀತಾಯಾಃ ಸ್ಪರ್ಶಯನ್ ಸ್ತನಮಂಡಲಮ್
ಜ್ಞಾನಮುದ್ರಾಯುತೇ ನಾನ್ಯೇನಾನ್ವಿತಂ ಲೋಕಸುಂದರಮ್ ||
ಧನುರ್ದ್ವಯಕರೇಣಾಪಿ ಲಕ್ಷಣೇನ ಸುಶೋಭಿತಮ್
ಕೋಟಿ ಕಂದರ್ಪ ಸಂಕಾಶಂ ರಾಘವಂ ಕರುಣಾಕರಮ್ ||
ಉಪವಿಷ್ಟಂ ಪದ್ಮಮಧ್ಯೇ ವೀರಾಸನ ಮನೋಹರಮ್
ಹನುಮತ್ಸೇವಿತಂಚಾಗ್ರೇ ಕುರ್ಯಾದೇವಂ ಮನೋರಮಮ್ ||
ದಶಾಕ್ಷರ ಪ್ರಕಾರೋಽಯಂ ಕಥಿತೋ ಮುನಿಪುಂಗವೈಃ
ನೀಲೋತ್ಪಲದಲಶ್ಯಾಮಂ ಪೀತಾಂಬರಧರಂ ವಿಭುಮ್ ||
ದ್ವಿಭುಜಂ ಕುಂಜನಯನಂ ದಿವ್ಯಸಿಂಹಾಸನ ಸ್ಥಿತಮ್
ವಸಿಷ್ಠಾದ್ಯೈಶ್ಚ ಪರಿತೋ ವೃತಂ ರತ್ನ ಕಿರೀಟಿನಮ್ ||
ಸೀತಾಸಂಲಾಪಚತುರಂ ದಿವ್ಯಗಂಧಾದಿ ಶೋಭಿತಮ್
ಚಾಪದ್ವಯ ಕರೇಣಥ ಸೇವಿತ ಲಕ್ಮಣೇನ ಚ ||
ಶತ್ರುಘ್ನ ಭರತಾಭ್ಯಾಂಚ ಪಾರ್ಶ್ವಯೋರಥ ಸೇವಿತಮ್
(ಏವಂ) ಧ್ಯಾಯನ್ನನನ್ಯಧೀಃ ರಾಮಂ ದ್ವಾದಶಾಕ್ಷರಮನ್ತಹಮ್ ||

(ಅಗಸ್ತ್ಯ ಸಂಹಿತೆ, ೩೦)


ಶ್ರೀರಾಮ ಮಂತ್ರವನ್ನು ದಶಾಕ್ಷರಿ ಅಥವ ದ್ವಾದಶಾಕ್ಷರಿಯಲ್ಲಿ ಸಿದ್ಧಿಮಾಡಿ ಕೊಂಡು ಕೆಳಗೆ ವಿವರಿಸಿರುವ ಬಗೆಯ ಮೂರ್ತಿಗಳನ್ನು ಇರಿಸಿಕೊಂಡು ಅಭೀಷ್ಟ ಸಿದ್ಧಿಗಾಗಿ ಆರಾಧಿಸಬಹುದು. ಮೊದಲಿಗೆ ಎರಡು ತೋಳುಗಳುಳ್ಳ ಶ್ರೀರಾಮ ಕುಳಿತಿದ್ದು ಎಡಗಡೆಯಲ್ಲಿ ಸೀತಾದೇವಿಯ ಸ್ತನವನ್ನು ಸ್ಪರ್ಶಿಸುವಂತೆ ಎಡ ತೋಳನ್ನು ಚಾಚಿದ್ದು. ಇನ್ನೊಂದು ಹಸ್ತದಲ್ಲಿ ಜ್ಞಾನಮುದ್ರೆಯನ್ನು ಧರಿಸಿರಬೇಕು. ಈ ಮೂರ್ತಿಯು ದಿವ್ಯ ಮಂಗಳಾಕಾರನಾಗಿದ್ದು ತ್ರಿಭುವನ ಸುಂದರನಾಗಿರುತ್ತಾನೆ.

ಪದ್ಮ ಪೀಠದಮೇಲೆ ವೀರಾಸನದಲ್ಲಿ ಕುಳಿತದ್ದು ಬಲಹಸ್ತದಲ್ಲಿ ಬಾಣವನ್ನು ಎಡಹಸ್ತದಲ್ಲಿ ಧನುಸ್ಸನ್ನು ಹಿಡಿದಿದ್ದು ಕೋಟಿಸೂರ್ಯಂತೆ ಪ್ರಕಾಶಮಾನವಾಗಿರುವ ಕರುಣಾಮೂರ್ತಿಯಾದ ರಾಮನು ಚಿತೋಹಾರಿಯಾಗಿರುತ್ತಾನೆ.

ನೀಲವರ್ಣದೇಹಿಯಾದ ರಾಮನು ಪೀತಾಂಬರಧಾರಿಯಾಗಿ ದಿವ್ಯರತ್ನ ಸಿಂಹಾಸನದಲ್ಲಿ ಮಂಡಿಸಿದ್ದು, ರತ್ನಕಿರೀಟವನ್ನು ಧರಿಸಿದ್ದು, ಸೀತಾದೇವಿಯನ್ನು ಪಾರ್ಶ್ವದಲ್ಲಿ ಕುಳ್ಳರಿಸಿಕೊಂಡಿರುತ್ತಾನೆ. ವಶಿಷ್ಠರು, ಲಕ್ಷ್ಮಣ, ಶತ್ರುಘ್ನ, ಭರತರಿಂದ ಆವೃತನಾಗಿದ್ದು ಇವರೆಲ್ಲರಿಂದಲೂ ಸೇವಿಸಲ್ಪಡುತ್ತಿರುತ್ತಾನೆ.

ಪರಿವಾರದವರು ಇರಬೇಕಾದ ದಿಕ್ಕುಗಳ ಬಗ್ಗೆ ಪಾರಾಶರ ಸಂಹಿತೆ (೧೫ : ೨೦೨) ಇಂತು ಹೇಳುತ್ತದೆ :

ವಾಮೇ ಭೂಮಿಸುತಾ ಪುರಸ್ತು ಹನುಮಾನ್ ಪಶ್ಚಾತ್ ಸುಮಿತ್ರಾಸುತಃ
ಶತ್ರುಘ್ನೋ ಭರತಶ್ಚ ಪಾರ್ಶ್ವಯುಗಲೇ ವಾಯ್ವಾದಿಕೋಣೇಷು ಚ ||



ಚಿತ್ರ ೩೭ : ಶ್ರೀರಾಮ ಮೂರ್ತಿ ( ವೀರಾಸನ )

**ಸುಗ್ರೀವಶ್ಚ ವಿಭೀಷಣಶ್ಚ ಯುವರಾಟ್ ತಾರಾಸುತೋ ಜಾಂಬವಾನ್**
**ಮಧ್ಯೇ ನೀಲಸರೋಜಕೋಮಲರುಚಿಂ ರಾಮಂ ಭಜೇ ಶ್ಯಾಮಲಮ್ ||**

ಎಡಗಡೆಗೆ ಸೀತಾದೇವಿ, ಮುಂಭಾಗದಲ್ಲಿ ಹನುಮಂತ ಇನ್ನೊಂದು ಕಡೆಗೆ (ಬಲಗಡೆ) ಲಕ್ಷ್ಮಣ. ಎರಡು ಪಾರ್ಶ್ವಗಳಲ್ಲಿ ಶತ್ರುಘ್ನ ಮತ್ತು ಭರತರು. ದಿಕ್ಕುಗಳಿಗೆ ಸುಗ್ರೀವ, ವಿಭೀಷಣ, ಅಂಗದ, ಜಾಂಬುವಂತ ಇರಬೇಕು. ಮಧ್ಯಭಾಗದಲ್ಲಿ ನೀಲೋತ್ಪಲದಂತೆ ಶ್ರೀರಾಮ ಮೂರ್ತಿ ಇರುತ್ತಾನೆ.

**ಯುವಾ ಪ್ರಸನ್ನ ವದನಃ ಸಿಂಹಸ್ಕಂಧೋಽರುಣೇಕ್ಷಣಃ**
**ಆಜಾನು ಬಾಹುಃ ಕರ್ತ್ತವ್ಯೋ ರಾಮೋ ಬಾಣಧನುರ್ಧರಃ ||**

(ಶ್ರೀರಾಮನು ನಿರ್ಮಲವಾದ ಪ್ರಸನ್ನವದನದೊಂದಿಗೆ ಸಿಂಹದ ಭುಜಗಳಂತೆ ದೃಢವಾದ ತೋಳುಗಳು, ಕೆಂಪಾದ ಕಣ್ಣುಗಳು, ಮೊಣಕಾಲುಗಳನ್ನು ಸ್ಪರ್ಶಿಸುವ ದೀರ್ಘವಾದ ತೋಳುಗಳೊಂದಿಗೆ, ತಾರುಣ್ಯದಲ್ಲಿ ಇರುವ ಈ ಸ್ವಾಮಿಯು ಬಲಹಸ್ತದಲ್ಲಿ ಬಾಣವನ್ನು ಎಡಹಸ್ತದಲ್ಲಿ ಬಿಲ್ಲನ್ನು ಹಿಡಿದಿರುತ್ತಾನೆ. ಸ್ವಾಮಿಯ ಮೈ ಶ್ಯಾಮಲ ವರ್ಣದಲ್ಲಿರುತ್ತದೆ).

ಎಂಬ ವರ್ಣನೆಯು ಪಾದ್ಮ ಸಂಹಿತೆಯಲ್ಲಿಯೇ ದೊರೆಯುತ್ತದೆ.

ವೈಖಾನಸ ಆಗಮನವು ಸಾಕಷ್ಟು ವಿವರವಾಗಿಯೇ ಈ ರೀತಿಯ ವಿವರಣೆ ಕೊಟ್ಟಿದೆ -

**ಅಥ ರಾಘವರಾಮಂ ಸವಿಂಶತಿಶತಾಂಗುಲಮಿತಂ ದ್ವಿಭುಜಂ ತ್ರಿಭಂಗಸ್ಥಿತಂ ದಕ್ಷಿಣಹಸ್ತೇನ ಶರಧರಂ ವಾಮೇನ ಚಾಪಧರಂ ಶ್ಯಾಮಾಭಂ ರಕ್ತಾಂಬರಧರಂ ಕಿರೀಟಾದ್ಯಾಭರಣಾನ್ವಿತಂ ಕಾರಯೇತ್| ದೇವಸ್ಯ ಬಾಹುಸಮಂ ದೇವೀಂ ಸೀತಾಂ ನವಾರ್ಧತಾಲಮಾನೇನಾ ಭಂಗವಶಾದ್ರುಕ್ಮಾಭಾಂ ಶುಕ ಪಿಂಛ ನಿಭಾಂಬರಧರಾಂ ಸರ್ವಾಭರಣ ಭೂಷಿತಾಂ ಧಮ್ಮಿಲ್ಲ ಬಂಧಯುತಾಂ ಕರಂಡಿಕಾ ಮಕುಟೋಪೇತಂ ವಾಮಹಸ್ತೇನ ನೀಲೋತ್ಪಲ್ಲ ಪದ್ಮಧರಾಂ ಪ್ರಸಾರಿತ ದಕ್ಷಿಣಹಸ್ತಾಂ ಕಾರಯೇತ್| ದೇವಸ್ಯ ದಕ್ಷಿಣೇ ಪಾರ್ಶ್ವೇ ದೇವೀಂ ಕಿಂಚಿತ್ಸಮೀಕ್ಷ ವಿಸ್ಮಯೋತ್ಫುಲ್ಲಲೋಚನಾಂ ದೇವೀಂ ಕಾರಯೇತ್ | ವಾಮ ಪಾರ್ಶ್ವೇ ಸೌಮಿತ್ರೀಂ ದೇವಸ್ಯ ಕರ್ಣಸೀಮಾಂತಂ ಬಾಹ್ವಂತಂ ವಾ ಲಕ್ಷ್ಮಣಂ ದಶತಾಲಂ ಷೋಡಶಾಧಿಕಶತಾಂಗುಲಂ... ಉದ್ವದ್ಧ ಕುಂಡಲಂ ಯುವರಾಜ ಭೂಷಣಾನ್ವಿತಂ ದ್ವಿಭುಜಂ ರಾಮವಚ್ಛರ ಚಾಪಧರಂ ಸುವರ್ಣವರ್ಣಾಂ ಶ್ಯಾಮಾಂಬರಧರಂ ಸಮಭಂಗಾನ್ವಿತಂ ಕಾರಯೇತ್| ಹನೂಮಂತಂ ಪ್ರಮುಖೇ ಕಿಂಚಿದ್ ದಕ್ಷಿಣಮಾಶ್ರಿತ್ಯ ಸ್ಥಿತಂ ದೇವಸ್ಯ ಸ್ತನಾಂತಂ ನಾಭ್ಯಂತ ಮೂರು ಮೂಲಾಂತಂ ವಾ ಸಪ್ತತಾಲಮಿತಂ ದ್ವಿಭುಜಂ ದಕ್ಷಿಣೇನ ಹಸ್ತೇನಾಸ್ಯ ವಾಮೇನ ಸ್ವವಸ್ತ್ರಂ ಚ ಪಿಧಾನಂ ಕಿಂಚದೂರ್ಧ್ವಾನನಂ ಕಾರಯೇತ್ |**

ರಾಮನನ್ನು ಮಧ್ಯಮ ದಶತಾಲಮಾನದಲ್ಲಿ (೧೨೦ ಅಂಗುಳ) ರೂಪಿಸಬೇಕು. ನಿಂತಿರುವಾಗ ತ್ರಿಭಂಗಿಯಲ್ಲಿರಬೇಕು. ಕಿರೀಟಮಕುಟವನ್ನು ಧರಿಸಿರಬೇಕು. ಸೀತೆಯು ರಾಮನ ಬಲಗಡೆಗೆ ಆತನ ಭುಜದ ಎತ್ತರಕ್ಕೆ ಇರಬೇಕು ಮತ್ತು ಸಾರ್ಧನವತಾಳಮಾನದಲ್ಲಿ (೧೧೪ ಅಂಗುಳಗಳು) ರೂಪಿಸಬೇಕು. ದೇವಿ ಸಮಪಾದದಲ್ಲಿ ಇರಬೇಕು ಮತ್ತು ಕರಂಡ ಮುಕುಟವನ್ನು ಧರಿಸಿರಬೇಕು. ಅಥವ ಧಮ್ಮಿಲ್ಲ ಧರಿಸಿರಬಹುದು. ಎಡಹಸ್ತದಲ್ಲಿ ನೀಲೋತ್ಪಲ ಇದ್ದು ಬಲತೋಳು ಪ್ರಸಾರಿತಹಸ್ತವಾಗಿರಬೇಕು. ಲಕ್ಷ್ಮಣನು ಅಧಮ ದಶತಾಲದಲ್ಲಿ (೧೧೬ ಅಂಗುಳ) ಯುವರಾಜನ ಆಭರಣ ಮತ್ತು ಉಡಿಗೆಗಳಲ್ಲಿ ದೇವನ

ಎಡಗಡೆಗೆ ಆತನ ಕಿವಿಗಳತಕ ಎತ್ತರವಿರುವಂತೆ ರೂಪಿತವಾಗಬೇಕು. ಹನುಮಂತನನ್ನು ಮಧ್ಯಮ ಸಪ್ತತಾಲಮಾನ (೮೪ ಅಂಗುಳ)ದಲ್ಲಿ ರೂಪಿಸಬೇಕು.

ವಿಷ್ಣುಧರ್ಮೋತ್ತರ ಪುರಾಣದಲ್ಲಿ ಈ ಮೂರ್ತಿಗಳೊಂದಿಗೆ ಭರತ, ಶತ್ರುಘ್ನರನ್ನೂ, ಸೇರಿಸುತ್ತದೆ ಆದರೆ ಲಕ್ಷ್ಮಣ, ಭರತ, ಶತ್ರುಘ್ನ ಇವರು ಕಿರೀಟ ಮಕುಟವನ್ನು ಧರಿಸಿರಕೂಡದು **(ರಾಮೋ ದಾಶರಥಿಃ ಕಾರ್ಯೋ ರಾಜಲಕ್ಷಣಲಾಲಿತಃ। ಭರತೋ ಲಕ್ಷ್ಮಣಶ್ಚೈವ ಶತೃಘ್ನಶ್ಚ ಮಹಾಶಯಃ॥ ತಥೈವ ಸರ್ವೇ ಕರ್ತವ್ಯಾಃ ಕಿಂ ತು ಮೌಲಿವಿವರ್ಜಿತಾಃ ) .**

ವಿಷ್ಣುದೇವಾಲಯದಲ್ಲಿ ಈಶಾನ್ಯ ಭಾಗದಲ್ಲಿ ರಾಮಾಲಯವನ್ನು ನಿರ್ಮಿಸಬೇಕು. ಅಲ್ಲಿ ರಾಮ, ಸೀತೆ, ಲಕ್ಷ್ಮಣ, ಭರತ, ಶತ್ರುಘ್ನ ಮತ್ತು ಹನುಮಂತ ಎಲ್ಲರೂ ನಿಂತಿರುವಂತೆ ರೂಪಿಸಬೇಕು. ರಾಮ, ಸೀತೆಯರ ವಿನಾ ಉಳಿದವರೆಲ್ಲರೂ ತಲೆಗೂದಲುಗಳನ್ನು ಮೇಲಕ್ಕೆ ಎತ್ತಿಕಟ್ಟಿರಬೇಕು. ರಾಮನ ಬಲಗಡೆಗೆ ನಿಂತಿರುವ ಭರತನು ಬಿಲ್ಲು ಬಾಣಗಳನ್ನು ಧರಿಸಿರಬೇಕು ಅಥವ ಕತ್ತಿ ಗುರಾಣಿಗಳನ್ನಾದರೂ ಹಿಡಿದಿರಬಹುದು (ವೈಖಾನಸ ಆಗಮದ ಪ್ರಕಾರ). ರಾಮನಂತೆ ಭರತನೂ ಶ್ರೀವತ್ಸ, ಕವಚ ಮತ್ತು ಕೌಸ್ತುಭ ಆಭರಣ ಧರಿಸಿರಬೇಕು . ಶತ್ರುಘ್ನನು ಎಡಭಾಗದಲ್ಲಿ ನಿಂತಿರಬೇಕು.

ಇದಿಷ್ಟು ರಾಮನ ಮೂರ್ತಿ ಕಲ್ಪನೆಯ ಬಗ್ಗೆ ದೊರೆಯುವ ವಿವರಣೆ.


*ಇತಿ ಶ್ರೀ ಬ್ರಾಹ್ಮೀಯೇ ಚಿತ್ರಕರ್ಮಶಾಸ್ತ್ರೇ ಪ್ರಾದುರ್ಭಾವಕಾಂಡೇ ರಾಮದಾಶರಥಿ ಲಕ್ಷಣಂ ನಾಮ ಸಪ್ತಮೋಽಧ್ಯಾಯಃ*

ಅಥ ಅಷ್ಟಮೋಽಧ್ಯಾಯಃ

# ಬಲಭದ್ರಸ್ಯ ಲಕ್ಷಣಮ್

ಅಧುನಾ ಬಲಭದ್ರಸ್ಯ ರಾಮಸ್ಯಾಕೃತಿ ಲಕ್ಷಣಮ್
ಮನೋನ್ಮಾನ ಪ್ರಮಾಣಾನಿ ರಾಘವಸ್ಯೋಕ್ತ ಮಾರ್ಗವತ್ ॥ ೧ ॥
ಶಂಖ ಗೋಕ್ಷೀರ ಕುಂದಾಭೋ ಪೂರ್ಣಚಂದ್ರ ಸಮದ್ಯುತಿಃ
ಶಿಖಾ ಬಂಧಂ ಭವೇನ್ಮೌಳಿಃ ಕುಂಡಲಂ ಮಕರಂ ಭವೇತ್ ॥ ೨ ॥
ಹಾರಂ ಶ್ರೀವತ್ಸಕಂ ಪಾದಮಂಡನಂ ವಲಯಂ ಭವೇತ್
ರತ್ನಾವಯವ ಮಂಗುಲ್ಯಾಭರಣಂ (ಲ್ಯಾವಯವಂ) ದೋರಬಂಧನಮ್ ॥ ೩ ॥
ಸಕೃತ್ರಿಮಂ ಕಟಿಬಂಧನಂ ವಲಯಂ ರತ್ನಮಂಡಿತಮ್
ಅನ್ಯೈರೀದೃಗ್ವಿಧೈ ರ್ಭೂಷ್ಯೋ ಮಂಡನೈಃ ಪುಂಡರೀಕಜ ॥ ೪ ॥
ರತ್ನಾಂಬರೀ ಮುಸಲ ಹಲಧಾರೀ ಸತ್ವರಜೋ ಗುಣಃ
ವೈಶಾಖಂ ಸಮಪಾದಂ ವಾ ಸ್ಥಾನಕಂ ಸ್ಯಾತ್ ಭುಜದ್ವಯಮ್ ॥ ೫ ॥
ಸವ್ಯಸ್ಥಾ ರೇವತೀ ದೇವೀ ಪದ್ಮಕಿಂಜಲ್ಕ ಭಾಸ್ವರಾ
ದ್ವಿತ್ರ ಕೌಶೇಯವಸ್ತ್ರಾಢ್ಯಾ ದಿವ್ಯ ಸ್ತ್ರೀಮಂಡನಾನ್ವಿತಾ ॥ ೬ ॥
ಸ್ಥಾಪನಂ ಮಾನುಷೇ ಕಾರ್ಯಂ ಬ್ರಹ್ಮಸೂತ್ರಾದಸವ್ಯಕೇ
ಸಾಂಬಾನಿರೂಢ ಪ್ರದ್ಯುಮ್ನಾದಿ ಭಿರ್ಯುಕ್ತೋಽ ಥವಾ ಸ್ಥಿತಃ ॥ ೭ ॥

ಬಲಭದ್ರ ಮೂರ್ತಿಯ ಲಕ್ಷಣವನ್ನು ಹೇಳುತ್ತೇನೆ. ಈ ಪ್ರತಿಮೆಯ ಮಾನ (ಎಂದರೆ ಎತ್ತರ. ಇದನ್ನು ಉದ್ದ ಎಂದೂ ಕರೆಯಲಾಗುತ್ತದೆ), ಪ್ರಮಾಣ (ಎಂದರೆ ಅಗಲ. ಮಾನವನ್ನು ಅಳೆಯುವ ಸಮತಲದಲ್ಲಿ ಅದರ ಸಮಕೋನಕ್ಕೆ ಸರಿಯಾಗಿ ಅಳೆಯುತ್ತಾರೆ. ಕೆಲವು ಬಾರಿ ಇದನ್ನು ಅಡ್ಡಗಲ ಎಂದೂ ಹೇಳುತ್ತಾರೆ), ಉನ್ಮಾನ (ಎಂದರೆ ಇದು ದಪ್ಪವನ್ನು ಸೂಚಿಸುತ್ತದೆ. ಮಾನ - ಪ್ರಮಾಣಗಳನ್ನು ಅಳೆಯುವ ಸಮತಲಕ್ಕೆ ಸರಿಯಾಗಿ ಸಮಕೋನದಲ್ಲಿ ಇದನ್ನು ಅಳೆಯಲಾಗುತ್ತದೆ) ಈ ಮೂರೂ ರಾಮನಿಗೆ ಹೇಳಿರುವವೇ ಅನ್ವಯವಾಗುತ್ತವೆ. ಶಂಖ, ಹಸುವಿನ ಹಾಲು, ಮಲ್ಲಿಗೆಯ ಹೂ ಮತ್ತು ಪೂರ್ಣಚಂದ್ರ ಇವುಗಳಂತೆ ಬಿಳುಪಾದ ದೇಹಕಾಂತಿಯನ್ನು ಪಡೆದಿರುತ್ತಾನೆ. ಶಿಖೆಯನ್ನು ಕಟ್ಟಿದ್ದು ಕಿರೀಟವನ್ನು ಧರಿಸಿರುತ್ತಾನೆ. ಕಿವಿಯಲ್ಲಿ ಮಕರ ಕುಂಡಲಗಳು, ಶ್ರೀವತ್ಸ, ವನಮಾಲೆ, ರತ್ನದುಂಗುರ, ಕೈಯಲ್ಲಿ ಕಂಕಣ ರತ್ನಖಚಿತ ಬಳೆಗಳು, ಸೊಂಟದಲ್ಲಿ ಒಡ್ಯಾಣ ಕಾಲಲ್ಲಿ ಅಂದುಗೆ, ಮುಂತಾದ ರತ್ನಾಭರಣಗಳಿಂದ ಅಲಂಕೃತನಾಗಿರುತ್ತಾನೆ.



ಚಿತ್ರ ೩೮ : ಬಲಭದ್ರ ಮತ್ತು ರೇವತಿ

ಎಲ್ಲೈಬ್ರಹ್ಮದೇವನೇ, ಕೆಂಪು ವಸ್ತ್ರಧರಿಸಿ, ಒನಕೆ ಮತ್ತು ನೇಗಿಲನ್ನು ಕೈಯ್ಯಲ್ಲಿ ಹಿಡಿದಿರುವ ಸತ್ವ ರಜೋಗುಣ ಪ್ರಧಾನವಾಗಿರುವ ಈ ದೇವನು ವೈಶಾಖ ಅಥವ ಸಮಪಾದದಲ್ಲಿ ನಿಂತಿರುತ್ತಾನೆ (ಸ್ಥಾನಕನಾಗಿರುತ್ತಾನೆ). ಎರಡು ತೋಳುಗಳನ್ನು ಹೊಂದಿರುವ ಈ ದೇವನ ಎಡಭಾಗದಲ್ಲಿ ಮಕರಂದದಂತೆ ಜೇನುತುಪ್ಪದ ಬಣ್ಣದಲ್ಲಿ ಪ್ರಕಾಶಿಸುತ್ತಿರುವ ರೇವತೀದೇವಿ ಇರುತ್ತಾಳೆ. ದೇವಿಯು ಸುಂದರವಾದ ರೇಶ್ಮೆವಸ್ತ್ರವನ್ನು ಧರಿಸಿರುತ್ತಾಳೆ. ಆಕೆಯ ಅಲಂಕರಣವು ದೇವಲೋಕದ ಸ್ತ್ರೀಯರನ್ನು ಅನುಸರಿಸಿರುತ್ತದೆ. ಈ ದೇವಿಯನ್ನು ಬಲಭದ್ರದೇವನ ಬ್ರಹ್ಮಸೂತ್ರದ ಎಡಭಾಗಕ್ಕೆ ಸ್ಥಾಪಿಸಬೇಕು (ರೂಪಿಸಬೇಕು). ಅಥವ ಸಾಂಬ, ಅನಿರುದ್ಧ, ಪ್ರದ್ಯುಮ್ನ ಮುಂತಾದವರೊಂದಿಗೆ ಈ ದೇವನನ್ನು ರೂಪಿಸಬಹುದು.

## *ವಿಶೇಷ ವಿವರ*

ಬಲರಾಮನು ಸೋಮವಂಶದ ವೃಷ್ಣಿಕುಲದವನು. ವಾಸುದೇವ ಮತ್ತು ರೋಹಿಣಿಯರ ಮಗ. ಈತನು ಶ್ರೀಕೃಷ್ಣನ ಅಣ್ಣ. ಶೇಷನ ಅವತಾರವೆಂದು ಭಾವಿಸಲಾಗುತ್ತದೆ (ಮಹಾಭಾರತ, ಆದಿಪರ್ವ ೬೧ : ೬೧). ಭಗವಂತ ನಾರಾಯಣನ ಶ್ವೇತ ಕೇಶಗಳಿಂದ ಈತನ ಅವಿರ್ಭಾವವಾಯಿತು (ಮಹಾಭಾರತ, ಆದಿಪರ್ವ, ೧೮೧ : ೩೧).

ವಸುದೇವನು ಮತ್ತು ದೇವಕಿಯು ಕಂಸನಿಂದ ಬಂಧಿಸಲ್ಪಟ್ಟಿದ್ದರು. ಆಗ ದೇವಕಿಯು ಗರ್ಭವತಿಯಾದಳು. ಬಲರಾಮ ಆಕೆಯ ಗರ್ಭದಲ್ಲಿ ಏಳು ತಿಂಗಳುಗಳ ಕಾಲ ಇದ್ದ. ನಂತರ ಯೋಗಮಾಯೆಯಿಂದ ವಸುದೇವನ ಎರಡನೆಯ ಹೆಂಡತಿಯಾದ ರೋಹಿಣಿಯ ಗರ್ಭಕ್ಕೆ ಹೋದ. ರೋಹಿಣಿಯು ಆಗ ಗೋಕುಲದಲ್ಲಿರುತ್ತಿದ್ದಳು. ಗೋಕುಲದಲ್ಲಿಯೇ ಬಲರಾಮ ಹುಟ್ಟಿದ (ಭಾಗವತ ೯ : ೨೪ : ೪೬ ; ೧೦ : ೨ : ೮ ; ಪದ್ಮಪುರಾಣ, ಉತ್ತರ ಖಂಡ, ೨೪೫). ಒಂದು ಗರ್ಭದಿಂದ ಇನ್ನೊಂದು ಗರ್ಭಕ್ಕೆ ಹೋದುದರಿಂದ ಈತನನ್ನು *ಸಂಕರ್ಷಣ* ಎನ್ನುತ್ತಾರೆ.

ನೋಡಲು ಬಹು ಸುಂದರನಾಗಿದ್ದುದರಿಂದ ಈತನನ್ನು *ರಾಮ* ಎನ್ನುತ್ತಿದ್ದರು. ಬಾಲಕನಾಗಿದ್ದಾಗಲೇ ಬಹು ಪೌರುಷಶಾಲಿಯಾಗಿದ್ದುದರಿಂದ *ಬಲರಾಮ* ಎಂದು ಕರೆಯಲ್ಪಟ್ಟ. ಶತ್ರುಗಳ ದಮನಕ್ಕಾಗಿ ಹಲ (ನೇಗಿಲು) ಮತ್ತು ಮುಸಲ (ಒನಕೆ) ಧರಿಸಿರುತ್ತಿದ್ದ. ಆದ್ದರಿಂದ ಈತನನ್ನು *ಹಲಿ,ಹಲಾಯುಧ, ಸೀರಪಾಣಿ, ಮುಸಲೀ, ಮುಸಲಾಯುಧ* ಎಂದೂ ಕರೆಯುತ್ತಿದ್ದರು.

ಬಲರಾಮನು ಕೃಷ್ಣನಿಗಿಂತಲೂ ಹತ್ತು ತಿಂಗಳು ದೊಡ್ಡವನಾಗಿದ್ದು ಸದಾ ಕೃಷ್ಣನೊಂದಿಗೇ ಇರುತ್ತಿದ್ದ (ಮಹಾಭಾರತ, ಆದಿಪರ್ವ ೨೩೪). ಬಾಲ್ಯದಿಂದಲೇ ಪರಮ ಪರಾಕ್ರಮಿ, ಯುದ್ಧವೀರ ಹಾಗೂ ಸಾಹಸಿಯಾಗಿದ್ದ. ಧೇನುಕ ಮತ್ತು ಪ್ರಲಂಬ ಎಂಬ ಇಬ್ಬರು ರಾಕ್ಷಸರನ್ನು ವಧಿಸಿದ (ಮಹಾಭಾತರ, ಸಭಾಪರ್ವ ೧ : ೨೧, ವಿಷ್ಣುಪುರಾಣ ೫ : ೮ - ೯, ಭಾಗವತ ೧೦ : ೧೮, ಹರಿವಂಶ ೨ : ೨೪ : ೬೨).

ಈತ ಸದಾ ಯಮುನೆಯು ಕೊಟ್ಟಿದ್ದ ನೀಲ ವಸ್ತ್ರಗಳನ್ನು, ಕಮಲದ ಮಾಲೆಯನ್ನು

ಧರಿಸುತ್ತಿದ್ದ. ಇವನ್ನು ಯಮುನೆ ಕೊಟ್ಟಿದ್ದಕ್ಕೆ ಒಂದು ಆಖ್ಯಾಯಿಕೆ ಹೇಳುತ್ತಾರೆ. ಅದು ಇಂತಿದೆ : ಒಮ್ಮೆ ಭಾವಾತಿರೇಕಕ್ಕೆ ತುತ್ತಾಗಿ ಯಮುನೆಯೊಂದಿಗೆ ಸಂಭೋಗಿಸಲು ಬಯಸಿದ. ಯಮುನೆ ಇದಕ್ಕೆ ಅಂಗೀಕರಿಸಲಿಲ್ಲ. ಇದರಿಂದ ಕೋಪಗೊಂಡು ಯಮುನೆಯನ್ನು ಮಧುರೆಯ ಬಳಿ ಹಾದಿ ತಪ್ಪಿಸಿದ. ಇದನ್ನು 'ಯಮುನಾಕರ್ಷ' ಎಂದು ಹೇಳಲಾಗಿದೆ. ಆಗ ಯಮುನೆಯು ಬಲರಾಮನು ತೊಡಲು ನೀಲಿ ಉಡುಪು ಮತ್ತು ಧರಿಸಲು ಕಮಲದ ಮಾಲೆ ಕೊಟ್ಟು ಬಲರಾಮನನ್ನು ಪ್ರಸನ್ನಗೊಳಿಸಿದಳು (ವಿಷ್ಣುಪುರಾಣ, ೫ : ೨೫)

ಸಾಂದೀಪಿನಿ ಋಷಿಯ ಬಳಿ ಕೃಷ್ಣನ ಸಹಚರ್ಯದಲ್ಲಿ ಈತನು ವೇದವಿದ್ಯೆ, ಬ್ರಹ್ಮವಿದ್ಯೆ, ಅಸ್ತ್ರ - ಶಸ್ತ್ರಗಳ ಪ್ರಯೋಗ ಜ್ಞಾನ ಗಳಿಸಿಕೊಂಡ. ಗದಾಯುದ್ಧದಲ್ಲಿ ಅತ್ಯಂತ ಪ್ರವೀಣನಾಗಿದ್ದ. ಈತನ ಬಲದ ನೆರವಿನಿಂದಲೇ ಕೃಷ್ಣನು ಜರಾಸಂಧನೊಂದಿಗೆ ಹದಿನೇಳು ಬಾರಿ ಹೋರಾಡುವುದು ಸಾಧ್ಯವಾಯಿತು. ಜರಾಸಂಧನನ್ನು ಕೊಲ್ಲಲು ಈತನು ತಪಸ್ಸುಮಾಡಿ ಸಂವರ್ತಕ ಎಂಬ ಹಲ (ನೇಗಿಲು), ಸೌನಂದ ಎಂಬ ಮುಸಲ(ಒನಕೆ)ವನ್ನು ಪಡೆದುಕೊಂಡ (ಹರಿವಂಶಪುರಾಣ, ೨ : ೩೫ ; ೫೮ - ೬೫; ವಿಷ್ಣುಪುರಾಣ, ೫ : ೨೨ : ೬ - ೭).

ವಿದ್ಯಾಭ್ಯಾಸದ ನಂತರ ಕಕುದ್ಮೀ ಕನ್ಯೆಯಾದ ರೇವತಿಯೊಂದಿಗೆ ಈತನ ವಿವಾಹ ನಡೆಯಿತು. ನಂತರ ಹೆಚ್ಚು ಕಾಲ ಆನರ್ತದೇಶದಲ್ಲಿ ತನ್ನ ಮಾವನ ಮನೆಯಲ್ಲಿಯೇ ಇರುತ್ತಿದ್ದ. ಜರಾಸಂಧನನ್ನು ಹದಿನೇಳು ಬಾರಿ ಸೋಲಿಸಿದ್ದನಾದರೂ ಕೃಷ್ಣನಿಗೆ ಜರಾಸಂಧನು ಚಿಂತೆಯ ವಿಷಯವೇ ಆಗಿದ್ದ. ಇದೇ ಕಾರಣದಿಂದಲೇ ಕೃಷ್ಣನು ತನ್ನ ರಾಜಧಾನಿಯನ್ನು ಮಥುರಾದಿಂದ ದ್ವಾರಕೆಗೆ ಬದಲಿಸಿದ.

ಒಮ್ಮೆ ಬಲರಾಮನು ನಂದ ಮತ್ತು ಯಶೋದೆಯರನ್ನು ನೋಡಲು ಹೋಗಿ ಅಲ್ಲಿಯೇ ಎರಡು ತಿಂಗಳುಗಳ ಕಾಲ ಇದ್ದ. ಈತನಿಗೆ ಆಸವ ಪಾನವೆಂದರೆ ಅತೀವವಾದ ಆಸೆ. ಆದ್ದರಿಂದ ಆಸವ ತಯಾರಿಕೆಯ ವ್ಯವಸ್ಥೆಯನ್ನು ಅಲ್ಲಿ ಈತನಿಗಾಗಿಯೇ ಮಾಡಿದರು.

ಬಹು ವೀರನೂ, ಪರಾಕ್ರಮಿಯೂ, ಅಜೇಯನೂ ಆಗಿದ್ದಂತೆಯೇ, ಬಹು ಭಾವುಕನೂ, ಆತುರದ ಸ್ವಭಾವದವನೂ ಆಗಿದ್ದ. ಅನೇಕ ಬಾರಿ ಆತುರದಲ್ಲಿ ದುಡುಕಿ ಪರಿವಾರದವರೆಲ್ಲರೂ ಬೇಸರಗೊಳ್ಳುವಂತಹ ಕಾರ್ಯಗಳನ್ನು ಮಾಡುತ್ತಿದ್ದ. ಯಾವುದನ್ನೇ ಸಾವಕಾಶವಾಗಿ ಯೋಚಿಸಿ ತೀರ್ಮಾನಿಸುವಂತಹ ವಿವೇಕ ಈತನಲ್ಲಿ ಇರಲಿಲ್ಲ.

ಹಸ್ತಿನಾಪುರದಲ್ಲಿ ದುರ್ಯೋಧನನ ಪುತ್ರಿ ಲಕ್ಷ್ಮಣಾಳ ಸ್ವಯಂವರ ಏರ್ಪಾಟಾಗಿತ್ತು. ಕೃಷ್ಣನ ಮಗ ಸಾಂಬನು ಸ್ವಯಂವರಕ್ಕೆ ಹೋಗಿ ಲಕ್ಷ್ಮಣಾಳ ಹರಣ ನಡೆಸಿದರು. ಹಸ್ತಿನಾಪುರದಲ್ಲಿಯೇ ದುರ್ಯೋಧನನ ಭಟರು ಇಬ್ಬರನ್ನೂ ಹಿಡಿದರು. ದುರ್ಯೋಧನನು ಕೌರವ ವಂಶೀಯನಾಗಿದ್ದುದರಿಂದ ಯಾದವ ಕುಲದ ಕೃಷ್ಣನ ಪುತ್ರನೊಂದಿಗೆ ತನ್ನ ಮಗಳ ವಿವಾಹ ನಡೆಸುವುದು ದುರ್ಯೋಧನನಿಗೆ ಇಷ್ಟವಿರಲಿಲ್ಲ. ಈ ಸುದ್ದಿ ಕೇಳುತ್ತಲೇ ಬಲರಾಮ ಹಸ್ತಿನಾಪುರಕ್ಕೆ ಬಂದ: ಕೌರವ ವಂಶದ ಎಲ್ಲಾ ರಾಜರನ್ನೂ ಸೋಲಿಸಿದ. ತನ್ನ ಹಲಾಯುಧದ

ಬಲದಿಂದ ಹಸ್ತಿನಾಪುರದ ರೂಪರೇಖೆಯನ್ನೇ ಬದಲಿಸಿದ. ಅದನ್ನು ಹಾಳುಗೆಡವಿದ (ವಿಷ್ಣುಪುರಾಣ ೫ : ೩೫, ಭಾಗವತ, ೧೦ : ೬೮). ಇದೇ ಕಾರಣದಿಂದಲೇ ಹಸ್ತಿನಾಪುರದ ಮೇಲ್ಮೈ ಇಂದಿಗೂ ಏರುಪೇರಾಗಿ ವಿಚಿತ್ರವಾಗಿ ಕಾಣಬರುತ್ತದೆ.

ಯಾದವ ವಂಶದ ಅರಸ ಸತ್ರಾಜಿತನ ಬಳಿ ಶ್ಯಮಂತಕಮಣಿ ಇತ್ತು. ಅದನ್ನು ಪಡೆಯಬೇಕೆಂದು ಕೃಷ್ಣನು ಆಶಿಸಿದ್ದ. ಆದರೆ ಸತ್ರಾಜಿತನು ಅದನ್ನು ಕೊಡಲು ನಿರಾಕರಿಸಿದ. ಇದಕ್ಕಾಗಿ ಸತ್ರಾಜಿತ ಮತ್ತು ಕೃಷ್ಣನ ಮಧ್ಯೆ ನಡೆದ ಜಗಳದಲ್ಲಿ ಬಲರಾಮನು ಸತ್ರಾಜಿತನ ಪಕ್ಷವನ್ನು ವಹಿಸಿಕೊಳ್ಳಬೇಕಾಯಿತು. ಆದ್ದರಿಂದ ಎಲ್ಲರ ಮುಂದೆ ಬಹಿರಂಗವಾಗಿ ಕೃಷ್ಣನ ವಿರೋಧವಾಗಿ 'ನೀನು ಶ್ಯಮಂತಕಮಣಿಯನ್ನು ಬಯಸಿದ್ದೆ. ಆದ್ದರಿಂದ ನೀನೇ ಆ ಮಣಿಯನ್ನು ಕಳ್ಳತನ ಮಾಡಿದ್ದೀಯೆ' ಎಂದು ಆರೋಪವನ್ನು ಹೊರಿಸಿದ. ಇದರಿಂದ ಕೃಷ್ಣನು ಕೋಪಗೊಂಡು ಮಿಥಿಲೆಗೆ ಹೋದ. ಈ ಉದಂತವು ಭಾಗವತದಲ್ಲಿ ಇಲ್ಲ. ಬಲರಾಮನು ದುರ್ಯೋಧನನಿಗೆ ಗದಾಯುದ್ಧವನ್ನು ಕಲಿಸಿದ (ವಿಷ್ಣುಪುರಾಣ ೪ : ೧೩, ಭಾಗವತ ೧೦ : ೫೭).

ದುರ್ಯೋಧನ ಮತ್ತು ಭೀಮ ಇಬ್ಬರೂ ಈತನ ಶಿಷ್ಯರಾಗಿದ್ದರು. ಅವರು ಪರಸ್ಪರ ಹೋರಾಡಿ ಸಾಯುವುದು ಬಲರಾಮನಿಗೆ ಇಷ್ಟವಿರಲಿಲ್ಲ. ಆದ್ದರಿಂದಲೇ ಮಹಾಭಾರತದ ಯುದ್ಧಕ್ಕೆ ಮೊದಲು ಕೃಷ್ಣನ ನೆರವನ್ನು ಕೋರಲು ದುರ್ಯೋಧನ ಬಂದಿದ್ದ. ಆಗ ಬಲರಾಮನು 'ಕೌರವ ಪಾಂಡವರಿಬ್ಬರೂ ನಮಗೆ ಸಮಾನ ಬಂಧುಗಳು. ಆದರೆ ನಾವು ಅವರಿಗೆ ಸಹಾಯ ಮಾಡುವುದೇ ಅವಶ್ಯಕತೆ ಇದ್ದರೆ ನಮ್ಮ ಸಹಾಯವು ಕೌರವ ಪಕ್ಷದಲ್ಲಿಯೇ ಇರಬೇಕು' ಎಂದು ಕೃಷ್ಣನಿಗೆ ಹೇಳಿದ. ಆದರೆ ಕೃಷ್ಣನಿಗೆ ಈ ಮಾತು ಸಹ್ಯವಾಗಲಿಲ್ಲ. ಇದೇ ಕಾರಣದಿಂದಲೇ ಯುದ್ಧಕ್ಕೆ ಮೊದಲೇ ಕೋಪದಿಂದ ಬಲರಾಮ ತೀರ್ಥಯಾತ್ರೆಗೆ ಹೊರಟ.

ಬಲರಾಮನ ತೀರ್ಥಯಾತ್ರೆಯ ವರ್ಣನೆಯು ವಿಸ್ತಾರವಾಗಿ ಭಾಗವತ ದಲ್ಲಿಯೂ, ಮಹಾಭಾರತದ ಶಲ್ಯಪರ್ವದಲ್ಲಿಯೂ ದೊರೆಯುತ್ತದೆ. ಭಾಗವತದಲ್ಲಿಬೇರೊಂದು ರೀತಿಯಾಗಿದ್ದು ಅನೇಕ ತೀರ್ಥಕ್ಷೇತ್ರಗಳ ವಿವರಣೆಗಳು ದೊರೆಯುತ್ತವೆ.

ಬಲರಾಮ ತನ್ನ ನಿಶ್ಚಯದ ಪ್ರಕಾರ ತೀರ್ಥಯಾತ್ರೆಯಲ್ಲಿ ಪ್ರಭಾಸ, ಪೃಥುದಕ, ಬಿಂದುಸರ, ತ್ರಿತ ಕೂಪ, ಸುದರ್ಶನ, ವಿಶಾಲ, ಬ್ರಹ್ಮ ತೀರ್ಥ, ಚಕ್ರ ತೀರ್ಥ, ಸರಸ್ವತೀ, ಯಮುನಾ ಮತ್ತು ಗಂಗಾನದಿಯ ದಡದಲ್ಲಿರುವ ತೀರ್ಥಕ್ಷೇತ್ರಗಳನ್ನು ದರ್ಶಿಸಿ ನೈಮಿಷಾರಣ್ಯವನ್ನು ತಲುಪಿದ.

ನೈಮಿಷಾರಣ್ಯದಲ್ಲಿ ಪುರಾಣ ಚರ್ಚೆನಡೆಯುತ್ತಿತ್ತು. ಬಲರಾಮನನ್ನು ಕಂಡ ಎಲ್ಲಾ ಮುನಿಗಳೂ ತಮ್ಮ ಚರ್ಚೆಯನ್ನು ನಿಲ್ಲಿಸಿ, ಈತನಿಗೆ ಗೌರವವನ್ನು ಅರ್ಪಿಸಿದರು. ಆದರೆ ಸೂತರ ಕಾರ್ಯವನ್ನು ನಿರ್ವಹಿಸುತ್ತಿದ್ದ ರೋಮಹರ್ಷಣ ಎಂಬ ಋಷಿಯು ತನ್ನ ಧರ್ಮಕಾರ್ಯದಲ್ಲಿ ತೊಡಗಿದ್ದ. ಇದರಿಂದ ಕೋಪಗೊಂಡ ಬಲರಾಮ ಆತನನ್ನು ಕೊಂದ

(ಭಾಗವತ, ೧೦ : ೭೮ : ೨೮). ಇದರಿಂದ ಕೋಲಾಹಲ ಉಂಟಾಯಿತು. ಎಲ್ಲ ಋಷಿಗಳೂ ಬಲರಾಮನಿಗೆ ಬ್ರಹ್ಮ ಹತ್ಯಾ ಪಾತಕ ಬಂದಿದೆ ಎಂದರು. ಇದರಿಂದ ಮುಕ್ತನಾಗಲು ಹನ್ನೊಂದು ವರ್ಷಗಳ ಕಾಲ ಯಾತ್ರೆಗಾಗಿ ಮತ್ತೆ ಹೊರಟ.

ಮಾರ್ಕಂಡೇಯ ಪುರಾಣದ ಪ್ರಕಾರ ಈ ಹತ್ಯೆ ನಡೆದಿದ್ದು ದ್ವಾರಕೆಯ ಬಳಿ ಇದ್ದ ರೈವತೋದ್ಯಾನದಲ್ಲಿ (ಮಾರ್ಕಂಡೇಯ ೬ : ೭, ೩೫ - ೩೬). ಆದರೆ ಭಾಗವತ ಮತ್ತು ಮಹಾಭಾರತವು ವಧಾ ಸ್ಥಳವು ನೈಮಿಷಾರಣ್ಯವೇ ಎಂದು ಹೇಳುತ್ತವೆ. ಈ ಹತ್ಯೆಯು ಬಲರಾಮನ ತೀರ್ಥಯಾತ್ರೆಯ ಮಧ್ಯಕಾಲದಲ್ಲಿ ನಡೆಯಿತು ಎಂದು ಭಾಗವತ ಹೇಳಿದರೆ ಮಾರ್ಕಂಡೇಯ ಪುರಾಣವು ಪ್ರಾರಂಭದಲ್ಲಿಯೇ ನಡೆಯಿತು ಎಂದು ಹೇಳುತ್ತದೆ.

ಎರಡನೆಯ ತೀರ್ಥಯಾತ್ರೆಗೆ ಹೊರಡಲುಸಿದ್ಧನಾಗುತ್ತಿದ್ದಂತೆಯೇ ಶಲ್ಯನು ಬಂದು ಭೀಮ ಮತ್ತು ದುರ್ಯೋಧನರ ಮಧ್ಯೆ ಗದಾಯುದ್ಧ ನಡೆಯುತ್ತಿರುವುದನ್ನು ಈತನಲ್ಲಿ ಅರಿಕೆಮಾಡಿಕೊಂಡ. ತನ್ನ ಪ್ರಿಯ ಶಿಷ್ಯರಿಬ್ಬರೂ ಯುದ್ಧ ಮಾಡುವುದು ಈತನಿಗೆ ಇಷ್ಟವಾಗದೆ, ಯುದ್ಧ ಸ್ಥಳಕ್ಕೆ ಹೋಗಿ ಆ ಯುದ್ಧವನ್ನು ನಿಲ್ಲಿಸಲು ಬಹುವಾಗಿ ಪ್ರಯತ್ನಿಸಿದ. ಈತನ ಮಾತನ್ನು ಇಬ್ಬರೂ ಕೇಳಲಿಲ್ಲ. ಇದರಿಂದ ಕೋಪಗೊಂಡು ದ್ವಾರಕಾನಗರಕ್ಕೆ ಹೋದ (ಭಾಗವತ ೧೦ : ೭೮ - ೮೯).

ಮಹಾಭಾರತದ ಪ್ರಕಾರ ಗದಾಯುದ್ಧದಲ್ಲಿ ಭೀಮನು ಕಪಟ - ವಂಚನೆಗಳಿಂದ ದುರ್ಯೋಧನನನ್ನು ಕೊಂದ. ಇದರಿಂದ ಭೀಮನ ಬಗ್ಗೆ ಬಲರಾಮನಿಗೆ ಬಹು ಕೋಪ ಬಂದಿತ್ತು. ಭೀಮನನ್ನು ಕೊಲ್ಲಲೆಂದು ಓಡಿದ. ಆದರೆ ಕೃಷ್ಣ ದುರ್ಯೋಧನನು ನಡೆಸಿದ ಕುಕೃತ್ಯಗಳನ್ನೆಲ್ಲಾ ನೆನಪುಮಾಡಿಕೊಟ್ಟು ಈತನ ಕ್ರೋಧವನ್ನು ಉಪಶಮನಗೊಳಿಸಿದ.

ಎರಡನೆಯ ಬಾರಿ ನಡೆಸಿದ ತೀರ್ಥಯಾತ್ರೆಯ ಸಮಗ್ರ ವಿವರಣೆಯು ಭಾಗವತದಲ್ಲಿ ದೊರೆಯುತ್ತದೆ.

ಶ್ರೀ ಕೃಷ್ಣನ ಮೊಮ್ಮಗ ಅನಿರುದ್ಧನ ಮದುವೆಯು ವಿದರ್ಭದಲ್ಲಿ ರುಕ್ಮಿನ್‌ನ ಮೊಮ್ಮಗಳಾದ ರೋಚನಾಳೊಂದಿಗೆ ತೀರ್ಮಾನವಾಯಿತು. ಆಗ ರುಕ್ಮಿನ್ ಬಲರಾಮನನ್ನು ಪಗಡೆಯಾಟ ಆಡಲು ಆಹ್ವಾನಿಸಿದ. ಆಗ ಬಲರಾಮನನ್ನು ಬಹುವಾಗಿ ನಿಂದಿಸಿದ. ಕೋಪಾವಿಷ್ಟನಾಗಿ ಬಲರಾಮ ಬಂಗಾರದ ಪಗಡೆಯ ಹಾಸನ್ನು ಎತ್ತಿಕೊಂಡು ರುಕ್ಮಿನನ್ನು ತಾಡಿಸಿ ಕೊಂದ (ಹರಿವಂಶ, ೨ : ೬೧). ನರಕಾಸುರನ ಮಿತ್ರ ದ್ವಿವಿಧ ಎಂಬ ವಾನರನನ್ನು ಈತನು ಕೊಂದ (ವಿಷ್ಣುಪುರಾಣ, ೫ : ೩೬).

ಮಹಾಭಾರತದ ಯುದ್ಧದ ನಂತರ ದ್ವಾರಕಾಪುರದಲ್ಲಿ ಮದ್ಯಪಾನ ನಿಷೇಧವನ್ನು ಜಾರಿಗೆ ತಂದ (ಮಹಾಭಾರತ, ಮೌಕ್ತಿಕ ಪರ್ವ ೧ : ೨೯). ಆದರೆ ಇವರ ಅನುಯಾಯಿಗಳಾದ ಯಾದವರು ಈ ಆಜ್ಞೆ ಪಾಲಿಸಲಿಲ್ಲ. ತಮ್ಮ ತಮ್ಮಲೇ ಹೊಡೆದಾಡಿಕೊಂಡು ಸತ್ತರು. ಈ ಹೊಡೆದಾಟದಲ್ಲಿ ಪೂರ್ಣವಾಗಿ ಯಾದವರು ನಾಶವಾದರು. ಬಲರಾಮನು ಪ್ರಭಾಸಕ್ಷೇತ್ರದಲ್ಲಿ ತಪಸ್ಸು ಆಚರಿಸಿ ಯೋಗ ಕರ್ಮದಲ್ಲಿಯೇ ದೇಹತ್ಯಾಗವನ್ನು ಮಾಡಿದ (ಮಹಾಭಾರತ, ಮೌಕ್ತಿಕರ್ಪ, ೫ : ೧೨ - ೧೫, ಭಾಗವತ, ೧೧ : ೩೦). ಈತನ ಮರಣದ ನಂತರ ಈತನ

ಬಾಯಿಂದ ದೊಡ್ಡದಾದ ಶ್ವೇತ ಸರ್ಪವೊಂದು ಹೊರಕ್ಕೆ ಬಂದು ಶ್ರೀ ಕೃಷ್ಣನಿಗೆ ದರ್ಶನ ನೀಡಿತು (ಮ. ಮೌ ೫ : ೧೨ - ೧೬). ಈತನ ಕಳೇಬರದೊಂದಿಗೆ ಈತನ ಪತ್ನಿ ರೇವತಿಯು ಸತಿಯಾದಳು (ಪದ್ಮಪುರಾಣ, ಉತ್ತರಖಂಡ ೨೫೨).

ಬಲರಾಮನನ್ನು ಕ್ವಚಿತ್ತಾಗಿ ಸ್ವತಂತ್ರ ದೇವನಾಗಿ ಆರಾಧಿಸಲಾಗುತ್ತದೆ. ಈತನ ತಮ್ಮ ಕೃಷ್ಣನ ಪ್ರಖ್ಯಾತಿ ಮತ್ತು ಜನಪ್ರಿಯತೆಯು ಈತನನ್ನು ಹಿಂದಕ್ಕೆ ತಳ್ಳಿದೆ ಎಂದರೆ ತಪ್ಪಿಲ್ಲ. ಬಲರಾಮ ಮೂರ್ತಿಯನ್ನು ಕೃಷ್ಣನೊಂದಿಗೆ ಪೂಜಿಸಲಾಗುತ್ತದೆ. ಆದರೆ ಬಲರಾಮನ ಮೂರ್ತಿ ನಿರ್ಮಾಣಕ್ಕೆ ಅವಶ್ಯಕವಾದ ಸೂತ್ರಗಳು ಪಾಂಚರಾತ್ರ, ವೈಖಾನಸ ಎರಡೂ ಆಗಮಗಳಲ್ಲಿ ಮತ್ತು ಶಿಲ್ಪಶಾಸ್ತ್ರಗಳಲ್ಲಿ ದೊರೆಯುತ್ತವೆ.

ವೈಖಾನಸ ಆಗಮದಲ್ಲಿ ಈ ವಿವರಗಳಿವೆ :

**ಅಥ ಬಲಭದ್ರರಾಮಂ ಮಧ್ಯಮಂ ದಶತಾಲಮಿತಿಂ ದ್ವಿಭುಜಂ ತ್ರಿನತಂ ದಕ್ಷಿಣಹಸ್ತೇನ ಮುಸಲಧರಂ ವಾಮೇನ ಹಲಧರಂ ಶ್ವೇತಾಭಂ ರಕ್ತವಸ್ತ್ರಧರ ಮುದ್ಬದ್ಧಕುಂತಲಂ ದಕ್ಷಿಣೇ ರೇವತೀಂ ದೇವೀಂ ಪದ್ಮಕಿಂಜಲ್ಕವರ್ಣಾಂ ಪುಷ್ಪಾಂಬರಧರಾಂ ದಕ್ಷಿಣೇನ ಹಸ್ತೇನ ಪದ್ಮಧರಾಂ ಪ್ರಸಾರಿತ ವಾಮಹಸ್ತಾಮೇವಂ ಕಾರಯೇತ್। ತದ್ರೂಪಂ ಕೌತುಕಂ ವಿಷ್ಣುಂ ಚತುರ್ಭುಜಂ ವಾ ಕಾರಯೇತ್ ।**


ಬಲರಾಮನ ಮೂರ್ತಿಯನ್ನು ಮಧ್ಯಮ ದಶತಾಲದಲ್ಲಿ (೧೨೦ ಅಂಗುಳಗಳು) ರೂಪಿಸಬೇಕು. ಈತನು ಬಲಹಸ್ತದಲ್ಲಿ ಮುಸಲವನ್ನು, ಎಡಹಸ್ತದಲ್ಲಿ ಹಲವನ್ನು ಧರಿಸಿರಬೇಕು. ಈ ಮೂರ್ತಿ ಶ್ವೇತವರ್ಣದಲ್ಲಿದ್ದು ವಸ್ತ್ರಗಳು ಕೆಂಪುಬಣ್ಣದಲ್ಲಿರಬೇಕು. ಬಲರಾಮನು ಜಟಾಮುಕುಟಧಾರಿಯಾಗಿರುತ್ತಾನೆ. ಬಲರಾಮನ ಬಲಗಡೆಗೆ ಆತನ ಹೆಂಡತಿಯಾದ ರೇವತಿ ನಿಂತಿರಬೇಕು. ಹಳದಿ ಮೈಛಾಯೆಯ ಈಕೆಯು ಬಲಹಸ್ತದಲ್ಲಿ ಕಮಲ ಹಿಡಿದಿದ್ದು ಎಡಹಸ್ತವನ್ನು ಜೋತುಬಿಟ್ಟಿರಬೇಕು.

ಕೌತುಕ ಬೇರವು ಇದೇ ರೀತಿಯಾಗಿ ಮಾಡಬಹುದು ಅಥವ ವಿಷ್ಣುವಿನ ಸಾಮಾನ್ಯ ಚತುರ್ಭುಜ ರೂಪವನ್ನು ಮಾಡಬಹುದು.

ಬೃಹತ್ ಸಂಹಿತೆ (ಅಧ್ಯಾಯ ೫೮) ಯಲ್ಲಿ ಬಲದೇವನ ಕಣ್ಣುಗಳು ಕೆಂಪಾಗಿದ್ದು ಮದವೇರಿದ ದೃಷ್ಟಿಯನ್ನು ಬೀರುತ್ತಿರುತ್ತಾನೆ. ಹಲಾಯುಧ ಧಾರಿಯಾದ ಈತನು ಶಂಖ ಅಥವ ಚಂದ್ರ ಅಥವ ತಾವರೆಯ ಬಿಳುಪಿನ ಮೈಬಣ್ಣವನ್ನು ಪಡೆದು ಶೋಭಾಯಮಾನವಾಗಿರುತ್ತಾನೆ. ಈತನ ಪಕ್ಕದಲ್ಲಿ ದೇವೀ ಇರಬೇಕು. ಆಕೆ ಬಲಹಸ್ತದಲ್ಲಿ ತಾವರೆಯನ್ನು ಹಿಡಿದಿದ್ದು ಎಡಹಸ್ತವನ್ನು ತನ್ನ ಸೊಂಟದಮೇಲೆ ಇರಿಸಿಕೊಂಡಿರಬೇಕು **(ಬಲದೇವೋ ಹಲಪಾಣಿರ್ಮದ ವಿಭ್ರಮಾಲೋಚನಶ್ಚ ಕರ್ತವ್ಯಃ । ವಿಭ್ರಾತ್ಕುಂಡಲ ಮೇಕಂ ಶಂಖೇಂದು ಮೃಣಾಲ ಗೌರವಪುಃ॥ ಏಕೋನಾಂಶಾ ಕಾರ್ಯಾ ದೇವೀ ಬಲದೇವಕೃಷ್ಣಯೋರ್ಮಧ್ಯೇ। ಕಟಿ ಸಂಸ್ಥಿತ ವಾಮಕರಾ ಸರೋಜ ಮಿತರೇಣ ಚೋದ್ವಹತೀ ॥)**. ಎಂದು ಹೇಳಲಾಗಿದೆ.

**ಗದಾ ಲಾಂಗಲಧಾರೀ ಚ ರಾಮೋ ವಾಥ ಚತುರ್ಭುಜಃ**
**ವಾಮೋರ್ಧ್ವೇ ಲಾಂಗಲಂ ದಧ್ಯಾದಧಶ್ಶಂಖಂ ಸುಶೋಭನಮ್ ॥**

(ಅಗ್ನಿಪುರಾಣ, ೪೯)



ಚಿತ್ರ ೩೯ : ಬಲಭದ್ರ

ಬಲರಾಮ ಎರಡು ಭುಜಗಳಿರುವಂತೆ ರೂಪಿಸಿದಾಗ ಬಲಹಸ್ತದಲ್ಲಿ ಗದೆ ಎಡಹಸ್ತದಲ್ಲಿ ಹಲಾಯುಧ ಧರಿಸಿರಬೇಕು. ಚತುರ್ಭುಜಗಳಿರುವಂತೆ ರೂಪಿಸಿದಾಗ ಮೇಲಿನ ಬಲಹಸ್ತದಲ್ಲಿ ಮುಸಲ, ಕೆಳಬಲಹಸ್ತದಲ್ಲಿ ಚಕ್ರ ಇರಬೇಕು. ಮೇಲಿನ ಎಡಹಸ್ತದಲ್ಲಿ ಹಲ, ಕೆಳಎಡಹಸ್ತದಲ್ಲಿ ಶಂಖ ಇರಬೇಕು.

ವಿಷ್ಣುಧರ್ಮೋತ್ತರವು ಬಲರಾಮ ಬಲಹಸ್ತದಲ್ಲಿ ಹಲಾಯುಧವನ್ನು ಎಡಹಸ್ತದಲ್ಲಿ ಒನಕೆ(ಮುಸಲ)ಯನ್ನು ಹಿಡಿದಿರುತ್ತಾನೆ. ಕರ್ಣಕುಂಡಲಗಳು, ಇತರ ಆಭರಣಗಳಿಂದ ಅಲಂಕೃತನಾಗಿದ್ದು, ದಟ್ಟವಾದ ನೀಲಿ ಬಣ್ಣದ ಉಡುಪುಗಳನ್ನು ಧರಿಸುತ್ತಾನೆ. ಆತನ ಕಣ್ಣುಗಳು ಮದಿರಾಪಾನದ ಫಲವಾಗಿ ಕೆಂಪಾಗಿರುತ್ತವೆ. (**ಸೀರಪಾಣಿರ್ಬಲಃ ಕಾರ್ಯೋ ಮುಸಲೀ ಚೈವ ಕುಂಡಲೀ। ಶ್ವೇತೋऽತಿ ನೀಲವಸನೋ ಮದೋದಂಚಿತಲೋಚನಃ॥**) ಎಂದು ವಿವರಿಸುತ್ತದೆ.

ಪಾಂಚರಾತ್ರಾಗಮಕ್ಕೆ ಸೇರಿದ ವಿಷ್ವಕ್ಸೇನ ಸಂಹಿತೆ (೧೧ : ೧೯ - ೧೧೩) ಯಲ್ಲಿ ಬಲರಾಮನ ಮೂರ್ತಿಲಕ್ಷಣವನ್ನು ಹೀಗೆ ವಿವರಿಸಲಾಗಿದೆ -

**ಬಲರಾಮಸ್ಯ ವಕ್ಷ್ಯಾಮಿ ಶೃಣು ನಾರದ ಲಕ್ಷಣಮ್ ॥**
**ಬಲಭದ್ರ ನಿಭಾಭಿಖ್ಯಃ ಕುಂದೇಂದು ಧವಲ ಪ್ರಭಃ**
**ಪಂಕಜಾಕ್ಷೋऽಂಗನಾವಕ್ತ್ರಃ ಸರ್ವಾವಯವ ಶೋಭಿತಃ ॥**
**ಸರ್ವಾಲಂಕಾರ ಸಂಯುಕ್ತಃ ಸರ್ವಾಭರಣಭೂಷಿತಃ**
**ಸರ್ವಾವಯ ಸಂಪೂರ್ಣಃ ಪ್ರಭಾಮಂಡಲ ಮಂಡಿತಃ ॥**
**ಅಸ್ಯದಕ್ಷಿಣ ಬಾಹೌ ತು ಮುಸಲಂ ವಾಮಕೇ ಕರೇ**
**ಹಲಂ ತು ವಿನ್ಯಸೇದ್ಧೀಮಾನ್ ಬಲರಾಮಸ್ಯ ಮಂತ್ರವಿತ್ ॥**
**ದಕ್ಷಿಣೇ ತು ಶ್ರೀಯಂ ದೇವೀಂ ಸೌಮ್ಯೇ ತು ಗರುಡಂ ನ್ಯಸೇತ್**
**ಪೀತಂ ಕೃತ್ವಾಂಜಲಿಂ ತ್ವೇವಂ ಬಲರಾಮಸ್ಥಿತೇರಿತಃ ॥**

ಎಲೈನಾರದನೇ, ಬಲರಾಮನ ಲಕ್ಷಣವನ್ನು ವಿವರಿಸುತ್ತೇನೆ. ಆಲಿಸು. ಬಲರಾಮನು ಮಲ್ಲಿಗೆಯ ಹೂವಿನಂತಹ ಶ್ವೇತವರ್ಣ ಕಾಂತಿಯಿಂದ ಕಂಗೊಳಿಸುತ್ತಿರುತ್ತಾನೆ. ತಾವರೆಯಂತಹ ಕಣ್ಣುಳ್ಳ ಈ ದೇವನ ಮುಖವು ಗಡ್ಡ ಮೀಸೆಗಳು ಇಲ್ಲದೆ ಬಾಲೆಯ ಮುಖದಂತೆ ಲಲಿತವಾಗಿರುತ್ತದೆ. ಎಲ್ಲಾ ಅಲಂಕಾರಗಳನ್ನು ಧರಿಸಿದ್ದು, ಎಲ್ಲಾ ಆಭರಣಗಳನ್ನು ತೊಟ್ಟುಕೊಂಡು ಸಕಲಾಂಗಗಳು ಸಂಪೂರ್ಣವಾಗಿದ್ದು ಶೋಭಾಯಮಾನನಾಗಿರುತ್ತಾನೆ. ಪ್ರಭಾಮಂಡಲವು ಆತನ ಶಿರಸ್ಸಿನ ಹಿಂದೆ ಉಜ್ವಲವಾಗಿರುತ್ತದೆ. ಎರಡು ತೋಳುಗಳಿರುವ ಈತನ ಬಲಹಸ್ತದಲ್ಲಿ ಮುಸಲವೂ, ಎಡಹಸ್ತದಲ್ಲಿ ನೇಗಿಲು ಇರುತ್ತವೆ. ಬಲಭಾಗದಲ್ಲಿ ಶ್ರೀದೇವಿಯು, ಎಡಭಾಗದಲ್ಲಿ ಗರುಡನೂ ಇರುತ್ತಾರೆ. ಹಳದಿ ಬಣ್ಣದಲ್ಲಿರುವ ಗರುಡನು ಅಂಜಲೀ ಬದ್ಧನಾಗಿರುತ್ತಾನೆ. ಈ ರೀತಿ ನಿರ್ಮಿಸಿದ ಮೂರ್ತಿಯನ್ನು ಬಲರಾಮ ಮಂತ್ರದಿಂದ ಅರ್ಚಿಸಿ, ಧ್ಯಾನಿಸಿದರೆ ಇಷ್ಟಾರ್ಥವು ಸಿದ್ಧಿಯಾಗುತ್ತದೆ.

ಪಾಂಚರಾತ್ರಾಗಮದ ಪಾದ್ಮಸಂಹಿತೆಯ ಕ್ರಿಯಾಪಾದ (೧೭ : ೧೧೨ - ೧೧೭) ಈ

ಮೂರ್ತಿಯ ದ್ವಿಬಾಹು ಹಾಗೂ ಚತುರ್ಬಾಹು ಕಲ್ಪವನ್ನು ಈ ರೀತಿಯಾಗಿ ವಿವರಿಸಿದೆ :

**ರಾಮಸ್ಯ ಬಲಭದ್ರಸ್ಯ ಲಕ್ಷಣಂ ವಕ್ಷ್ಯತೇಽಧುನಾ ||**
**ದ್ವಿಭುಜಂ ಧವಲಂ ದಿವ್ಯೇ ಭಾಗೇಽಥ ಪರಿಕಲ್ಪಯೇತ್**
**ಮುಸಲಂ ಲಾಂಗಲಂ ಚೈವ ಪ್ರಸವ್ಯೇತರ ಹಸ್ತಯೋಃ ||**
**ಭಿಭ್ರಾಣಮಥವಾ ನ್ಯಸ್ತ ವಾಮಹಸ್ತಂ ಕಟಿಸ್ಥಲೇ**
**ದಕ್ಷಿಣಾಭಯದಂ ಯದ್ವಾ ಚತುರ್ಭುಜಮುದಾಯುಧಮ್ ||**
**ಹಲಂ ಚ ದಕಿಣೇ ಹಸ್ತೇ ವಾಮೇ ಚ ಮುಸಲಾಯುಧಮ್**
**ಧಾರಯಂತಂ ವಿಭುಂ ನೀಲವಸನಂ ಶಂಖಚಕ್ರಿಣಮ್ ||**
**ಕಿರೀಟಿನಂ ಬದ್ಧಕೇಶಮಥವಾ ವಾಮ ಪಾರ್ಶ್ವತಃ**
**ರೇವತೀಂ ಕಲ್ಪಯೇದ್ದೇವೀಂ ದಕ್ಷಿಣೇ ವಾ ಯಥಾರುಚಿ ||**
**ಕರಂಡಿಕಾಮುಕುಟಿನೀಮಥವಾ ಕಬರೀಧರಾಮ್**
**ಅಸಿತಾಂ ಪಾರತಂತ್ರ್ಯೇ ಚ ಸ್ವಾತಂತ್ರ್ಯೇ ಚ ಯಥಾ ಪುರಮ್ ||**

ಬಲರಾಮನನ್ನು ಎರಡು ಭುಜಗಳಿರುವಂತೆ ಕಲ್ಪಿಸಿದಾಗ ಒಂದು ಹಸ್ತದಲ್ಲಿ ಮುಸಲ (ಒನಕೆ) ಇನ್ನೊಂದರಲ್ಲಿ ಹಲ (ನೇಗಿಲು)ಹಿಡಿದಿರಬೇಕು. ಶುಭ್ರ ಧವಳ ವರ್ಣದಿಂದ ಶೋಭಾಯಮಾನವಾಗಿರುತ್ತಾನೆ. ನೇಗಿಲು ಒಂದನ್ನೇ ಹಿಡಿದು ಎಡಹಸ್ತವನ್ನು ಸೊಂಟದ ಬಳಿ ಇರಿಸಿಕೊಂಡಿರುವಂತೆ (ಈ ಹಸ್ತವನ್ನು ಕಟ್ಯಾವಲಂಬಿತ ಹಸ್ತ ಎನ್ನುತ್ತಾರೆ) ರೂಪಿಸಲೂ ಬಹುದು. ಸ್ವಾಮಿಯನ್ನು ಚತುರ್ಭುಜಗಳಿರುವಂತೆ ರೂಪಿಸಿದರೆ ಮೇಲಿನ ಬಲಹಸ್ತದಲ್ಲಿ ನೇಗಿಲ (ಹಲ) ಮತ್ತು ಎಡಹಸ್ತದಲ್ಲಿ ಒನಕೆ (ಮುಸಲ) ಹಿಡಿದಿರುತ್ತಾನೆ. ಕೆಳಗಿನ ಬಲಹಸ್ತವು ಅಭಯ ಮುದ್ರೆಯಲ್ಲಾಗಲಿ, ಎಡಹಸ್ತವು ಕಟ್ಯಾವಲಂಬಿತ ಹಸ್ತವಾಗಿ ಅಥವ ವರದ ಮುದ್ರೆಯಲ್ಲಿ ರೂಪಿಸಬಹುದು. ಸ್ವಾಮಿಯು ನೀಲವರ್ಣದ ವಸ್ತ್ರಗಳನ್ನು ಧರಿಸಿ ಕಿರೀಟ ಮುಕುಟವನ್ನು ಅಥವ ಜಟಾಮುಕುಟವನ್ನು ಧರಿಸಿರುವಂತೆ ರೂಪಿಸಬೇಕು. ಅಥವ ಕೆಳಗಿನ ಹಸ್ತಗಳಲ್ಲಿ ಅಭಯ - ವರದ (ಅಥವ ಕಟ್ಯಾವಲಂಬಿತ ಹಸ್ತ) ಗಳಿಗೆ ಬದಲಾಗಿ ಚಕ್ರ ಮತ್ತು ಶಂಖಗಳನ್ನು ಹಿಡಿದಿರುವಂತೆಯೂ ರೂಪಿಸಬಹುದು.

ಸ್ವಾಮಿಯ ಎಡ ಪಾರ್ಶ್ವದಲ್ಲಿ ರೇವತೀದೇವಿ ಇರುವಂತೆ ಕಲ್ಪಿಸಬಹುದು. ದೇವಿಯು ಬಲಪಾರ್ಶ್ವದಲ್ಲಾದರೂ ಇರಬಹುದು. ಕರಂಡ ಮುಕುಟವನ್ನೋ ಅಥವ ಹೆಣೆದ ಜಡೆ ಅಥವ ತಲೆಗೂದಲಿನ ಗಂಟು ಬರುವಂತೆಯೋ ರೂಪಿಸಿ ದೇವಿಯನ್ನು ಅಲಂಕರಿಸಬೇಕು. ದೇವಿ ಶ್ಯಾಮಲ ವರ್ಣದಲ್ಲಿರುತ್ತಾಳೆ.

ಈ ದೇವನನ್ನು ಸ್ವತಂತ್ರವಾಗಿ ಅಥವ ಇತರ ದೇವತೆಗಳೊಂದಿಗೆ (ಮುಖ್ಯವಾಗಿ ಕೃಷ್ಣನೊಂದಿಗೆ) ಪ್ರತಿಷ್ಠಿಸಿ ಪೂಜಿಸಬಹುದು.

ಹಯಶೀರ್ಷಸಂಹಿತೆ (ಆದಿ : ೨೩ : ೩೨ - ೩೩)ಯಲ್ಲಿ ಈ ರೀತಿಯ ವರ್ಣನೆ ಇದೆ :

**ವಾಮೋರ್ಧ್ವಂ ಲಾಂಗಲಂ ದಧ್ಯಾತ್ ಅಧಶ್ಶಂಖಂ ಸುಶೋಭನಮ್ ||**
**ಮುಸಲಂ ದಕ್ಷಿಣೋರ್ಧ್ವಂತು ಚಕ್ರಂ ಚಾಧಸ್ಸುಶೋಭನಮ್**

**ಗದಾಂ ಕೃಪಾಣಂ ವಾ ದಧ್ಯಾತ್ ಸಂಸ್ಥಾನೇ ಶಂಖಚಕ್ರಯೋಃ ॥**

ಮೇಲಿನ ಎಡಹಸ್ತದಲ್ಲಿ ನೇಗಿಲು, ಕೆಳ ಬಲಹಸ್ತದಲ್ಲಿ ಶಂಖವನ್ನು ಹಿಡಿದಿರಬೇಕು. ಮೇಲಿನ ಬಲಹಸ್ತದಲ್ಲಿ ಒನಕೆಯನ್ನು ಕೆಳ ಬಲಹಸ್ತದಲ್ಲಿ ಚಕ್ರವನ್ನು ಹಿಡಿದಿರಬೇಕು. ಅಥವ ಶಂಖ - ಚಕ್ರಗಳಿಗೆ ಬದಲಾಗಿ ಗದೆ ಮತ್ತು ಖಡ್ಗಗಳನ್ನು ಹಿಡಿದಿರಬಹುದು.

*ಇತಿ ಶ್ರೀ ಬ್ರಾಹ್ಮೀಯೇ ಚಿತ್ರಕರ್ಮ ಶಾಸ್ತ್ರೇ ಪ್ರಾದುರ್ಭಾವಕಾಂಡೇ*
*ಬಲಭದ್ರ ಲಕ್ಷಣಂ ನಾಮ ಅಷ್ಟಮೋಽಧ್ಯಾಯಃ*

ಅಥ ನವಮೋಧ್ಯಾಯಃ

# ಶ್ರೀ ಕೃಷ್ಣ ಲಕ್ಷಣಮ್

ಕೃಷ್ಣಸ್ಯ ಲಕ್ಷಣಂ ವಕ್ಷ್ಯೇಽಧುನಾ ಪಂಕೇಜ ವಿಷ್ಟರ

ಮಾನ ಮಂಡನ ವಸ್ತ್ರಾಭ (ಭೈಃ) ಸ್ಥಿತಿ ಸ್ಥಾಪನ ಭೇದಕೈಃ ॥ ೧ ॥

ರಾಘವೇಣ ಸಮಃ ಕೃಷ್ಣೋ ವಿಶೇಷ ಸ್ತ್ವಥ (ಮಥ) ವಕ್ಷ್ಯತೇ

ತಾವರೆಯ ಹುವ್ವಿನಲ್ಲಿ ಕುಳಿತಿರುವ ಎಲ್ಲೈಬ್ರಹ್ಮದೇವನೇ, ಇನ್ನು ಕೃಷ್ಣನ ಮೂರ್ತಿ ಲಕ್ಷಣವನ್ನು ಹೇಳುತ್ತೇನೆ. ಕೇಳು. ಕೃಷ್ಣನ ಅಳತೆ, ಅಲಂಕಾರ, ವಸ್ತ್ರ, ವರ್ಣ, ಸ್ಥಿತಿ ಇತ್ಯಾದಿಗಳು ರಾಮ ಮೂರ್ತಿ ನಿರ್ಮಾಣದ ಸಂದರ್ಭದಲ್ಲಿ ಹೇಳಿರುವ ವಿವರಗಳನ್ನೇ ಹೋಲುತ್ತವೆ. ಆದ್ದರಿಂದ ಕೃಷ್ಣನ ಮೂರ್ತಿಯ ನಿರ್ಮಾಣದಲ್ಲಿರುವ ವೈಶಿಷ್ಟ್ಯಗಳನ್ನು ಮತ್ತು ವಿಶೇಷಗಳನ್ನು ಮಾತ್ರವೇ ಇಲ್ಲಿ ವಿವರಿಸುತ್ತೇನೆ.

ದಕ್ಷಿಣೇಯ ಷ್ಟಿಹಸ್ತಃ ಸ್ಯಾತ್ ವಾಮೇಂ ಸೋಽಬಾಥ (ವಾಮೋಸಾಂಗ) ಕೂರ್ಪರಮ್ ॥ ೨ ॥

ಹಿಕ್ಕಾ ಸೂತ್ರಾದಧೋ ವಾಮ ಕೂರ್ಪರಂ ಸ್ಯಾದ್ದಶಾಂಗುಲಮ್

ಷಟ್ ಸಪ್ತಾ ಷ್ಟಾಂಗುಲಾಧಿಕ್ಯಂ ನಾಭೇರನ್ಯ ಕರಸ್ಥಿತಿಃ (ರತ್ನ್ಯಕರಾನಿತಿ) ॥ ೩ ॥

ತ್ರಿ ಚತುಷ್ಪಂಚ ಮಾತ್ರಾರ್ಭಿದಶ (ಸ್ವಪ್ತ) ತಾಲಂ ಸರೋಜಜ

ಅರ್ಧರ್ಜುವಕ್ರಂ ಪುಷ್ಟಾಂಗೋ ರಜೋ ಗುಣ ಸಮನ್ವಿತಃ ॥ ೪ ॥

ನಾಸಾಗ್ರೇ ಲಂಬಯೇತ್ಸೂತ್ರಂ ವಾಮೇ ಹಿಕ್ಕಾಂಗುಲಂ ತತಃ

ಸೂತ್ರಾತ್ತದರ್ಧ ಹೃದಯಂ ಕಲಾ ನಾಭಿಸ್ತು ದಕ್ಷಿಣೇ ॥ ೫ ॥

ಮೇಢ್ರಂ ಭಾಗಂ ಭವೇದ್ವಾಮ ಜಾನ್ವಂತಂ ಜಾಗತಿರ್ಯವಮ್

ಸೂತ್ರಾನ್ಮಾತ್ರತ್ರಯಂ ವಾಮಾಽ ವಾಮ ಪಾರ್ಷ್ಣ್ಯಂತರಂ ಭವೇತ್ ॥ ೬ ॥

ಸಮಭಂಗಂ ಭವೇದೇವ ಮೂಹಿತವ್ಯಂ ತಥಾನ್ಯಯೋಃ

ಬಲಹಸ್ತದಲ್ಲಿ ಒಂದು ವೇಣು ಇರುತ್ತದೆ. ಎಡಹಸ್ತವು ಮಡಚಿಕೊಂಡಿದ್ದು ವೇಣುವಿನ ಮೇಲಿರುತ್ತದೆ. ಮಡಚಿರುವ ಮೊಣಕೈ ಹಿಕ್ಕ ಸೂತ್ರದಿಂದ ಕೆಳಕ್ಕೆ ಹತ್ತು ಅಂಗುಳ ದೂರದಲ್ಲಿ ಇರುತ್ತದೆ. ನಾಭಿಗೆ ಆರು, ಏಳು ಅಥವ ಎಂಟು ಅಂಗುಳ ಎತ್ತರದಲ್ಲಿ ಎಡ ಮೊಣಕೈ ಇರುತ್ತದೆ. ನಾಭಿ ಸಮಕ್ಕೆ ಮೂರು, ನಾಲ್ಕು ಅಥವ ಐದು ಅಂಗುಳ ದೂರದಲ್ಲಿ ಇನ್ನೊಂದು ಕೈ (ಬಲಗೈ) ಇರುತ್ತದೆ. ಕೃಷ್ಣನನ್ನು ದಶತಾಲದಲ್ಲಿ (೧೨೦ ಅಂಗುಳ - ಮಧ್ಯಮ ದಶತಾಲದಲ್ಲಿ) ರೂಪಿಸಬೇಕು. ಸ್ವಲ್ಪ ಬಾಗಿದ ಮುಖ ಹಾಗೂ ಪುಷ್ಟಿಯಾದ ದೇಹವುಳ್ಳ ಕೃಷ್ಣನು ರಜೋಗುಣದಿಂದ ಕೂಡಿದವನು. ಲಂಬಸೂತ್ರವು (ಮುಖದ ಮುಂದಿರುವ ಸೂತ್ರವನ್ನು ಪುರಸೂತ್ರ ಎನ್ನುತ್ತಾರೆ. ಇದು ಬ್ರಹ್ಮಸೂತ್ರವೂ ಹೌದು) ನಾಸಾಗ್ರದ ಮೂಲಕ ಹಾದು ಹೋಗುತ್ತದೆ. ಕಂಠದಲ್ಲಿ ಎಡಭಾಗಕ್ಕೆ ಸರಿದು ಹಿಕ್ಕಾದಿಂದ ಒಂದು ಅಂಗುಳ ದೂರದಲ್ಲಿರುತ್ತದೆ. ಎಡಗಡೆಗೆ ಅರ್ಧ ಅಂಗುಳ ದೂರದಲ್ಲಿ ಹೃದಯವಿರುತ್ತದೆ. ಸೂತ್ರದಿಂದ ಬಲಗಡೆಗೆ ಎರಡು ಅಂಗುಳ ದೂರದಲ್ಲಿ ನಾಭಿ ಇರುತ್ತದೆ. ಸೂತ್ರದಿಂದ ಮೇಢ್ರವು ನಾಲ್ಕು ಅಂಗುಳ ದೂರದಲ್ಲಿರುತ್ತದೆ. ೧೩ ಯವ ದೂರದಲ್ಲಿ ಎಡ ಮೊಣಕಾಲಿನ ಮುಂಭಾಗ, ಮೂರು ಅಂಗುಳ ದೂರದಲ್ಲಿ ಎಡ ಹಿಮ್ಮಡಿಯೂ, ಮೂರು ಅಂಗುಳದೂರದಲ್ಲಿ ಬಲ ಪಾದದ ಹಿಮ್ಮಡಿಯ ಮಧ್ಯ ಭಾಗವು ಇರಬೇಕು. ಇವೆಲ್ಲಾ ಸಮಭಂಗಕ್ಕೆ ಇರಬೇಕಾದ ಅಳತೆಗಳು. ಉಳಿದ ಆಭಂಗ, ಅತಿಭಂಗದ ಅಳತೆಗಳನ್ನು ಊಹಿಸಿ ರೂಪಿಸಿಕೊಳ್ಳಬೇಕು.

**ಹತ್ವಾ [ತ್ವಾ] ಸಪ್ತವೃಷಾನ್ ಪೂರ್ವಂ ಗೋಪಕನ್ಯಾಜಿಘೃಕ್ಷಯಾ ॥ ೭ ॥**
**ಪರಿವಾರೈಶ್ಚ [ರತದದಾದಾಭಿ] ಸಂಯುಕ್ತಃ ಸ್ಥಿತೋ ಗೋಪಜನೈಸ್ಸಹ**
**ಜಿತ್ವಾಸುರ ತರುಂ ದೇವಾನ್ ಪ್ರಸಹ್ಯೇಂದ್ರ ಪುರಸ್ಸರಾನ್ ॥ ೮ ॥**
**ಗೃಹೀತ್ವಾ ಸ್ಥಿತವಾನ್ ತಸ್ಮಿನ್ ಸಹಿತ (ಸವಿಂಶ) ಸ್ಸತ್ಯಭಾಮಯಾ**
**ವಾಮೇ ತು ಗರುಡ ಸ್ಸತ್ಯಭಾಮಾಽವಾಮೇ ಪಿತಾಮಹಃ ॥ ೯ ॥**
**ಪ್ರದ್ಯುಮ್ನ ಸಾಂಬೌ ವಾಮೇ ಸ್ಥಾಂ ಬಲಭದ್ರಾನಿರುದ್ಧಕೌ**
**ದಕ್ಷಿಣೇ ತು ಭವೇತಾಂ ವೈ ವೈನತೇಯಃ ಪುರಸ್ಥಿತಃ ॥ ೧೦ ॥**
**ದಕ್ಷಿಣೇ ರುಕ್ಮಿಣೀ ಸತ್ಯಭಾಮೇ ವಾಮೇ ತಥೈವ ಚ**
**ಪ್ರದ್ಯುಮ್ನ ಸಾಂಬ ರಾಮಶ್ಚಾಪ್ಯನಿರುದ್ಧಶ್ಚ ಪೂರ್ವವತ್ ॥ ೧೧ ॥**
**ರುಕ್ಮಿಣೀ ರುಕ್ಮಭಾ ಸತ್ಯಭಾಮಾ ಶ್ಯಾಮನಿಭಾ ಭವೇತ್**
**ಶ್ರೀ ಭೂಮಿಮಂಡನೇ ಸತ್ವ[ತ್ವ]ಗುಣೇ ಬಾಹು ಸಮೋದಮೇ ॥ ೧೨ ॥**
**ದ್ವಿತ್ರದಾಮಾಂಬರೇ ಸಾರ್ಧ ನವತಾಲಮಿತೋದಯೇ**
**ಉಷ್ಣೀಶ (ಪಟ್ಟ) ಸನ್ನದ್ಧೆ ಸತಿರ್ಯಗ್ಜಾನು ಸಂಸ್ಥಿತೇ ॥ ೧೩ ॥**

ಶ್ರೀಕೃಷ್ಣನು ಹಿಂದೊಮ್ಮೆ ಗೋಪಕನ್ಯೆಯನ್ನು ಪಡೆಯಲು ಏಳು ವೃಷಭಗಳನ್ನು ಸಂಹರಿಸಿದ. ನಂತರ ಗೋಪಿಯರೊಂದಿಗೆ, ಗೋಪರೊಂದಿಗೆ ನಿಂತ. ಇಂದ್ರ ಮೊದಲಾದ ದೇವತೆಗಳ ಒತ್ತಡವನ್ನು ಎದುರಿಸಿ ಅವರನ್ನು ಗೆದ್ದು ದೇವಲೋಕದ ಕಲ್ಪವೃಕ್ಷ (ಪಾರಿಜಾತ

ವೃಕ್ಷ) ಮೊದಲಾದುವನ್ನು ತಂದ. ಈ ಸಂದರ್ಭದಲ್ಲಿ ಕೃಷ್ಣನ ಎಡಭಾಗದಲ್ಲಿ ಗರುಡನೂ, ಬಲಭಾಗದಲ್ಲಿ ಸತ್ಯಭಾಮೆ, ಪಿತಾಮಹನಾದ ಬ್ರಹ್ಮನು ಇದ್ದರು. ಇದೇ ದೃಶ್ಯವನ್ನು ಪ್ರದ್ಯುಮ್ನ, ಸಾಂಬ ಇವರು ಎಡಭಾಗದಲ್ಲಿರುವಂತೆ ಬಲರಾಮ, ಅನಿರುದ್ಧ ಬಲಭಾಗದಲ್ಲಿರುವಂತೆ ಮತ್ತು ಗರುಡ ಮುಂಭಾಗದಲ್ಲಿರು ವಂತೆಯೂ, ಮಧ್ಯದಲ್ಲಿ ಶ್ರೀಕೃಷ್ಣ ಒಂಟಿಯಾಗಿರುವಂತೆ ಚಿತ್ರಿಸುವ ಪದ್ಧತಿಯೂ ಉಂಟು. ಶ್ರೀಕೃಷ್ಣನ ಇಕ್ಕೆಲಗಳಲ್ಲಿ ರುಕ್ಮಿಣಿ ಸತ್ಯಭಾಮೆಯರು ಇದ್ದು, ಈ ಮೊದಲು ಹೇಳಿರುವಂತೆ ಪ್ರದ್ಯುಮ್ನ ಸಾಂಬ, ಬಲರಾಮ ಅನಿರುದ್ಧರನ್ನು ಪೂರ್ವೋಕ್ತ ರೀತಿಯಲ್ಲಿ ಚಿತ್ರಿಸುವುದೂ ಉಂಟು.

ರುಕ್ಮಿಣಿಯು ಬಂಗಾರದ ಮೈಬಣ್ಣವುಳ್ಳವಳು. ಸತ್ಯಭಾಮ ಶ್ಯಾಮಲ ವರ್ಣೆ. ಇಬ್ಬರೂ ಶ್ರೀದೇವಿ, ಭೂದೇವಿಯರಂತೆ ಅಲಂಕರಿಸಲ್ಪಟ್ಟಿರುತ್ತಾರೆ. ಸತ್ವಗುಣ ಉಳ್ಳವರಾದ ಇವರು, ಬಗೆ ಬಗೆಯ ಬಣ್ಣಗಳ ಹೂವಮಾಲೆಗಳಿಂದ ನಾನಾ ವರ್ಣಗಳ ವಸ್ತ್ರಗಳಿಂದ ಅಲಂಕೃತರಾಗಿರುತ್ತಾರೆ. ಕೃಷ್ಣನ ಭುಜಗಳ ಎತ್ತರಕ್ಕೆ ಸರಿಯಾಗಿ ಇವರ ಎತ್ತರವಿರುತ್ತದೆ. ಇವರನ್ನು ಸಾರ್ಧನವತಾಳಮಾನಕ್ರಮದಲ್ಲಿ ರೂಪಿಸಬೇಕು (ಎಂದರೆ ಒಟ್ಟು ಎತ್ತರವು ೧೧೪ ಅಂಗುಳ ). ತಲೆಯಲ್ಲಿ ಪಟ್ಟವನ್ನು (ಕಿರೀಟದ ಒಂದು ಬಗೆ ) ಮಾತ್ರವೇ ಧರಿಸಿರುತ್ತಾರೆ. ಒಂದು ಮೊಣಕಾಲನ್ನು ಸ್ವಲ್ಪ ಬಗ್ಗಿಸಿ ನಿಂತಿರುತ್ತಾರೆ

**ಪ್ರದ್ಯುಮ್ನಃ ಶ್ಯಾಮ ಸಂಕಾಶೋಽನಿರುದ್ಧೋ ನೀಲ ಸನ್ನಿಭಃ**

**ಸಾಂಬಃ ಶ್ಯಾಮನಿಭೋ ಗೋಪವಧ್ವೋ [ಧೂ] ದೂರ್ವಾಸಮಾನಭಾಃ [ಭಾಕ್] ॥ ೧೪ ॥**

**ದಿವ್ಯಸ್ತ್ರೀ ಮಂಡನಾ ಸ್ಸತ್ಯಭಾಮಾ ತುಲ್ಯಥಾ ಸಾಳಕಾಃ**

**ತಪ್ತ ಚಾಮೀ ಕರಾಭಾಸಾಸ್ಸೌವರ್ಣಾಭರಣೋಜ್ವಲಾಃ**

**[ದಾಮಾಚಾಮೀ ಕರಾಭಾಸಾ ಸೌವರ್ಣೌ ಯೋಧರುಕ್ಮಭಾಃ] ॥ ೧೫ ॥**

**ವಸ್ತ್ರಾಭರಣ ಚಿನ್ಹಾನಿ ಯಥಾ ಯೋಗ್ಯಂ ಪ್ರಯೋಜಯೇತ್**

**ಶಿಖಾಬಂಧೋ ಭವೇನ್ಮೌಳಿಃ ಕೃಷ್ಣಾಃ ಸ್ಫುರಗ್ರ [ಕೃಷ್ಣಾಸ್ಯಾಂಚಿಸು] ಪಟ್ಟಿಕಾಃ [ಕಾ] ॥ ೧೬ ॥**

ಪ್ರದ್ಯುಮ್ನನು ಶ್ಯಾಮಲ ವರ್ಣದವನು. ಅನಿರುದ್ಧನು ನೀಲವರ್ಣ ದೇಹಿ. ಸಾಂಬನು ಶ್ಯಾಮಲ ವರ್ಣದವನು. ಗೋಪಸ್ತ್ರೀಯರು ಗರಿಕೆಯ ಎಳೆ ಹಸಿರು ವರ್ಣದವರು. ಸತ್ಯಭಾಮೆಯಂತೆಯೇ ದೇವಕನ್ಯೆಯರ ಅಲಂಕಾರ ಉಳ್ಳವರು ; ಪುಟಕ್ಕಿಟ್ಟ ಚಿನ್ನದಂತೆ ಮುಖಕಾಂತಿಯುಳ್ಳವರು. ನಾನಾ ಬಗೆಯ ಸ್ವರ್ಣಾಭರಣಗಳಿಂದ ಅಲಂಕೃತಾಗಿರುವವರು. ಅವರವರ ಅಂತಸ್ತಿಗೆ ತಕ್ಕಂತ ಸೂಕ್ತವಾದ ವಸ್ತ್ರ, ಆಭರಣ, ಚಿಹ್ನೆಗಳನ್ನು ಅಳವಡಿಸಿಕೊಂಡಿರುತ್ತಾರೆ. ಶಿಖಾ ಬಂಧದೊಂದಿಗೆ ಪಟ್ಟವನ್ನು (ಕಿರೀಟದ ಒಂದು ಬಗೆ ) ಧರಿಸಿರುತ್ತಾರೆ. ಹಣೆಯ ಮೇಲ್ಭಾಗದಲ್ಲಿ ಕಪ್ಪು ಪಟ್ಟಿಕೆ ಇರಬೇಕು.

**ಅಸ್ಯೈವ ಬಾಲ್ಯೇ ವಯಸಾಂ ಕ್ರಮೇಣ ಪ್ರವಕ್ಷ್ಯತೇ ಮಾನಮಥೈವರ್ಷಮ್**

**ಆರಭ್ಯ ಪಂಚಾದಶ ವತ್ಸರಾಂತಂ ವಯಾಂಸಿ ಪಂಚೈವಮಿತೀಹ ಪಂಚ ॥ ೧೭ ॥**

**ಕ್ರಮೇಣ ಪಂಚಾದಿ ನವಾಂತ ತಾಲಕಾನ್ಯುತ್ಕೃಷ್ಟ ಮಧ್ಯಾಧಮ ಸಂಯುತಾನಿ**

**ತ್ರಿಷಣ್ಣವ ದ್ವಾದಶ ಪಂಚ ಪಂಕ್ತಿ ಸಂವತ್ಸರೇಷ್ವಾಗಮವಿತ್ ಪ್ರಯುಂಜ್ಯಾತ್ ॥ ೧೮ ॥**



ಚಿತ್ರ ೪೦ : ವೇಣುಗೋಪಾಲ (ಚತುರ್ಭುಜ)

ಶ್ರೀಕೃಷ್ಣನ ಮೂರ್ತಿಯನ್ನು ರೂಪಿಸಲು ವಿವಿಧ ವಯಸ್ಸುಗಳಲ್ಲಿ ವಿವಿಧವಾದ ತಾಲಮಾನ ಕ್ರಮಗಳನ್ನು ಅನುಸರಿಸಬೇಕಾಗಿರುತ್ತದೆ. ಅದರ ವಿವರವನ್ನು ಈಗ ತಿಳಿಸುತ್ತೇನೆ. ಒಂದು ವರ್ಷದಿಂದ ಹದಿನೈದು ವರ್ಷಗಳತನಕ ಇರುವ ವಯಸ್ಸನ್ನು ಪ್ರತಿ ಮೂರು ವರ್ಷಗಳಿಗೆ ಒಂದು ವರ್ಗವಾಗಿ ಪರಿಗಣಿಸಬೇಕು. ಪ್ರಾರಂಭದಿಂದ ಮೂರು ವರ್ಷಗಳತನಕ ಇರುವ ಮೂರ್ತಿಯನ್ನು ಪಂಚತಾಲವನ್ನು ಬಳಸಿ ರೂಪಿಸಬೇಕು (ಎಂದರೆ ೬೦ ಅಂಗುಳ). ನಂತರ ಆರು ವರ್ಷಗಳ ತನಕ ಇರುವ ಮೂರ್ತಿಗೆ ಷಟ್‌ತಾಳವನ್ನು ಬಳಸಬೇಕು [ಎಂದರೆ ೭೨ ಅಂಗುಳ]. ನಂತರದ ಒಂಬತ್ತು ವರ್ಷಗಳ ತನಕ ಇರುವ ಮೂರ್ತಿಯನ್ನು ರೂಪಿಸಲು ಸಪ್ತತಾಲ [ಎಂದರೆ ೮೪ ಅಂಗುಳವನ್ನು ಬಳಸಬೇಕು ]. ಹನ್ನೆರಡು ವರ್ಷಗಳ ಒಳಗೆ ಒಂಬತ್ತುವರ್ಷಗಳಿಗೆ ಹೆಚ್ಚಾಗಿ ವಯಸ್ಸಾಗಿರುವ ಮೂರ್ತಿಯನ್ನು ಅಷ್ಟತಾಲದಲ್ಲಿ ರೂಪಿಸಬೇಕು [ಎಂದರೆ ೯೬ ಅಂಗುಳಗಳು]. ಹನ್ನೆರಡಕ್ಕೆ ಹೆಚ್ಚಾಗಿದ್ದು ಹದಿನೈದು ವರ್ಷಗಳ ತನಕ ವಯಸ್ಸಾಗಿರುವಾಗ ನವತಾಲಮಾನವನ್ನು ಬಳಸಿ ಮೂರ್ತಿಯನ್ನು ರೂಪಿಸಬೇಕು [ಎಂದರೆ ೧೦೮ ಅಂಗುಳಗಳು].

ಈ ತಾಲಮಾನಗಳಲ್ಲಿ ಉತ್ತಮ - ಮಧ್ಯಮ - ಅಧಮ ವರ್ಗಗಳು ಇರುವುದು ಗೊತ್ತಿರುವ ಸಂಗತಿಯೇ. ಮೂರುವರ್ಷಗಳ ವರ್ಗಗಳಲ್ಲಿ ಮೊದಲವರ್ಷ ಅಧಮ ತಾಮಲಾನವನ್ನು, ಎರಡನೆಯ ವರ್ಷ ಮಧ್ಯಮ ತಾಲಮಾನವನ್ನು, ಮೂರನೆಯ ವರ್ಷ ಉತ್ತಮತಾಲಮಾನವನ್ನು ಕ್ರಮವಾಗಿ ಬಳಸಬೇಕು. ೧,೪,೭,೧೦,೧೩ ವರ್ಷಗಳಿಗೆ ಅಧಮತಾಲಮಾನವನ್ನೂ, ೨, ೫, ೮, ೧೧, ೧೪ ವರ್ಷಗಳಿಗೆ ಮಧ್ಯಮತಾಲಮಾನವನ್ನೂ, ೩, ೬, ೯, ೧೨, ೧೫ ವರ್ಷಗಳಿಗೆ ಉತ್ತಮತಾಲಮಾನವನ್ನು ಬಳಸಬೇಕೆಂಬುದು ಆಗಮ ರಹಸ್ಯಗಳನ್ನು ಅರಿತ ಶಿಲ್ಪಾಚಾರ್ಯನು ತಿಳಿದಿರುತ್ತಾನೆ.

## ಉತ್ತಮ ಪಂಚತಾಲ

**ಆಪಾದತಲಮುಷ್ಣೀಷಾ ದಷ್ಟಾಷ್ಟಾಂಗುಲ ಮೀರಿತಮ್**
**ಕಲಾ ಯವೋ ನವನ್ಹಿಶ್ಚ ತಾವತ್ತಾವದ್ಯವತ್ರಯಮ್ ॥ ೧೯ ॥**
**ಕಲಾ ಸಪ್ತಾಂಗುಲಂ ಚೈವ ತಾವತ್ಕರ್ಮ ತ್ರಯೋದಶ**
**ಕಲಾ ಸಾರ್ಧಾಂಗುಲಂ ತಾಲಂ ಸಾಂಗುಲಂ ದ್ವ್ಯರ್ಧಕಂ [ವೃದ್ಧಕ] ಕ್ರಮಾತ್ ॥ ೨೦ ॥**
**ಶಿರೋನೇತ್ರಂ ಪುಟಾಂತಂ ಚ ಹನ್ವಂತಂ ಗಳ ಕಂಧರೌ**
**ಹೃದಯಂ ನಾಭಿ ಮೇಢ್ರಂ ಚಾಪ್ಯುರುಜಾನುಸ್ತಥೈವ ಚ ॥ ೨೧ ॥**
**ಜಂಘಾ ಪಾದತಲಂ ವಿದ್ಧಿ ತಲಾಯಾಮಂ ದಶಾಂಗುಲಮ್**

ಉತ್ತಮ ಪಂಚತಾಲದ ಎತ್ತರವು ೬೪ ಅಂಗುಳ. ಅದರಲ್ಲಿ ಶಿರಸ್ಸುಉಷ್ಣೀಷ ೨ ಅಂಗುಲ. ಅದರಿಂದ ನೇತ್ರಾಂತವು ೨ ಅಂಗುಳ ೭ ಯವ. ನೇತ್ರದಿಂದ ನಾಸಾಪುಟದವರೆವಿಗೂ ೨ ಅಂಗುಲ ೭ ಯವ. ಅಲ್ಲಿಂದ ಹನ್ವಂತ ೨ ಅಂಗುಳ ೭ ಯವ. ಅಲ್ಲಿಂದ ಗಳ ೩ ಯವ. ಗಳದಿಂದ ಕಂಠವು ೨ ಅಂಗುಳ. ಹಿಕ್ಕಾದಿಂದ ಹೃದಯದತನಕ ೭ ಅಂಗುಳ. ಅಲ್ಲಿಂದ ನಾಭಿಯ ತನಕ ೭ ಅಂಗುಳ. ನಾಭಿಯಿಂದ ಮೇಢ್ರದವರೆವಿಗೂ ೬ ಅಂಗುಳ. ಮೇಢ್ರದಿಂದ ತೊಡೆಯ

ಉದ್ದವು ೧೩ ಅಂಗುಳ. ಮೊಣಕಾಲು ೨ ಅಂಗುಳ ೪ ಯವ. ಅಲ್ಲಿಂದ ಮುಂಗಾಲು ೧೩ ಅಂಗುಳ. ಪಾದದ ಎತ್ತರ ೨ ಅಂಗುಳ ೪ ಯವ. ಪಾದದ ಉದ್ದ ೧೦ ಅಂಗುಳ.

ಶಿರಸ್ಸು (೨) + ನೇತ್ರಾಂತ (೨.೭) + ಪುಟಾಂತ (೨.೭) + ಹನ್ವಂತ (೨.೭) + ಗಳ (೦.೨) + ಕಂಠ (೨) + ಹೃದಯ (೭) + ನಾಭಿ (೭) + ಮೇಢ್ರ (೭) + ತೊಡೆ (೧೩) + ಮೊಣಕಾಲು (೨.೪) + ಮುಂಗಾಲು (೧೩) + ಪಾದ (೨.೪) = ೬೪ ಅಂಗುಳ

**ದೋರ್ದಂಡಂ ಷಟ್ ಕಲಾ ಯಾಮಂ ಪ್ರಕೋಷ್ಠಂ ಚ ನವಾಂಗುಲಮ್ ॥ ೨೨ ॥**
**ತಲಂ ಭಾಗಂ ತ್ರಿಮಾತ್ರಂ ಸ್ಯಾತ್ ಮಧ್ಯಾಂಗುಳ್ಯಾಯತಂ ಮತಮ್**
**ಮುಖ ಮಷ್ಟಾಂಗುಲ ತತಂ (ಲಾಂತಕಂ) ಸಕರ್ಣಂ ನವಮಾತ್ರಕಮ್ ॥ ೨೩ ॥**
**ಸಾರ್ಧಂ ಕರ್ಣಾಂಗುಲ್ಯಂ ಮುಖಂ ವಕ್ಷೋ ವಿಶಾಲಮ್**
**ಷಡಂಗುಲಂ ಬಾಹು ಮೂಲತಾರಂ ಪಂಚಾಂಗುಲಂ ತತಮ್ ॥ ೨೪ ॥**
**ದೋರ್ಮಧ್ಯಂ ಚತುರಂಗುಲ್ಯಂ ಪ್ರಕೋಷ್ಠಸ್ಯ [ಮಧ್ಯ] ವಿಶಾಲಕಮ್**
**ಮಣಿಬಂಧಂ ತ್ರಿಮಾತ್ರಾರ್ಧಂ ತಲಂ ಭಾಗ ವಿಶಾಲಕಮ್ ॥ ೨೫ ॥**
**ಮಧ್ಯೋದರಂ ಪಂಚಕಲಂ ಶ್ರೋಣೀ ಹ್ಯೇಕಾಂಗುಲಾಧಿಕಾ**
**ಕಟಿಸ್ತದಂಗುಲಾಧಿಕ್ಯಾಪ್ಯೂರು ಭಾಗದ್ವಯಂ ತತಮ್ ॥ ೨೬ ॥**
**ಜಾನು ಪಂಚಾಂಗುಲಾರ್ಧಂ ಸ್ಯಾತ್ ನಳಕಾ ತ್ರ್ಯರ್ಧ ಮಾತ್ರಕಾ**
**ತಲಂ ಪಂಚಾಂಗುಲಂ ತಾರಂ ಶೇಷ ಮೂಹ್ಯಂ ವಿಚಕ್ಷಣೈಃ ॥ ೨೭ ॥**

ಮೇಲಿನ ಭುಜದಂಡದ ಉದ್ದವು ೧೨ ಅಂಗುಳ. ಮುಂತೋಳಿನ ಉದ್ದವು ೯ ಅಂಗುಳ. ಅಂಗೈನೀಳವು ೪ ಅಂಗುಳ. ಮಧ್ಯ ಬೆರಳಿನ ಉದ್ದವು ೩ ಅಂಗುಳ. ಮುಖದ ಅಗಲ ೮ ಅಂಗುಳ. ಕಿವಿಗಳನ್ನು ಸೇರಿಸದರೆ ೯ ಅಂಗುಳ. ಕಿವಿಗಳ ಅಗಲವು ೧ ಅಂಗುಳ ೪ ಯವ. ವಕ್ಷದ ಅಗಲವು ೧೨ ಅಂಗುಳ. ಕಂಕುಳ ಮೇಲೆ ಭುಜದ ಅಗಲ ೬ ಅಂಗುಳ. ಮೇಲ್ತೋಳಿನ ಮಧ್ಯಭಾಗದ ಅಗಲವು ೫ ಅಂಗುಳ. ಮುಂತೋಳಿನ ಮಧ್ಯಭಾಗದ ಅಗಲವು ೪ ಅಂಗುಳ. ಮಣಿಕಟ್ಟಿನ ಅಗಲವು ೩ ಅಂಗುಳ ೪ ಯವ. ಅಂಗೈ ಅಗಲವು ೪ ಅಂಗುಳ. ಮಧ್ಯೋದರದ ಅಗಲವು ೧೦ ಅಂಗುಳ. ಶ್ರೋಣಿಯ ಅಗಲವು ೧೧ ಅಂಗುಳ. ಸೊಂಟದ ಅಗಲವು ೧೨ ಅಂಗುಳ. ತೊಡೆಯ ಅಗಲವು ಪ್ರಾರಂಭದಲ್ಲಿ ೮ ಅಂಗುಳ. ಮೊಣಕಾಲಿನ ಅಗಲವು ೫ ಅಂಗುಳ ೪ ಯವ. ಹಿಮ್ಮಡಿಯ ಅಗಲವು ೩ ಅಂಗುಳ ೪ ಯವ. ಪಾದದ ಅಗಲವು ೫ ಅಂಗುಳ. ಉಳಿದ ಅಳತೆಗಳನ್ನು ಸೂಕ್ಷ್ಮಗ್ರಾಹಿಯಾದ ಶಿಲ್ಪಿಯು ಊಹಿಸಿ, ಕಲ್ಪಿಸಿಕೊಂಡು ಮೂರ್ತಿಯ ಸೌಂದರ್ಯ ವೃದ್ಧಿಗೆ ಸಹಕಾರವಾಗುವಂತೆ ರೂಪಿಸಬೇಕು.

## ಮಧ್ಯಮ ಪಂಚತಾಲಮ್

**ಊರ್ವಾಯಾಮೇಂಗುಲಂ ಹೀನಂ ಜಂಘಾಯಾಂ ಚ ತದೇವ ತು**
**ಜಾನಾವರ್ಧಂ ತಲೆ ತಾವತ್ ಹಿಕ್ಕಾ ನಾಭ್ಯಂತರೇಽಂಗುಲಮ್ ॥ ೨೮ ॥**
**ಶ್ರೇಷ್ಠಾತ್ಪಂಚಯಮಾನ್ಮಧ್ಯೇ ದೀರ್ಘಂ ತಾರಂ ಪುರೋಕ್ತವತ್**

ಮಧ್ಯಮಪಂಚತಾಲದ ಅಳತೆಗಳನ್ನು ಪಡೆಯಲು ಉತ್ತಮ ಪಂಚತಾಲದ ಅಳತೆಗಳಲ್ಲಿ

ಮುಂದೆ ಹೇಳಿರುವಂತೆ ಕಡಿಮೆಮಾಡಬೇಕು. ತೊಡೆಯ ಉದ್ದದಲ್ಲಿ ೧ ಅಂಗುಳ. ಮುಂಗಾಲಿನ ಉದ್ದದಲ್ಲಿ ೧ ಅಂಗುಳ. ಮೊಣಕಾಲಿನ ಉದ್ದದಲ್ಲಿ ೪ ಯವ. ಪಾದದ ಎತ್ತರದಲ್ಲಿ ೪ ಯವ, ಹಿಕ್ಕಾದಿಂದ ನಾಭಿಯ ತನಕ ಇರುವ ಒಟ್ಟು ಎತ್ತರದಲ್ಲಿ ೧ ಅಂಗುಳ ಕಡಿಮೆ ಮಾಡಬೇಕು. ಹೀಗೆ ಒಟ್ಟು ಎತ್ತರದಲ್ಲಿ ೪ ಅಂಗುಳ ಕಡಿಮೆಯಾಗುತ್ತದೆ. ಆಗ ಎತ್ತರದಲ್ಲಿ ವಿಭಜನೆ ಹೀಗಿರುತ್ತದೆ.

ಶಿರಸ್ಸು (೨) + ನೇತ್ರಾಂತ (೨.೭) + ಪುಟಾಂತ (೨.೭) + ಹನ್ವಂತ (೨.೭) + ಗಳ (೦.೨) + ಕಂಠ (೨) + ಹೃದಯ + ನಾಭಿ + ಮೇಢ್ರ (೨೦) + ತೊಡೆ (೧೨) + ಮೊಣಕಾಲು (೨) + ಮುಂಗಾಲು (೧೨) + ಪಾದ (೨) = ೬೦ ಅಂಗುಳ

ಅಗಲದ ಅಳತೆಗಳು ಉತ್ತಮ ಪಂಚತಾಲದಲ್ಲಿ ಹೇಳಿರುವಂತೆಯೇ ಅನುಸರಿಸಬೇಕು.

## ಅಧಮ ಪಂಚತಾಲಮ್

**ಶಿರಸ್ಯರ್ಧಾಂಗುಲಂ ಹೀನಂ ಹಿಕ್ಕಾ ನಾಭ್ಯಂತರೇऽಂಗುಲಮ್ ॥ ೨೯ ॥**

**ಜಂಘಾಯಾಮಂ ಗುಲಂ ಹ್ಯೂರೋಸ್ತ್ವಾವತ್ಪದೇ ಯವದ್ವಯಮ್**

**ಜಾನಾವಪಿ ತಥಾ ಹೀನಂ ಮಧ್ಯಾತ್ತಾರಂ [ಧ್ಯತಾರಂ] ಪುರೋಕ್ತವತ್ ॥ ೩೦ ॥**

ಅಧಮ ಪಂಚತಾಲದ ಮಾನಗಳನ್ನು ಪಡೆದುಕೊಳ್ಳಲು ಮುಂದೆ ಹೇಳಿರುವ ಪ್ರಕಾರ ಮಧ್ಯಮ ಪಂಚತಾಲದ ಎತ್ತರದ ಅಳತೆಗಳಲ್ಲಿ ಕಡಿಮೆಮಾಡಬೇಕು.

ಶಿರ ೪ಯವ, ಹಿಕ್ಕಾ ಮತ್ತು ನಾಭಿಯ ಮಧ್ಯಭಾಗದ ದೇಹದ ಎತ್ತರದಲ್ಲಿ ೧ ಅಂಗುಳ, ತೊಡೆಯ ಎತ್ತರದಲ್ಲಿ ೧ ಅಂಗುಳ, ಮುಂಗಾಲಿನ ಎತ್ತರದಲ್ಲಿ ೧ ಅಂಗುಳ ಕಡಿಮೆಯಾಗಬೇಕು. ಪಾದದ ಎತ್ತರದಲ್ಲಿ ೨ ಯವ, ಮೊಣಕಾಲಿನ ಎತ್ತರದಲ್ಲಿ ೨ ಯವ ಕಡಿಮೆಮಾಡಬೇಕು. ಆಗ ಒಟ್ಟು ಎತ್ತರವು ೫೬ ಅಂಗುಳಗಳಾಗಿದ್ದು ವಿಭಜನೆ ಹೀಗಿರುತ್ತದೆ.

ಶಿರಸ್ಸು (೦.೪) + ನೇತ್ರಾಂತ (೨.೭) + ಪುಟಾಂತ (೨.೭) + ಹನ್ವಂತ (೨.೭) + ಗಳ (೦.೩) + ಕಂಠ (೨) + ಹೃದಯ + ನಾಭಿ + ಮೇಢ್ರ (೧೯) + ತೊಡೆ (೧೧) + ಮೊಣಕಾಲು (೧.೬) + ಮುಂಗಾಲು (೧೧) + ಪಾದ (೧.೬) = ೫೪ ಅಂಗುಳ

ಅಗಲದ ಅಳತೆಗಳೆಲ್ಲಾ ಮಧ್ಯಮ ಪಂಚತಾಲದಷ್ಟೇ ಇರುತ್ತವೆ.

## ಉತ್ತಮ ಷಟ್‌ತಾಲಂ

**ಶ್ರೇಯಸಾ ಷಡ್ಯವೇ ನಾಭಿ ವಿಭಾಗೊ ವಕ್ಷ್ಯತೇऽಬ್ಜಜ**

**ಷಟ್‌ಸಪ್ತತ್ಯಂಗುಲಂ ಮೂರ್ಧ್ನಃ ಪಾದಾಂತಂ ಪರಿವಕ್ಷ್ಯತೇ ॥ ೩೧ ॥**

ಉತ್ತಮ ಷಟ್‌ತಾಲದಲ್ಲಿ ಶಿರದಿಂದ ಪಾದದವರೆವಿಗಿನ ಎತ್ತರವು ೭೬ ಅಂಗುಳಗಳು. ಇದರ ವಿಭಾಗಗಳನ್ನು ಎಲೈ ಬ್ರಹ್ಮ ದೇವನೆ ಈಗ ಹೇಳಲಾಗುತ್ತದೆ.

[ವಿವರಗಳನ್ನು ಇಲ್ಲಿ ಹೇಳಿಲ್ಲ. ವಿವರಣೆಗೆ ಇದೇ ಕೃತಿಯ ೧೪ನೆಯ ಅಧ್ಯಾಯವನ್ನು ನೋಡಬಹುದು]

## ಉತ್ತಮ ಸಪ್ತತಾಲಮ್

ಶಿರೋ ಮಾತ್ರದ್ವಯಂ ಸಾರ್ಧಂ ದ್ವಿ ಮಾತ್ರಂ ಷಡ್ಯವಂ ತತಃ
ನೇತ್ರಾಂತಂ ತತ್ಸಮಾ ನಾಸಾ ಹನ್ವಂತಮಪಿ [ತತೋ ಹನ್ವಂತಂ] ತತ್ಸಮಮ್ ॥ ೩೨ ॥
(ಅರ್ಧಾಂಗುಲಂ) ಗಳಂ ಗ್ರೀವಾ ಸಷಡ್ಯವಕಲಾ ಭವೇತ್
ಹಿಕ್ಕಾಯಾ ಹೃದಯಂ ತಸ್ಮಾನ್ನಾಭಿ ಸ್ಸದ್ವಿಯವಂ ವಸು ॥ ೩೩ ॥
ಅಷ್ಟಮಾತ್ರಂ ಭವೇನ್ನಾಭೇ ರ್ಮೇಢ್ರ ಮೂಲಾವಸಾನಕಮ್
ನವಾಂಗುಲಂ ತತೋ ಮೇಢ್ರ ಮೂರು ಸ್ತೇಕೋನವಿಶಂತಿಃ ॥ ೩೪ ॥
ಜಾನು ತ್ರಿಮಾತ್ರಂ ಜಂಘೋರು ಸಮಾ [ಜಂಘೈರ್ವಾಸದೃಶಾ] ಜಾನು ಸಮಂ ತಲಮ್
ದ್ವಾದಶಾರ್ಧಾಂಗುಲಂ ಪಾದತಲಾಯಾಮಂ ಪ್ರಶಸ್ಯತೇ ॥ ೩೫ ॥
ಅಷ್ಟಾಂಗುಲಾರ್ಧಕಂ ವಕ್ತ್ರಂ ಕಂಠಂ ಸಪ್ತಾಂಗುಲಂ ತತಃ
ತ್ರಿದಶಾರ್ಧಾಂಗುಲಂ ವಕ್ಷೋ ಬಾಹ್ವಂತಂ ಚಾಷ್ಟವಿಂಶತಿಃ ॥ ೩೬ ॥
ಏಕೋನವಿಂಶದ್ದೋರ್ದೀರ್ಘಂ ದೇವತಾದೀ (ರ್ಘಂ ಪ್ರ)ಕೋಷ್ಠಂ ಸಪ್ತಕೋಲಕಮ್
ಪಂಚಾಂಗುಲಂ ತಲಂ ಭಾಗ ದೀರ್ಘಾ ಸ್ಯಾನ್ಮಧ್ಯಮಾಂಗುಲೀ ॥ ೩೭ ॥
ಪಂಚಾಂಗುಲಂ ಕೂರ್ಪರಂ ತು ಕರಾಂತಂ ತ್ರ್ಯರ್ಧ ಮಾತ್ರಕಮ್
ಸಾರ್ಧರುದ್ರಾಂಗುಲಂ ಕುಕ್ಷಿವಿಶಾಲಂ ಸಾಂಗುಲಂ ಮುಖಮ್ ॥ ೩೮ ॥
ಶ್ರೋಣೀ ತಾರಂ ಕಟಿ ತಾರಂ ಸಪ್ತಕೋಲಕಮಂಗುಲಮ್
ಊರೂ ಮೂಲಂ ದಶಾಂಗುಲ್ಯಂ ಜಾನು ಸ್ಕಂದಾಂಗುಲಾರ್ಧಕಮ್ ॥ ೩೯ ॥
ಜಂಘಾ ಪಂಚಾರ್ಧಮಾತ್ರಾ ಸ್ಯಾನ್ನಳಕಾ ತ್ರ್ಯಂಗುಲಾರ್ಧಕಾ
ತಲಂ ಪಂಚಾಂಗುಲಾರ್ಧಂ ಸ್ಯಾತ್ ವಿಸ್ತಾರ ಮಿತಿ ವಿದ್ಯತೇ ॥ ೪೦ ॥
ಕಾಯೇऽದ್ವ್ಯರ್ಧಂ ಮುಖೇऽರ್ಧಂ ಚ ದ್ವ್ಯಂಗುಲಂ ಚೋರು (ಜಾನು) ಜಂಘಯೋಃ
ಹೀನಂ ಸ್ಯಾನ್ಮಧ್ಯಮೇ ಮಧ್ಯಾತ್ ಶಿರಸ್ಯರ್ಧಾಂಗುಲ ಕ್ಷಯಮ್ ॥ ೪೧ ॥
ತತೌ ಸಾರ್ಧಾಂಗುಲಂ ಹ್ಯೂ(ರ)ಜಂಘಯೋರ್ದ್ವ್ಯಂಗುಲ ಕ್ಷಯಮ್
ಶ್ರೇಷ್ಠ ಮಧ್ಯಮಯೋ ಸ್ತಾರಂ ತುಲ್ಯಂ ಸ್ಯಾದಧಮಸ್ಯ ಚ ॥ ೪೨ ॥
ಅರ್ಧಾಂಗುಲಂ ಮುಖಾದೀನಾಂ ವಿಸ್ತಾರೇ ಕ್ಷಯ ಮುಚ್ಯತೇ
ಬಾಹ್ವಾದಿ ತಲ ಪರ್ಯಂತೇ ದ್ವಿಯವೋನಮುದಾಹೃತಮ್ ॥ ೪೩ ॥
ಅಷ್ಟ ತಾಲವಿಭಾಗಂಸ್ತು ನವತಾಲ ವಿಭಾಗಕಃ
ಸರ್ವತಾಲ ವಿಭಾಗೇತು ವಕ್ಷ್ಯತೇ ಪಂಕಜಾಸನ ॥ ೪೪ ॥

ಉತ್ತಮ ಸಪ್ತತಾಲ ಪಾದಾದಿ ಉಷ್ಣೀಷಾಂತದ ಎತ್ತರಗಳನ್ನು ಈಗ ಹೇಳಲಾಗುತ್ತದೆ. ಶಿರ ೨ ಅಂಗುಳ ೪ ಯವ. ಅಲ್ಲಿಂದ ನೇತ್ರಾಂತವು ೨ ಅಂಗುಳ ೬ ಯವ. ಅಲ್ಲಿಂದ ನಾಸಾಪುಟದವರೆವಿಗಿನ ದೂರ ೨ ಅಂಗುಳ ೬ ಯವ. ಅಲ್ಲಿಂದ ಹನ್ವಂತರದವರೆವಿಗೂ ಇರುವ ದೂರವು ೨ ಅಂಗುಳ ೬ ಯವ. ಗಳವು ೪ ಯವ. ಗಳದಿಂದ ಕಂಠವು ೨ ಅಂಗುಳ ೬ ಯವ. ಹಿಕ್ಕಾದಿಂದ ವಕ್ಷವು (ಹೃದಯ ಪ್ರದೇಶವು) ೮ ಅಂಗುಳ ೨ ಯವ. ಹೃದಯದಿಂದ ನಾಭಿಯವರೆವಿಗೂ ೮ ಅಂಗುಳ ೨ ಯವ. ಅಲ್ಲಿಂದ ಮೇಢ್ರಾಂತದವರೆವಿಗೂ ಇರುವ ಉದ್ದವು ೯ ಅಂಗುಳ. ತೊಡೆಯ ಉದ್ದವು ೧೯ ಅಂಗುಳ. ಮೊಣಕಾಲಿನ ಉದ್ದವು ೩ ಅಂಗುಳ.

ಮುಂಗಾಲು ತೊಡೆಯಷ್ಟೇ (ಎಂದರೆ ೧೯ ಅಂಗುಳ). ಅಲ್ಲಿಂದ ಪಾದಾಂತವು ೩ ಅಂಗುಳ.

ಶಿರ (೨.೪) + ನೇತ್ರಾಂತ (೨.೬) + ನಾಸಾಪುಟಾಂತ (೨.೬) + ಹನ್ವಂತ (೨.೬) + ಗಳ (೦.೪) + ಕಂಠ (೨.೬) + ಹೃದಯ (೮.೨) + ನಾಭಿ (೮.೨) + ಮೇಢ್ರ (೮.೨) + ತೊಡೆ (೧೯) + ಮೊಣಕಾಲು (೩) + ಮುಂಗಾಲು (೧೯) + ಪಾದ (೩) = ೮೩.೪

[ಒಟ್ಟು ಎತ್ತರವು ೮೩.೪ ಅಂಗುಳವಾಗುತ್ತದೆ. ಉತ್ತಮ ಸಪ್ತತಾಲದಲ್ಲಿ ಎತ್ತರವು ೮೮ ಅಂಗುಳ ಇರಬೇಕು. ಕೆಲವು ಶಿಲ್ಪಿಗಳು ರೂಢಿಯಲ್ಲಿ ಕೃಷ್ಣನ ವಿಗ್ರಹದ ತಯಾರಿಕೆಯಲ್ಲಿ ಬಳಸುವ ಈ ತಾಲಮಾನವನ್ನು ಓದುಗರ ಮಾಹಿತಿಗಾಗಿ ಇಲ್ಲಿ ಕೊಡಲಾಗಿದೆ.

ಶಿರ ೨ + ನೇತ್ರಾಂತ ೩ + ನಾಸಾಪುಟಾಂತ ೩ + ಹನ್ವಂತ ೩ + ಗಳ ೦.೪ + ಕಂಠ ೨.೬ + ಹೃದಯ ೯ + ನಾಭಿ ೯ + ಮೇಢ್ರ ೯ + ತೊಡೆ ೨೦ + ಮೊಣಕಾಲು ೩ + ಮುಂಗಾಲು ೨೦ + ಪಾದ = ೮೮ ಅಂಗುಳ

೧೪ನೇಯ ಅಧ್ಯಾಯದಲ್ಲಿ ಕೊಟ್ಟಿರುವ ಉತ್ತಮ ಸಪ್ತತಾಲ ವಿಧಾನವು ಇದಕ್ಕಿಂತ ಬೇರೆಯಾಗಿರುವುದನ್ನು ಗಮನಿಸಿ. ಪ್ರಸ್ತುತ ತಾಲಮಾನ ಕ್ರಮವು ಶ್ರೀ ಕೃಷ್ಣಮೂರ್ತಿ ನಿರ್ಮಾಣದಲ್ಲಿ ಬಳಸುವ ವಿಶೇಷ ಅಳತೆಯಾಗಿರುತ್ತದೆ].

ಪಾದದ ಉದ್ದವು ೧೨ ಅಂಗುಳ ೪ ಯವ

ಮುಖದ ಅಗಲವು ೮ ಅಗುಳ ೪ ಯವ [ಮೇಲಿನ ಅಳತೆಗೆ ಅಗಲ ೯.೪ ಯಾಗಿರುತ್ತದೆ]. ಕಂಠದ ಅಗಲವು ೭ ಅಂಗುಳ. ವಕ್ಷಪ್ರದೇಶದ ಅಗಲವು ೧೩ ಅಂಗುಳ ೪ ಯವ. ಎರಡು ಭುಜಗಳ ಹೊರಅಂಚಿನ ಮಧ್ಯೆ ಇರುವ ಅಗಲವು ೨೮ ಅಂಗುಳ. ಮೇಲ್ತೋಳಿನ ಉದ್ದವು ೧೯ ಅಂಗುಳ. ಮುಂತೋಳು ೧೪ ಅಂಗುಳ ಉದ್ದವಾಗಿರುತ್ತದೆ. ಅಂಗೈ ಉದ್ದವು ೫ ಅಂಗುಳ. ಮಧ್ಯ ಬೆರಳಿನ ಉದ್ದವು ೪ ಅಂಗುಳ. ಮೊಣಕೈ ಅಗಲವು ೫ ಅಂಗುಳ. ಮಣಿಕಟ್ಟಿನ ಅಗಲವು ೩ ಅಂಗುಲ ೪ ಯವ. ಮಧ್ಯೋದರದ ಅಗಲ ೧೧ ಅಂಗುಳ ೪ ಯವ. ಶ್ರೋಣಿಯು ೧೩ ಅಂಗುಳ ಅಲಗವಾಗಿರುತ್ತದೆ. ಸೊಂಟದ ಅಗಲವು ೧೪ ಅಂಗುಳ. ತೊಡೆಯು ಪ್ರಾರಂಭದಲ್ಲಿ ಇರುವ ಅಗಲ ೧೦ ಅಂಗುಳ. ಮೊಣಕಾಲಿನ ಅಗಲವು ೬ ಅಂಗುಳ ೪ ಯವ. ಮುಂಗಾಲಿನ ಅಗಲ ೫ ಅಂಗುಳ ೪ ಯವ. ಹಿಮ್ಮಡಿಯ ಅಗಲವು ೩ ಅಂಗುಳ ೪ ಯವ. ಪಾದದ ಅಗಲ ೫ ಅಂಗುಳ ೪ ಯವ.

*ಮಧ್ಯಮ ಸಪ್ತತಾಲ* : ಉತ್ತಮ ಸಪ್ತತಾಲದಲ್ಲಿ ಹೇಳಿರುವ ಅಳತೆಗಳಲ್ಲಿ ಒಟ್ಟು ೪ ಅಂಗುಳ ಕಡಿಮೆಯಾದರೆ ಮಧ್ಯಮ ಸಪ್ತತಾಲದಲ್ಲಿಯ ಮಾನಗಳು ಬರುತ್ತವೆ. ಅದಕ್ಕಾಗಿ ಶರೀರ ಮಾನದಲ್ಲಿ ೧ ಅಂಗುಳ ೪ ಯವ, ಮುಖದಲ್ಲಿ ೪ ಯವ, ತೊಡೆ ಮತ್ತು ಮುಂಗಾಲಿನಲ್ಲಿ ಒಂದೊಂದು ಅಂಗುಳ ಕಡಿಮೆಯಾಗಬೇಕು. ಆಗ ಒಟ್ಟು ಎತ್ತರವು ಇಂತಿರುತ್ತದೆ.



ಚಿತ್ರ ೪೧: ವೇಣುಗೋಪಾಲ (ಅಷ್ಟಭುಜ)

ಶಿರ (೨.೭) + ನೇತ್ರಾಂತ (೨.೭) + ಪುಟಾಂತ (೨.೭) + ಹನ್ವಂತ (೨.೭) + ಗಳ (೦.೪) + ಕಂಠ (೨.೬) + ಹೃದಯ (೮.೪) + ನಾಭಿ (೮.೪) + ಮೇಢ್ರ (೮.೪) + ತೊಡೆ (೧೯) + ಮೊಣಕಾಲು (೩) + ಮುಂಗಾಲು (೧೯) + ಪಾದ (೩) = ೮೪ ಅಂಗುಳ

*ಅಧಮ ಸಪ್ತತಾಲ* : ಮಧ್ಯಮ ಸಪ್ತತಾಲಕ್ಕೆ ಹೇಳಿರುವ ಅಳತೆಯಲ್ಲಿ ೪ ಅಂಗುಳ ಒಟ್ಟಿನಲ್ಲಿ ಕಡಿಮೆಯಾಗಬೇಕು. ಅದಕ್ಕಾಗಿ ತಲೆಯಲ್ಲಿ ೪ ಯವ, ದೇಹ ಭಾಗದಲ್ಲಿ ೧ ಅಂಗುಳ ೪ ಯವ ಮತ್ತು ತೊಡೆ ಹಾಗೂ ಮುಂಗಾಲುಗಳಲ್ಲಿ ಒಂದೊಂದು ಅಂಗುಳ. ಹೀಗೆ ಕಡಿಮೆ ಮಾಡಬೇಕು. ಆಗ ಒಟ್ಟು ಎತ್ತರದ ವಿಭಜನೆಯು ಇಂತಿರುತ್ತದೆ

ಶಿರ + ನೇತ್ರಾಂತ ೨.೬ + ಪುಟಾಂತ ೨.೬ + ಹನ್ವಂತ ೨.೬ + ಗಳ ೦.೪ + ಕಂಠ ೨.೬ + ಹೃದಯ ೮ + ನಾಭಿ ೮ + ಮೇಢ್ರ ೮ + ತೊಡೆ ೧೮ + ಮೊಣಕಾಲು ೩ + ಮುಂಗಾಲು ೧೮ + ಪಾದ ೩ = ೮೦ ಅಂಗುಳ

ಈ ಎರಡು ಅಳತೆಗಳಲ್ಲೂ ಅಗಲದ ಅಳತೆಗಳಿಗೆ ಉತ್ತಮಸಪ್ತತಾಲದ ವಿವರಗಳನ್ನೇ ಬಳಸಬೇಕು. ಅಧಮ ಸಪ್ತತಾಲದಲ್ಲಿ ಮುಖ ಮುಂತಾದವುಗಳ ಅಗಲವನ್ನು ೪ ಯವಗಳಷ್ಟು ಬಾಹು ಇತ್ಯಾದಿಗಳಲ್ಲಿ ೨ ಯವ ಕಡಿಮೆಮಾಡಬಹುದು. ಆದರೆ ಮೂರ್ತಿಯ ಸೌಂದರ್ಯವನ್ನು ಕಾಪಾಡಿಕೊಳ್ಳ ಬೇಕಾದುದು ಬಹುಮುಖ್ಯ.

ಅಷ್ಟ ಮತ್ತು ನವತಾಲಾದಿ ವಿವರಗಳನ್ನು ಸರ್ವತಾಲಗಳನ್ನು ವಿವರಿಸು ಸಂದರ್ಭದಲ್ಲಿ ವಿವರಿಸಲಾಗುವುದು.

## ನವನೀತ ನೃತ್ತಮ್

ಮುಹುರ್ಮುಹುಃ ಕುಂಚಿತ ಪಾದಯುಗ್ಮಂ
ದೋರ್ದಂಡಿತಂ ವಾಮಕರಂ ತ್ವವಾಮಮ್ [ತು ವಾಮಮ್]
ವಿವರ್ತಿತಂ ಯಕ್ ಕರಣಂ ವಿಧಿ ಜ್ಞೈಃ
ನಿಯೋಜಯೇತ್ತನ್ನವನೀತ ನೃತ್ತಮ್ ॥ ೪೫ ॥
ಮಧ್ಯೇ ಮೂರ್ಧ್ನೀ ಚೂಚುಕಾಕ್ಷ್ಯ ಮಧ್ಯೇ
ಸವ್ಯಸ್ಯಾವಾಮೇಂಗುಲೇ ನಾಭಿ ಮಧ್ಯಾತ್
ಯೋನ್ಯಾ ವಾಮೇದ್ವ್ಯಂಗುಲೇ ಕಕ್ಷ್ಯ ಮಧ್ಯೇ
ವಾಮಾ ಸ್ಯಾಗ್ರೇ ಸೂತ್ರ ಮಾಲಂ ಭಿವ್ಯಮ್ ॥ ೪೬ ॥
ದದ್ಯ ಜ್ಞಾಜಾನುನ್ನಾಭಿ ಸೂತ್ರ ಪ್ರಮಾಣಂ
ಕಟ್ಯಾ ಯೋನ್ಯಾಶ್ಚಾಪಿ ದೋರ್ದಂಡ ಹಸ್ತಮ್
ಮೂರ್ಧ್ನಾಂತಂ ಕೇಶಾಂತೇನತ್ರ ಪ್ರಮಾಣಂ
ಹೃನ್ಮಾತ್ರಂ ಸ್ಯಾತ್ ಕೂರ್ಪರಾಧಸ್ತದನ್ಯತ್ ॥ ೪೭ ॥
ಏವಂ ನಾನಾ ವಿಧೈರ್ನೃತ್ತ ಭೇದೈ
ರ್ನಾನಾ ಭೇದೈ ರೇಚಕೈರಂಗಹಾರೈಃ
ನಾನಾ ತೋದ್ಯಾ ವಾದ್ಯ ವಾದ್ಯೈರು ಪೇತಂ

ನೃತ್ತಂ ಕುರ್ಯಾತ್ ಕಾ(ಳೀಯಾ) ಹೀತಮೂರ್ಧ್ನೀ ॥ ೪೮ ॥

ಬಾಲ ಕೃಷ್ಣನು ಕಾಳಿಂಗನ ಹೆಡೆಯ ಮೇಲೆ ನೃತ್ತನಡೆಸಿದ ನೆಂಬುದು ಬಹು ಪ್ರಖ್ಯಾತವಾದುದು. ಇಲ್ಲಿ ಆರೀತಿಯ ಮೂರ್ತಿಯನ್ನು ರೂಪಿಸಲು ಸೂಕ್ತ ವಿವರಣೆಯನ್ನು ಕೊಡಲಾಗಿದೆ.

ಈ ನೃತ್ತವನ್ನು ನವನೀತನೃತ್ಯ ಎನ್ನುತ್ತಾರೆ. ತನ್ನ ಮುಂಗಾಲಿನ ಮಟ್ಟಕ್ಕೆ ಕಾಲುಗಳನ್ನು ಒಂದರ ನಂತರ ಒಂದರಂತೆ ಬದಲಿಸಿಕೊಂಡು ಮೇಲಕ್ಕೆ ಎತ್ತಿ ನರ್ತಿಸುವುದನ್ನು ನವನೀತ ನೃತ್ಯ ಎನ್ನುತ್ತಾರೆ. ಎತ್ತಿರುವ ಕಾಲು ಮೊಣಕಾಲಿನ ಬಳಿ ಬಗ್ಗಿರುತ್ತದೆ. ಇನ್ನೊಂದು ಪಾದವು ಭದ್ರವಾಗಿ ಊರಿರುತ್ತದೆ ಎಡ ತೋಳನ್ನು ಎಡಗಡೆಗೆ ಚಾಚಿ, ಬಲದತೋಳನ್ನು ವಿವರ್ತನವಾಗಿ ಸುತ್ತಿಸಬೇಕು. ಮಣಿಕಟ್ಟಿನಿಂದ ಅಂಗೈ ಮತ್ತು ಬೆರಳುಗಳನ್ನು ಎದೆಯ ಮಟ್ಟದಲ್ಲಿರಿಸಿಕೊಂಡು ಒಳಮುಖವಾಗಿ ಸುತ್ತುವುದನ್ನು ವಿವರ್ತನ ಎನ್ನುತ್ತಾರೆ. ಈ ಬೆರಳು ಅಂಗೈಗಳ ಚಲನೆಯು (ಇದನ್ನು ಕರಣ ಎನ್ನುತ್ತಾರೆ) ನವನೀತ ನೃತ್ಯದಲ್ಲಿ ಬಳಸಲು ಅರ್ಹವಾದುವಾಗಿರುತ್ತವೆ.

ನೆತ್ತಿಯ ಮಧ್ಯಭಾಗದಿಂದ, ಬಲಸ್ತನದ ಅಗ್ರಭಾಗದ ಮಧ್ಯದ ಮೂಲಕವಾಗಿ ಹಾದು ಹೋಗುವ ಪುರಸೂತ್ರವು (ಮುಖದ ಮುಂಭಾಗದಲ್ಲಿ ಹಾದು ಹೋಗುವ ಬ್ರಹ್ಮಸೂತ್ರ) ನಾಭಿಯ ಮಧ್ಯಭಾಗದಿಂದ ಬಲಭಾಗದಲ್ಲಿ ೧ ಅಂಗುಳದೂರದಲ್ಲಿ ಹಾದು ಎಡಪಾದದ ಎರಡು ಗುಲ್ಫಾಕ್ಷಗಳ ನಡುಭಾಗದಲ್ಲಿ ಹಾದು ಹೋಗುತ್ತದೆ. ಈ ಸೂತ್ರದಿಂದ ಎಡಭಾಗದಲ್ಲಿ ಲಿಂಗವು ಎರಡು ಅಂಗುಳ ದೂರದಲ್ಲಿ ಇರುತ್ತದೆ. ಎತ್ತಿರುವ ಕಾಲಿನ ಮುಂಗಾಲಿನ ಭಾಗವು ನಾಭಿಸೂತ್ರದ ಸಮಕ್ಕೆ, ಅಥವ ಕಟಿಸೂತ್ರದ ಸಮಕ್ಕೆ, ಅಥವ ಮೇಢ್ರಸೂತ್ರದ ಸಮಕ್ಕೆ ಇರುವಂತೆ ರೂಪಿಸಬೇಕು. ಚಾಚಿರುವ ತೋಳು ತಲೆಯ ಸಮಕ್ಕೆ ಅಥವ ಕೇಶದ ಸಮಕ್ಕೆ ಅಥವ ನೇತ್ರಸೂತ್ರಕ್ಕೆ ಸಮವಾಗಿ ಎತ್ತಿರಬೇಕು. ವಿವರ್ತವಾಗಿ ಸುತ್ತುವ ಬಲ ತೋಳಿನ ಮೊಣಕೈ ಹೃದಯದ ನೇರಕ್ಕೆ ಇರುವಂತೆ ರಚಿಸಬೇಕು.

ಈ ರೀತಿಯಾಗಿ ನಾನಾ ಬಗೆಯ ನೃತ್ಯಗಳೊಂದಿಗೆ, ಹಲವು ಬಗೆಯ ಅಂಗಚಲನೆ ಗಳಿಂದ, ಹಲವು ಬಗೆ ವಾದ್ಯ ವಿಶೇಷಗಳೊಂದಿಗೆ, ಕಾಳಿಂಗಸರ್ಪದ ಮೇಲೆ ನೃತ್ಯಮಾಡುತ್ತಿರುವಂತೆ ಶ್ರೀ ಕೃಷ್ಣನನ್ನು ರೂಪಿಸಬೇಕು.

## *ವಿಶೇಷ ವಿವರ*

ಸೋಮ ಯದುಕುಲದ ವೃಷ್ಣಿವಂಶಕ್ಕೆ ಸೇರಿದ ವಸುದೇವ ಮತ್ತು ದೇವಕಿಯರಲ್ಲಿ ಎಂಟನೆಯ ಗರ್ಭವಾಗಿ ಜನಿಸಿದ ಕನಿಷ್ಠನೇ ಕೃಷ್ಣ. ಈತನ ಜನ್ಮವು ಮಥುರಾದಲ್ಲಿ ಕಂಸನ ಕಾರಾಗೃಹದಲ್ಲಾಯಿತು (ಭಾಗವತ ಪುರಾಣ ೯ : ೨೪ : ೫೫, : ೧೦ : ३, ವಿಷ್ಣು ಪುರಾಣ ೪ : ೧೫ ; ೫ : ३, ಹರಿವಂಶ ಪುರಾಣ ೧ : ३೫, ಕೂರ್ಮ ಪುರಾಣ, ೧ : ೨೪, ಗರುಡ ಪುರಾಣ,೧ : ೧३೯).

ತಂಗಿ ದೇವಕಿಯ ಮದುವೆ ಮುಗಿಸಿದ ನಂತರ ಆಕೆಯನ್ನು ಮಾವನ ಮನೆಗೆ

ಕಳುಹಿಸುತ್ತಿರುವ ಸಂದರ್ಭದಲ್ಲಿ ದೇವಕಿಯ ಪುತ್ರನಿಂದ ತನ್ನ ಹತ್ಯೆ ನಡೆಯುತ್ತದೆ ಎಂಬುದನ್ನು ತಿಳಿದು ಕಂಸನು ವಸುದೇವ ದೇವಕಿಯರನ್ನು ಕಾರಾಗಾರದಲ್ಲಿರಿಸಿದನು. ದೇವಕಿಯ ಏಳುಮಂದಿ ಮಕ್ಕಳನ್ನು ನೆಲಕ್ಕೆ ಅಪ್ಪಳಿಸಿ ಕೊಂದ. ಕೃಷ್ಣನು ಎಂಟನೆಯವನು. ಈತನು ಭಾದ್ರಪದ ಕೃಷ್ಣಪಕ್ಷ ಅಷ್ಟಮಿ ಮಧ್ಯರಾತ್ರಿಯಲ್ಲಿ ರೋಹಿಣಿ ನಕ್ಷತ್ರದಲ್ಲಿ ಹುಟ್ಟಿದ. ಅಂದು ಬುಧವಾರವಾಗಿತ್ತು.

ವಸುದೇವನು ಉಗ್ರಸೇನನ ಮಂತ್ರಿಯಾಗಿದ್ದ. ಉಗ್ರಸೇನನ್ನು ಬಂಧಿಸಿ ಕಂಸನು ಸಿಂಹಾಸನದ ಮೇಲೆ ಕುಳಿತಿದ್ದ. ಆದ್ದರಿಂದ ಕಂಸನಿಗೆ ಮೊದಲಿನಿಂದಲೇ ವಸುದೇವನೆಂದರೆ ಆಗುತ್ತಿರಲಿಲ್ಲ. ವಸುದೇವನಿಗೆ ದೇವಕಿಯಲ್ಲಿ ಮಾತ್ರವೇ ಅಲ್ಲದೆ ಇತರ ಸ್ತ್ರೀಯರಲ್ಲಿ ಹುಟ್ಟಿದ ಮಕ್ಕಳನ್ನೆಲ್ಲಾ ಕೊಂದ ಉಲ್ಲೇಖವು ಭಾಗವತದ ವಿನಾ ಉಳಿದ ಇತರ ಕೃತಿಗಳಲ್ಲಿ ದೊರೆಯುತ್ತದೆ (ವಾಯುಪುರಾಣ, ೧೬ : ೧೭೩ - ೧೭೭).


ಕೃಷ್ಣನು ಹುಟ್ಟುತ್ತಲೇ ಅವನನ್ನು ರಕ್ಷಿಸಲು ವಸುದೇವನು ಗೋಕುಲದಲ್ಲಿ ನಂದನ ಮನೆಗೆ ಕೊಂಡೊಯ್ದು, ಗೋಕುಲದಿಂದ ಯಶೋದೆಯ ಮಗಳನ್ನು ತೆಗೆದುಕೊಂಡು ಮತ್ತೆ ಕಾರಾಗೃಹಕ್ಕೆ ವಾಸುದೇವ ಬಂದ. ಕಂಸನು ಆ ಹೆಣ್ಣು ಮಗುವನ್ನು ಕೊಲ್ಲುವ ಪ್ರಯತ್ನವನ್ನು ಮಾಡಿದ. ಆದರೆ ಆ ಮಗು ಕೈಯಿಂದ ಹಾರಿಹೋಯಿತು. ಇದರಿಂದ ವಸುದೇವನ ಮಗ ಹುಟ್ಟಿ ಸುರಕ್ಷಿತ ಸ್ಥಾನವನ್ನು ಸೇರಿಕೊಂಡಿದ್ದಾನೆ ಎಂಬುದೂ ಗೊತ್ತಾಯಿತು.

ನಂದನ ಕುಲಗುರುವಾದ ಗರ್ಗಮುನಿಯು ಕೃಷ್ಣನ ನಾಮಕರಣ ಸಂಸ್ಕಾರವನ್ನು ರಹಸ್ಯವಾಗಿ ನಡೆಸಿ ಅವನ ಜಾತಕವನ್ನು ಬರೆದ.

ಕೃಷ್ಣನನ್ನು ಕೊಲ್ಲಲು ಕಂಸನು ಮೊದಲಿಗೆ ತನ್ನ ಸೋದರಿಯಾದ ಪೂತನಿಯನ್ನು ಕಳುಹಿಸಿದ. ಗೋಕುಲದ ಮಕ್ಕಳಿಗೆ ತನ್ನ ವಿಷಯುಕ್ತ ಸ್ತನ ಪಾನಮಾಡಿಸಿ ಕೊಲ್ಲುತ್ತಿದ್ದಳು. ಕೃಷ್ಣನಿಗೆ ಈ ರೀತಿ ಸ್ತನಪಾನ ಮಾಡಿಸಿದಾಗ ಪೂತನಿಯ ರಕ್ತವನ್ನೂ ಹೀರಿ ಕೊನೆಗೆ ಅವಳನ್ನು ಕೊಂದ.

ತೃಣಾವರ್ತನೆಂಬ ರಾಕ್ಷಸನನ್ನೂ ಕಲ್ಲಿನ ಮೇಲೆ ಬಡಿದು ಕೃಷ್ಣನೇ ಕೊಂದ. ಅದೇ ಸಮಯದಲ್ಲಿಯೇ ಕೃಷ್ಣನು ಯಶೋದೆಗೆ ತನ್ನ ಬಾಯಲ್ಲಿ ವಿಶ್ವರೂಪವನ್ನು ತೋರಿಸಿದ. ಬಕಾಸುರನನ್ನು, ಅಘಾಸುರನನ್ನು ಕೃಷ್ಣನೇ ವಧಿಸಿದ. ಕಾಳಿಂಗ ಸರ್ಪದ ಪೂತ್ಕಾರದಿಂದ ಯಮುನಾ ನದಿಯ ನೀರೆಲ್ಲಾ ವಿಷವಾಗಿತ್ತು. ಅದನ್ನೂ ಮರ್ದಿಸಿ ಅಲ್ಲಿಂದ ಓಡಿಸಿದ. ಧೇನುಕಾಸುರ, ಪ್ರಲಂಬಾಸುರ, ಅರಿಷ್ಟ, ವ್ಯೋಮ ಮತ್ತು ಕೇಶಿ ಇವರನ್ನೂ ಕೃಷ್ಣನೇ ಕೊಂದ. ಯಮುನಾನದಿಯಲ್ಲಿ ನಂದಗೋಪ ಮುಳುಗಿ ಹೋಗುತ್ತಿದ್ದಾಗ ಕೃಷ್ಣನು ಆತನನ್ನು ಬದುಕಿಸಿದ.

ಗೋಕುಲದವರೆಲ್ಲಾ ಸೇರಿ ವಾರ್ಷಿಕವಾಗಿ ಇಂದ್ರೋತ್ಸವವನ್ನು ಆಚರಿಸುತ್ತಿದ್ದರು. ಅದನ್ನು ನಿಲ್ಲಿಸಿ ಅವರೆಲ್ಲರೂ ಗೋವರ್ಧನ ಉತ್ಸವವನ್ನು ನಡೆಸುವಂತೆ ಪ್ರೇರಿಸಿದ. ಇದರಿಂದ ಕುಪಿತನಾದ ಇಂದ್ರನು ಗೋಕುಲದ ಮೇಲೆ ಅತಿವೃಷ್ಟಿಯನ್ನು ಕರೆದ. ಕೃಷ್ಣನು ಈ ಸಂಕಟದಿಂದ ಗೋಕುಲವನ್ನು ಗೋವರ್ಧನ ಗಿರಿಯ ಆಶ್ರಯದಿಂದ ರಕ್ಷಿಸಿದ.



ಚಿತ್ರ ೪೨ : ಪೂತನೀ ಸಂಹಾರ



ಚಿತ್ರ ೪೩ : ಬಕಾಸುರ ಸಂಹಾರ



ಚಿತ್ರ ೪೪ : **ಕುವಲಯಾಪೀಡನ ಸಂಹಾರ**

ಹಲವು ಪುರಾಣಗಳಲ್ಲಿ ಕೃಷ್ಣನ ಬಾಲಲೀಲೆಗಳ ವರ್ಣನೆಯೇ ಬಹುವಾಗಿವೆ. ಈ ಬಾಲಲೀಲೆಯು ಪೂತನಿಯಿಂದ ಪ್ರಾರಂಭವಾಗಿ ಕೇಶಿ ವಧೆಯೊಂದಿಗೆ ಮುಗಿಯುತ್ತದೆ. ಪೂತನಾ, ಧೇನುಕ, ಪ್ರಲಂಬ, ಅಘ ಮುಂತಾದ ರಾಕ್ಷಸರ ವಧೆ. ಇಂದ್ರನ ಗರ್ವ ಹರಣ. ಕಾಳಿಂಗ ಮರ್ದನ, ದಾವಾನಲ ಭಕ್ಷಣ. ಗೋವರ್ಧನೋದ್ಧರಣ. ರಾಸಕ್ರೀಡೆ. ಕಂಸವಧೆ. ಈ ಘಟನೆಗಳು ಸಾಧಾರಣವಾಗಿ ಬಹು ಕೃತಿಗಳಲ್ಲಿ ವರ್ಣಿತವಾಗಿವೆ. ವಿಷ್ಣುಪುರಾಣದಲ್ಲಿ ಕೃಷ್ಣ ಬಾಲಲೀಲೆಯು ಸಂಕ್ಷೇಪವಾಗಿ ವರ್ಣಿತವಾಗಿದೆ.

ಭಾಗವತ ಪುರಾಣ, ಬ್ರಹ್ಮವೈವರ್ತ ಪುರಾಣ, ಹರಿವಂಶ ಪುರಾಣ ಮತ್ತು ಗರ್ಗ ಸಂಹಿತೆ ಇವುಗಳಲ್ಲಿ ಕೇವಲ ಕೃಷ್ಣನ ಬಾಲಲೀಲೆಗಳನ್ನು ಮಾತ್ರವೇ ವಿವರಿಸಲಾಗಿದೆ. ಕೃಷ್ಣನ ಸಂಬಂಧ ಪಾಂಡವರೊಂದಿಗೆ ಇರುವುದು ಕೇವಲ ಗರ್ಗ ಸಂಹಿತೆಯಲ್ಲಿ ಮಾತ್ರವೇ ಉಲ್ಲೇಖಿತವಾಗಿದೆ. ಮಹಾಭಾರತದಲ್ಲಿ ವರ್ಣಿತವಾಗಿರುವ ಕೃಷ್ಣಚರಿತ್ರೆಯು ಪುರಾಣಗಳಲ್ಲಿ ದೊರೆಯುವುದಿಲ್ಲ. ಪಾಂಡವರಿಗೆ ಕೃಷ್ಣನು ಮಾಡಿರುವ ಅಪ್ರತಿಮ ಸಹಾಯ, ರಾಜಕಾರ್ಯ, ಕೌಶಲ್ಯಗಳ ವಿವರಣೆ ಮತ್ತು ಗೀತೋಪದೇಶ ಕೇವಲ ಮಹಾಭಾರತದಲ್ಲಿ ಮಾತ್ರವೇ ದೊಯತ್ತದೆ.

ಬಾಲಲೀಲೆಯಲ್ಲಿಯೇ ರಾಧಾಕೃಷ್ಣರ ಸಂಬಂಧವರ್ಣನೆಯು ಬ್ರಹ್ಮವೈವರ್ತ ಪುರಾಣದಲ್ಲಿ ದೊರೆಯುತ್ತದೆ. ಈ ಸಂಬಂಧವು ಆಧ್ಯಾತ್ಮಿಕ ಸಂಬಂಧ ಎಂದು ಪರಿಗಣಿಸಲ್ಪಡುತ್ತದೆ. ರಾಧೆ ಮತ್ತು ಕೃಷ್ಣರ ವಿವಾಹವನ್ನು ಬ್ರಹ್ಮದೇವನೇ ನಡೆಸಿದ (ಬ್ರಹ್ಮವೈವರ್ತ ಪುರಾಣ, ೪ : ೧೫).

ಕೃಷ್ಣನ ಮಲ್ಲವಿದ್ಯಾ ಪ್ರಾವೀಣ್ಯತೆಯ ಬಗ್ಗೆ ಕೇಳಿದ ಕಂಸನು ಅಕ್ರೂರನ ಮೂಲಕ ಮಥುರೆಗೆ ಕರೆಯಿಸಿದ. ಮಥುರಾದಲ್ಲಿ ವಸುದೇವ - ದೇವಕಿಯರನ್ನು ಕೃಷ್ಣನು ಕಾಣುವುದು ಕಂಸನಿಗೆ ಇಷ್ಟವಿಲ್ಲ ಎಂಬುದನ್ನು ಆಕ್ರೂರನು ತಿಳಿಸಿದರೂ, ಕೃಷ್ಣನು ಧೈರ್ಯವಾಗಿ ತನ್ನ ತಂದೆ ತಾಯಿಯರನ್ನು ಭೇಟಿಯಾದ. ನಗರದ ರಸ್ತೆಯಲ್ಲಿ ಹೋಗುತ್ತಿದ್ದಾಗ ಕೃಷ್ಣನು ಅಗಸನಿಂದ ವಸ್ತ್ರಗಳನ್ನು ತೆಗೆದುಕೊಂಡ. ಒಬ್ಬ ಮಾಲಿಯು ಸುಂದರ ಪುಷಹಾರವನ್ನು ಕೃಷ್ಣನಕೊರಳಲ್ಲಿ ಹಾಕಿದ. ಕುಬ್ಜನೊಬ್ಬ ಚಂದನವನ್ನು ಕೃಷ್ಣನ ಮೈಗೆ ಪೂಸಿದ. ಶಸ್ತ್ರಾಗಾರದಲ್ಲಿದ್ದ ದಿವ್ಯವಾದ ಧನುಸ್ಸನ್ನು ಕೃಷ್ಣನೇ ಮುರಿದ. ಇವೆಲ್ಲವನ್ನೂ ಗಮನಿಸಿದ ಕಂಸನು ಚಾಣೂರ, ತೋಷಲಕ ಎಂಬ ಇಬ್ಬರು ಮಲ್ಲರನ್ನು ಮಲ್ಲಯುದ್ಧಕ್ಕೆ ಹೋಗುತ್ತಿದ್ದಾಗ ಕೃಷ್ಣನನ್ನು ಕೊಲ್ಲಲು ಕಂಸನೇ ಕಳುಹಿಸಿದ್ದ ಕುವಲಯಾಪೀಡ ಎಂಬ ಆನೆಯನ್ನು ಬಹು ಸಹಜರೀತಿಯಲ್ಲಿ ಕೃಷ್ಣನು ಬಡಿದುಕೊಂದ. ಮಲ್ಲಯುದ್ಧದಲ್ಲಿ ಕೃಷ್ಣನು ಚಾಣೂರ ಮತ್ತು ತೋಷಲಕರನ್ನು ಕೊಂದ. ಕೃಷ್ಣನ ಪರಾಕ್ರಮ ಕಂಸನಲ್ಲಿ ಭಯವನ್ನು ಮೂಡಿಸಿತು. ಅದೇ ಸಂದರ್ಭದಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದ ಕಂಸನನ್ನು ಹಿಡಿದು, ಕೆಳಕ್ಕೆ ಎಳೆದು ಹೊಡೆದು ಕೊಂದ. ಜನರೆಲ್ಲಾ ಹರ್ಷದಿಂದ ಜಯಧ್ವನಿ ಮಾಡಿದರು. ವಸುದೇವ ದೇವಕೀಯರನ್ನು ಕಂಡು, ಉಗ್ರಸೇನನನ್ನು ಸಿಂಹಾಸನದಲ್ಲಿ ಕುಳ್ಳರಿಸಿ, ಮಥುರಾದಲ್ಲಿ ಶಾಂತಿಯನ್ನು ಸ್ಥಾಪಿಸಿದ.



ಚಿತ್ರ ೪೫ : ಧೇನುಕಾಸುರ ವಧೆ

ಸೋದರನಾದ ಬಲರಾಮನು ಈ ಕಾಲದಲ್ಲಿ ಪೂರ್ಣವಾಗಿ ಕೃಷ್ಣನೊಂದಿಗೇ ಇದ್ದ.

ನಂದ ಮುಂತಾದ ಗೋಪರನ್ನು ಕೃಷ್ಣನು ಮಥುರೆಗೆ ಕರೆಯಿಸಿಕೊಂಡು ಸತ್ಕರಿಸಿ ಅವರನ್ನು ಗೋಕುಲಕ್ಕೆ ಮರಳಿ ಕಳುಹಿಸಿದ. ಗರ್ಗ ಮುನಿಯಿಂದ ಉಪನಯ ಸಂಸ್ಕಾರವನ್ನು ಪಡೆದುಕೊಂಡ ಬಲರಾಮ ಮತ್ತು ಕೃಷ್ಣ ಇಬ್ಬರೂ ಕಾಶ್ಯಪ ಕುಲೋದ್ಭವ ಸಾಂದೀಪನಿ ಆಚಾರ್ಯನ ಬಳಿ ಅಧ್ಯಯನದ ಸಲುವಾಗಿ ಅವಂತಿಗೆ ಕಳುಹಿಸಲ್ಪಟ್ಟರು. ಏಕಸಂಧಿಗ್ರಾಹಿಯಾದುದರಿಂದ ಕೃಷ್ಣನು ಒಳದಿನಗಳಲ್ಲಿಯೇ ವೇದ ಮತ್ತು ಧರ್ಮವಿದ್ಯೆಯನ್ನು ಅಧ್ಯಯನಮಾಡಿದ (ಬ್ರಹ್ಮಪುರಾಣ, ೧೯೪ : ೨೧, ಹರಿವಂಶ ಪುರಾಣ, ೨ : ೩೩, ಭಾಗವತ, ೧೦ : ೪೫ : ೩೬, ವಿಷ್ಣು ಪುರಾಣ ೫ : ೨೧). ಸಾಂದೀಪಿನಿಯೇ ಬಲರಾಮ ಮತ್ತು ಕೃಷ್ಣರಿಗೆ ಗಾಯತ್ರೀ ಮಂತ್ರೋಪದೇಶವನ್ನು ಮಾಡಿದ್ದರ ಉಲ್ಲೇಖವು ನಮಗೆ ದೊರೆಯುತ್ತದೆ (ಬ್ರಹ್ಮವೈವರ್ತ ಪುರಾಣ, ೪ : ೧೦೧). ಆಗ ಕೃಷ್ಣನ ವಯಸ್ಸು ಹನ್ನೆರಡು ವರ್ಷಗಳು (ದೇವಿ ಭಾಗವತ ೪ : ೨೪). ಗುರುದಕ್ಷಿಣೆಯಾಗಿ ಸಾಂದೀಪನಿಯ ಮೃತ ಸುತನಾದ ದತ್ತನನ್ನು ಕೃಷ್ಣನು ಬದುಕಿಸಿ ಕರೆತಂದು ಕೊಟ್ಟ (ಪದ್ಮಪುರಾಣ, ೩ : ೨೪೬, ಬ್ರಹ್ಮಪುರಾಣ, ೧೯೪ : ೩೧). ಇದೇ ಕಾಲದಲ್ಲಿಯೇ ಕೃಷ್ಣನು ಪಂಚಜನರನ್ನು ಕೊಂದು ಅವರಿಂದ ಪಾಂಚಜನ್ಯವನ್ನು ಪಡೆದುಕೊಂಡ (ಭಾಗವತ, ೧೦ : ೪೫ : ೪೨, ಮಹಾಭಾರತ, ಭೀಷ್ಮಪರ್ವ, ೨೩ : ೧೬).

ಕೃಷ್ಣನು ಶಿಶುಪಾಲನನ್ನು ಸೋಲಿಸಿ, ಭೀಷ್ಮಕ ರಾಜಕನ್ಯೆಯಾದ ರುಕ್ಮಿಣಿಯನ್ನು ಅಪಹರಿಸಿಕೊಂಡು ಬಂದ. ಶ್ಯಮಂತಕಮಣಿಯ ಪ್ರಸಂಗದಲ್ಲಿ ಜಾಂಬವತಿ ಮತ್ತು ಸತ್ಯಭಾಮೆಯೊಂದಿಗೆ ಮದುವೆಯಾಯಿತು. ಇದೇ ಸಂದರ್ಭದಲ್ಲಿ ಸತ್ರಾಜಿತನನ್ನು ಕೊಂದಿದ್ದ ಶತಧನ್ವನ್‌ನನ್ನು ಕೃಷ್ಣನೇ ಕೊಂದ. ಇದರ ನಂತರದ ಸ್ವಲ್ಪ ಸಮಯಕ್ಕೆ ಕೆಲವು ಮಂದಿ ಗೋಪರೊಂದಿಗೆ ಪಾಂಡವರನ್ನು ಕಾಣಲು ಕೃಷ್ಣನು ಇಂದ್ರಪ್ರಸ್ಥಕ್ಕೆ ಹೋದ. ಆಗ ಚಾತುರ್ಮಾಸ್ಯದ ಸಮಾಪ್ತಿಯವರೆವಿಗೆ ಪಾಂಡವರು ಕೃಷ್ಣನನ್ನು ಇರುವಂತೆ ಒತ್ತಾಯಿಸಿದರು. ಆಗ ಕೃಷ್ಣನು ಕಾಲಿಂದಿಯನ್ನು ಮದುವೆಯಾದ. ನಂತರ ದ್ವಾರಕೆಗೆ ಹೋದಾಗ ಮಿತ್ರವಿಂದಾ, ಸತ್ಯ (ನಗ್ನಜಿತೀ), ಭದ್ರಾ, ಕೈಕೆಯೀ ಮತ್ತು ಸುಲಕ್ಷಣಾ (ಲಕ್ಷ್ಮಣಾ) ಇವರನ್ನು ಸ್ವಪರಾಕ್ರಮದಿಂದ ಅಪಹರಿಸಿ ಮದುವೆಯಾದ (ಭಾಗವತ, ೧೦ : ೫೮, ೧೦ : ೨೯ - ೩೦). ಕೃಷ್ಣನ ಅಷ್ಟನಾಯಕಿಯರಲ್ಲಿ ಸುಲಕ್ಷಣಾ ಮತ್ತು ನಗ್ನಜಿತೀ ಉಂಟು. ಸುಮಿತ್ರಾ, ಶೈವ್ಯಾ, ಸುಭೀಮಾ, ಮಾದ್ರೀ, ಕೌಸಲ್ಯಾ, ವಿರಜಾ ಇವರು ಉಳಿದ ಆರು ಮಂದಿಯೆಂದು ಹೇಳಲಾಗುತ್ತದೆ (ಪದ್ಮಪುರಾಣ, ಸೃಷ್ಟಿಖಂಡ ೧೩ : ೧೫೫ - ೧೫೬). ಅನುವಿಂದಾ ಮತ್ತು ಸುನಂದಾ ಎಂಬ ಎರಡು ಬೇರೆಯ ಹೆಸರುಗಳನ್ನು ಎಂಟುಮಂದಿ ನಾಯಕಿಯರ ಸಂದರ್ಭದಲ್ಲಿ ಬೇರೊಂದುಕಡೆ ಹೇಳಲಾಗಿದೆ (ಪದ್ಮಪುರಾಣ, ಪಾತಾಳಖಂಡ, ೭೦ : ೩೩).

ನರಕಾಸುರನು ತನ್ನ ಕಾರಾಗಾರದಲ್ಲಿ ೧೬ ಸಾವಿರ ಹೆಂಗಸರನ್ನು ಸೆರೆಮಾಡಿ ಇರಿಸಿದ್ದ. ಕೃಷ್ಣನು ನರಕಾಸುರನ ವಧೆಮಾಡಿ ಅವರನ್ನೆಲ್ಲಾ ಮದುವೆಯಾದ (ಭಾಗವತ ೧೦ : ೫೯ :

೩೩, ವಿಷ್ಣುಪುರಾಣ, ೫ : ೨೯ : ೩೧). ಈ ರೀತಿ ಅವರ ಉದ್ಧಾರವನ್ನು ನಡೆಸಿದ ಕೀರ್ತಿ ಕೃಷ್ಣನದಾಯಿತು. ಒಂದೇ ಕಾಲದಲ್ಲಿ ಹಲವು ರೂಪಗಳಲ್ಲಿ ಕಾಣಿಸಿಕೊಳ್ಳುವ ಅಪೂರ್ವ ಶಕ್ತಿ ಕೃಷ್ಣನಲ್ಲಿತ್ತು.

ನರಕಾಸುರನ ವಧೆಯನ್ನು ಮಾಡಿ ಹಿಂತಿರುಗುತ್ತಿರುವಾಗ ಕೃಷ್ಣನು ಇಂದ್ರನ ಪಾರಿಜಾತ ವೃಕ್ಷವನ್ನು ಮುರಿದ. ಇದರಿಂದ ಕೋಪಗೊಂಡ ಇಂದ್ರನು ಕೃಷ್ಣನೊಂದಿಗೆ ಯುದ್ಧಮಾಡಿದ. ಈ ಯುದ್ಧದಲ್ಲಿ ಇಂದ್ರನು ಸೋತ. ಆಗ ಕೃಷ್ಣನು ನಾನು ಭೂಲೋಕದಲ್ಲಿ ಇರುವವರೆವಿಗೂ ಈ ವೃಕ್ಷವು ನನ್ನಲ್ಲಿಯೇ ಇರಬೇಕು. ನಂತರ ಬೇಕಾದರೆ ತೆಗೆದುಕೊಂಡು ಹೋಗು ಎಂದು ಹೇಳಿದ (ಪದ್ಮಪುರಾಣ, ೩ : ೨೪೮ - ೨೪೯).

ಕೃಷ್ಣನಿಗೆ ೮೦ ಸಾವಿರಮಂದಿ ಮಕ್ಕಳಿದ್ದರು (ಪದ್ಮಪುರಾಣ, ಸೃಷ್ಟಿಖಂಡ ೧೩)

ಜಾಂಬವತಿಗೆ ಮಗನಾಗಬೇಕೆಂದು ಮಹಾದೇವನನ್ನು ಕುರಿತು ಕೃಷ್ಣನು ತಪಸ್ಸುಮಾಡಿ ವರವನ್ನು ಪಡೆದುಕೊಂಡ (ಮಹಾಭಾರತ, ಅನುಶಾಸನ ಪರ್ವ ೪೬).

ಕೃಷ್ಣನು ತನ್ನ ಸ್ತ್ರೀಯರೊಂದಿಗೆ ಕ್ರೀಡೆಯಲ್ಲಿದ್ದಾಗ ನಾರದನ ಸಲಹೆಯಮೇರೆಗೆ ಜಾಂಬವತೀ ಪುತ್ರನಾದ ಸಾಂಬನು ಅಲ್ಲಿಗೆ ಹೋದ. ಆಗ ಕೃಷ್ಣನ ಪತ್ನಿಯರು ಮದ್ಯಪಾನ ಮಾಡಿದ್ದರು. ಅಮಲಿನಲ್ಲಿ ಸಾಂಬನನ್ನು ಕಂಡು ಮೋಹಿತರಾದರು. ಆಗ ಕೃಷ್ಣನು ಅವರಿಗೆ 'ನೀವು ಕಳುವಾಗುತ್ತೀರಿ ಆದರೆ ದಾಲ್ಭ್ಯಮಹರ್ಷಿಯು ನಿಮಗೆ ಉಪದೇಶಿಸುವ ವ್ರತವನ್ನು ಆಚರಿಸಿ. ನಂತರ ನೀವು ಉದ್ಧರಿತರಾಗುತ್ತೀರಿ' ಎಂದು ಶಾಪವನ್ನು ಕೊಟ್ಟು ಪರಿಹಾರವನ್ನು ಸೂಚಿಸಿದ. ಸಾಂಬನನ್ನು ಕುಷ್ಠರೋಗಿಯಾಗುವಂತೆ ಶಪಿಸಿದ (ಪದ್ಮಪುರಾಣ, ಸೃಷ್ಟಿಖಂಡ, ೨೩, ಸ್ಕಂದಪುರಾಣ ೭ : ೧ : ೧೦೧).

ಬಾಣಾಸುರನ ಸಾವಿರ ಕೈಗಳನ್ನು ಕೃಷ್ಣನೇ ತರಿದ (ಬ್ರಹ್ಮಾಂಡ ಪುರಾಣ ೩ : ೭೨ : ೯೯ - ೧೦೨, ವಾಯುಪುರಾಣ ೮೮ : ೯೧ - ೧೦೧). ಪಾಂಡವರು ನಡೆಸಿದ ರಾಜಸೂಯ ಯಾಗ, ಅಶ್ವಮೇಧ ಯಾಗಗಳ ಸಂದರ್ಭದಲ್ಲಿ ಕೃಷ್ಣ ಇದ್ದ (ಮಹಾಭಾರತ, ಅಶ್ವಮೇಧಿಕ ಪರ್ವ, ೮ : ೯).

ಕಂಸ ವಧೆಯಿಂದ ಜರಾಸಂಧನು ಕೋಪಗೊಂಡನು. ಏಕೆಂದರೆ ಕಂಸನು ಜರಾಸಂಧನಿಗೆ ಅಳಿಯನಾಗಿದ್ದ. ಜರಾಸಂಧ ಚಕ್ರವರ್ತಿಯಾಗಿದ್ದ. ಅವನ ಸೆರೆಮನೆಯಲ್ಲಿ ಅನೇಕ ರಾಜರು ಬಂಧಿಗಳಾಗಿದ್ದರು. ಅವರೆಲ್ಲರೂ ಕಂಸವಧೆಯನಂತರ ಕೃಷ್ಣನಿಗೆ ತಮ್ಮನ್ನು ಮುಕ್ತಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದರು. ಯಾದವ ಸಭೆಯಲ್ಲಿ ಕೃಷ್ಣ ಈ ಕೋರಿಕೆಯನ್ನು ಮಂಡಿಸಿದ. ಅದೇ ಸಮಯಕ್ಕೆ ಜರಾಸಂಧನು ಮಥುರಾ ಮೇಲೆ ಧಾಳಿನಡೆಸಿದ. ಜರಾಸಂಧನಿಗೆ ನೆರವಾಗಿ ಅನೇಕ ರಾಜರೂ ಇದ್ದರು. ಜರಾಸಂಧನನ್ನು ಕೃಷ್ಣ ಹದಿನೇಳು ಬಾರಿ ಗೆದ್ದು ಓಡಿಸಿದ್ದ. ಆದರೆ ಕಾಲಯವನ ಜರಾಸಂಧನಿಗೆ ನೆರವಾಗಿದ್ದ ರಾಜರಲ್ಲಿ ಒಬ್ಬ. ಅವನು ಮಥುರಾವನ್ನು ನಾಲ್ಕು ದಿಕ್ಕುಗಳಲ್ಲೂ ಮುತ್ತಿಗೆ ಹಾಕಿದ. ಕೃಷ್ಣ ಈ ಬಾರಿ ಗೆಲ್ಲುವ

ಅವಕಾಶವೇ ಇರಲಿಲ್ಲ. ಆದ್ದರಿಂದ ಯುದ್ಧದಿಂದ ಓಡಿಹೋಗುವುದು ಅನಿವಾರ್ಯವಾಗಿತ್ತು. ಹಾಗೆ ಓಡುತ್ತಾ ಮುಚುಕುಂದ ಮಲಗಿದ್ದ ಕಡೆಗೆ ಬಂದ. ಕಾಲಯವನ ಬಿಡದೆ ಕೃಷ್ಣನನ್ನು ಹುಡುಕುತ್ತಾ ಅಲ್ಲಿಗೇ ಬಂದ. ಕೃಷ್ಣ ಕಣ್ಮರೆಯಾದ. ಆದರೆ ಕಾಣಿಸುತ್ತಿದ್ದ ಮುಚುಕುಂದನನ್ನು ವಧಿಸಲಾಯಿತು.

ಜರಾಸಂಧನಿಗೆ ಹೆದರಿ ಕೃಷ್ಣನು ಸಾಗರದ ಮಧ್ಯೆ ದ್ವಾರಕಾ ನಗರವನ್ನು ದೇವಶಿಲ್ಪಿ ವಿಶ್ವಕರ್ಮಋಷಿಯಿಂದ ನಿರ್ಮಾಣ ಮಾಡಿಸಿ, ಅಲ್ಲಿಯೇ ಇರತೊಡಗಿದ. ಅದನ್ನು ಕೃಷ್ಣ ತನ್ನ ಹೊಸ ರಾಜಧಾನಿಯನ್ನಾಗಿ ಮಾಡಿಕೊಂಡ. ಜರಾಸಂಧನು ದ್ವಾರಕೆಗೂ ಬಂದು ಆ ನಗರಕ್ಕೆ ಬೆಂಕಿ ಇಟ್ಟುಹೋದ. ಆ ಸಮಯದಲ್ಲಿ ಕೃಷ್ಣನು ಪ್ರವರ್ಷಣ ಗಿರಿಯ ಮೇಲೆ ಅಡಗಿಕೊಂಡಿದ್ದ. ಜರಾಸಂಧ ಹೋದ ನಂತರ ಕೃಷ್ಣನು ಅಲ್ಲಿಗೆ ಬಂದ. ಕೆಲವು ಆಕರಗಳು ಪ್ರವರ್ಷಣಗಿರಿಗೆ ಬದಲಾಗಿ ಗೋಮಂತಕಗಿರಿ ಎಂದು ಹೇಳುತ್ತವೆ.

ಇದೇ ಸಮಯಕ್ಕೆ ಇಂದ್ರಪ್ರಸ್ಥದಿಂದ ಧರ್ಮರಾಯ ದೂತನನ್ನು ಕಳುಹಿಸಿ ರಾಜಸೂಯಯಾಗವನ್ನು ಮಾಡುವ ಬಗ್ಗೆ ಕೃಷ್ಣನ ಮಾರ್ಗದರ್ಶನಕ್ಕಾಗಿ ಆಹ್ವಾನಿಸಿದ್ದ. ಜರಾಸಂಧನ ಬಂಧಿಗಳಾಗಿದ್ದ ರಾಜರ ಪತ್ರಗಳೂ ಬಂದಿದ್ದವು. ಮೊದಲು ಎಲ್ಲಿಗೆ ಹೋಗಬೇಕೆಂಬುದು ಕೃಷ್ಣನಿಗೆ ಸಮಸ್ಯೆಯಾಯಿತು. ಉದ್ಧವನು ಮೊದಲಿಗೆ ಇಂದ್ರಪ್ರಸ್ಥಕ್ಕೆ ಹೋಗಿ ಅಲ್ಲಿಂದ ಜರಾಸಂಧನ ಬಳಿಗೆ ಹೋಗಬೇಕೆಂದು ಸಲಹೆ ನೀಡಿದ. ಬಂಧಿತ ರಾಜರಿಗೆ ತಾನು ಶೀಘ್ರದಲ್ಲಿ ಬರಲಿರುವುದಾಗಿ ಆಶ್ವಾಸನೆ ಕೊಟ್ಟು ಕೃಷ್ಣನು ಇಂದ್ರಪ್ರಸ್ಥಕ್ಕೆ ಹೊರಟ.

ಪಾಂಡವರು ರಾಜಸೂಯಯಾಗ ಮಾಡಲು ಜರಾಸಂಧನಂತಹ ಬಲಶಾಲಿ ಪ್ರತಿಸ್ಪರ್ಧೆಯ ವಿನಾಶ ಅವಶ್ಯಕವಾಗಿತ್ತು. ಆದ್ದರಿಂದ ಬ್ರಾಹ್ಮಣ ವೇಷದಲ್ಲಿ ಕೃಷ್ಣ, ಅರ್ಜುನ ಮತ್ತು ಭೀಮ ಜರಾಸಂಧನ ನಗರಕ್ಕೆ ಹೋದರು. ಅಲ್ಲಿ ಗದಾಯುದ್ಧದಲ್ಲಿ ಭೀಮನ ಕೈಯ್ಯಲ್ಲಿ ಜರಾಸಂಧನು ಹತನಾದ. ಕೃಷ್ಣನು ಜರಾಸಂಧನ ಮಗನಿಗೆ ಪಟ್ಟಾಭಿಷೇಕವನ್ನು ಮಾಡಿ ಹಿಂತಿರುಗಿದ (ಮಹಾಭಾರತ, ಸಭಾಪರ್ವ, ೧೨ : ೨೨).

ರಾಜಸೂಯದಲ್ಲಿ ಭೀಷ್ಮನು ಕೃಷ್ಣನಿಗೆ ಅಗ್ರಪೂಜೆಯ ಗೌರವವನ್ನು ಕೊಟ್ಟಿದ್ದು ಶಿಶುಪಾಲನಲ್ಲಿ ಈರ್ಷ್ಯೆಯನ್ನು ಮೂಡಿಸಿತು. ಅವನನ್ನು ಸುದರ್ಶನ ಚಕ್ರದಿಂದ ಕೃಷ್ಣನು ಕೊಂದ. ಯಜ್ಞದ ನಂತರ ಕೃಷ್ಣನು ದ್ವಾರಕೆಗೆ ಹಿಂತಿರುಗಿದ. ನಂತರ ಶಾಲ್ವ, ದಂತವಕ್ತ್ರ ಮತ್ತು ವಿದೂರನನ್ನು ಕೃಷ್ಣನೇ ಕೊಂದ.

ಅರ್ಜುನ ಮತ್ತು ದುರ್ಯೋಧನ ಇಬ್ಬರೂ ಅವರ ಮಧ್ಯೆ ನಡೆಯಲಿರುವ ಯುದ್ಧದಲ್ಲಿ ಕೃಷ್ಣನ ಸಹಾಯವನ್ನು ಕೋರಲು ಬಂದರು. ದುರ್ಯೋಧನನ ಕೋರಿಕೆಯ ಮೇರೆಗೆ ಯಾದವ ಸೇನೆಯನ್ನು ಅವನಿಗೆ ಕೊಟ್ಟ. ತಾನು ಮಾತ್ರ ಅರ್ಜುನನ ಕಡೆ ಹೋದ. ಯುದ್ಧದಲ್ಲಿ ನೇರವಾಗಿ ಅಸ್ತ್ರವನ್ನು ಬಳಸಿ ಭಾಗವಹಿಸುವುದಿಲ್ಲ ಎಂಬ ತೀರ್ಮಾನವನ್ನು ಕೃಷ್ಣನು ತಿಳಿಸಿದ್ದರೂ ಅರ್ಜುನನು ಕೃಷ್ಣನನ್ನೇ ಕೋರಿದ್ದ.

ಯುದ್ಧಕ್ಕಾಗಿ ಕೌರವ - ಪಾಂಡವರಿಬ್ಬರೂ ಸಿದ್ಧತೆಗಳನ್ನು ನಡೆಸುತ್ತಿದ್ದರು. ಆಗ ಧರ್ಮರಾಯನು ಕೃಷ್ಣನನ್ನು ಧೃತರಾಷ್ಟ್ರನ ಬಳಿಗೆ ಸಂಧಾನಕ್ಕಾಗಿ ದೂತನಾಗಿ ಕಳುಹಿಸಿದ. ಆದರೆ ಫಲಕಾರಿಯಾಗಲಿಲ್ಲ. ದುರ್ಯೋಧನನ ಕಡೆಯವರೇ ಬಹುವಾಗಿ ಹೇಳಿದರೂ ದುರ್ಯೋಧನನು ಸಂಧಿಗೆ ಅಂಗೀಕರಿಸಲಿಲ್ಲ. ರಾಜಸಭೆಯಲ್ಲಿ ಕೃಷ್ಣನನ್ನು ಬಂಧಿಸುವ ಪ್ರಯತ್ನ ದುರ್ಯೋಧನ ಮಾಡಿದ. ಕೌರವರೆಲ್ಲರನ್ನೂ ಸೆರೆಯಾಳುಗಳಾಗಿ ಪಾಂಡವರ ಬಳಿಗೆ ಕೊಂಡೊಯ್ಯುವ ಸಾಮರ್ಥ್ಯ ತನಗಿದೆ ಎಂಬುದಾಗಿ ಕೃಷ್ಣನು ಹೇಳಿದ. ಭೀಷ್ಮ ಮತ್ತು ವಿದುರ ಇಬ್ಬರೂ ದುರ್ಯೋಧನನಿಗೆ ಬುದ್ಧಿ ಹೇಳಿದರು. ಕೃಷ್ಣ ಸಭಾಂಗಣದಿಂದ ಹೊರಕ್ಕೆ ಬಂದು ಹಸ್ತಿನಾಪುರವನ್ನು ಬಿಟ್ಟ (ಮಹಾಭಾರತ, ಉದ್ಯೋಗ ಪರ್ವ ೧೨೯). ಹೊರಗೆ ಕರ್ಣನಿಗೆ ಪಾಂಡವರೊಂದಿಗೆ ಇರುವ ಸಂಬಂಧವನ್ನುತಿಳಿಸಿ, ಅವನನ್ನು ಪಾಂಡವರ ಕಡೆಗೆ ಬರುವಂತೆ ಒತ್ತಾಯಮಾಡಿದ. ಕರ್ಣನು ಅಂಗೀಕರಿಸಲಿಲ್ಲ.

ದೃಷ್ಟದ್ಯುಮ್ನ ಮತ್ತು ಸಾತ್ಯಕಿಯ ನೆರವನ್ನು ಕೃಷ್ಣ ಪಡೆದು ಪಾಂಡವರನ್ನು ಬಲಿಷ್ಠಗೊಳಿಸಿದ (ಮಹಾಭಾರತ, ಉದ್ಯೋಗಪರ್ವ ೧೪೯ - ೫೨).

ಅರ್ಜುನನ ಪ್ರಾರ್ಥನೆಯಂತೆ ಕೃಷ್ಣನು ರಥವನ್ನು ಎರಡು ಸೇನೆಗಳ ಮಧ್ಯೆ ತಂದು ನಿಲ್ಲಿಸಿದ. ಆಪ್ತರು ಬಂಧುಗಳು ಇವರನ್ನು ಕೊಂದು ಗಳಿಸುವ ಸಾಮ್ರಾಜ್ಯದಿಂದ ಬೇಸರಗೊಂಡ ಅರ್ಜುನನು ಯುದ್ಧದಿಂದ ನಿವೃತ್ತನಾಗಲು ಚಡಪಡಿಸತೊಡಗಿದ. ಕೃಷ್ಣನು ಅರ್ಜುನನ ಗೀತೆಯನ್ನು ಉಪದೇಶಿಸಿ ಅವನನ್ನು ಯುದ್ಧಕ್ಕೆ ಸನ್ನದ್ಧನನ್ನಾಗಿ ಮಾಡಿದ. ಈ ಗೀತೆಯನ್ನೇ **ಭಗವದ್ಗೀತೆ** ಎಂದು ಕರೆಯುತ್ತಾರೆ.

ಕೃಷ್ಣನು ಪಾಂಡವರನ್ನು ಅನೇಕ ತೀವ್ರತರ ಸಂಕಟಗಳಿಂದ ಉಳಿಸಿದ. ರಥದ ಕುದುರೆಗಳ ಸೇವೆಯನ್ನು ಮಾಡಿದ. ಅವಕ್ಕೆ ನೀರು ಕುಡಿಸಿದ. ಹುಲ್ಲು ತಿನ್ನಿಸಿದ (ಮಹಾಭಾರತ, ದ್ರೋಣಪರ್ವ, ೧೭೫ : ೧೫). ಭಗದತ್ತನ ವೈಷ್ಣವಾಸ್ತ್ರದಿಂದ ಅರ್ಜುನನ್ನು ರಕ್ಷಿಸಿದ (ಮ. ದ್ರೋ ೨೮ : ೧೭). ಅಭಿಮನ್ಯುವಿನ ವಧೆಯ ನಂತರ ಸುಭದ್ರೆಯನ್ನು ಸಂತೈಸಿದ (ಮ. ದ್ರೋ ೫೪ : ೯). ಅಂಧಕಾರವನ್ನು ಸೃಷ್ಟಿಸಿ ಅರ್ಜುನನು ಜಯದ್ರಥನನ್ನು ಕೊಲ್ಲಲು ಅವಕಾಶ ಕಲ್ಪಿಸಿ ಅರ್ಜುನನ ವಚನ ನಿಲ್ಲುವಂತೆ ನೆರವಾದ (ಮ. ದ್ರೋ ೧೨೧). ಘಟೋತ್ಕಚನನ್ನು ಯುದ್ಧಕ್ಕೆ ಕಳುಹಿಸಿ ಕರ್ಣನ ವಾಸವೀ ಶಕ್ತಿಯಿಂದ ಅರ್ಜುನನು ಉಳಿಯುವಂತೆ ಮಾಡಿದ (ಮ. ದ್ರೋ ೧೭೪). ರಥವನ್ನು ಐದು ಅಂಗುಲ ನೆಲದೊಳಕ್ಕೆ ಇಳಿಯುವಂತೆ ಮಾಡಿ ಕರ್ಣನು ಪ್ರಯೋಗಿಸಿದ ಸರ್ಪಾಸ್ತ್ರದಿಂದ ಅರ್ಜುನನನ್ನು ರಕ್ಷಿಸಿದ (ಮ. ಕರ್ಣಪರ್ವ ೬೬ : ೧೦೮). ದುರ್ಯೋಧನನ ತೊಡೆಯ ಮೇಲೆ ಗದಾಪ್ರಹಾರವನ್ನು ಭೀಮನಿಂದ ಮಾಡಿಸಿ ಅವನು ಸಾಯುವಂತೆ ಮಾಡಿದ (ಮ. ಶಲ್ಯಪರ್ವ ೫೭: ೩ - ೧೨). ಧರ್ಮರಾಜನಿಂದ ಶಲ್ಯವಧೆಯನ್ನು ಮಾಡಿಸಿದ (ಮ. ಸ್ತ್ರೀ ಪರ್ವ, ೨೫).

ಗಾಂಧಾರಿಯು ಕೃಷ್ಣನಿಗೆ ದುರ್ಮರಣ ಉಂಟಾಗುವಂತೆ ಶಪಿಸಿದಳು (ಮ. ಸ್ತ್ರೀ ಪರ್ವ

೨೫).

ಕಣ್ವ ಋಷಿಯನ್ನು ಉಪಹಾಸ ಮಾಡಿದ ಸಾಂಬನಿಗೆ ಮುಸಲ (ಒನಕೆ) ಹುಟ್ಟಿತು. ಅದೇ ಮುಸಲದಿಂದ ಸಾಂಬ, ಚಾರುದೇಷ್ಣ, ಪ್ರದ್ಯುಮ್ನ ಮತ್ತು ಅನಿರುದ್ಧ ಸತ್ತರು. ಮಕ್ಕಳ ಮರಣ ತನ್ನ ಕಣ್ಮುಂದೆ ನಡೆದಿದ್ದರಿಂದ ಕೃಷ್ಣ ವಿಕಲಚಿತ್ತನಾದ. ಆದರೆ ಕಾಲಚಕ್ರ ತನಗೆ ವಿರೋಧವಾಗಿರುವುದನ್ನು ಗಮನಿಸಿದ (ಮ. ಮೌಕ್ತಿಕ ಪರ್ವ, ೪).

ನಿರ್ಯಾಣಕಾಲ ಸಮೀಪ ಬರುತ್ತಿದ್ದಂತೆಯೇ ಉದ್ಧವನು ಕೃಷ್ಣನೊಂದಿಗೆ ಹೋಗಲು ಬಯಸಿದ. ಆಗ ಕೃಷ್ಣ ಅಧ್ಯಾತ್ಮ ಬೋಧೆಮಾಡದ. ಅದು ಅವಧೂತ ಗೀತೆ ಎಂದು ಪ್ರಖ್ಯಾತವಾಗಿದೆ (ಭಾಗವತ ೧೧ : ೭ - ೨೧).

ದ್ವಾರಕೆಯಲ್ಲಿ ದುಶ್ಚಿಹ್ನೆಗಳು ಕಾಣಿಸಿಕೊಂಡವು. ಬಲರಾಮ ಸಾಗರತೀರದಲ್ಲಿ ದೇಹವನ್ನು ಬಿಟ್ಟ. ಕೃಷ್ಣನು ಅಶ್ವತ್ಥವೃಕ್ಷದ ಕೆಳಗೆ ಚಾಚಿದ್ದ ಎಡಕಾಲಿನ ಮೇಲೆ ಬಲಗಾಲನ್ನು ಹಾಕಿ ವೃಕ್ಷಕ್ಕೆ ಒರಗಿಕೊಂಡು ಚಿಂತಾಕ್ರಾಂತನಾಗಿ ಕುಳಿತ. ಹೊರಕ್ಕೆ ಪಾದಮಾತ್ರವೇ ಕಾಣಿಸುತ್ತಿದ್ದು ಅದು ಜಿಂಕೆ ಎಂಬ ಭ್ರಮೆಗೆ ತುತ್ತಾದ ಜರಾ ಎಂಬ ಬೇಟೆಗಾರ ಬಾಣ ಪ್ರಯೋಗಮಾಡಿದ. ಅದು ಬಲಪಾದಕ್ಕೆ ತಾಕಿತು. ನಿಜವನ್ನು ಅರಿತ ಬೇಟೆಗಾರ ಬಹು ದುಃಖಿತನಾದ. ಕೃಷ್ಣ ಅವನನ್ನು ಸಂತೈಸಿ ಅವನಿಗೆ ವರವನ್ನು ಕೊಟ್ಟ.

ಕೃಷ್ಣನ ಸಾರಥಿ ದಾರುಕ ಅಲ್ಲಿಗೆ ಬಂದು ಕೃಷ್ಣನಿಗೆ ವಂದಿಸಿ ನಿಂತ. ಕೃಷ್ಣ 'ನನ್ನ ರಥವನ್ನು ಗುಪ್ತಗೊಳಿಸು. ನನ್ನ ಅಂತ್ಯ ಸಮೀಪಿಸಿದೆ. ದ್ವಾರಕೆಗೆ ಹೋಗಿ ಆ ನಗರ ಜಲಸಮಾಧಿಯಾಗಲಿದೆ ಎಂಬುದನ್ನು ತಿಳಿಸು. ಆದ್ದರಿಂದ ಅಲ್ಲಿರುವವರೆಲ್ಲರೂ ಸುರಕ್ಷಿತ ಸ್ಥಳಕ್ಕೆ ಕೂಡಲೇ ಹೊರಡಬೇಕು' ಎಂದು ಹೇಳಿದ.

ಈ ವಿಷಯವನ್ನು ಕೇಳಿದ ದೇವಕಿ ಮತ್ತು ರೋಹಿಣಿ ದೇಹವನ್ನು ಬಿಟ್ಟರು. ಅಷ್ಟನಾಯಕಿಯರು ಕೃಷ್ಣನೊಂದಿಗೆ ಸಹಗಮನ ಮಾಡಿದರು (ಬ್ರಹ್ಮಪುರಾಣ, ೨೧೧ - ೧೨). ಪ್ರದ್ಯುಮ್ನ ಮುಂತಾದವರ ಪತ್ನಿಯರೂ ಅಗ್ನಿಪ್ರವೇಶಮಾಡಿದರು. ದ್ವಾರಕಾನಗರ ಸಾಗರದಲ್ಲಿ ಮುಳುಗಿತು (ಮ. ಮೌಕ್ತಿಕಪರ್ವ, ೮ : ೪೦). ಕೃಷ್ಣನ ಅಂತ್ಯ ಬಂದಾಗ ಆತನಿಗೆ ೧೨೫ ವರ್ಷಗಳಿಗೂ ಹೆಚ್ಚಾಗಿತ್ತು (ಭಾಗವತ ಪುರಾಣ ೧೧: ೬ : ೨೫, ಬ್ರಹ್ಮವೈವರ್ತಪುರಾಣ ೪ : ೧೨೯ : ೧೮).

ಕೃಷ್ಣಚರಿತ್ರೆ ಅಪೂರ್ವವಾದುದು. ಜನ್ಮದಿಂದ ನಿರ್ಯಾಣದವರೆವಿಗೂ ಪ್ರತಿಯೊಂದು ಅವಸ್ಥೆಯಲ್ಲೂ ಈತ ಅಸಮಾನ್ಯನಾಗಿಯೇ ಕಾಣಿಸಿಕೊಂಡ. ಕಾರಾಗಾರದಲ್ಲಿ ಹುಟ್ಟಿದ್ದರೂ ಸುರಕ್ಷತೆಗಾಗಿ ಗೋಕುಲದಲ್ಲಿ ಬೆಳೆದ. ನಂದಗೋಪನ ಮನೆಯಲ್ಲಿ ಬಾಲಲೀಲೆಗಳನ್ನು ತೋರಿದ. ಗೋಪ ಗೋಪಿಯರೊಂದಿಗೆ ಸಾಧಾರಣ ಗೊಲ್ಲನ ಕೆಲಸಗಳನ್ನು ನಿರ್ವಹಿಸುತ್ತಾ ಮರಲೀಧರ ಮತ್ತು ರಾಧಾಕೃಷ್ಣ ಎಂಬ ಹೆಸರುಗಳನ್ನು ಪಡೆದ. ಮಲ್ಲವಿದ್ಯೆಯಲ್ಲಿ ಲೋಕಪ್ರಿಯತೆ ಗಳಿಸಿದ. ಕಂಸನನ್ನು ಕೊಂದ. ಜರಾಸಂಧನನ್ನು ಎದುರಿಸಿದ್ದರಿಂದ ಹಸ್ತಿನಾಪುರದ

ರಾಜಕಾರಣದಲ್ಲಿ ಪ್ರವೇಶಿಸಿದ. ಜರಾಸಂಧನ ವಧೆ, ಶಿಶುಪಾಲಾದಿಗಳ ಪರಾಜಯ ಈತನ ರಾಜಕಾರಣದ ಮುತ್ಸದ್ದಿತನವನ್ನು ತೋರುತ್ತದೆ. ಈತನ ಆಧ್ಯಾತ್ಮ ಸಿದ್ಧಿಯನ್ನು ಗಮನಿಸಿದ ಭೀಷ್ಮ ಕೃಷ್ಣನಿಗೆ ರಾಜಸೂಯಯಾಗದಲ್ಲಿ ಅಗ್ರ ಪೂಜೆಯಿಂದ ಗೌರವಿಸಿದ. ಮಹಾಭಾರತದ ಯುದ್ಧದಲ್ಲಿ ಅರ್ಜುನನ ಸಾರಥ್ಯವಹಿಸಿ ಬಹು ಕುಶಲ ಸಂಯೋಜನೆಗಳಿಂದ ಯುದ್ಧರಂಗದಲ್ಲಿ ವರ್ತಿಸಿ, ಅರ್ಜುನನ ವಿಜಯಕ್ಕೆ ಮುಖ್ಯಕಾರಣನಾದ.

ಅರ್ಜುನನು ಯುದ್ಧದಿಂದ ಪರಾಙ್ಮುಖನಾಗಿದ್ದಾಗ ಅವನಿಗೆ ಭಗವದ್ಗೀತೆಯನ್ನು ಉಪದೇಶಮಾಡಿ ಕರ್ಮಯೋಗವನ್ನು ಬೋಧಿಸಿದ. ಭಗವದ್ಗೀತೆ ಮತ್ತು ಅವಧೂತಗೀತೆಗಳು ಅಧ್ಯಾತ್ಮದಲ್ಲಿ ಎರಡು ಅಪೂರ್ವವಾದ ಕೃತಿರತ್ನಗಳು. ಕರ್ಮವನ್ನು ನಡೆಸಿ, ಕರ್ಮಬಂಧನದಿಂದ ಮುಕ್ತಿಗಳಿಸುವ ರಹಸ್ಯವನ್ನು ಎರಡೂ ಕೃತಿಗಳು ವಿವರಿಸುತ್ತವೆ. ಜ್ಞಾನ, ಭಕ್ತಿ ಮತ್ತು ಲೋಕಾಚಾರಗಳ ಮಧ್ಯೆ ಇರುವ ಸಂಬಂಧವನ್ನು ಪ್ರತಿಪಾದಿಸುವ ಈ ಕೃತಿಗಳು ಅದೇ ಕಾರಣದಿಂದ ಅಮರವಾಗಿವೆ. ಈ ಗ್ರಂಥಗಳಿಂದಲೇ ಕೃಷ್ಣನುಪೂರ್ಣಾವತಾರಿ ಎಂದು ಗುರ್ತಿಸಲ್ಪಡುತ್ತಾನೆ.

ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಮತಗಳ ಪ್ರತಿಪಾದಕರಾದ ಆಚಾರ್ಯರು ಭಗವದ್ಗೀತೆಯನ್ನು ಸಮಾನವಾಗಿ ಅವಲಂಬಿಸಿದ್ದಾರೆ. ಆಧುನಿಕರೂ ಅದೇ ರೀತಿಯಾಗಿ ಗೀತೆಯನ್ನು ಅವಲಂಬಿಸಿದ್ದಾರೆ.ಲೋಕಮಾನ್ಯ ಬಾಲಗಂಗಾಧರ ತಿಲಕರ ಗೀತಾರಹಸ್ಯ, ಮಹಾತ್ಮಾಗಾಂಧೀಜಿಯವರ ಅನಾಸಕ್ತಿಯೋಗ ಭಗವದ್ಗೀತೆಯನ್ನು ಪ್ರತಿಪಾದಿಸುವ ಕೃತಿಗಳು.

ಅರ್ಜುನನು ಮಹಾಭಾರತದ ಯುದ್ಧದ ನಂತರ ಇನ್ನೊಮ್ಮೆ ಗೀತೆಯ ಉಪದೇಶ ಕೇಳಬೇಕೆಂದು ಕೃಷ್ಣನನ್ನು ಪ್ರಾರ್ಥಿಸಿದಾಗ ಕೃಷ್ಣನು 'ಆ ಸಮಯದಲ್ಲಿ ನಾನೂ ವಿಶೇಷವಾದ ಯೋಗಾವಸ್ಥೆಯಲ್ಲಿದ್ದೆ. ಆಗ ಹೇಳಿದ್ದನ್ನು ಮತ್ತೆ ಈಗ ಹೇಳುವುದು ಸಾಧ್ಯವಾಗದು. ಆದರೂ ಕೆಲವು ಅಂಶಗಳನ್ನು ಹೇಳುತ್ತೇನೆ' ಎಂದು ಅನುಗೀತೆ ಹೇಳಿದ (ಮಹಾಭಾರತ, ಅಶ್ವಮೇಧಿಕ ಪರ್ವ ೧೬ - ೫೦). ಆದರೆ ಭಗವದ್ಗೀತೆಯ ಮಹತ್ವ ಅನುಗೀತೆಗೆ ಬರಲಿಲ್ಲ .

ಕೃಷ್ಣ ಚರಿತ್ರೆಯಲ್ಲಿ ವಿಶ್ವರೂಪದರ್ಶನವು ಬಹುಮಹತ್ವದ ಭಾಗ. ಕೃಷ್ಣ ವಿಶ್ವರೂಪನನ್ನು ತೋರಿಸಿದ ಘಟ್ಟಗಳು ಇಂತಿವೆ -

೧. ಬಾಲಲೀಲೆಗಳಲ್ಲಿ ಕೃಷ್ಣ ಮಣ್ಣು ತಿಂದ. ಯಶೋದೆ 'ಮಣ್ಣು ತಿಂದೆಯಾ?' ಎಂದು ಕೇಳಿದಾಗ ಇಲ್ಲವೆಂದು ಬಾಯ್ತೆರೆದು 'ವಿಶ್ವರೂಪ'ವನ್ನು ಆಕೆಗೆ ತೋರಿಸಿದ.

೨. ಅಕ್ರೂರನಿಗೆ ವಿಶ್ವರೂಪ ತೋರಿಸಿದ.

೩. ದೂತನಾಗಿ ಹಸ್ತಿನಾಪುರಕ್ಕೆ ಹೋದಾಗ ದುರ್ಯೋಧನನು ಕೃಷ್ಣನನ್ನು ಬಂಧಿಸಲು ಪ್ರಯತ್ನಿಸಿದ. ಆಗ ಕೃಷ್ಣ ತನ್ನ ಉಗ್ರರೂಪವನ್ನು ಪ್ರದರ್ಶಿಸಿದ. ಅದರ ವರ್ಣನೆಯು ವಿಶ್ವರೂಪದಂತೆಯೇ ಇದೆ.

೪. ಭಗವದ್ಗೀತೆಯ ಉಪದೇಶದ ಸಮಯದಲ್ಲಿ ಹನ್ನೊಂದನೆಯ ಅಧ್ಯಾಯದಲ್ಲಿ ಅರ್ಜುನನಿಗೆ ತನ್ನ ವಿಶ್ವರೂಪವನ್ನು ವಿವರಿಸಿದ. ಅದರ ಭಯಂಕರತೆಗೆ ಅರ್ಜುನನೂ ಗಾಭರಿಗೊಂಡ. ಸೌಮ್ಯ ರೂಪ ಧರಿಸಬೇಕೆಂದು ಅರ್ಜುನನು ಪ್ರಾರ್ಥಿಸಿದ.

೫. ಮಹಾಭಾರತದ ಯುದ್ಧದಲ್ಲಿ ಕೃಷ್ಣನು ತಾನು ಶಸ್ತ್ರಧರಿಸುವುದಿಲ್ಲ ಎಂಬ ಪ್ರತಿಜ್ಞೆ ಮಾಡಿದ್ದ. ಅದಕ್ಕೆ ವಿಪರೀತವಾಗಿ ಭೀಷ್ಮನು ಕೃಷ್ಣನು ಅಸ್ತ್ರವನ್ನು ಧರಿಸುವಂತೆ ಮಾಡುತ್ತೇನೆ ಎಂಬ ಪ್ರತಿಜ್ಞೆ ಕೈಗೊಂಡ. ಅರ್ಜುನ ಭೀಷ್ಮರ ಮಧ್ಯೆ ಬಹು ತೀವ್ರತರ ಯುದ್ಧ ನಡೆಯುತ್ತಿದ್ದಾಗ ಅರ್ಜುನ ಸೋಲುವ ಸಂದರ್ಭ ಬಂದಾಗ ಕೃಷ್ಣನು ಚತುರ್ಭುಜ ರೂಪವನ್ನು ಧರಿಸಿ ಭೀಷ್ಮನ ಮೇಲೆ ಅಸ್ತ್ರಪ್ರಯೋಗಕ್ಕೆ ಸಿದ್ಧನಾದ. ಭೀಷ್ಮ ತನ್ನ ಪ್ರತಿಜ್ಞೆಯು ಪೂರೈಸಿತೆಂದು ಸಂತೋಷದಿಂದ ಶಸ್ತ್ರವನ್ನು ಕೆಳಗಿರಿಸಿ ಎರಡೂ ಕೈಗಳನ್ನು ಜೋಡಿಸಿದ.

೬. ಇಂದ್ರಪ್ರಸ್ಥದಲ್ಲಿ ಅರ್ಜುನನಿಗೆ ಅನುಗೀತೆಯನ್ನು ಉಪದೇಶಿಸಿ ದ್ವಾರಕೆಗೆ ಹಿಂತಿರುಗುತ್ತಿದ್ದಾಗ ಮರುಭೂಮಿಯಲ್ಲಿ ಕೃಷ್ಣನಿಗೆ ಉತ್ತಂಕ ಋಷಿ ಭೇಟಿಯಾದ. ಮಹಾಭಾರತಯುದ್ಧಕ್ಕೆ ಕಾರಣ ಕೃಷ್ಣನೆಂದು ಉತ್ತಂಕ ನಿಂದಿಸಿದ. ಆತನಿಗೆ ಸಾಂತ್ವನ ನೀಡಲು ವಿಶ್ವರೂಪದರ್ಶನ ಮಾಡಿಸಿ, ಆತ ಕೇಳಿದ ವರನ್ನು ದಯಪಾಲಿಸಿದ (ಮ. ಅಶ್ವಮೇಧಿಕ ಪರ್ವ ೫೪ : ೪).

ಹೀಗೆ ಬಾಲಕೃಷ್ಣ, ಮುರಳೀಧಾರಿ, ಗೋಪಾಲಕೃಷ್ಣ, ರಾಧಾಕೃಷ್ಣ, ಭಗವಾನ್ ಕೃಷ್ಣ ಹೀಗೆ ಅನೇಕ ಅವತಾರಗಳಲ್ಲಿ ಈತನ ಉಪಾಸನೆ ಮಹಾಭಾರತದ ಕಾಲದಿಂದಲೂ ನಡೆಯುತ್ತಿದೆ. ಈ ಬಗ್ಗೆ ಪ್ರತ್ಯೇಕ ಗ್ರಂಥಗಳೂ ರಚಿತವಾಗಿವೆ. ಆದ್ದರಿಂದ ಇದು ಪೂರ್ಣಾವತಾರ.

ಪಾಣಿನಿಯ ಕಾಲಕ್ಕೆ ಕೃಷ್ಣನು ದೇವನೆಂದು ಪೂಜಿತನಾಗುತ್ತಿದ್ದ. ಅರ್ಜುನ ಮತ್ತು ವಾಸುದೇವ ಕೃಷ್ಣರನ್ನು ನರ ನಾರಾಯಣರ ಅವತಾರವೆಂದು ಅಂಗೀಕರಿಸಿ ಉಪಾಸ್ಯದೈವಗಳಲ್ಲಿ ಸೇರ್ಪಡೆ ಮಾಡಲಾಗಿತ್ತು. ಇವರನ್ನು ಕ್ಷತ್ರಿಯರು ಎಂಬ ಭಾವನೆಯಿಂದ ನೋಡುತ್ತಿರಲಿಲ್ಲ. ಆದ್ದರಿಂದ ಪಾಣಿನಿ ಇದಕ್ಕಾಗಿ ಪ್ರತ್ಯೇಕ ಸೂತ್ರವನ್ನೇ ಹೇಳಬೇಕಾಯಿತು. ಮಹಾಭಾರತದಲ್ಲಿ ದೊರೆಯುವ ನರ - ನಾರಾಯಣರ ಉಪಾಸನಾ ಪದ್ಧತಿಯು ಪಾಣಿನಿ ಮತ್ತು ಪಾತಂಜಲಿಗಳ ಕಾಲಕ್ಕೂ ಇತ್ತು. ಆಗ ನರ - ನಾರಾಯಣ ಸ್ಥಾನದಲ್ಲಿ ಕೃಷ್ಣಾರ್ಜುನರನ್ನೇ ಹೇಳಲಾಗುತ್ತಿತ್ತು. ಕ್ರಿಸ್ತಪೂರ್ವ ಎರಡನೆಯ ಶತಮಾನಕ್ಕೂ ಮೊದಲಿನಿಂದಲೇ ವಾಸುದೇವನ ಪೂಜೆ ನಡೆಯುತ್ತಿದ್ದುದರ ಶಿಲಾಲೇಖದ ಪುರಾವೆ ದೊರೆತಿದೆ.

ಮೂರ್ತಿ ಶಿಲ್ಪದಲ್ಲಿ ಭಾರತದಲ್ಲೆಲ್ಲಾ ಅತ್ಯಂತ ಜನಪ್ರಿಯನಾದ ದೇವ ಕೃಷ್ಣ. ಕೃಷ್ಣನ ವಿಗ್ರಹಗಳ ವೈವಿಧ್ಯ ಮತ್ತು ಬಗೆಗಳು ಬಹುವಾಗಿವೆ. ಶಾಸ್ತ್ರಗಳಲ್ಲಿ ಅನೇಕ ಬಗೆಗಳನ್ನು ವಿವರಿಸಿದೆ. ಮೊದಲಿಗೆ ಪಾಂಚರಾತ್ರಾಗಮಕ್ಕೆ ಸೇರಿದ ವಿಷ್ವಕ್ಸೇನ ಸಂಹಿತೆ (೧೨ : ೧೧೪ - ೧೨೯) ಯಲ್ಲಿ ದೊರೆಯುವ ವಿವರಣೆಯನ್ನು ಗಮನಿಸೋಣ :


ಅಥಃ ಪರಂ ಪ್ರವಕ್ಷ್ಯಾಮಿ ಕೃಷ್ಣಂ ಕೃಷ್ಣಾಂಜನ ಪ್ರಭಮ್
ಸ್ಥಾಪನಂ ಕಾರ್ಯಮಸ್ಯೈವ ಸ್ಥಾನಕಂ ತು ವಿಶೇಷತಃ ||
ತ್ರಿಭಂಗ್ಯಾ ಸಂಮಿತಂ ತಂ ತು ಸ್ಥಿತಂ ಪೀಠೇ ಮಹಾಮುನೇ
ಕ್ರೀಡಾಯಷ್ಟಿ ಸಮಾಯುಕ್ತಂ ದೇವ್ಯಾ ಚ ಪರಮಂ ಹರಿಮ್ ||
ಸ್ಥಾಪಯೇದ್ದೇವಿಕೇ ಸ್ಥಾನೇ ಸರ್ವಜ್ಞಂ ಸರ್ವಕಾರಣಮ್
ಏವಂ ಸಂಕ್ಷೇಪತಃ ಪ್ರೋಕ್ತಂ ವಿವಿಕ್ತೇನಾಧುನಾ ಮುನೇ ||

ಕೃಷ್ಣವರ್ಣದ ಪ್ರಭೆಯಿಂದ ಶೋಭಾಯಮಾನವಾಗಿರುವ ಶ್ರೀಕೃಷ್ಣನ ಬಗ್ಗೆ ವಿವರವಾಗಿ ಹೇಳುತ್ತೇನೆ. ಸ್ಥಾನಕಮೂರ್ತಿ (ನಿಂತಿರುವ ಭಂಗಿಯಲ್ಲಿರುವ ಮೂರ್ತಿಯನ್ನು) ತ್ರಿಭಂಗಿಯಲ್ಲಿ ಪೀಠದ ಮೇಲೆ ಇರುವಂತೆ ರೂಪಿಸಬೇಕು. ಕೈಯಲ್ಲಿ ತುರುಗಾಹಿಯ ಕೋಲನ್ನು ದಂಡ ಹಿಡಿದಿರುವಂತೆ ಗರ್ಭಗುಡಿಯ ದೈವಿಕ ಸ್ಥಾನದಲ್ಲಿ ಸ್ಥಾಪಿಸಬೇಕು. ಇದು ಸಂಕ್ಷೇಪದಲ್ಲಿ ಸ್ವಾಮಿಯ ರೂಪದ ವಿವರಣೆ.

ಅತ ಶ್ಯಾಮನಿಭಂ ವಾಪಿ ಪೀತಾಂಬರ ಸಮನ್ವಿತಮ್
ವಾಸುದೇವಂ ಗುಡಕೇಶಂ ಸರ್ವಾಭರಣ ಭೂಷಿತಮ್ ||
ಕ್ರೀಡಾಯಷ್ಟಿಧರಂ ದೇವಂ ತ್ರಿಭಂಗಸ್ಥಿತಿ ಸಂಯುತಮ್
ಸುಸ್ಥಿತಂ ದಕ್ಷಿಣಂ ಪಾದಂ ವಾಮಪದಂ ತು ಕುಂಚಿತಮ್ ||
ವಾಮ ಪಾದತಲಂ ತಿರ್ಯಕ್ ಕ್ರಮೇಣೈವ ತು ಕಾರಯೇತ್
ತತ್ಕನಿಷ್ಠಾಂಗುಲಿಸ್ಥಾನೇ ಚಾಂಗುಷ್ಠಸ್ಥಿತಿಮಾಚರೇತ್ ||

ಶ್ಯಾಮಲ ವರ್ಣಪ್ರಭೆಯಿಂದ ತೇಜೋವಂತನಾಗಿದ್ದು ಪೀತಾಂಬರವನ್ನು ಧರಿಸಿರುವ ವಾಸುದೇವನು ಕೇಶಬಂಧನ ಮತ್ತು ಸರ್ವಾಭರಣ ಭೂಷಿತನಾಗಿ ತುರುಗಾಹಿಯ ಕೋಲಿನೊಂದಿಗೆ ತ್ರಿಭಂಗಿಯಲ್ಲಿ ನಿಂತಿರುತ್ತಾನೆ. ಬಲಗಾಲು ಬಲವಾಗಿ ಊರಿದ್ದು ಎಡಗಾಲು ಸ್ವಲ್ಪವಾಗಿ ಬಗ್ಗಿರುತ್ತದೆ. ಎಡ ಪಾದವು ಉದ್ದವಾಗಿರಿಸಿಕೊಂಡಿರುತ್ತಾನೆ. ಈ ಪಾದದ ಕಿರುಬೆರಳು ಬಲಪಾದದ ಅಂಗುಷ್ಠಕ್ಕೆ ಸಮೀಪವಾಗಿರುತ್ತದೆ. ಎಡಮುಂಗಾಲು ಸ್ವಲ್ಪವಾಗಿ ಬಗ್ಗಿರುತ್ತದೆ. ಎಡಪಾದದ ಹೆಬ್ಬೆರಳು ನೆಲಕ್ಕೆ ಊರಿರುತ್ತದೆ.

ಕಿಂಚಿತ್ ಕುಂಚಿತ ಜಾನುಶ್ಚ ವಾಮಪಾದ ಸ್ಥಿತಿರ್ಭವೇತ್
ವಕ್ತ್ರಂ ಚೈವ ತಥಾ ಗಾತ್ರೇ ಕಟೀಯಂತ್ರೇ ತಥೈವ ಚ ||
ತ್ರಿಷು ಮಾರ್ಗೇಷು ಭಾಗೇಷು ಭಂಗಿತ್ವಾತ್ ತ್ರಿಭಂಗಿತ್ವಂ ವಿಧೀಯತೇ
ವಕ್ತ್ರಂ ದಕ್ಷಿಣತೋ ಭಂಗೇ ಮಧ್ಯಕಾಯಂ ತು ವಾಮತಃ ||
ಕಟಿ ದಕ್ಷಿಣತೋ ಭಾಗೇ ಭಂಗತ್ರಯಮುದಾಹೃತಮ್
ಕಾರಯೇದ್ದಕ್ಷಿಣಂ ಹಸ್ತಂ ಸುಯಷ್ಟಿಂ ಕಟಕಾನ್ವಿತಮ್ ||
ವಾಮಂ ದೇವೀ ಭುಜಾಸಕ್ತಂ ವಾಮಹಸ್ತಮಧೋಮುಖಮ್
ವಾಮಂ ಕರತಲಂ ಚೈವ ನಾಭಿಸೂತ್ರೇಣ ಯೋಜಯೇತ್ ||
ದಕ್ಷಿಣಂ ಕಟಿಹಸ್ತಂ ತು ವಕ್ತ್ರಸೂತ್ರೇಣ ಯೋಜಯೇತ್



ಚಿತ್ರ ೪೬ : ಶ್ರೀ ಕೃಷ್ಣ (ರುಕ್ಮಿಣಿ ಸತ್ಯಭಾಮೆಯರೊಂದಿಗೆ)

ತ್ರಿಭಂಗಿ ಎಂದರೆ ಮೈ ಮೂರು ವಿಶೇಷವಾದ ರೀತಿಯ ಓರೆಗಳಲ್ಲಿರುವಿಕೆ. ತಲೆಯು ಬಲಗಡೆಗೆ ವಾಲಿರುತ್ತದೆ. ಮಧ್ಯಕಾಯವು ಎಡಗಡೆಗೆ ವಾಲಿರುತ್ತದೆ. ಸೊಂಟವು ಬಲಭಾಗಕ್ಕೆ ಬಗ್ಗಿರುತ್ತದೆ. ಇದನ್ನೇ ತ್ರಿಭಂಗಿ ಎನ್ನಲಾಗುತ್ತದೆ. ಕಟಕ ಕುಂಡಲಗಳಿಂದ ಸುಶೋಭಿತವಾಗಿರುವ ತೋಳುಗಳನ್ನು ರೂಪಿಸಬೇಕು. ಆಗ ಬಲಹಸ್ತದಲ್ಲಿ ಗೋಪಾಲಕನು ಕೈಯಲ್ಲಿ ಹಿಡದಿರುವ ಕೋಲನ್ನು ಸ್ವಾಮಿ ಹಿಡಿದಿರುವಂತೆ ತೋರಿಸಬೇಕು. ಎಡತೋಳು ದೇವಿಯ ಭುಜದಮೇಲೆ ಇರಿಸಿಕೊಂಡಿದ್ದು ಹಸ್ತ ಮಾತ್ರ ಕೆಳಕ್ಕೆ ತೂಗಾಡುತ್ತಿರುವಂತೆ ಇರಬೇಕು. ಈ ಹಸ್ತವು ಕೆಳಮುಖವಾಗಿ ನಾಭಿಸೂತ್ರದ ಸಮಕ್ಕೆ ಇರುವಂತೆ ರೂಪಿಸಬೇಕು. ಬಲಹಸ್ತವು ಕೊಲನ್ನು ಹಿಡಿದಿರುವಂತೆ ಸೊಂಟಕ್ಕೆ ಸಮನಾಗಿ ಎತ್ತಿರಬೇಕು.

**ತ್ರಿಭಾಗಮಾಸ ಪಾಯಾಮಂ ಮುಖಂ ಮೂರ್ಧ್ನ ತ್ರಿಗೋಲಕಮ್ ||**
**ಹನುಗ್ರೀವಂ ತ್ರಿಮಾತ್ರಾರ್ಧ ಮರ್ಧಮಾತ್ರಂಗುಳಂ ಸ್ಮೃತಮ್**
**ಹಿಕ್ಕಾ ನಾಭಿ ಮುಖೇ ಚೈವ ಮಧ್ಯಕಾಯಂ ಪ್ರತಿಷ್ಠಿತಮ್ ||**
**ಮೇಢ್ರಂ ಸಾಭಿಮುಖಂ ನಾ ನಾಭೇಃ ತಸ್ಮಾದುರೂ ಮುಖದ್ವಯಮ್**
**ಮಾನಂ ಸಂಕ್ಷೇಪತಃ ಪ್ರೋಕ್ತಂ ಶೇಷಂ ಸಾಧರಣಂ ಸ್ಮೃತಮ್ ||**
**ದೇವ್ಯೌ ತತ್ಪಾರ್ಶ್ವ ಯೋಶ್ಚೈವ ಸ್ಥಾಪಯೇತ್ಕ್ರಮ ಯೋಗತಃ**
**ದೇವಸ್ಯ ದಕ್ಷಿಣೇ ಕುರ್ಯಾದ್ರುಕ್ಮಿಣೀಂ ರುಕ್ಮಸನ್ನಿಭಾಮ್ ||**
**ಸತ್ಯಭಾಮಾಂ ಚ ವಾಮೇ ತು ಕಾರಯೇತ್ ಶ್ಯಾಮ ಸನ್ನಿಭಾಮ್**
**ಪೂರ್ವವತ್ ಕಮಲಂ ಗೃಹ್ಯ ಸಾತ್ವಿಕೇನ ಸಮಾಯುತಮ್ ||**

ಮುಖವನ್ನು ಮೂರು ಸಮಭಾಗಗಳಾಗಿ ವಿಭಜಿಸಿ ಕೇಶಾಂತದಿಂದ ಅಕ್ಷಿ ಸೂತ್ರ, ನಾಸಾಪುಟಸೂತ್ರ, ಹನ್ವಂತಸೂತ್ರಗಳನ್ನು ಯೋಜಿಸಬೇಕು. ಇವು ಪ್ರತಿಯೊಂದು ಸಮವಾಗಿರುತ್ತವೆ. ಉಷ್ಣೀಷದಿಂದ ಕೇಶಾಂತವು ಮುಖದ ೧ / ೩ ಪಾಲು. ಕಂಠವು ಕೂಡ ಅಷ್ಟೇ ಎತ್ತರ. ಮೊಣಕಾಲು ಮತ್ತು ಪಾದಗಳು ಅದೇ ಎತ್ತರಕ್ಕೆ ಸಮನಾಗಿರುತ್ತವೆ. ಹಿಕ್ಕಾದಿಂದ ಹೃದಯ, ಹೃದಯದಿಂದ ನಾಭಿ, ನಾಭಿಯಿಂದ ಮೇಢ್ರವು ಒಂದು ಮುಖಮಾನಕ್ಕೆ ಸಮನಾಗಿರುತ್ತದೆ. ಮೇಢ್ರದಿಂದ ಊರು (ತೊಡೆ) ಮತ್ತು ಜಾನು (ಮುಂಗಾಲು) ಎರಡೂ ಸಮನಾಗಿದ್ದು ಪ್ರತಿಯೊಂದು ಎರಡು ಮುಖ ಮಾನಗಳಷ್ಟಿರುತ್ತವೆ. ಹೀಗೆ ಸ್ವಾಮಿಯನ್ನು ರೂಪಿಸಬಹುದು. ಒಟ್ಟು ಪ್ರತಿಮೆಯ ಎತ್ತರ ಮುಖಮಾನದಲ್ಲಿ ಹೀಗಿರುತ್ತದೆ

ಉಷ್ಣೀಶ (೧ / ೩) + ಮುಖ (೧) + ಕಂಠ (೧ / ೩) + ಹೃದಯ (೧) + ನಾಭಿ (೧) + ಮೇಢ್ರ (೧) + ತೊಡೆ (೨) + ಮೊಣಕಾಲು (೧ / ೩) + ಮುಂಗಾಲು (೨) + ಪಾದ (೧ / ೩) = ೯. ೧ / ೩ ಮುಖ ಮಾನಗಳು.

ಇದು ಉತ್ತಮ ನವತಾಲದ ಅಳತೆಗಳು. ಮುಖವು ೧೨ ಅಂಗುಳ ಇರುತ್ತದೆ ಮತ್ತು ಅದನ್ನು ಒಂದು ತಾಲವಾಗಿ ಪರಿಗಣಿಸಿದಾಗ ಈ ಅಳತೆಗಳು ಸೂಕ್ತವಾಗಿರುತ್ತವೆ. ಮೂರ್ತಿಯ ಒಟ್ಟು ಎತ್ತರವು ೧೧೨ ಮುಖಾಮಾನಾಂಗುಳಗಳಾಗಿರುತ್ತವೆ.



ಚಿತ್ರ ೪೭ : ರಾಧಾಕೃಷ್ಣ

ಇಕ್ಕೆಲಗಳಲ್ಲಿ ದೇವಿಯರನ್ನು ಸ್ಥಾಪಿಸಬೇಕು. ಬಲಭಾಗದಲ್ಲಿ ಸ್ವರ್ಣವರ್ಣದ ಪ್ರಭೆಯಲ್ಲಿ ರುಕ್ಮಿಣಿದೇವಿಯು, ಎಡಭಾಗದಲ್ಲಿ ಶ್ಯಾಮಲವರ್ಣ ಛಾಯೆಯಲ್ಲಿ ಸತ್ಯಭಾಮೆಯನ್ನು ರೂಪಿಸಬೇಕು. ದೇವಿಯರು ಕಮಲಗಳನ್ನು ಹಿಡಿದು ಸಾತ್ವಿಕ ರೂಪಗಳಲ್ಲಿ ಶೋಭಾಯಮಾನವಾಗಿರಬೇಕು.

ಕೃಷ್ಣನ ಮೂರ್ತಿಯನ್ನು ಪಾದ್ಮಸಂಹಿತೆಯು ಕಪ್ಪುಶರೀರದ ಎರಡು ಭುಜಗಳನ್ನು ಹೊಂದಿರುವ, ಬಲಕೈಯಲ್ಲಿ ಚಕ್ರ ಎಡಗೈಯಲ್ಲಿ ಶಂಖಹಿಡಿದಿರುತ್ತಾನೆ (**ಶಂಖ ಚಕ್ರಧರೋ ಶ್ಯಾಮೋದ್ವಿಭುಜಃ ಕೃಷ್ಣ ಸಂಜ್ಞಕಃ** )ಎಂದು ವರ್ಣಿಸುತ್ತದೆ.ನಂತರ ಪಾದ್ಮಸಂಹಿತೆಯು ಕ್ರಿಯಾಪಾದ (೧೮ : ೧ - ೩೭) ಕೃಷ್ಣನ ಮೂರ್ತಿಕಲ್ಪದ ಬಗ್ಗೆ ಬಹುವಿವರವಾಗಿ ಇಂತು ಹೇಳಿದೆ.

**ಯಾದವಸ್ಯಾಽಥ ಕೃಷ್ಣಸ್ಯ ನಿರ್ಮಾಣ ಮಧುನೋಚ್ಯತೇ**
**ಕಲ್ಯಾಣಲಕ್ಷಣಯುತಂ ತ್ರಿಭಂಗಂ ಸಿಂಹವಿಷ್ಟರೇ ||**
**ತಿಷ್ಠಂತಂ ರುಕ್ಮಿಣೀ ಸತ್ಯಭಾಮಾಭ್ಯಾಂ ಸಹಿತಂ ಪ್ರಭುಮ್**
**ಈಷತ್ಕುಂಚಿತ ವಾಮಾಂಘ್ರಿಂ ಸುಸ್ಥಿತೇತರ ಮದ್ಭುತಮ್ ||**
**ಮೇಘಶ್ಯಾಮಂ ವಿಶಾಲಾಕ್ಷಂ ಪೀತವಸ್ತ್ರಂ ಚತುರ್ಭುಜಮ್**
**ದೇವೀ ಸವ್ಯಭುಜನ್ಯಸ್ತವಾಮಹಸ್ತ ಸರೋರುಹಮ್ ||**
**ಅಧೋಮುಖಂ ತು ಹಸ್ತಾಗ್ರಂ ನಾಭಿ ಸೂತ್ರಂ ಸಮನ್ವಿತಮ್**
**ವಾಮೇತರಕರ ಸ್ಪೃಷ್ಟಕ್ರೀಡಾಯ (ಮು) ಷ್ಟಿ ಮನೋಹರಮ್ ||**
**ತತ್ಕರಂ ಕಟಿಸೂತ್ರಾಂತಮುದಸ್ತೇ ತು ಕರದ್ವಯಮ್**
**ಶಂಖ ಚಕ್ರ ಧರಂ ಕುರ್ಯಾದ್ ದ್ವಿಭುಜಂ ವಾ ಯಥೋದಿತಮ್ ||**

ಯಾದವರ ಅರಸ ಕೃಷ್ಣನ ಮೂರ್ತಿಯನ್ನು ನಿರ್ಮಿಸಬಹುದಾದ ಬಗೆಗಳನ್ನು ಇಲ್ಲಿ ವಿವರಿಸಲಾಗುತ್ತದೆ.

ಸರ್ವ ಶುಭಲಕ್ಷಣಗಳನ್ನು ಪಡೆದುಕೊಂಡಿರುವ ಸ್ವಾಮಿಯು ತ್ರಿಭಂಗಿಯಲ್ಲಿ ರುಕ್ಮಿಣಿ, ಸತ್ಯಭಾಮೆಯರೊಂದಿಗೆ ಇರುತ್ತಾನೆ. ಬಲಗಾಲನ್ನು ಬಲವಾಗಿ ಊರಿದ್ದು ಎಡಗಾಲನ್ನು ಸ್ವಲ್ಪವಾಗಿ ಬಗ್ಗಿಸಿರಬೇಕು. ಶ್ಯಾಮಲ ವರ್ಣದ ಈ ಸ್ವಾಮಿಯ ನೇತ್ರಗಳು ವಿಶಾಲವಾಗಿದ್ದು, ಹಳದಿಯ ವಸ್ತ್ರಗಳನ್ನು ಧರಿಸಿರುತ್ತಾನೆ. ನಾಲ್ಕು ತೋಳುಗಳನ್ನು ಪಡೆದಿರುವ ಈ ದೇವನು, ದೇವಿಯ ಬಲ ಭುಜದಮೇಲೆ ಎಡತೋಳನ್ನು ಇರಿಸಿರುತ್ತಾನೆ. ಕೆಳಮುಖವಾಗಿರುವ ಹಸ್ತವು ನಾಭಿಸೂತ್ರವನ್ನು ಮುಟ್ಟುವಂತಿರುತ್ತದೆ. ಮತ್ತು ಆ ಹಸ್ತದಲ್ಲಿ ತಾವರೆಯನ್ನು ಹಿಡಿದಿರುತ್ತಾನೆ. ಕಟಿಸೂತ್ರಕ್ಕೆ ಸಮನಾಗಿರುವ ಹಸ್ತದಲ್ಲಿ ತುರುಗಾಹಿಯ ಕೋಲನ್ನು (ದಂಡ) ಹಿಡಿದಿರುತ್ತಾನೆ. ಮೇಲಿನ ಎರಡುಹಸ್ತಗಳಲ್ಲಿ ಶಂಖ ಚಕ್ರಗಳನ್ನು ಹಿಡಿದಿರುತ್ತಾನೆ. ಈ ಸ್ವಾಮಿಯನ್ನು ಮೇಲಿನ ಕೈಗಳಲ್ಲದೆ ಕೇವಲ ಎರಡು ಭುಜಗಳಿರುವಂತೆಯೂ ರೂಪಿಸಬಹುದು.

**ಶ್ರೀವತ್ಸಾಂಕಂ ಪ್ರಸನ್ನಾಭಂ ವರೇಣ್ಯಂ ಮಕುಟೋಜ್ವಲಮ್**
**ಬದ್ಧಾಲಕಧರಂ ವಾಪಿ ಭಾಗೇ ದಿವ್ಯೇ ಪ್ರಕಲ್ಪಯೇತ್ ||**

**ರುಕ್ಮಿಣೀಂ ದಕ್ಷಿಣೇ ಪಾರ್ಶ್ವೇ ಸತ್ಯಭಾಮಾ ಮಥೋತ್ತರೇ**

**ವಿನತಾನಂದನಂ ವಾಪಿ ಭಾಗೇ ದೇವ್ಯೇ ಪ್ರಕಲ್ಪಯೇತ್ ॥**

**ಆಸೀನಂ ವಾ ಸುಖಂ ಸಾರ್ಧಂ ದೇವೀಭ್ಯಾಂ ಸಹ ವಿಷ್ಟರೇ**

**ವಾಮಹಸ್ತೇನ ವರದಂ ದಕ್ಷಿಣೇನಾಭಯಪ್ರದಮ್ ॥**

ಶ್ರೀವತ್ಸ, ಕೌಸ್ತುಭಾದಿಗಳಿಂದ ಅಲಂಕೃತನಾಗಿರುವ ಮೂರ್ತಿಯು ಉಜ್ವಲವಾದ ಮುಕುಟವನ್ನು ಧರಿಸಿದ್ದು ತುರುಗಾಹಿಯ ದಂಡವನ್ನು ಹಿಡಿದಿರುವಂತೆ ಎರಡು ಬಾಹುಗಳಿರುವ ಸ್ವಾಮಿಯನ್ನು ರೂಪಿಸಬಹುದು.

ಪೀಠದಮೇಲೆ ಪದ್ಮಾಸನ ಅಥವ ಸುಖಾಸನದಲ್ಲಿ ಕುಳಿತಿದ್ದು ಎಡಹಸ್ತದಲ್ಲಿ ವರದ ಮುದ್ರೆ ಬಲಹಸ್ತದಲ್ಲಿ ಅಭಯ ಮುದ್ರೆ ಧರಿಸಿರಬೇಕು. ಒಂದು ಪಾರ್ಶ್ವದಲ್ಲಿ ದೇವಿ ಇರಬೇಕು. ಅಥವ ಸ್ವಾಮಿಯ ಎರಡೂ ಪಾರ್ಶ್ವಗಳಲ್ಲಿ ದೇವಿಯರು ಇರಬಹುದು.

**ಯದ್ವಾ ಶಯೀತ ನೃಪವತ್ಪರ್ಯಂಕೇ ಶೋಭಿತೇ ಭೃಶಮ್**

**ಭೋಗೀಂದ್ರ ಶಯನೇ ವಾಪಿ ಮಹಾಪರ್ಯಂಕ ಮಂಡಿತೇ ॥**

**ಪೃಷ್ಠತೋ ಮೌಲಿ ಪಾರ್ಶ್ವೇ ತು ರುಕ್ಮಿಣೀಂ ಕಾರಯೇತ್ಸುಧೀಃ**

**ಸತ್ಯಭಾಮಾ ಭವೇತ್ಪಾದ ಸಂವಾಹನಸಮುದ್ಯತಾ ॥**

**ಸಂವಾಹ ಯಂತ್ಯಾ ವಾ ದೇವ್ಯಾ ಹಸ್ತಾಭ್ಯಾಂ ಪಾದ ಪಂಕಜಮ್**

ಶಯನಾಸದಲ್ಲಿ ಸ್ವಾಮಿಯನ್ನು ರೂಪಿಸಬೇಕಾಗಿದ್ದರೆ ಮಹಾರಾಜರು ಪರ್ಯಂಕದಲ್ಲಿ ಮಲಗಿರುವಂತೆ ರೂಪಿಸಬೇಕು. ಭೋಗಶಯನದಲ್ಲಿ ರೂಪಿಸಿದರೆ ಮಹಾಪರ್ಯಂಕದಲ್ಲಿ ಮಲಗಿರುವಂತೆ ರೂಪಿಸಬೇಕು. ಹಿಂಭಾಗದಲ್ಲಿ ಕಿರೀಟದ ಬಳಿ ರುಕ್ಮಿಣಿಯನ್ನೂ, ಪಾದಗಳ ಬಳಿ ಸತ್ಯಭಾಮೆಯನ್ನೂ ರೂಪಿಸಬೇಕು. ಸತ್ಯಭಾಮೆಯು ಸ್ವಾಮಿಯ ಪಾದಗಳನ್ನು ಹಿಡಿದು ಹಿಸುಕುತ್ತಾ ಸೇವೆಯನ್ನು ಸಲ್ಲಿಸುತ್ತಿರುವಂತೆ ಇರಬೇಕು. ಸ್ವಾಮಿ ಈ ರೂಪದಲ್ಲಿ ಎರಡು ಅಥವ ನಾಲ್ಕು ಹಸ್ತಗಳನ್ನು ಪಡೆದಿರಬಹುದು.


**ತಾರ್ಕ್ಷ್ಯಾರೂಢಂ ಚತುರ್ಬಾಹುಂ ಬಿಭ್ರಾಣಂ ಶರಕಾರ್ಮುಕಮ್ ॥**

**ಮುಖ್ಯಾಭ್ಯಾಮಪರಾಭ್ಯಾಂ ಚ ಶಂಖಂ ಚಕ್ರ ಚತುರ್ಮುಖಿ**


**ಆರೋಪ್ಯ ಸತ್ಯಭಾಮಾಂ ವಾ ವಾಮೋತ್ಸಂಗೇ ಚತುರ್ಭುಜಮ್ ॥**

**ಆರುಹ್ಯ ಯಾಂತಂ ಪಕ್ಷೀಂದ್ರ ದ್ವಿಭುಜಂ ವಾ ಯಥಾರುಚಿ**

ಗರುಡನ ಮೇಲೆ ಕುಳಿತಿರುವ ನಾಲ್ಕು ಬಾಹುಗಳ ಸ್ವಾಮಿಯು ಮುಂದಿನ ಹಸ್ತಗಳಲ್ಲಿ ಎಡದಲ್ಲಿ ಧನುಸ್ಸು, ಬಲದಲ್ಲಿ ಬಾಣವನ್ನು, ಹಿಂದಿನ ಹಸ್ತಗಳಲ್ಲಿ ಎಡದಲ್ಲಿ ಶಂಖವನ್ನು ಬಲದಲ್ಲಿ ಚಕ್ರವನ್ನು ಹಿಡಿದಿರಬೇಕು. ಎಡಪಾರ್ಶ್ವದಲ್ಲಿ ಸತ್ಯಭಾಮೆಯನ್ನು ಗರುಡನ ಮೇಲೆ ಕೂರಿಸಿಕೊಂಡಿರಬಹುದು. ಎರಡೇ ತೋಳುಗಳಿರುವಾಗಲೂ ಗರುಡನ ಮೇಲೆ ಕುಳಿತು ದೇವಿಯೊಂದಿಗೆ ಇರುವಂತೆ ರೂಪಿಸಬಹುದು.



ಚಿತ್ರ ೪೮ : ಪಾರ್ಥಸಾರಥಿ



ಚಿತ್ರ ೪೯ : ಶ್ರೀ ಕೃಷ್ಣ ದ್ವಿಭುಜ



ಚಿತ್ರ ೫೦ : ವೇಣುಗೋಪಾಲ

ಯದ್ವಾರ್ಜುನಸ್ಯ ಸಾರಥ್ಯಂ ಕುರ್ವಾಣಂ ಪರಿಕಲ್ಪಯೇತ್ ||
ರಥಸ್ಥಿತಂ ಚತುರ್ಬಾಹು ಪ್ರತೋದ ಪ್ರಗ್ರಹೌ ದಧತ್
ವಾಮಹಸ್ತೇನ ಮುಖ್ಯೇನ ದಕ್ಷಿಣೇನ ಕರೇಣ ತು ||
ಕಪಿಧ್ವಜಾಯ ಪ್ರಹ್ವಾಯ ಪರವಿದ್ಯಾಮುದೀರಯನ್
ಅಪರಾಭ್ಯಾಂ ಚ ಹಸ್ತಾಭ್ಯಾಂ ಶಂಖಚಕ್ರಧರಂ ಪ್ರಭುಮ್ ||
ಕಿರೀಟಿನಂ ವಿಶಾಲಾಕ್ಷಂ ಶ್ರೀವತ್ಸಾಂಕಿತ ವಕ್ಷಸಮ್
ದ್ವಿಭುಜಂ ಬದ್ಧ ಕೇಶಂ ವಾ ಕುರ್ಯಾತ್ಕಮಲ ಸಂಭವ ||
ಸಾರ್ಥಂ ಚ ಪ್ರಾಂಜಲಿಂ ಪ್ರಹ್ವಂ ಸೇಷುಂ ಸಷುಧಿಕಾರ್ಮುಕಮ್
ಕಿರೀಟಿನಂ ಶ್ಯಾಮವರ್ಣಂ ಕಲ್ಪಯೇತ್ಸ್ಯಂದನಸ್ಥಿತಮ್ ||
ವಿಶ್ವರೂಪಂ ತು ವಾ ಕುರ್ಯಾತ್ ಕೇಶವಂ ಕೇಶೀಸೂದನಮ್

ಅರ್ಜುನನ ಸಾರಥಿಯಾಗಿ ಕೃಷ್ಣನು ಮಹಾಭಾರತಯುದ್ಧದಲ್ಲಿ ಪಾಲ್ಗೊಂಡಿದ್ದ. ಅದನ್ನು ಚಿತ್ರಿಸಬಹುದು. ರಥವು ನಿಂತಿದ್ದು ಅದರಲ್ಲಿ ಚತುರ್ಭುಜಗಳುಳ್ಳ ದೇವನು ಇರುತ್ತಾನೆ. ಎಡ ಹಸ್ತದಲ್ಲಿ ಕುದುರೆಗಳ ಕಡಿವಾಣಗಳನ್ನು, ಬಲಹಸ್ತದಲ್ಲಿ ಉಪದೇಶಮುದ್ರೆಯನ್ನು ಇರಿಸಿಕೊಂಡಿದ್ದು, ಹಿಂದಿನ ಹಸ್ತಗಳಲ್ಲಿ ಶಂಖ ಚಕ್ರಗಳನ್ನು ಧರಿಸಿರುತ್ತಾನೆ. ರಥದ ಮೇಲೆ ಕಪಿಧ್ವಜವಿದ್ದು, ಕೃಷ್ಣನು ಶ್ರೀವತ್ಸದಿಂದ ಅಲಂಕೃತನಾಗಿರುತ್ತಾನೆ. ವಿಶಾಲವಾದ ನೇತ್ರಗಳು ಮತ್ತು ವಕ್ಷಸ್ಥಳವನ್ನು ಪಡೆದಿರುತ್ತಾನೆ. ಅರ್ಜುನನು ಬಿಲ್ಲು- ಬಾಣಗಳನ್ನು ಕೆಳಗಿರಿಸಿ ಕೈಜೋಡಿಸಿಕೊಂಡು ಕುಳಿತಿರುತ್ತಾನೆ.

ಕೃಷ್ಣನಿಗೆ ಎರಡು ಬಾಹುಗಳಿರುವಂತೆಯೂ ರೂಪಿಸಬಹುದು. ಅಥವ ಶ್ರೀ ಕೃಷ್ಣನ ವಿಶ್ವರೂಪದರ್ಶನವನ್ನೂ ರೂಪಿಸಬಹುದು.

ಬೃಂದಾವನಗತಂ ಕೃಷ್ಣಂ ಗವಾಮನುಚರಂ ಪ್ರಭುಮ್ ||
ಈಷತ್ಕುಂಚಿತ ವಾಮಾಂಘ್ರಿಮಿತರೇಣ ಋಜು ಸ್ಥಿತಮ್
ಗಚ್ಛಂತಮಪಿ ಗಾಯಂತಂ ವಂಶೇನ ಪರಮಾದ್ಭುತಮ್ ||
ಈಕ್ಷಮಾಣಂ ಮಾನಕ್ ಸವ್ಯೇ ಪಾರ್ಶ್ವೇ ಪುಷ್ಪವತಂಸಿತಮ್
ವಿಚಿತ್ರ ಪುಷ್ಪಗ್ರಥಿತಂ ನವಮಾಲಾ ವಿಭೂಷಿತಮ್ ||
ಬರ್ಹಿ ಬರ್ಹೈಶ್ಚ ರುಚಿರೈರ್ವತ್ಸದಾಮ ವಿಭೂಷಣೈಃ
ಭೂಷಿತಂ ದೇವಗಂಧರ್ವಸಿದ್ಧ ಚಾರಣ ಸೇವಿತಮ್ ||
ಕದಂಬಮೂಲೇ ವಾ ಮಧ್ಯಂದಿನೇ ಕೃತ್ವಾ ಪ್ರತಿಷ್ಠಿತಮ್
ವ್ಯತ್ಯಾಸೇನ ಸ್ಥಿತಂ ಪದ್ಭ್ಯಾಂ ವಾಮೇನ ಋಜುನಾಸ್ಥಿತಮ್ ||
ದಕ್ಷಿಣಪ್ರಪದೇನಾಸ್ಯ ಪೃಷ್ಠಭಾಗಸ್ಪೃಶಾ ಸ್ಥಿತಮ್
ಗೋಭಿಃ ಸವತ್ಸೈರ್ಹರಿಣೈಃ ಪಕ್ಷಿಭಿಶ್ಚ ಸಮಾವೃತಮ್ ||
ಋಷಿಭಿರ್ದೇವಗಂಧರ್ವೈಃ ಕಿನ್ನರಾದ್ಯೈಶ್ಚ ಸೇವಿತಮ್

ಬೃಂದಾವನದಲ್ಲಿ ಗಾನಲೋಲನಾಗಿರುವ ಕೃಷ್ಣನನ್ನು ರೂಪಿಸಬಹುದು. ಎಡಗಾಲು ಸ್ವಲ್ಪವಾಗಿ ಬಗ್ಗಿರಬೇಕು. ಬಲಗಾಲು ಭದ್ರವಾಗಿ ಊರಿರಬೇಕು. ಈ ಬಲಗಾಲಿನ ಪಾದದ

ಬಳಿ ಎಡ ಪಾದದ ಕಿರುಬೆರಳು ಇರುವಂತೆ ಪಾದವನ್ನು ನಿಲುವಾಗಿರಿಸಿಕೊಂಡು ಅಂಗುಷ್ಠವನ್ನು ಊರಿರಬೇಕು. ಕೊಳಲಿನಿಂದ ಅದ್ಭುತವಾದ ಮುರಳೀನಾದ ಹೊಮ್ಮುತ್ತಿರುವಂತಿರಬೇಕು. ವನಮಾಲೆಯಿಂದ ಅಲಂಕೃತನಾಗಿರುವ ಸ್ವಾಮಿಯ ಸುತ್ತಲೂ ಇರುವ ಗಿಡಮರಗಳೂ ಈ ಗಾಯನಕ್ಕೆ ಪರವಶವಾಗಿ ಬಹು ವಿಧ ಹೂಗಳನ್ನು ಅರಳಿಸಿರುವಂತೆ ಭಾಸವಾಗಬೇಕು. ಬಗೆಬಗೆಯ ಮಣಿಗಳಿಂದ ಬಹು ಸುಂದರವಾಗಿ ತಯಾರಿಸಿರುವ ಹಲವು ಮಾಲೆಗಳು, ಆಭರಣಗಳು ಸ್ವಾಮಿಯ ಕೊರಳನ್ನು, ಮುಂಗೈ, ತೋಳು, ಭುಜ, ಸೊಂಟ, ಪಾದಗಳನ್ನು ಅಲಂಕರಿಸಿರಬೇಕು. ನವಿಲುಗಳು ನರ್ತಿಸುತ್ತಿರಬೇಕು. ಸ್ವಾಮಿಯ ಸೇವೆಗಾಗಿ ದೇವ, ಗಂಧರ್ವ, ಸಿದ್ಧ, ಯಕ್ಷ , ಚಾರಣರು ಸನ್ನದ್ಧರಾಗಿರಬೇಕು. ಕದಂಬಮಾಲೆಗಳನ್ನು ಸ್ವಾಮಿಗೆ ಅಲಂಕರಿಸಬೇಕು.

ಸ್ವಾಮಿಯ ಹಿಂಭಾಗವನ್ನು ಸ್ಪರ್ಶಿಸುತ್ತಿರುವಂತೆ ಗೋವು ಇದ್ದು ಅದರ ಕರು ಅದರೊಂದಿಗೇ ಇರಬೇಕು. ಕೃಷ್ಣನು ತನ್ನ ಕಾಲನ್ನು ಬದಲಿಸಿರುತ್ತಾನೆ. ಎಡಗಾಲನ್ನು ಭದ್ರವಾಗಿ ಊರಿದ್ದು ಬಲಪಾದವು ಎಡಪಾದದ ಮುಂದೆ ಅಂಗುಷ್ಠದ ಮೇಲೆ ನಿಲುವಾಗಿರಿಸಿಕೊಂಡಿರುತ್ತಾನೆ. ನಾನಾ ವಿಧ ಪಕ್ಷಿಗಳಿಂದ ಆವೃತ್ತವಾಗಿರಬೇಕು. ಋಷಿ, ದೇವ, ಗಂಧರ್ವ, ಕಿನ್ನರರು ಸ್ವಾಮಿಯ ಸೇವೆಗಾಗಿ ಸನ್ನದ್ಧರಾಗಿರುತ್ತಾರೆ.

**ಫಣೇಂದ್ರಂ ಕಾಲಿಯಂ ಯದ್ವಾ ಫಣಾ ಪಂಚಕ ಸಂಯುತಮ್ ॥**
**ಪುರತಃ ಪುರುಷಾಕಾರಂ ನಾಗಾಕಾರಂ ಚ ಪೃಷ್ಠತಃ**
**ಕೃತಾಂಜಲಿಂ ದುರಾಧರ್ಷಂ ಆಕ್ರಮ್ಯ ಶಿರಸಿ ಸ್ಥಿತಮ್ ॥**
**ವಾಮಪಾದೇನ ಗೃಹ್ಣಂತಂ ಪುಚ್ಛಂ ವಾಮೇನ ಪಾಣಿನಾ**
**ದಕ್ಷಿಣಾಭಯದಂ ಹಸ್ತಂ ನೃತ್ಯಂತಂ ಕಾರಯೇದ್ ಬುಧಃ ॥**
**ಅಥವಾ ಕೃತತಾಟಂಕಂ ಕುರ್ವಾಣಂ ನಾಟ್ಯಮದ್ಭುತಮ್**
**ಮಹಿಷೀಂ ನಾಗರಾಜಸ್ಯ ಭಿಕ್ಷಮಾಣಾಂ ಸ್ವಕಂ ಪತಿಮ್ ॥**
**ಕೃತಾಂಜಲಿ ಪುಟಾಂ ದೇವೀಂ ತತ್ಪಾರ್ಶ್ವೇ ವೇಷಿತಾಂ ಸ್ಥಿತಾಮ್**

ಮಡುವಿನಲ್ಲಿ ಕಾಳಿಂಗ ಸರ್ಪವು ತನ್ನ ಐದು ಹೆಡೆಗಳನ್ನು ಎತ್ತಿಕೊಂಡು ಪೂತ್ಕರಿಸುತ್ತಿದ್ದರೆ ಅದರ ಮೇಲೆ ಎಡಗಾಲನ್ನು ಇರಿಸಿಕೊಂಡು, ಸರ್ಪದ ಬಾಲವನ್ನು ಎಡಹಸ್ತದಲ್ಲಿರಿಸಿಕೊಂಡು, ಬಲಹಸ್ತದಲ್ಲಿ ಅಭಯ ಮುದ್ರೆಯನ್ನು ಧರಿಸಿದ್ದು ಕೃಷ್ಣನು ಬಲಗಾಲನ್ನು ಮೇಲಕ್ಕೆತ್ತಿ ನೃತ್ಯಮಾಡುತ್ತಿರುವಂತೆ ಇರಬೇಕು. ಸೊಂಟದಿಂದ ಮೇಲೆ ಮಾನವಾಕಾರವಿದ್ದು ಕೆಳಗೆ ನಾಗಾಕಾರದಲ್ಲಿ ನಾಗರಾಜನ ರಾಣಿಯರು ಕೈಮುಗಿದು ನಿಂತಿರುವಂತೆ ರೂಪಿಸಬಹುದು. ಅಥವ ಕೃಷ್ಣನು ಕಾಳಿಂಗ ಫಣೆಯಮೇಲೆ ಅದ್ಭುತವಾದ ನಾಟ್ಯವನ್ನು ಮಾಡುತ್ತಿರುವಂತೆ ರೂಪಿಸಬಹುದು.

**ರಾಸಮಂಡಲ ಮಧ್ಯಸ್ಥಂ ಯದ್ವಾ ಕುರ್ಯಾಜ್ಜಗದ್ಗುರುಮ್ ॥**
**ದೇವ್ಯೋ ಗೃಹೀತ್ವಾ ಹಸ್ತಾಭ್ಯಾಂ ಕರಾಗ್ರಂ ಮಧ್ಯತಃ ಸ್ಥಿತಮ್**
**ನೃತ್ಯಂ ಬಹುಸಾಹಸ್ರ ಗೋಪಕನ್ಯಾಭಿ ರಾವೃತಮ್ ॥**

ಸಾವಿರಾರು ಮಂದಿ ಗೋಪಿಯರೊಂದಿಗೆ ಕೃಷ್ಣ ರಾಸಕ್ರೀಡೆಯನ್ನು ನಡೆಸುತ್ತಿರುವಂತೆ ಚಿತ್ರಿಸಬಹುದು. ಗೋಪಿಕಾಸ್ತ್ರೀಯರು ಸ್ವಾಮಿಯ ಹಸ್ತಗಳನ್ನು ಹಿಡಿದು ಅಥವಾ ಮಧ್ಯದಲ್ಲಿ ನಿಲ್ಲಿಸಿಕೊಂಡು ಬಗೆಬಗೆಯ ನೃತ್ಯಗಳನ್ನು, ಆಟಗಳನ್ನು ಆಡುವುದು ರಾಸಲೀಲೆ. ಇದನ್ನು ಬಹು ಪ್ರಿಯವಾಗುವಂತೆ ಮತ್ತು ಆಕರ್ಷಕವಾಗಿರುವಂತೆ ರೂಪಿಸಬೇಕು.

ನವನೀತಾಯ ನೃತ್ಯಂತಂ ಸವ್ಯೇನ ಋಜುನಾ ಸ್ಥಿತಮ್
ಉದ್ಧೃತ್ಯ ದಕ್ಷಿಣಂ ಪಾದಂ ವಿಪರೀತಮಥಾಪಿ ವಾ ॥
ಕಾರಯೇದ್ವಾಮಹಸ್ತಂ ತು ಚಿಬುಕಾಂತ ಸಮುಚ್ಛ್ರಯಮ್
ಅಭೀತಿದಂ ದಕ್ಷಿಣೇನ ವರದಂ ವಾ ಯಥಾ ರುಚಿ ॥
ಮಧ್ಯತಃ ಸ್ತನ ನಾಭ್ಯೋಶ್ಚ ವರದೋ ಹಸ್ತ ಇಷ್ಯತೇ
ಯಾದವೇಂದ್ರೇಣ ಕೃಷ್ಣೇನ ಕ್ರೀಡಯಾ ಯದ್ಯಥಾಶ್ರಿತಮ್ ॥
ಕಲ್ಪಯಿತ್ವಾ ವಪುಸ್ತತ್ತದಾರಾಧ್ಯಂ ವಿಭವಾರ್ಥಿಭಿಃ

ಬಹುಪ್ರಿಯವಾದ ಕೃಷ್ಣನ ನೃತ್ಯಭಂಗಿ ಎಂದರೆ ನವನೀತ ನೃತ್ಯ. ಎಡಗಾಲು ಭದ್ರವಾಗಿ ಊರಿದ್ದು ಮೊಣಕಾಲಿನ ಬಳಿ ಬಗ್ಗಿರುತ್ತದೆ. ಬಲಗಾಲನ್ನು ಮೇಲಕ್ಕೆತ್ತಿರುತ್ತಾನೆ. ಎಡ ಹಸ್ತವನ್ನು ಹನ್ವಂತದ ತನಕ ಎತ್ತಿ, ಚಾಚಿ ಬಲಹಸ್ತವು ಸ್ತನಮಧ್ಯಗಳ ಬಳಿಯಲ್ಲಿರಬೇಕು. ಈ ಹಸ್ತದಲ್ಲಿ ಬೆಣ್ಣೆಯ ಮುದ್ದೆ ಇರಬಹುದು. ಅಥವ ಅಭಯಮುದ್ರೆ ಇರಬಹುದು. ಮೂರ್ತಿ ಸರ್ವಾಲಂಕಾರ ಭೂಷಿತವಾಗಿ ವಸ್ತ್ರವನ್ನು ಧರಿಸಿರಬಹುದು ಅಥವ ನಗ್ನವಾಗರಬಹುದು. ಕೈಯ್ಯಲ್ಲಿ ಬೆಣ್ಣೆಯ ಮುದ್ದೆ ಇಲ್ಲದೆ ಇದ್ದರೂ ಈ ಮೂರ್ತಿಯನ್ನು ನವನೀತ ನೃತ್ತ ಮೂರ್ತಿಎಂದೇ ಕರೆಯಬೇಕು.

ಏಕಬೇರವಿಧಾನಂ ಚೇತ್ ಸ್ಥಾಪಯೇದ್ ಬ್ರಹ್ಮಣಃ ಪದೇ ॥
ಕರ್ಮಾರ್ಚಾದೀನಿ ಬಿಂಬಾನಿ ಕಲ್ಪಯೇದ್ರಘುವೀರವತ್
ರುಕ್ಮಿಣೀ ಸತ್ಯಭಾಮಾಭ್ಯಾಂ ಸಹ ಪೀಠೇ ಪ್ರಕಲ್ಪಯೇತ್ ॥
ರುಕ್ಮಿಣೀ ಕನಕ ಪ್ರಖ್ಯಾ ಸತ್ಯಾಽನ್ಯಾ ಶ್ಯಾಮಲಾ ಭವೇತ್
ಕರಂಡಿಕಾ ಮುಕುಟಾನೀ ಯದ್ವಾ ಧಮ್ಮಿಲ್ಲ ಧಾರಿಣೀ ॥
ಸತ್ಯಭಾಮಾ ಕರೇ ಪದ್ಮಂ ಧಾರಯೇದ್ದಕ್ಷಿಣೇ ಪರಮ್
ಊರೌ ವಿಶ್ರಾಮಯೇದನ್ಯಂ ಧಾರಯೇದನ್ಯಥಾಽ ಥವಾ ॥
ಯಥೋಕ್ತ ತರವಿನ್ಯಾಸಕಲ್ಪನಂ ಕಮಲಾಸನ
ಬಾಲ್ಯೇಽ ಪಿ ಯಾ ಯಾ ದೇವೀ ಸ್ಯಾತ್ಸಾ ಸಾ ಕಲ್ಪ್ಯಾ ಯಥಾ ವಿಧಿ ॥

ಸ್ವಾಮಿಯನ್ನು ಏಕಬೇರವಾಗಿ ಪ್ರತಿಷ್ಠಾಪಿಸಿದರೆ ಬ್ರಹ್ಮಪದದಲ್ಲಿ ಸ್ಥಾಪಿಸಬೇಕು. ಕರ್ಮಾರ್ಚ ಬಿಂಬವಾಗಿದ್ದರೆ ಶ್ರೀರಾಮನ ವಿಗ್ರಹಕ್ಕೆ ಅನುಸರಿಸುವ ಕ್ರಮವನ್ನು ಅನುಸರಿಸಬೇಕು. ರುಕ್ಮಿಣೀ ಸತ್ಯಭಾಮೆಯರನ್ನು ಅದೇ ಪೀಠದ ಮೇಲೆ ಇರುವಂತೆ ರೂಪಿಸಬೇಕು. ರುಕ್ಮಿಣಿಯು ಸ್ವರ್ಣ ವರ್ಣೆ. ಸತ್ಯಭಾಮೆ ಶ್ಯಾಮಲ ವರ್ಣೆ. ಕರಂಡಮುಕುಟವನ್ನು ಧರಿಸಿರಬಹುದು ಅಥವ ಇಬ್ಬರೂ ಕೇಶಾಲಂಕಾರಗಳನ್ನು ಹೊಂದಿರಬಹುದು. ಸತ್ಯಭಾಮೆ ಬಲಹಸ್ತದಲ್ಲಿ ಪದ್ಮವನ್ನು, ರುಕ್ಮಿಣಿ ಎಡಹಸ್ತದಲ್ಲಿ ಪದ್ಮವನ್ನೂ ಧರಿಸಿರಬೇಕು.

ಸ್ವಾಮಿಯನ್ನು ದೇವೀ ಸಮೇತವಾಗಿಯೋ ಅಥವ ಬಾಲ್ಯರೂಪದಲ್ಲಿರು ವಂತೆಯೋ ರೂಪಿಸಿ ಪ್ರತಿಷ್ಠಿಸಬಹುದು.


ಶಾಸ್ತ್ರದಲ್ಲಿ ವಿವರಿಸಿರುವ ಕೃಷ್ಣನಮೂರ್ತಿಗಳ ಅನೇಕ ಬಗೆಗಳಲ್ಲಿ ಇವು ಕೆಲವು ಮಾತ್ರವೇ

ವೈಖಾನಸ ಆಗಮದಲ್ಲಿ ಶ್ರೀಕೃಷ್ಣನ ಬಗ್ಗೆ ಇರುವ ವಿವರಣೆ ಇಂತಿದೆ :

**ಕೃಷ್ಣಸ್ಯ ಲಕ್ಷಣಂ ವಕ್ಷ್ಯೇ। ಮಧ್ಯಮಂ ದಶತಾಲಮಿತಂ ಸವಿಂಶತಿಶತಾಂಗುಲಂ ದ್ವಿಭುಜಂ ಶ್ಯಾಮಾಭಂ ರಕ್ತವಸ್ತ್ರಧರಂ ಸರ್ವಾಭರಣಭೂಷಿತಂ ಕಿರೀಟನಮುದ್ಬದ್ಧ ಕುಂತಲಂ ವಾ ದಕ್ಷಿಣೇನ ಹಸ್ತೇನ ಕ್ರೀಡಾಯಷ್ಟಿಧರಂ ವಾಮೋದ್ಯತಕರ ಕೂರ್ಪರ ಹಿಕ್ಕಾ ಸೂತ್ರಾ ದಧಸ್ತಾದಥೋರ್ಧ್ವಕರಮನ್ಯತ್ಸರ್ವಂ ರಾಘವಸ್ಯೋಕ್ತಮಾರ್ಗೇಣ। ದಕ್ಷಿಣೇ ರುಕ್ಮಿಣೀ ದೇವೀಂ ಹೇಮಾಭಾಂ ಧಮ್ಮಿಲ್ಲ ಕುಂತಲಯುತಾಮುದ್ಬದ್ಧ ಕುಂತಲಾಂ ವಾ ಪ್ರಸಾರಿತ ದಕ್ಷಿಣ ಹಸ್ತಾಂ ಸಪದ್ಮವಾಮಹಸ್ತಾಂ ತಥಾ ವಾಮಪಾರ್ಶ್ವೇ ಸತ್ಯಭಾಮಾಂ ಶ್ಯಾಮಾಭಾಂ ಶಿರೋರುಹ ಬಂಧಧಮ್ಮಿಲ್ಲಯು ತಾಮುದ್ಬದ್ಧ ಕುಂತಲಯುತಾಂ ವಾ ಸೋತ್ಪಲ ದಕ್ಷಿಣಹಸ್ತಾಂ ಪ್ರಸಾರಿತವಾಮ ಹಸ್ತಾಂ ಸರ್ವಾಭರಣ ಸಂಯುಕ್ತಾಂ ಕಾರಯೇತ್। ದೇವೀಭ್ಯಾಂ ಕರಂಡಿಕಾಮಕುಟಂ ವೇತಿ ಕೇಚಿತ್ ದೇವಸ್ಯ ವಾಮಪಾರ್ಶ್ವೇ ಗರುಡಂ ಪ್ರಾಂಜಲೀಕೃತ್ಯ ಸುಸ್ಥಿತಂ ಕಾರಯೇತ್। ದೇವಸ್ಯ ದಕ್ಷಿಣಹಸ್ತಂ ಲೀಲಾಯಷ್ಟಿಯುತಂ ವಾಮಂ ಸಶಂಖಂ ವಾ ಕಾರಯೇತ್। ತದ್ರೂಪಂ ಕೌತುಕಂ ವಿಷ್ಣುಂ ಚತುರ್ಭುಜಂ ವಾ ಕಾರಯೇತ್ ।**

ಕೃಷ್ಣನ ವಿಗ್ರಹವನ್ನು ಮಧ್ಯಮ ದಶತಾಲ (೧೨೦ ಅಂಗುಳ) ಮಾನದಲ್ಲಿ ನಿರ್ಮಿಸಬೇಕೆಂದು ಹೇಳಲಾಗಿದೆ. ಶ್ಯಾಮಲ ಅಥವ ನೀಲವರ್ಣದ ಈ ಮೂರ್ತಿ ಕೆಂಪು ವಸ್ತ್ರಗಳನ್ನು ಧರಿಸಿರಬೇಕು. ಬಗೆಬಗೆಯ ಆಭರಣಗಳಿಂದ ಅಲಂಕೃತನಾಗಿರಬೇಕು. ಕಿರೀಟವನ್ನು ಧರಿಸಿರುವಂತೆ ಅಥವ ಕೇಶವನ್ನು ಎತ್ತಿ ಮೇಲಕ್ಕೆ ಕಟ್ಟಿರುವಂತೆ ರೂಪಿಸಬೇಕು. ಬಲ ಹಸ್ತದಲ್ಲಿ ವಿಶೇಷವಾಗಿ ವಕ್ರವಾಗಿರುವ ಗೋಪಾಲಕನ ಒಂದು ದಂಡವನ್ನು ಹಿಡಿದಿರುವಂತೆ ಮಾಡಬೇಕು. ಎಡಹಸ್ತವು ಮೊಣಕೈಎತ್ತರಕ್ಕೆ ಎತ್ತಿರಬೇಕು. ಈ ತೋಳಿನ ಹಸ್ತವು ಕೆಳಮುಖವಾಗಿರಬಹುದು ಅಥವ ಶಂಖವನ್ನು ಹಿಡಿದಿರಬಹುದು. ಉಳಿದ ಎಲ್ಲಾ ವಿಷಯಗಳಲ್ಲೂ ಶ್ರೀರಾಮನ ವಿವರಣೆಯನ್ನೇ ಹೋಲುತ್ತದೆ. ಕೃಷ್ಣನ ಬಲಕ್ಕೆ ರುಕ್ಮಿಣಿ ಇರಬೇಕು. ಆಕೆಯ ಮುಡಿ ಅಂದವಾಗಿ ಅಲಂಕೃತವಾಗಿದ್ದು ಹೂಗಳನ್ನು ಮುಡಿದಿರಬೇಕು. ಎಡಹಸ್ತದಲ್ಲಿ ಕಮಲವನ್ನು ಹಿಡದಿದ್ದು ಬಲಹಸ್ತವನ್ನು ನೀಳವಾಗಿ ತೂಗಿಬಿಟ್ಟಿರಬೇಕು. ಎಡಕ್ಕೆ ಸತ್ಯಭಾಮೆಯು ರುಕ್ಮಿಣಿಯಂತೆಯೇ ಅಲಂಕೃತಳಾಗಿರಬೇಕು. ಎಡಪಾರ್ಶ್ವದಲ್ಲಿಯೇ ಗರುಡನು ಕೈಜೋಡಿಸಿಕೊಂಡು ನಿಂತಿರಬೇಕು.

ವಿಷ್ಣುಧರ್ಮೋತ್ತರವು ಕೃಷ್ಣನು ಒಂದು ಹಸ್ತದಲ್ಲಿ ಚಕ್ರವನ್ನು ಧರಿಸಿರಬೇಕು ಎಂದು ಹೇಳಿದೆ. ರುಕ್ಮಿಣಿಯು ಕಮಲಕ್ಕೆ ಬದಲಾಗಿ ನೀಲೋತ್ಪಲವನ್ನು ಹಿಡಿದಿರಬೇಕು **(ಕೃಷ್ಣಃ ಶ್ಚಕ್ರಧರಃ ಕಾರ್ಯೋ ನೀಲೋತ್ಪಲದಲಚ್ಛವಿಃ । ಇಂದೀವರಧರಾ ಕಾರ್ಯಾ ತಸ್ಯ ಸಾಕ್ಷಾಚ್ಚ ರುಕ್ಮಿಣೀ)** ಎಂದು ಹೇಳಿದೆ.



ಚಿತ್ರ ೫೧ : ಕಾಳಿಂಗ ಮರ್ದನ



ಚಿತ್ರ ೫೨ : ನವನೀತ ನೃತ್ಯ

ವೇಣುಗೋಪಾಲ ಮೂರ್ತಿಯ ಬಗ್ಗೆ ವಿಷ್ಣುಧರ್ಮೋತ್ತರ ಪುರಾಣದಲ್ಲಿ ಘನಶ್ಯಾಮನು ಎರಡು ಭುಜಗಳನ್ನು ಪಡೆದಿರುತ್ತಾನೆ. ಈತನು ನಿಂತಿದ್ದು ವೇಣುಗಾನಲೋಲಾ ನಿರತನಾಗಿರುತ್ತಾನೆ (**ಗೋಪಾಲ ಪ್ರತಿಮಾಂ ಕುರ್ಯಾದ್ವೇಣುವಾದನಾತತ್ಪರಾಮ್ । ಬರ್ಹಾಪೀಡಾಂ ಘನಶ್ಯಾಮಾಂ ದ್ವಿಭುಜಾ ಮೂರ್ಧ್ವಸಂಸ್ಥಿತಾಮ್ ॥**) ಎಂದು ಹೇಳಲಾಗಿದೆ. ವೈಖಾನಸ ಆಗಮದ ಪ್ರಕಾರ ಗೋಪೀ ಗೋಪರಿಂದ ಮತ್ತು ಗೋಪಕನ್ಯೆಯರಿಂದ ಸುತ್ತುವರಿಯಲ್ಪಟ್ಟಿರುವ ಸ್ವಾಮಿಯು ಬಲಗಾಲನ್ನು ಸ್ಥಿರವಾದ ಎಡಗಾಲಿನ ಮುಂದೆ ಬಲಪಾದದ ಹೆಬ್ಬೆರಳು ಊರಿ ನಿಂತಿರುವ ಪಾದದೊಂದಿಗೆ ಎರಡು ಕೈಗಳಿಂದಲೂ ವೇಣುವನ್ನು ಹಿಡಿದು ಗಾನಲೋಲನಾಗಿದ್ದು ಆತನ ದೇಹವು ತ್ರಿಭಂಗಿಯಲ್ಲಿರುತ್ತದೆ. ಗೋಪಾಲಕರು ಗಾಯಕರಾಗಿರುತ್ತಾರೆ (**ಗೋಪೀಗೋಪಗೋಕನ್ಯಾಭಿಃ ಪರಿವೃತ್ತಂ ದಕ್ಷಿಣಂ ಸತ್ಯಯೋದ್ಯತಪಾದಂ ವಾಮಂ ಸುಸ್ಥಿತಮಾಹೃತ್ಯ ದ್ವಿಹಸ್ತಾಭ್ಯಾಮಂಗಲೀಷು ವೇಣುವಿವರಾನ್ಸಂಯೋಜ್ಯ ತ್ರಿಭಂಗ ಭಂಗಗಾನರಸಸಮನ್ವಿತ ಗೋಪಾಲಂ ಗಾಯಕಮ್ ವೈಖಾನಸಾಗಮ**).

ಬಾಲಕೃಷ್ಣನ ನವನೀತ ನೃತ್ಯವು ಬಹು ಜನಪ್ರಿಯವಾದುದು. ಬೆಣ್ಣೆಯ ಮುದ್ದೆ ಸಿಕ್ಕ ನಂತರ ಕೃಷ್ಣ ಸಂತೋಷದಿಂದ ನರ್ತಿಸಿದ ಎಂಬುದೇ ಇದರ ವಸ್ತು. ಈ ಬಗ್ಗೆ ವೈಖಾನಸ ಆಗಮದಲ್ಲಿ ಈ ರೀತಿಯ ವಿವರಣೆ ದೊರೆಯುತ್ತದೆ :

**ನವನೀತನಟಸ್ಯ ವಾಮಪಾದಮಾಕುಂಚ್ಯ ಕಿಂಚಿತ್ ಸಂ ಸ್ಥಿತಂ ದಕ್ಷಿಣಮುತ್ತಾನ ಕುಂಚಿತಂ ದಕ್ಷಿಣ ಹಸ್ತಮ ಭಯಂ ನವನೀತಯುತಂ ವಾ ವಾಮಂ ಪ್ರಸಾರ್ಯೋತ್ತಾನಂ ಸರ್ವಾಭರಣಭೂಷಿತಮಂಬರಹೀನ ಮಂಬರಧರಾಯುತಂ ನವನೀತ ನೃತ್ತ ರೂಪಂ ಕಾರಯೇತ್ ।**

ಎಡಪಾದವನ್ನು ಮೊಣಕಾಲಿನಿಂದ ಕೆಳಕ್ಕೆ ಸ್ವಲ್ಪವಾಗಿ ಓರೆಯಾಗಿರಿಸಿಕೆಂಡು ಪಾದವನ್ನು ಬಲವಾಗಿ ಊರಿ ಬಲಗಾಲನ್ನು ಮೇಲಕ್ಕೆ ಎತ್ತಿ ನೃತ್ಯಮಾಡುತ್ತಿರುವಂತೆ ಅದನ್ನು ಮಡಚಿ, ಬಲಹಸ್ತದಲ್ಲಿ ಅಭಯಮುದ್ರೆಯನ್ನು ಅಥವ ಬೆಣ್ಣೆಮುದ್ದೆಯನ್ನು ಇರಿಸಿಕೊಂಡು ಎಡಹಸ್ತವನ್ನು ದೂರಕ್ಕೆ ನೇರವಾಗಿ ಚಾಚಿದ್ದು ಸರ್ವಾಭರಣಗಳಿಂದ ಅಲಂಕೃತನಾಗಿರುವ ಬಾಲಕೃಷ್ಣನು ವಸ್ತ್ರಗಳಿಂದ ಅಲಂಕೃತನಾಗಿರುವಂತೆ ಅಥವ ಬೆತ್ತಲೆಯಾಗಿರುವಂತೆ ರೂಪಿಸಿದಾಗ ನವನೀತನೃತ್ತ ಮೂರ್ತಿ ಎಂದು ಕರೆಯಲಾಗುತ್ತದೆ. ಕೈಯ್ಯಲ್ಲಿ ಬೆಣ್ಣೆಯ ಮುದ್ದೆ ಇಲ್ಲದಿದ್ದರೂ ಈ ಮೂರ್ತಿ ನವನೀತನೃತ್ತಮೂರ್ತಿಯೇ. ಆಗ ಅದು ಬೆಣ್ಣೆಸಿಗುತ್ತದೆ ಎಂಬ ನಿರೀಕ್ಷೆಯ ಸಂತೋಷದ ಅಭಿವ್ಯಕ್ತಿ ನೃತ್ಯವಾಗಿರುತ್ತದೆ.

ನೃತ್ತರೂಪಗಳಲ್ಲಿ ಕಾಳಿಂಗ ಮರ್ದನವೂ ಒಂದು. ಕಾಳಿಂಗಸರ್ಪದ ಹೆಡೆಯ ಮೇಲೆ ನೃತ್ಯವನ್ನು ಮಾಡುತ್ತಾ ಇರುವ ಬಾಲಕೃಷ್ಣನು ಎಡ ಹಸ್ತದಲ್ಲಿ ಕಾಳಿಂಗನ ಬಾಲವನ್ನು ಹಿಡಿದಿದ್ದು, ಬಲಹಸ್ತದಲ್ಲಿ ಪತಾಕ ಮುದ್ರೆಯನ್ನು ಧರಿಸಿರುತ್ತಾನೆ (**ಏವಮೇವ ಕಾಲಿಯಾಹಿ ಫಣೋಪರಿ ಸ್ಥಿತಂ ದಕ್ಷಿಣಹಸ್ತಂ ಸಪತಾಕಂ ವಾಮಕರೇಣಾಹಿ ಪುಚ್ಛಂ ಸಂಗೃಹ್ಯ ನೃತ್ಯಂತಂ। ಕಾರಯೇತ್ ।**) ಎಂದು ವೈಖಾನಸ ಆಗಮ ಹೇಳುತ್ತದೆ.

ಕೃಷ್ಣನ ಪಾರ್ಥಸಾರಥಿ ರೂಪವು ಬಹು ಜನಪ್ರಿಯವಾದುದು. ಈ ಬಗ್ಗೆ ವೈಖಾನಸ ಆಗಮ ಇಂತು ವಿವರಿಸುತ್ತದೆ

ರಥಾರೂಢಂ ಧ್ವಜಶ್ಚಕ್ರಮುಕುಲಾದಿ ರಥಾಂಗೈರ್ಯುಕ್ತಂ ರಥಂ ಕೃತ್ವಾ ಪಾರ್ಥಂ ಸಚಾಪಂ ಪ್ರಾಂಜಲೀಕೃತ್ಯಾಥ ಸ್ಥಲೇ ಸ್ಥಿತಂ ಚೋಪರಿ ಯತ್ರ ಯಷ್ಟಿಪಾಶೌ ಗೃಹೀತ್ವಾದಕ್ಷಪಾದಂ ಸ್ಥಿತಂ ವಾಮಮುದ್ಧೃತ್ಯ ರಥಭಿತ್ತೌ ಸಂಸ್ಥಾಪ್ಯ ದಕ್ಷಿಣಹಸ್ತೇನ ವ್ಯಾಖ್ಯಾನನಿರ್ಣಯಾಂಗುಲಿ ಮುದ್ರಯಾ ಸಂಯುಕ್ತಂ ಪಾರ್ಥಸಾರಥಿರೂಪಂ ಕಾರಯೇತ್ ।

ಧ್ವಜ, ಮುಕುಳ, ಚಕ್ರಾದಿ ಸಕಲ ಅಂಗಾಂಗಳಿಂದ ಅಲಂಕೃತವಾಗಿರುವ ರಥದಲ್ಲಿ ಸಾರಥಿಸ್ಥಾನದಲ್ಲಿ ಕುಳಿತಿರುವ ಶ್ರೀಕೃಷ್ಣನು ಎಡಗೈಯಲ್ಲಿ ಕಡಿವಾಣವನ್ನು ಹಿಡಿದಿರುತ್ತಾನೆ. ಅರ್ಜುನನು ಕೈಯ್ಯಲ್ಲಿ ಧನುಸ್ಸನ್ನು ಹಿಡಿದು ಅಂಜಲಿಬದ್ಧನಾಗಿ ಕೆಳಗೆ ನೆಲದ ಮೇಲೆ ನಿಂತಿರುತ್ತಾನೆ. ಕೃಷ್ಣನ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿರುತ್ತದೆ. ಶ್ರೀಕೃಷ್ಣನು ಪಾರ್ಥಸಾರಥಿ ಎಂದು ಪ್ರಖ್ಯಾತನಾಗಿರುವುದು ಕುರುಕ್ಷೇತ್ರದ ಮಹಾಯುದ್ಧದಲ್ಲಿ ಅರ್ಜುನನಿಗೆ ಸಾರಥಿಯಾಗಿ ಕುಶಲತೆಯಿಂದ ರಥನಡೆಸಿದ್ದಕ್ಕಾಗಿ ಅಲ್ಲ, ಅರ್ಜುನನಿಗೆ ಧರ್ಮದ ಬೋಧನೆಮಾಡಿ ಎಲ್ಲಾಕಾಲಕ್ಕೂ ಅನುಸರಿಸ ಬೇಕಾದ ಸೂತ್ರಗಳನ್ನು ಭಗವದ್ಗೀತೆಯಾಗಿ ಬೋಧಿಸಿದ್ದಕ್ಕಾಗಿ.

'ಅಗಣಿತವಾಗಿರುವ ಕೃಷ್ಣನ ಮೂರ್ತಿಗಳನ್ನು ಪೂರ್ಣವಾಗಿ ವರ್ಣಿಸುವುದು ಸಾಧ್ಯವಿಲ್ಲ. ಭಕ್ತನಾದವನು ತಾನು ಪೂಜಿಸಬೇಕೆಂದಿರುವ ಮೂರ್ತಿಯನ್ನು ಆಯ್ಕೆಮಾಡಿಕೊಂಡು, ಅದನ್ನು ಮಾಡಿಸಿ, ಪೂಜಿಸಿ ವಾಂಛಿತ ಫಲವನ್ನು ಗಳಿಸಿಕೊಳ್ಳ ಬಹುದು' (ಕೃಷ್ಣರೂಪಾಣ್ಯಸಂಖ್ಯಾನಿ ವಕ್ತುಂ ನಶಕ್ಯಾನಿ ; ತಸ್ಮಾದ್ಯಥೇಷ್ಟ ರೂಪಂ ಕಾರಯೇತ್ ।) ಎಂದು ವೈಖಾನಸ ಆಗಮವು ಸ್ಪಷ್ಟಪಡಿಸಿದೆ.

ಕೃಷ್ಣನ ಬಾಲರೂಪ ಪ್ರಿಯವಾಗಿರುವಂತೆಯೇ ಇತರ ವಯೋಮಾನಗಳ ಮೂರ್ತಿಗಳೂ ಜನಪ್ರಿಯವಾಗಿವೆ. ಶ್ರೀತತ್ತ್ವನಿಧಿಯಲ್ಲಿ ಹೀಗೆ ಕೃಷ್ಣನ ಬಾಲರೂಪವು ವಿವರಿತವಾಗಿದೆ

ಪಿಬಂತಂ ಚ ಸ್ತನಂ ಮಾತು ರ್ಮುಖಂ ಸಂವೀಕ್ಷ್ಯ ಸುಸ್ಮಿತಮ್ ।
ಅಂಗುಲ್ಯಗ್ರೈಸ್ತನಂ ಚಾನ್ಯಂ ಸ್ಪೃಶಂತಂ ಚ ಮುಹುರ್ಮುಹುಃ ॥
ಯಶೋದಾಂಕಸ್ಥಿತಂ ಗೋಪಂ ಧ್ಯಾಯೇತ್ಪುತ್ರಪ್ರದಂ ಸದಾ ।

ಯಶೋದೆಯ ಮಡಿಲಿನಲ್ಲಿ ಮಲಗಿದ್ದು ಆಕೆಯ ಸ್ತನದಿಂದ ಹಾಲನ್ನು ಕುಡಿಯುತ್ತಾ ಇದ್ದಾನೆ. ಕೃಷ್ಣನ ಮುಖ ಸ್ವಲ್ಪ ಮೇಲಕ್ಕೆ ಸರಿದು ಆಕೆಯ ಮುಖ ನೋಡುತ್ತಿರಬೇಕು. ಒಂದು ಕೈ ಆಕೆಯ ಸ್ತನವನ್ನು ಸ್ಪರ್ಶಿಸುತ್ತಿರಬೇಕು. ಈ ಸ್ವರೂಪವನ್ನು ಆರಾಧಿಸುವವರಿಗೆ ಸಂತಾನ ಪ್ರಾಪ್ತಿಯಾಗುತ್ತದೆ.

ಬಾಲಕೃಷ್ಣನ ಇನ್ನೊಂದು ರೂಪ ಆಲದ ಎಲೆಯ ಮೇಲೆ ಮಲಗಿರುವಂತೆ ಚಿತ್ರಿತವಾಗಿರುವುದು. ಜಗತ್ತುಗಳೆಲ್ಲಾ ಜಲಪ್ರಳಯದಲ್ಲಿ ಅಲ್ಲೋಲ ಕಲ್ಲೋಲವಾಗುತ್ತಿದ್ದರೆ, ಪುನರ್‌ಸೃಷ್ಟಿಯ ಸಮಾಧಿಯಲ್ಲಿ ವಟಪತ್ರ (ಆಲದ ಎಲೆ) ದಲ್ಲಿ ಶಿಶುರೂಪಿ ಕೃಷ್ಣನು ಮಲಗಿರುತ್ತಾನೆ. ಶಿಲ್ಪದಲ್ಲಿ ಆಲದ ಎಲೆಯು ಸ್ತ್ರೀ ಯೋನಿಯ ಸಂಕೇತವಾಗಿ ಸ್ವೀಕೃತವಾಗಿದೆ ಎಂಬುದನ್ನು ನೆನಪುಮಾಡಿಕೊಂಡಾಗ ಮರುಸೃಷ್ಟಿಯ ಬುನಾದಿ ಇಲ್ಲಿ ಗೋಚರವಾಗುತ್ತದೆ. ಪ್ರಕೃತಿ ಪುರುಷರು ಸೃಷ್ಟಿಕಾರ್ಯೋನ್ಮುಖರಾಗಿರುವುದು ಕಂಡುಬರುತ್ತದೆ.

ಹೀಗೆ ಕೃಷ್ಣನ ಪ್ರತಿಮಾಕಲ್ಪವು ಅತ್ಯಂತ ವೈವಿಧ್ಯಪೂರ್ಣವಾಗಿದೆ.

## ಬುದ್ಧ

ವಿಷ್ಣುವಿನ ಹತ್ತು ಅವತಾರಗಳಲ್ಲಿ ಕೆಲವು ಶಾಸ್ತ್ರಗಳು ಬುದ್ಧನೂ ಒಂದು ಅವತಾರವೆಂದು ಪರಿಗಣಿಸಿದರೆ ಮತ್ತೆ ಹಲವರು ಅದನ್ನು ಒಪ್ಪುವುದಿಲ್ಲ. ಪುರಾಣಗಳಲ್ಲೂ ಈ ಬಗ್ಗೆ ಏಕವಾಕ್ಯತೆ ಇಲ್ಲ. ಭಾಗವತ ಪುರಾಣವು ಬುದ್ಧನನ್ನು ವಿಷ್ಣುವಿನ ಅವತಾರವೆಂದು ಸ್ವೀಕರಿಸಿದೆ. ಆದರೆ ಇತರ ಪುರಾಣಗಳು ಅಂಗೀಕರಿಸಿಲ್ಲ. ಭಾಗವತ ಪುರಾಣದಲ್ಲಿ 'ಕಲಿಯುಗ ಪ್ರಾರಂಭದಲ್ಲಿ ಕೀಟಕರ ಹೆಣ್ಣಾದ ಅಂಜನಾಳ ಮಗನಾಗಿ ಬುದ್ಧ ಹುಟ್ಟಿ ಅಸುರರನ್ನು (ದೇವತೆಗಳ ಶತ್ರುಗಳನ್ನು) ಸೋಲಿಸುತ್ತಾನೆ' ಎಂದು ಹೇಳಲಾಗಿದೆ. ಕೀಟಕರ ರಾಜ್ಯವನ್ನು ಗುರ್ತಿಸಲು **ಮಧ್ಯೇ ಗಯಾಪ್ರದೇಶೇ** (ಎಂದರೆ ಗಯೆಯ ಸುತ್ತಮುತ್ತಲ ಪ್ರದೇಶ ಎಂದು ಅರ್ಥೈಸಬೇಕಾಗಿರುತ್ತದೆ) ಎಂದು ಹೇಳಿದೆ. ಅಗ್ನಿಪುರಾಣದಲ್ಲಿ ಯುದ್ಧದಲ್ಲಿ ಅಸುರರಿಂದ ಸೋಲಿಸಲ್ಪಟ್ಟ ದೇವತೆಗಳು ವಿಷ್ಣುವಿನ ರಕ್ಷಣೆಯನ್ನು ಕೋರಿದರು. ಆಗ ವಿಷ್ಣು ಬುದ್ಧನಾಗಿ ಹುಟ್ಟಿ, ವೇದ ಮತವನ್ನು ಬಿಡುವಂತೆ ಮಾಡಿ ಅಸುರರನ್ನು ಮೋಸಗೊಳಿಸಿದ. ಯೋಧರಾಗಿದ್ದ ಅವರು ತಮ್ಮ ಬಲವನ್ನೆಲ್ಲಾ ಕಳೆದುಕೊಂಡರು. ಆ ಕಾಲದಿಂದ ಬುದ್ಧ ಧರ್ಮವು ವಿಕಸಿಸಿತು. ವೇದಗಳ ನಿಯಮಗಳನ್ನು ಕಳೆದುಕೊಂಡ ಅನೇಕರು ರೂಪುಗೊಂಡಿರುವುದು ಹೀಗೇ ಎಂದು ಒಂದು ವಿವರಣೆ ದೊರೆಯುತ್ತದೆ.

ಪರಾಶರ ಮತ್ತು ಮೈತ್ರೇಯ ಋಷಿಗಳ ಮಧ್ಯೆ ನಡೆದ ಸಂಭಾಷಣೆಯೊಂದು ವಿಷ್ಣುಪುರಾಣದಲ್ಲಿ ದೊರೆಯುತ್ತದೆ. ಮೈತ್ರೇಯ ಋಷಿಯು 'ನಗ್ನರು ಎಂದರೆ ಯಾರು? ಅವರನ್ನು ಹಾಗೇಕೆ ಕರೆಯಲಾಗಿದೆ?' ಎಂದು ಪ್ರಶ್ನಿಸಿದ್ದಕ್ಕೆ ಉತ್ತರವಾಗಿ ಪರಾಶರ ಮುನಿಯು ಇಂತು ವಿವರಿಸುತ್ತಾನೆ :

ಋಗ್ವೇದ, ಯಜುರ್ವೇದ ಮತ್ತು ಸಾಮವೇದವು ವೈದಿಕರಿಗೆ ಮೂರು ಪದರುಗಳ ವಸ್ತ್ರ. ಇದನ್ನು ತೊಡದೆ (ಬಳಸದೆ) ಎಸೆದ ಪಾಷಂಡಿಗಳನ್ನು ನಗ್ನರು ಅಥವ ಬೆತ್ತಲೆಯಾಗಿರುವವರು ಎನ್ನುತ್ತಾರೆ. ಹಾಗೆಂದರೆ ವೇದ ಬಾಹಿರರು ಎಂಬುದು ಅರ್ಥ. ವೇದಗಳೇ ವಸ್ತ್ರವಾಗಿ ಪರಿಗ್ಗಣಿತವಾದಾಗ ಅದನ್ನು ತಿರಸ್ಕರಿಸುವವರು ವಸ್ತ್ರಹೀನರು ತಾನೇ?

ಹ್ರದನ ನೇತೃತ್ವದಲ್ಲಿ ದೇವತೆಗಳಿಗೂ ಅಸುರರಿಗೂ ನಡೆದ ಯುದ್ಧದಲ್ಲಿ ದೇವತೆಗಳು ಪರಾಭವವನ್ನು ಅನುಭವಿಸಿದರು. ದೇವತೆಗಳೆಲ್ಲರೂ ಕ್ಷೀರಸಾಗರದ ಉತ್ತರ ತೀರಕ್ಕೆ ಹೋಗಿ ವಿಷ್ಣುವನ್ನು ಕುರಿತು ಪ್ರಾರ್ಥಿಸಿದರು. ಸಂಪ್ರೀತನಾದ ವಿಷ್ಣು ತನ್ನಿಂದ ಮಾಯಾ ರೂಪವೊಂದನ್ನು ಅವರಿಗೆ ಕೊಡುತ್ತಾ 'ಈ ಮಾಯಾ ರೂಪವು ದೈತ್ಯರನ್ನು ಮೋಸಗೊಳಿಸುತ್ತದೆ. ವೇದ ಬಾಹಿರರಾಗಿ ಅವರು ಕೊಲ್ಲಲ್ಪಡುತ್ತಾರೆ' ಎಂದು ಆಶ್ವಾಸನೆ ನೀಡಿದ. ಮಾಯಾ ರೂಪವು ಬೆತ್ತಲೆಯ ಸಂನ್ಯಾಸಿಯಾಗಿ, ತಲೆ ಬೋಳಿಸಿಕೊಂಡು, ಕೈಯ್ಯಲ್ಲಿ ನವಿಲುಗರಿಗಳ ಒಂದು ಕಟ್ಟನ್ನು ಇರಿಸಿಕೊಂಡು ದೈತ್ಯರ ಬಳಿಗೆ ಹೋಯಿತು. ದೈತರೆಲ್ಲರೂ ನರ್ಮದಾ ನದಿಯ ದಂಡೆಯಲ್ಲಿ

ಬಹು ಶ್ರದ್ಧೆಯಿಂದ ಅಗ್ನಿಕಾರ್ಯವನ್ನು ನಡೆಸುತ್ತಿದ್ದರು. ಈ ಮಾಯಾ ರೂಪವು ಅವರನ್ನು ಕುರಿತು 'ದೈತ್ಯಕುಲದ ಮುಖ್ಯಸ್ಥರೇ, ಈ ಭಕ್ತಿ, ತಪಸ್ಸು, ಕರ್ಮನಿರ್ವಹಣೆ ಏತಕ್ಕೆ? ಇದರ ಪ್ರತಿಫಲವನ್ನು ಈ ಜಗತ್ತಿನಲ್ಲಿಯೇ ಅನುಭವಿಸುತ್ತೀರಾ ಅಥವ ಪರಲೋಕದಲ್ಲಿ ಅನುಭವಿಸಬೇಕೆಂದಿದ್ದೀರಾ?' ಎಂದು ಪ್ರಶ್ನಿಸಿತು.

ಆಗ ಅಸುರರು 'ಈ ಕರ್ಮಫಲವನ್ನು ಪರಲೋಕದಲ್ಲಿ ಅನುಭವಿಸಬೇಕೆಂದು ನಡೆಸುತ್ತಿದ್ದೇವೆ ' ಎಂದು ಹೇಳಿದರು.

ಆಗ ಆ ಮಾಯಾ ರೂಪವು ತನ್ನ ಬೋಧನೆ ಪ್ರಾರಂಭಿಸಿತು. ಈ ತತ್ತ್ವಗಳನ್ನು ಅನುಸರಿಸಿದರೆ ಅವರಿಗೆ ಮುಕ್ತಿದೊರೆಯುತ್ತದೆ ಎಂದು ಹೇಳಿ, ಆ ರೀತಿಯ ಪದವಿಗೆ ಅವರು ಅರ್ಹರಾಗಿದ್ದಾರೆ ಎಂದು ಖಚಿತಪಡಿಸಿತು. ಆದ್ದರಿಂದಲೇ ದೈತ್ಯರು 'ಅರ್ಹತರು' ಎಂಬ ಹೆಸರನ್ನು ಪಡೆದುಕೊಂಡರು. ಯಜ್ಞಾಂಗದ ಪ್ರಾಣಿಹಿಂಸೆಯನ್ನು ವಿರೋಧಿಸಿ ಅದರ ವಿರುದ್ಧ ಪ್ರವಚನ ನಡೆಸಿದ. ಪ್ರತಿಪ್ರವಚನದ ಕೊನೆಯಲ್ಲಿ 'ಬುದ್ಧಯಧ್ವೇ?' ಎಂದು ಅಸುರರನ್ನು ಕೇಳುತ್ತಿದ್ದ. ಹಾಗೆಂದರೆ 'ನಿಮಗೆ ಗೊತ್ತಾಯಿತೇ?' ಎಂದು. ಆದ್ದರಿಂದ ಈ ಮಾಯಾರೂಪಿಯಿಂದ ಬೋಧಿಸಲ್ಪಟ್ಟ ಮತವನ್ನು ಅನುಸರಿಸಿದವರನ್ನು ನಗ್ನರು ಅಥವ ಬುದ್ಧರು ಎಂದು ಗುರ್ತಿಸುವುದು ಪ್ರಾರಂಭವಾಯಿತು.

ಹೀಗೆ ವಿಷ್ಣುಪುರಾಣದಲ್ಲಿ ಬುದ್ಧನ ಮತ್ತು ಆತನ ಮತದ ವಿರುದ್ಧ ಅನೇಕ ಸಂಗತಿಗಳನ್ನು ಹೇಳಲಾಗಿದೆ.

ಬೃಹತ್‌ಸಂಹಿತೆ, ಅಗ್ನಿಪುರಾಣ, ವಿಷ್ಣುಧರ್ಮೋತ್ತರ ಪುರಾಣ ಮತ್ತು ರೂಪಮಂಡನ ಗಳಿಂದ ಬುದ್ಧವಿಗ್ರಹದ ಬಗ್ಗೆ ದೊರೆಯುವ ಮಾಹಿತಿಗಳನ್ನು ಹೀಗೆ ಸಂಗ್ರಹಿಸಬಹುದು:

(ಅ) ಪದ್ಮಾಂಕಿತ ಕರಚರಣಾಃ ಪ್ರಸನ್ನ ಮೂರ್ತಿಸ್ಸು ನೀಚಕೇಶಶ್ಚ
ಪದ್ಮಾಸನೋಪವಿಷ್ಟಃ ಪಿತೇವ ಜಗತೋ ಭವೇದ್ಬುದ್ಧಃ ॥
(ಬೃಹತ್ ಸಂಹಿತೆ, ಅಧ್ಯಾಯ ೫೮)

(ಆ) ಶಾಂತಾತ್ಮಾ ಲಂಬಕರ್ಣಶ್ಚ ಗೌರಾಂಗಶ್ಚಾಂಬರಾವೃತಃ
ಊರ್ಧ್ವ ಪದ್ಮಸ್ಥಿತೋ ಬುದ್ಧೋ ವರದಾಭಯದಾಯಕಃ ॥
(ಅಗ್ನಿಪುರಾಣ, ಅಧ್ಯಾಯ ೪೯)

(ಇ) ಕಾಷಾಯವಸ್ತ್ರ ಸಂವೀತಸ್ಕಂಧ ಸಂಸಕ್ತ ಚೀವರಃ
ಪದ್ಮಾಸನಸ್ಥೋ ದ್ವಿಭುಜೋ ಧ್ಯಾಯೀ ಬುದ್ಧಃ ಪ್ರಕೀರ್ತಿತಃ ॥
(ವಿಷ್ಣುಧರ್ಮೋತ್ತರ ಪುರಾಣಂ)

(ಈ) ಬುದ್ಧಃ ಪದ್ಮಾಸನೋ ರಕ್ತ ಸ್ತ್ವಕ್ತಾ ಭರಣಮೂರ್ಧಜಃ
ಕಷಾಯವಸ್ತ್ರೋ ಧ್ಯಾನಸ್ಥೋ ದ್ವಿಭುಜೋಕಾರ್ದ್ರ್ವಪಾಣಿಕಃ ॥ (ರೂಪಮಂಡನ)

ಬುದ್ಧನ ಪಾದ ಮತ್ತು ಅಂಗೈಗಳಲ್ಲಿ ಪದ್ಮದ ಚಿಹ್ನೆಗಳು ಇರಬೇಕು. ಪೂರ್ಣವಾದ ದೇಹವು ಶುದ್ಧವಾಗಿದ್ದು ಗೌರವರ್ಣದಲ್ಲಿರಬೇಕು. ತಲೆಯಲ್ಲಿ ಕುರುಚಲಾದ ಗುಂಗುರು

ಕೂದಲಿರಬೇಕು. ಮೂರ್ತಿಯು ಬಹು ಶಾಂತವಾಗಿದ್ದು ಸೌಮ್ಯ ಭಾವದಲ್ಲಿರಬೇಕು. ಬುದ್ಧನೇ ಸಕಲ ಸೃಷ್ಟಿಯ ತಂದೆಯಂತೆ ಭಾಸವಾಗಬೇಕು. ಪದ್ಮಾಸನದ ಮೇಲೆ ಕುಳಿತಿರಬೇಕು. ಕಿವಿಯ ತೂಗುಭಾಗದಲ್ಲಿ ರಂಧ್ರಗಳಿರಬೇಕು. ಕಾಷಾಯ ವಸ್ತ್ರಧಾರಿಯಾಗಿರಬೇಕು. ಭುಜದ ಮೇಲೆ ವಲ್ಕಲ ವಸ್ತ್ರವಿರಬೇಕು. ವರದ ಅಭಯ ಮುದ್ರೆಗಳನ್ನು ಧರಿಸಿದ ಹಸ್ತಗಳಿರಬೇಕು. ಇದು ಧ್ಯಾನ ಮಗ್ನನಾದ ಬುದ್ಧನ ರೂಪ.

ಬುದ್ಧನ ಪ್ರತಿಮೆಯ ಅಗಣಿತರೂಪಗಳನ್ನು ಪ್ರಸ್ತುತ ಕೃತಿಯ ವ್ಯಾಪ್ತಿಯಲ್ಲಿ ವಿವರಿಸುವುದು ಅಸಾಧ್ಯ ಹಾಗೂ ಅನಾವಶ್ಯಕ. ಹೈಂದವ ಶಿಲ್ಪಶಾಸ್ತ್ರದಲ್ಲಿರುವ ಬುದ್ಧನ ರೂಪವನ್ನು ತಿಳಿಸುವುದೇ ನಮ್ಮ ಗುರಿ.

ಚಾಲುಕ್ಯ ಮತ್ತು ಹೊಯ್ಸಳರ ಕಾಲದ ಎಲ್ಲಾ ದೇವಾಲಯಗಳಲ್ಲೂ ವಿಷ್ಣುವಿನ ಆಲಯಗಳಲ್ಲಿ ದಶಾವತಾರವನ್ನು ಚಿತ್ರಿಸಿದಾಗಲೆಲ್ಲಾ ಬುದ್ಧನನ್ನು ರೂಪಿಸಿದ್ದಾರೆ. ವಿಷ್ಣುವಿನ ಪ್ರಭಾವಳಿಯಲ್ಲಿ ದಶಾವತಾರ ರೂಪಿಸಿದಾಗಲೂ ಬುದ್ಧವತಾರವನ್ನು ಪರಿಗಣಿಸಿದ್ದಾರೆ. ಇವೆಲ್ಲಾ ಸ್ಥಳಗಳಲ್ಲೂ ಧ್ಯಾನಾಮಗ್ನನಾದ ಬುದ್ಧನನ್ನೇ ಚಿತ್ರಿಸಿದ್ದಾರೆ. ಪದ್ಮಾಸನದಲ್ಲಿ ಕುಳಿತು ತನ್ನ ಮಡಿಲಿನಲ್ಲಿ ಹಸ್ತಗಳನ್ನು ಇರಿಸಿಕೊಂಡಿರುವಂತೆ ಬುದ್ಧವಿಗ್ರಹದ ವೈಶಿಷ್ಟ್ಯವೆಂದರೆ ಉಪವೀತದಂತೆ ವಸ್ತ್ರವನ್ನು ಧರಿಸಿರುವುದು.

ಪಾಂಚರಾತ್ರಾಗಮದ ಹಯಶೀರ್ಷ ಸಂಹಿತೆ (ಆದಿ, ೨೩ : ೩೪ - ೩೬)ಯಲ್ಲಿ ಈ ರೀತಿಯ ವಿವರಣೆ ದೊರೆಯುತ್ತದೆ :

**ದಶತಾಲಂ ತಥಾ ಬುದ್ಧಂ ಪದ್ಮಾಸನಗತಂ ಹರಿಮ್**
**ಪ್ರಲಂಬಶ್ರವಣಂ ಕುರ್ಯಾತ್ ಚೀವರಾಲಂಕೃತಂ ತಥಾ ||**
**ಮಣಿನಾಭಿಂ ಸನಾಭಿಸ್ಥಂ ಪದ್ಮಾಸ್ಯ ಪದ್ಮಲೋಚನಮ್**
**ಸಮಾಧಿಸ್ಥೋತ್ತಾನಪಾಣಿಂ ಯೋಗದೃಷ್ಟಿಸಮನ್ವಿತಮ್ ||**
**ಸ್ಥಾಪಯೇದ್ರೂಪಕಾಮಸ್ತು ಪಿತೇವ ಜಗತಃ ಸ್ಥಿತಿಮ್**

ಪದ್ಮಾಸನದಲ್ಲಿ ಕುಳಿತಿರುವ ಬುದ್ಧ ರೂಪದ ಹರಿಯನ್ನು ದಶತಾಲದಲ್ಲಿ ರೂಪಿಸಬೇಕು. ನೀಳವಾದ ಕಿವಿಗಳಿದ್ದು, ಭಿಕ್ಷುಗಳು ಧರಿಸುವ ವಲ್ಕಲ ವಸ್ತ್ರವನ್ನು ಧರಿಸಿದ್ದು, ನಾಭಿಯಲ್ಲಿ ಮಣಿಯನ್ನು ಇರಿಸಿಕೊಂಡಿದ್ದು, ಪದ್ಮಾಸದಲ್ಲಿ ಕುಳಿತಿರುವ ಪದ್ಮಲೋಚನಾದ ಸ್ವಾಮಿಯು ಯೋಗದೃಷ್ಟಿಯಿಂದ ಸಮಾಧಿಯಲ್ಲಿರುತ್ತಾನೆ. ಬುದ್ಧನ ಕೈಗಳು ಹೃದಯದ ಬಳಿ ಮುದ್ರೆಯನ್ನು ಧರಿಸಿರಬೇಕು. ಜಗತ್ತಿನ ತಂದೆಯಾದ ಈತನು ಬಹು ಸುಂದರನಾಗಿರುತ್ತಾನೆ. ಈ ಮೂರ್ತಿಯನ್ನು ಸ್ಥಾಪಿಸಿ ಪೂಜಿಸಬಹುದು.

ಪಾದ್ಮ ಸಂಹಿತೆ ಮತ್ತು ವಿಷ್ಣುಧರ್ಮೋತ್ತರ ಪುರಾಣಗಳಲ್ಲಿ ಈ ವರ್ಣನೆ ಇದೆ :

**ಕಾಷಾಯ ವಸ್ತ್ರ ಸಂವೀತಃ ಸ್ಕಂದ ಸಂಸಕ್ತ ಚೀವರಃ**
**ಪದ್ಮಾಸನ ಸ್ಥೋ ದ್ವಿಭುಜೋ ಧ್ಯೇಯೋ ಬುದ್ಧಃ ಪ್ರಕೀರ್ತಿತಃ ||**



ಚಿತ್ರ ೫೩ : ಬುದ್ಧ - ೧

ತೆಳು ಕೆಂಪು ಬಣ್ಣದ ಮೈಕಾಂತಿಯಿಂದ ಶೋಭಾಯ ಮಾನವಾಗಿರುವ, ಕಾಷಾಯ ವಸ್ತ್ರ ಮತ್ತು ಭುಜದ ಮೇಲಿನ ನಾರುಡುಗೆಯಿಂದ ಅಲಂಕೃತನಾದ ಮೂರ್ತಿ ಎರಡು ತೋಳುಗಳನ್ನು ಪಡೆದಿದ್ದು ಪದ್ಮಾಸನದಲ್ಲಿ ಕುಳಿತಿರುತ್ತಾನೆ. ಈ ರೂಪದಲ್ಲಿರುವ ಬುದ್ಧ ಭಗವಂತನು ಧ್ಯಾನಿಸಲು ಅರ್ಹನಾದವನು.

ಮೂರ್ತಿರೂಪದಲ್ಲಿ ಮಾತ್ರವೇ ಅಲ್ಲದೆ ಸಾಲಗ್ರಾಮ ರೂಪದಲ್ಲೂ ಬುದ್ಧಉಂಟು. ಈ ಬಗ್ಗೆ ಸಾಲಗ್ರಾಮಶಾಸ್ತ್ರದಲ್ಲಿ ಈ ವಿವರಣೆದೊರೆಯುತ್ತದೆ

**ಅಂತರ್ಹ್ಸರ ಸಂಯುಕ್ತಶ್ಚಕ್ರ ಹೀನೋ ಯಥಾಭವೇತ್**

**ನಿರ್ವಾಣ ಬುದ್ಧಸಂಜ್ಞಸ್ಯಾತ್ ದದಾತಿ ಪರಮಂ ಪದಮ್ ll**

ಗುಹೆಯಂತಹ ಬಾಯಿದ್ದು ಒಳಗೆ ಚಕ್ರವೇ ಇಲ್ಲದ್ದು ನಿರ್ವಾಣ ಬುದ್ಧನ ಸಂಕೇತ. ಆ ಸಾಲಗ್ರಾಮದ ಪೂಜೆಯು ಮುಕ್ತಿಯನ್ನು ದಯಪಾಲಿಸುತ್ತದೆ.

ಮಾನಸಾರ ಶಿಲ್ಪಶಾಸ್ತ್ರದಲ್ಲಿ (ಅಧ್ಯಾಯ ೫೬) ಬುದ್ಧ ಮೂರ್ತಿಯ ಬಗ್ಗೆ ದೊರೆಯುವ ವಿವರಗಳು ಹೀಗಿವೆ -

**ಬೌದ್ಧಸ್ಯ ಲಕ್ಷಣಂ ವಕ್ಷ್ಯೇ ಸಮ್ಯಕ್ ಚ ವಿಧಿನಾಽಧುನಾ**

**ಜಿನದೇವಾ ಸ್ಥಿರಂ ಯುಕ್ತಂ ಬೌದ್ಧಸ್ಯ ಚ ವಿಶೇಷತಃ ll ೧ ll**

ಬುದ್ಧಮೂರ್ತಿಯ ಪ್ರತಿಮಾ ಲಕ್ಷಣಗಳನ್ನು ಪೂರ್ಣವಾಗಿ ಈಗ ವಿವರಿಸಲಾಗುತ್ತದೆ. ಜೈನ ಮೂರ್ತಿಗಳಂತೆಯೇ ಮೂಲ ವಿಗ್ರಹವಲ್ಲದ ಬೌದ್ಧಮೂರ್ತಿಗಳನ್ನು ವಿಶೇಷವಾಗಿ ರೂಪಿಸಬೇಕು.

**ಸ್ಥಾನಕಂ ಚಾಸನಂ ವಾಪಿ ಸಿಂಹಾಸನಾದಿ ಸಂಯುತಮ್**

**ಅಶ್ವತ್ಥ ವೃಕ್ಷಸಂಯುಕ್ತಂ ಕಲ್ಪವೃಕ್ಷಂ ತಥಾ ನ್ಯಸೇತ್ ll ೨ ll**

ಈ ಮೂರ್ತಿಗಳು ನಿಂತಿರುವಂತೆ, ಕುಳಿತಿರುವಂತೆ ಅಥವ ಸಿಂಹಾಸನದ ಮೇಲೆ ಮಂಡಿಸಿರುವಂತೆ, ಅಶ್ವತ್ಥವೃಕ್ಷದ ಅಡಿಯಲ್ಲಿ ಇರುವಂತೆ ಅಥವ ಕಲ್ಪವೃಕ್ಷದ ಅಡಿಯಲ್ಲಿ ಇರುವಂತೆ ರೂಪಿಸಿ ನಿರ್ಮಿಸಬಹುದು.

**ಶುದ್ಧಶ್ವೇತ ವರ್ಣಂ ಸ್ಯಾದ್ ವಿಶಾಲಾನನ ಸಂಯುತಮ್**

**ಲಂಬಕರ್ಣಾಯತಾಕ್ಷಂ ಸ್ಯಾತ್ ತುಂಗಘೋಣಂ ಸ್ಮಿತಾನನಮ್ ll ೩ ll**

ಅವರ ಮುಖವು ವಿಸ್ತಾರವಾದುದಾಗಿದ್ದು ಶುದ್ಧವಾದ ಬಿಳಿಯಬಣ್ಣವನ್ನು ಪಡೆದುಕೊಂಡಿರಬೇಕು. ಕಿವಿಗಳು ದೀರ್ಘವಾಗಿರಬೇಕು. ಕಣ್ಣುಗಳು ವಿಶಾಲವಾಗಿದ್ದು ಮೂಗು ಉನ್ನತವಾಗಿರಬೇಕು. ಮುಖದಲ್ಲಿ ನಗೆ ಮಿಂಚುತ್ತಿರಬೇಕು.

**ದೀರ್ಘ ಬಾಹು ವಿಶಾಲಂ ಚ ವಕ್ಷಸ್ಥಲಂ ಚ ಸುಂದರಮ್**

**ಮಾಂಸಲಾಂಗಂ ಸುಸಂಪೂರ್ಣಂ ಲಂಬೋದರ ಚ ರ್ಣಾಕೃತ್ ll ೪ ll**

ತೋಳುಗಳು ದೀರ್ಘವಾಗಿಯೂ, ವಕ್ಷಸ್ಥಲವು ವಿಶಾಲವಾಗಿದ್ದು ಸಂದರವಾಗಿಯೂ

ಪುಷ್ಟವಾದ ಅಂಗಾಂಗಗಳನ್ನು ಪಡೆದಿದ್ದು ಉದರವು ತುಂಬಿಕೊಂಡು ಮುಂದಕ್ಕೆ ಉಬ್ಬಿಕೊಂಡಿರಬೇಕು. ದೇಹವು ಪೂರ್ಣರೂಪದಲ್ಲಿ ವಿಕಸಿತಗೊಂಡಿರಬೇಕು.

**ಸಮಪಾದಂ ಸ್ಥಾನಕಂ ಕುರ್ಯಾಲ್ಲಂಬಹಸ್ತಂ ಸುಖಾಸನಮ್**

**ದ್ವಿಭುಜಂ ಚ ದ್ವಿನೇತ್ರಂ ಚ ಚೋಷ್ಣೀಷೋಜ್ವಲ್ಲ ಮೌಳಿಕಮ್ ॥ ೫ ॥**

ಕಾಲುಗಳು ಸಮವಾಗಿರಿಸಿಕೊಂಡು ನಿಂತಿರಬೇಕು. ತೋಳುಗಳು ನೀಳವಾಗಿ ಚಾಚಿಕೊಂಡಿರಬೇಕು. ಕುಳಿತಿರುವಾಗ ಶಾಂತವಾಗಿ ಬಹು ಆನಂದದಲ್ಲಿ ಕುಳಿತಿರುವಂತೆ ತೋರಬೇಕು. ಎರಡು ತೋಳುಗಳು, ಎರಡು ಕಣ್ಣುಗಳು ಇದ್ದು ಉಷ್ಣೀಷದಿಂದ ತಲೆಯು ಶೋಭಾಯಮಾನವಾಗಿರಬೇಕು.

**ಏವಂ ತು ಸ್ಥಾನಕಂ ಕುರ್ಯಾದಾಸನಾದಿ ಯಥಾಕ್ರಮಮ್**

**ಪೀತಾಂಬರಧರಂ ಕುರ್ಯಾತ್ ಸ್ಥಾನಕೇ ಚಾಸನೇಽಪಿ ಚ ॥ ೬ ॥**

ನಿಂತಿರುವ, ಕುಳಿತಿರುವ ಭಂಗಿಗಳ ಮೂರ್ತಿಗಳು ಅಥವ ಬೇರೆಯಾವುದೇ ಭಂಗಿಯಲ್ಲಿರುವ ಮೂರ್ತಿಗಳು ಈ ಮೊದಲು ವಿವರಿಸಿರುವ ರೀತಿಯಲ್ಲಿ ನಿರ್ಮಿಸಬೇಕು. ಭಂಗಿಯಾವುದೇ ಆಗಿರಲಿ ಹಳದಿಯ ವರ್ಣದ ವಸ್ತ್ರಗಳನ್ನು ಧರಿಸಿರಬೇಕು.

**ಪೀಠಂ ವಾಮಭುಜೋರ್ಧ್ವೇ ತು ಚಾರ್ಧಕಂ ತು ಸಾಧನಾ**

**ಸ್ಥಾವರಂ ಜಂಗಮಂ ವಾಪಿ ದಾರು ಶೈಲಂ ಚ ಲೋಹಜಮ್ ॥ ೭ ॥**

**ಚಿತ್ರಂ ವಾ ಚಾರ್ಧಚಿತ್ರಂ ಚ ಚಿತ್ರಾಭಾಸಮಥಾಪಿ ವಾ**

**ಪಟ್ಟೇ ವಾ ಭಿತ್ತಿಕೇ ವಾಪಿ ಕುರ್ಯಾನ್ಮೃತ್ತಿಕಾಶರ್ಕರಾ ಭ್ಯಾಮ್ ॥ ೮ ॥**

ಎಡಹಸ್ತವನ್ನು ಅರ್ಧಭಾಗದ ತನಕ ಮೇಲಕ್ಕೆ ಎತ್ತಿದ್ದು ಧ್ಯಾನಮುದ್ರೆಯಲ್ಲಿರ ಬೇಕು. ಹೀಗೆ ಮಾಡಿದ ವಿಗ್ರಹವು ಸ್ಥಿರವಾಗಿ ಅಥವ ಚಲಿಸಲುಸಾಧ್ಯವಿರುವಂತೆ, ಮರ, ಕಲ್ಲು, ಲೋಹಗಳು (ಚಿನ್ನ ಬೆಳ್ಳಿ ತಾಮ್ರ ಇತ್ಯಾದಿ ಗಳಲ್ಲಿ ಚಿತ್ರಗಳಾಗಿ ಆಗಲಿ ಮುಂದೆ ಮತ್ತು ಹಿಂದೆ ಪೂರ್ಣವಾಗಿ ರೂಪಿಸಲ್ಪಟ್ಟ ಶಿಲ್ಪಕೃತಿಯಾಗಿ ಆಗಲಿ), ಅರ್ಧಚಿತ್ರಗಳಂತಾಗಲಿ (ಅರೆ ಉಬ್ಬುಚಿತ್ರಗಳು), ಚಿತ್ರಾಭಾಸಗಳಂತಾಗಲಿ (ವರ್ಣದಲ್ಲಿ ಚಿತ್ರಿಸಿರುವಿಕೆ) ಕಲ್ಲುಗಳಮೇಲೆ, ಗೋಡೆಯಮೇಲೆ ಅಥವ ಪಟದ ಕ್ಯಾನ್‌ವಾಸ್ ಮೈಲ್ಮೈಮೇಲೆ ರೂಪಿಸಬಹುದು.

**ಉತ್ತಮ ದಶತಾಲೇನ ಕಾರಯೇತ್ತ್ವಂಗ ಮಾನಕಮ್**

**ಶೇಷಂ ಪ್ರಾಗುಕ್ತ ವತ್ಕುರ್ಯಾತ್ತತ್ತದಾಗಮವದ್ ಬುಧಃ ॥ ೯ ॥**

ಈ ಮೂರ್ತಿಗಳನ್ನು ಉತ್ತಮ ದಶತಾಲಮಾನದಲ್ಲಿ (೧೨೪ ಅಂಗುಳಗಳು) ರೂಪಿಸಬೇಕು. ಬುದ್ಧಿವಂತನಾದ ಶಿಲ್ಪಿಯು ಈ ಮೂರ್ತಿಗಳನ್ನು ಬೌದ್ಧಆಗಮಗಳ ಅನುಸಾರವೇ ರೂಪಿಸಬೇಕು.

ಊಪರೋಕ್ತ ವಿವರಣೆಯು ಬುದ್ಧಮೂರ್ತಿಯ ನಿರ್ಮಾಣಕ್ಕೆ ಸಾಕಾಗುವುದಿಲ್ಲ. ಭಾರತೀಯ ಶಿಲ್ಪಿಗಳು ಈಗಿನ ಕಾಲದ ಶಿಲ್ಪಿಗಳೂ ಸೇರಿದಂತೆ - ಅನೇಕರು ಅನೂಚಾನವಾಗಿ ಬುದ್ಧ ಪ್ರತಿಮೆಗಳನ್ನು ನಿರ್ಮಿಸಿ ಕೊಡುತ್ತಲೇ ಇದ್ದಾರೆ. ಈ ಬಗ್ಗೆ ಶಿಲ್ಪಿಗಳ ಸಂಗ್ರಹದಲ್ಲಿರುವ ಕೆಲವು ವಿವರಗಳನ್ನು ವ್ಯಾಪಕ ಪ್ರಯೋಜನಕ್ಕಾಗಿ ಇಲ್ಲಿ ಹೇಳಲಾಗಿದೆ.

ಮುಖವು ತೇಜಸ್ವಿಯಾಗಿದ್ದು ಅಗಲವಾದ ಕಣ್ಣುಗಳನ್ನು, ನೀಳವಾದ ನಾಸಿಕದೊಂದಿಗೆ, ಜೋತಾಡುವ ಕಿವಿಗಳೊಂದಿಗೆ ವಿಶಾಲವಾದ ಹಣೆಯನ್ನು ಬುದ್ಧದೇವ ಪಡೆದಿರುತ್ತಾನೆ. ಮೊಣಕಾಲುಗಳನ್ನು ಮುಟ್ಟುವ ತೋಳುಗಳು ಇರಬೇಕು. ನೋಡಲು ಸ್ಫುರದ್ರೂಪಿಯಾಗಿರಬೇಕು. ಕೈಕಾಲುಗಳು ತುಂಬಿಕೊಂಡು, ಮೈಹೊಳಪಿನಿಂದ ಕೂಡಿರಬೇಕು. ಸ್ವಾಮಿಯ ಮೈಬಣ್ಣವು ಶ್ವೇತಕಾಂತಿಯಲ್ಲಿರುತ್ತದೆ. ಹುಬ್ಬುಗಳಲ್ಲಿ ಚಕ್ರಗಳಂತೆ ಸುರಳಿಗಳಿರುತ್ತವೆ. ಅವನ್ನು ವಿಶೇಷವಾಗಿ ಊರ್ಣ ಎಂದು ಕರೆಯಲಾಗುತ್ತದೆ. ಇವು ಚಕ್ರವರ್ತಿಗಳಿಗೆ ಮಾತ್ರವೇ ಇರುವ ಲಕ್ಷಣವೆಂದು ಸಾಮುದ್ರಿಕಾ ಶಾಸ್ತ್ರವು ಹೇಳುತ್ತದೆ. ಇಂತಹ ಊರ್ಣಗಳಿಂದ ಹುಬ್ಬುಗಳು ಅಲಂಕೃತಗೊಂಡಿರಬೇಕು.

ಎರಡು ತೋಳು, ಎರಡು ಕಣ್ಣುಗಳು ಇದ್ದು ಕೇಶವು ಗುಂಗುರು ಕೂದಲಿನೊಂದಿಗೆ ನೀರ್ಗುಳ್ಳೆಗಳಂತೆ ಆಕರ್ಷಕವಾಗಿ ಸುರುಳಿಸುತ್ತಿಕೊಂಡಿರುತ್ತವೆ. ಶಿಖೆಯ ಸ್ಥಾನದಲ್ಲಿ ಕೇಶವನ್ನು ಸೇರಿಸಿ ಒಂದುಗಂಟನ್ನು ಸುಂದರವಾಗಿ ರೂಪಿಸಲಾಗಿರುತ್ತದೆ. ಸೊಂಟದಲ್ಲಿ ಹಳದಿಯ ನಾರುಡುಗೆ ಸುತ್ತಿದ್ದು ಎಡತೋಳಿನಿಂದ ಸೊಂಟದ ಬಲಪಾರ್ಶ್ವಕ್ಕೆ ಹೋಗಿ ಅಲ್ಲಿಂದ ಬೆನ್ನನ್ನು ಸುತ್ತಿಕೊಂಡು ಮತ್ತೆ ಎಡತೋಳಿನಲ್ಲಿ ದೊರೆಯುವ ಮೇಲುವಸ್ತ್ರವನ್ನು, ಅದರ ಮುಂಭಾಗದ ಕಿರಿಯಅಂಚನ್ನು ಮುಂದಕ್ಕೆ ಸೇರಿಸಿಕೊಂಡು ಎಡ ಹಸ್ತದಲ್ಲಿರುತ್ತದೆ ಅಥವ ಎಡಭುಜದ ಮೇಲಿರತ್ತದೆ.

ಬುದ್ಧದೇವನ ಪ್ರತಿಮೆಯನ್ನು ನಿಂತಿರುವಂತೆ, ಕುಳಿತಿರುವಂತೆ, ಮಲಗಿರುವಂತೆ ರೂಪಿಸಬಹುದು. ಹಿಂಭಾಗದಲ್ಲಿ ಬೋಧಿವೃಕ್ಷ (ಅಶ್ವತ್ಥವೃಕ್ಷ) ಅಥವ ಕಲ್ಪವೃಕ್ಷ ಇರುವಂತೆ ರೂಪಿಸಬಹುದು. ಸಿಂಹಾಸನದಲ್ಲಿ ಕುಳಿತಿರುವಂತೆ ರೂಪಿಸಲೂ ಬಹುದು. ಕುಳಿತಿರುವ ಬುದ್ಧದೇವನ ಹಸ್ತಗಳನ್ನು ಮೂರು ಬಗೆಯಲ್ಲಿ ರೂಪಿಸಬಹುದು. ಅವನ್ನು ಧರ್ಮಚಕ್ರ ಮುದ್ರೆ, ಧ್ಯಾನ ಮುದ್ರೆ, ಪುಷ್ಪರಿಸಮುದ್ರೆಯೆಂದು ಹೇಳುತ್ತಾರೆ. ಈ ಮೂರು ವಿಧ ಮೂರ್ತಿಗಳು ಬಹು ಮುಖ್ಯವಾದುವು.

ಪದ್ಮಾಸನದಲ್ಲಿ ಕುಳಿತು ವಕ್ಷದ ಮೇಲೆ ಧರ್ಮಚಕ್ರ ಪರಿವರ್ತನಾ ಮುದ್ರೆಯನ್ನು ಧರಿಸಿ, ಕಣ್ಣುಗಳನ್ನು ಧ್ಯಾನಾವಸ್ಥೆಯಲ್ಲಿ ಅರೆಮುಚ್ಚಿಕೊಂಡಿರುತ್ತಾನೆ. ಸಾವಿರ ದಳಗಳ ಪದ್ಮದ ಮೇಲೆ ಬುದ್ಧ ಕುಳಿತಿರುತ್ತಾನೆ. ಇದು ಮೊದಲನೆಯ ವಿಧ. ಬುದ್ಧನಿಗೆ ಜ್ಞಾನೋದಯವಾದ ನಂತರ ಮೊದಲ ಉಪದೇಶವನ್ನು ಮಾಡಿದ ರೀತಿ ಇದೇ.

ಪದ್ಮಪೀಠದಲ್ಲಿ ಪದ್ಮಾಸನದಲ್ಲಿ ಕುಳಿತು ಎರಡು ಕೈಗಳನ್ನು ಮಡಿಲಿನಲ್ಲಿ ಒಂದರ ಮೇಲೊಂದರಂತೆ ಇರಿಸಿಕೊಂಡು ಧ್ಯಾನದಲ್ಲಿರುವುದು ಎರಡನೆಯಬಗೆ. ಇಲ್ಲಿ ಹಸ್ತಗಳು (ಅಂಗೈ) ಮೇಲಾಗಿರುವಂತೆ ಎಂದರೆ ಬಲ ಅಂಗೈಮೇಲೆ ಎಡ ಅಂಗೈ ಹಿಂಭಾಗವಿದ್ದು ಎಡ ಅಂಗೈಕೂಡ ಬಲ ಅಂಗೈಯಂತೆಯೇ ಮೇಲ್ಮುಖವಾಗಿರುತ್ತದೆ. ಇದು ಎರಡನೆಯ ವಿಧ. ತಲೆಯ ಹಿಂಭಾಗದಲ್ಲಿ ಜ್ಞಾನದ ಬೆಳಕನ್ನು ತೋರುವ ಪ್ರಭಾಮಂಡಲವಿರುತ್ತದೆ. ಅದರ ಮೇಲೆ ಛತ್ರಿ ಇರುತ್ತದೆ. ಇದಕ್ಕೂ ಹಿಂದೆ ಕಲ್ಪವೃಕ್ಷ ಇರಬೇಕು. ಇಕ್ಕೆಲಗಳಲ್ಲೂ ಚಾಮರಧಾರಿಗಳು ಇಬ್ಬರು ನಿಂತಿರಬೇಕು.



ಚಿತ್ರ ೫೪ : ಬುದ್ಧ - ೨

ಪದ್ಮಾಸನದಲ್ಲಿ ಪದ್ಮಪೀಠದಮೇಲೆ ಎಡಹಸ್ತವನ್ನು ಮಡಿಲಲ್ಲಿ ಅಂಗೈಮೇಲ್ಮುಖವಾಗಿರುವಂತೆ ಇರಿಸಬೇಕು. ಬಲಗೈ ಬಲಕಾಲಿನಮೇಲೆ ಚಾಚಿಕೊಂಡಿರಬೇಕು. ತಳಿರಿನಂತೆ ಹಸ್ತತಲವು ತೂಗಾಡುತ್ತಾ ಭೂಮಿಯನ್ನು ಮುಟ್ಟುತ್ತಿರುವ ರೀತಿ ಇರುವ ಈ ಹಸ್ತ ಮುದ್ರೆಯನ್ನು ಪುಷ್ಪರಿಸ ಮುದ್ರೆ ಎಂದು ಕರೆಯಲಾಗುತ್ತದೆ. ಆದ್ದರಿಂದ ಈ ಸ್ವಾಮಿಯನ್ನು ಪುಷ್ಪರಿಸ ಮುದ್ರೆಯಲ್ಲಿರುವ ಬುದ್ಧ ಎನ್ನುತ್ತಾರೆ.

ನಿಂತಿರುವ ಭಂಗಿಯಲ್ಲಿ ನಳಕಾದ ತನಕ ತೂಗಾಡುತ್ತಿರುವ ವಸ್ತ್ರವನ್ನು ಧರಿಸಿದ್ದು ಬಲಹಸ್ತದಲ್ಲಿ ಅಭಯ ಮುದ್ರೆಯನ್ನು, ಎಡಹಸ್ತದಲ್ಲಿ ವಸ್ತ್ರದ ಒಂದು ಅಂಚನ್ನು ಹಿಡಿದು ಅದರೊಂದಿಗೆ ವರದ ಮುದ್ರೆಯನ್ನು ಸೇರಿಸಿಕೊಂಡಿರಬೇಕು. ಮುಖದಲ್ಲಿ ಕಾಂತಿಯೂ, ಕರುಣೆಯೂ, ಶಾಂತಿಯೂ ತುಂಬಿರುವಂತಿರಬೇಕು. ಬುದ್ಧನ ಪ್ರತಿಮೆಗಳಲ್ಲಿ ಇದೊಂದು ಪ್ರಧಾನವಾದ ಭಂಗಿ

ಇದರ ನಂತರ ಮುಖ್ಯವಾದ ಬುದ್ಧನ ಪ್ರತಿಮೆಯ ಭಂಗಿ ಎಂದರೆ ಮಹಾಪರಿನಿರ್ವಾಣದ ಭಂಗಿ.

ಬೌದ್ಧರೆಲ್ಲರೂ ಆದಿ - ಅಂತ್ಯಗಳು ಐದು ಭೂತಗಳಿಂದಲೇ ನಿರ್ವಹಿಸಲ್ಪಡು ತ್ತದೆ ಎಂದು ನಂಬುತ್ತಾರೆ. ಆ ಭೂತಗಳನ್ನು ರೂಪ, ವೇದನ, ಸಂಜ್ಞೆ, ಸಂಸ್ಕಾರ, ಮತ್ತು ವಿಜ್ಞಾನ ಎಂದು ಹೇಳುತ್ತಾರೆ.


ಹಿಂದೂಗಳು ರೂಪಾದಿ ವಿಶೇಷಗಳು, ಗುಣತ್ರಯಗಳು, ಕಾಲ ಇವೆಲ್ಲವನ್ನು ಅಧಿಗಮಿಸಿರುವವನನ್ನು ಬ್ರಹ್ಮ ಎನ್ನುತ್ತಾರೆ. ಇದನ್ನೇ ಬೌದ್ಧರು. ಶೂನ್ಯ ಎಂದು ಕರೆಯುತ್ತಾರೆ. ಎಂದರೆ ಕಾಣುವವನು, ಕಾಣಿಸುವ ವಸ್ತು ಹೀಗೆ ಎರಡು ಸ್ವರೂಪಗಳ ಲಕ್ಷಣಗಳನ್ನು ವಿವರಿಸಿ ಆದಿ ಬುದ್ಧರು ಎಂಬ ಸ್ವರೂಪವನ್ನು ಬೌದ್ಧರು ಉಲ್ಲೇಖಿಸುತ್ತಾರೆ. ಇವರಿಗೆ ವಜ್ರಧರರು ಎಂಬ ಇನ್ನೊಂದು ಹೆಸರೂ ಉಂಟು. ಇವರು ಸದಾ ಧ್ಯಾನಾ ಮಗ್ನರಾಗಿಯೇ ಇರುತ್ತರೆ. ಇವರನ್ನು ಸ್ವಯಂ ಭೂ ಮೂರ್ತಿಗಳೆಂದು ಅಂಗೀಕರಿಸಲಾಗಿದೆ.

ಇವರು ಪದ್ಮಪೀಠದಲ್ಲಿ ಪದ್ಮಾಸನದಲ್ಲಿ ಕುಳಿತಿದ್ದು, ಎರಡು ಹಸ್ತಗಳನ್ನು ವಕ್ಷದ ಮೇಲೆ ಸ್ವಸ್ತಿಕ ಮುದ್ರೆಯಲ್ಲಿರಿಸಿ, ಅದರೊಂದಿಗೆ ಬಲ ಮತ್ತು ಎಡ ಹಸ್ತಗಳಲ್ಲಿ ವಜ್ರ, ಮಣಿ ಮುಂತಾದ ಚಿಹ್ನೆಗಳನ್ನು ತಲೆಯ ಮೇಲೆ ಇರಿಸಿಕೊಂಡು ಧ್ಯಾನದಲ್ಲಿರುವಂತೆ ರೂಪಿಸಲಾಗುತ್ತದೆ. ಇವೇ ಆದಿ ಬುದ್ಧರ ಮೂರ್ತಿಗಳು.

ಈ ಬುದ್ಧಮೂರ್ತಿಗಳಿಂದ ಐದು ಧ್ಯಾನಬುದ್ಧಮೂರ್ತಿಗಳು ರೂಪುಗೊಂಡಿವೆ. ವೈರೋಚನ, ಅಮಿತಾಭ, ಅಮೋಘಚಿತ್ತಿ, ಅಕ್ಷೋಭ್ಯ, ರತ್ನಸಂಭವ ಎಂಬುದು ಅವರ ಹೆಸರುಗಳು. ಪೂರ್ವೋಕ್ತ ಐದು ಭೂತಗಳ ಮೂರ್ತಿರೂಪ ಇವರು. ಐವರೂ ಧ್ಯಾನಮಗ್ನರಾಗಿಯೇ ಇರುವುದರಿಂದ ಇವರನ್ನು 'ಧ್ಯಾನ ಮೂರ್ತಿಗಳು' ಎಂದೇ ಕರೆಯುತ್ತಾರೆ. ಪ್ರತಿಯೊಬ್ಬರಿಂದಲೂ ಬೋಧಿಸತ್ವರೆಂಬುವರು ಆಯಾ ಶಕ್ತಿಗಳೊಂದಿಗೆ ಸೇರಿದರು. ಇವರೇ ಜಗತ್‌ಸೃಷ್ಟಿಯನ್ನು ಗಮನಿಸುವವರು. ಧ್ಯಾನಮಗ್ನ ಬೋಧಿಸತ್ವರಾಗಿ ಇವರನ್ನು ರೂಪಿಸಿ ಅಳವಡಿಸುತ್ತಾರೆ.



ಚಿತ್ರ ೫೫ : ಬುದ್ಧ - ೩



ಚಿತ್ರ ೫೭ : ಬುದ್ಧ - ೪

ಇವರನ್ನು ಒಟ್ಟಾಗಿ ಇರಿಸಿಕೊಂಡು ಪೂಜಿಸುವ ಬೌದ್ಧರನ್ನು ವಜ್ರಸತ್ವ ಎಂದು ಕರೆಯುತ್ತಾರೆ.

ಕುಳಿತಿರುವ ಭಂಗಿಯಲ್ಲಿರುವ ಬುದ್ಧ ಪದ್ಮಾಸನದಲ್ಲಿ ಪದ್ಮಪೀಠದ ಮೇಲೆ ಎರಡು ಬಾಹುಗಳು, ಒಂದು ತಲೆ ಇದ್ದು ಅಂಗೈಗಳನ್ನು ಮೇಲ್ಮೊಗವಾಗಿರಿಸಿಕೊಂಡು ಧ್ಯಾನಾಸಕ್ತನಾಗಿರುತ್ತಾನೆ. ಸ್ವಾಮಿಯ ದೃಷ್ಟಿಯು ಮೂಗಿನ ತುದಿಯ ಮೇಲೆ ಕೇಂದ್ರೀಕೃತವಾಗರುತ್ತದೆ. ಆದ್ದರಿಂದ ಕಣ್ಣು ಅರೆತೆರೆದಂತೆ ಕಾಣುತ್ತದೆ. ಕಂಠದಿಂದ ಮುಂಗಾಲಿನ ಕೊನೆಯತನಕ ಒಂದೇ ನಾರುಡುಗೆ ಇರುತ್ತದೆ. ಬಲವಕ್ಷ ಮಾತ್ರ ಮುಚ್ಚಿರಬಾರದು.

ಧ್ಯಾನಾಮಗ್ನ ಐದು ಬುದ್ಧರ ಪ್ರತಿಮೆಗಳೂ ಒಂದೇ ರೀತಿಯಲ್ಲಿ ಇದ್ದರೆ ಅವರಲ್ಲಿ ಯಾರು ಯಾರು ಎಂಬುದನ್ನು ಗುರ್ತಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಅಮಿತಾಭನಿಗೆ ತಾವರೆ, ಅಕ್ಷೋಭ್ಯನಿಗೆ ವಜ್ರ, ರತ್ನಸಂಭವನಿಗೆ ರತ್ನ, ಅಮೋಘಚಿತ್ತಿಗೆ ಎರಡು ವಜ್ರಗಳು, ವೈರೋಚನನಿಗೆ ಚಕ್ರ ಇವನ್ನು ಚಿಹ್ನೆಗಳಾಗಿ ಅಳವಡಿಸಲಾಗಿದೆ. ಇವೇ ಚಿಹ್ನೆಗಳು ಅವರರ ಶಕ್ತಿಗಳಾಗಿಯೂ ಉಪಯೋಗಕ್ಕೆ ಬರುತ್ತವೆ.

ಬೋಧಿ ಎಂದರೆ ಜ್ಞಾನ. ಸತ್ತ್ವಎಂದರೆ ಸಾರ ಎಂದು ಅರ್ಥ. ಎಂದರೆ ಬೋಧಿಸತ್ವರು ಎಂದರೆ ಸಾರವತ್ತಾದ ಜ್ಞಾನವನ್ನು ಪಡೆದಿರುವವರು ಎಂದು. ಧ್ಯಾನಮಗ್ನರಾಗಿರುವ ಬುದ್ಧರಿಂದ ತೋರಿಬಂದವರು. ಸಮಂತಭದ್ರ, ವಜ್ರಪಾಣಿ, ರತ್ನ ಪಾಣಿ, ಪದ್ಮಪಾಣಿ, ವಿಶ್ವಪಾಣಿ ಮುಂತಾದ ರೀತಿಯಲ್ಲಿಯ ಬೋಧಸತ್ವರು ವೈರೋಚನ, ಅಕ್ಷೋಭ್ಯ, ರತ್ನಸಂಭವ, ಅಮಿತಾಭ, ಅಮೋಘ ಸಿದ್ಧಿಮುಂತಾದವರಿಗೆ ತೋರಿಬಂದವರು. ಪಾದ್ಮಪಾಣಿಯನ್ನೇ ಅವಲೋಕಿತೇಶ್ವರ ಎಂದೂ ಕರೆಯುತ್ತಾರೆ. ಬೋಧಿಸತ್ವ ಮತ್ತು ಮಂಜುಶ್ರೀ ಇವರಿಬ್ಬರ ಪ್ರತಿಮೆಗಳು ಬಹು ಸುಂದರವಾಗಿರಬೇಕಾದ ಮೂರ್ತಿಗಳು.

ಬೋಧಿಸತ್ವರ ಪ್ರತಿನಿಧಿಗಳಾಗಿ ಮಾನುಷ ಬುದ್ಧರು ಕಾಣಿಸಿಕೊಳ್ಳುತ್ತಾರೆ ಎಂಬುದು ಬೌದ್ಧರ ನಂಬಿಕೆ. ಆ ರೀತಿಯ ಬುದ್ಧರು ಐವರು. ಇವರ ಮುಖ್ಯಲಕ್ಷಣಗಳು ಮುವ್ವತ್ತೆರಡು ಎಂದು ಬೌದ್ಧಶಾಸ್ತ್ರಗಳು ಹೇಳುತ್ತವೆ. ಇವುಗಳಲ್ಲಿ ಉಷ್ಣೀಶ, ಹುಬ್ಬುಗಳಲ್ಲಿಯೇ ಕಂಡು ಬರುವ ಊರ್ಣ ಎಂಬ ಹೆಣಿಗೆ (ಇದರೊಂದಿಗೆ ಬಿಳಿರೋಮಗಳು), ಜೋತಾಡುವ ಕಿವಿಗಳು ಮುಖ್ಯವಾದ ಅಂಶಗಳು. ಮಾನುಷ ಬುದ್ಧರಲ್ಲಿ ಗೌತಮಬುದ್ಧ ಬಹುಮುಖ್ಯನಾದವನು. ಈತನನ್ನು ನಾಲ್ಕನೆಯ ಬುದ್ಧ ಎಂದು ಹೇಳುತ್ತಾರೆ. ಇನ್ನು ಮುಂದೆ ಬರಲಿರುವ ಐದನೆಯ ಮಾನುಷ ಬುದ್ಧನನ್ನು ಮೈತ್ರೇಯ ಎನ್ನುತ್ತಾರೆ.

*ಇತಿ ಶ್ರೀ ಬ್ರಾಹ್ಮೀಯೇ ಚಿತ್ರಕರ್ಮ ಶಾಸ್ತ್ರೇ ಪ್ರಾದುರ್ಭಾವಕಾಂಡೇ ಶ್ರೀಕೃಷ್ಣ ಲಕ್ಷಣಂ ನಾಮ ನವಮೋಽಧ್ಯಾಯಃ*

ಅಥ ದಶಮೋಽಧ್ಯಾಯಃ

# ಕಲ್ಕಿ ಲಕ್ಷಣಮ್

**ಕಲ್ಕೈ[ರ್ಕೇ]ಸ್ತು ಲಕ್ಷಣಂ ಚಾಥ ವಕ್ಷ್ಯತೇ ಕಮಲಾಲಯ**
**ಮಧ್ಯೇನ [ಧ್ಯಮಂ] ಸಪ್ತತಾಲೇನ ಮಾನೋನ್ಮಾನಾದೀ ಕಾರಯೇತ್ ॥ ೧ ॥**
**ಲಲಾಟಾಧಶ್ಚ ವಕ್ತ್ರಸ್ಯ ವಿಸ್ತಾರಂ [ರೇ] ದ್ವಾದಶಾಂಗುಲಮ್**
**ಅಕ್ಷ್ನಲೋಚನ ಮಾಯಾಮಾದಗ್ರತಶ್ಚ[ದಂ ಚ] ತುರಂಗುಲಮ್ ॥ ೨ ॥**
**ಕಲಾರ್ಧ ಸುಷಿರಂ ಚೈವ ರಂಧ್ರೇ ಭಾಗಾಂತರೀ ಕೃತೇ**
**ಅಷ್ಟಾಂಗುಲೇನ ತಾಲೇನ ಸೃಕ್ವಸ್ಯಾತ್ತದ ಧಸ್ಸಮೇ ॥ ೩ ॥**
**ಮಧ್ಯೇ ತು ಶ್ರೋತ್ರ ನಕ್ತಿದ್ವೇ ದ್ವ್ಯಂಗುಲೇ ವಿಕಲೋನ್ನತೇ**
**ದ್ವ್ಯಂಗುಲಘ್ರಾಣ ವಂಶಂತು ತದೂರ್ಧ್ವಂ ವಿಕಲಂ ಸ್ಮೃತಮ್ ॥ ೪ ॥**
**ಅಶ್ವವಕ್ತ್ರಂ ವಿಕಾಸಂ ದ್ವಿಯವೋನಂ ಚಾಗ್ರತಃ ಕ್ರಮಾತ್**
**ತಮೇವ ಹಿ ಯವಾಂಶೇನ ಹನ್ವಂತಂ ತನುತಾಂ ನಯೇತ್ ॥ ೫ ॥**

ಎಲೈ ಬ್ರಹ್ಮದೇವನೇ, ಕಲ್ಕಿಯ ಲಕ್ಷಣವನ್ನು ವಿವರಿಸುತ್ತೇನೆ. ಕೇಳು. ಈ ಮೂರ್ತಿಯನ್ನು ಮಧ್ಯಮ ಸಪ್ತತಾಲದಲ್ಲಿ (ಎಂದರೆ ಎತ್ತರವು ೮೪ ಅಂಗುಳ ಇರುತ್ತದೆ) ರೂಪಿಸಬೇಕು. ಈ ತಾಲಮಾನಕ್ರಮದ ಅಳತೆಗಳನ್ನು ಬಳಸಿಕೊಳ್ಳಬೇಕು. ನೆತ್ತಿಯ ಕೆಳಗಿನ ಮುಖದ ಅಗಲವು ೧೨ ಅಂಗುಳ. ಎರಡು ಕಣ್ಣುಗಳ ಹೊರ ಕೊನೆಗಳ ಮಧ್ಯೆ ಇರುವ ದೂರವು ೮ ಅಂಗುಳ. ಎರಡು ಕಣ್ಣುಗಳ ಮಧ್ಯೆ ಇರುವ ಅಂತರವು (ಭ್ರೂಮಧ್ಯ ಪ್ರದೇಶ) ೪ ಅಂಗುಳ. ನಾಸಾದ್ವಾರದ ಅಗಲವು ೨ ಅಂಗುಳ ೪ ಯವ. ಎರಡು ನಾಸಾಪುಟಗಳ ಮಧ್ಯೆ ಇರುವ ಅಂತರವು ೪ ಅಂಗುಳ ಮೇಲಿನ ತುಟಿ ಮತ್ತು ಕೆಳಗಿನ ತುಟಿಗಳನ್ನು ಸೇರಿಸುವ ಭಾಗವನ್ನು ಸ್ರಕ್ವಾ ಎನ್ನುತ್ತಾರೆ. ಈ ಸ್ರಕ್ವ ೧೨ ಅಂಗುಳ ಅಗಲವಾಗಿರುತ್ತದೆ. ಅದರ ಕೆಳಗಿನ ಭಾಗವು ೮ ಅಂಗುಳ. ಕರ್ಣದ್ವಾರದ ನೀಳವು ೨ ಅಂಗುಳ. ಅಗಲವು ೨ ಅಂಗುಳ. ಮೂಗಿನ ಎಲುಬು ೨ ಅಂಗುಳ ಅಗಲವಿರುತ್ತದೆ ಅದರ ಎತ್ತರವು ೨ ಅಂಗುಲ. ಮುಖವು ಕುದುರೆಯ ಮುಖದಂತೆ ಇರುತ್ತದೆ. ಮೇಲ್ಭಾಗದಿಂದ ಕ್ರಮವಾಗಿ ೨ ಯವದಂತೆ ಕಡಿಮೆಯಾಗುತ್ತಾ ಬರುತ್ತದೆ. ಈ ಮುಖದಲ್ಲಿ ಹನ್ವಂತವು ಇನ್ನೂ ಒಂದು ಯವ ಕಡಿಮೆಯಾಗಿರಬೇಕು.

**ಗ್ರಾವಂಶಕಸ್ಯ ವಕ್ಷೇಣದ್ವೌ ಮಧ್ಯೇ ಮೇನಸಂಭೃತೌ**
**ಯವದ್ವಯೇನ ಸಾರ್ಧೇನ ದೃಕ್ ಘ್ರಾಣಾತ್ಮಂ ತು ವಾಂತರಮ್ ॥ ೬ ॥**
**ಅಧೋದರಂ ತು ದೃಕ್ ಘೋಣ್ಯೈರ್ಯವಮಾನೇನ ಕುಂಚಿತಮ್**
**ಲಲಾಟಂ ಸಕಲಂ ಪ್ರಾಗತ್ ಭ್ರೂಮಧ್ಯಂ ಸಂಗುಲಂ ಕಲಾ ॥ ೭ ॥**
**ಭಾಲಾ ಪ್ರಸವ ಸಂಕಾಶೋ ದ್ವಿಭುಜೋ ಯಷ್ಟಿಧಾರಕಃ**
**+ + + + + + ಕಟವೋ ವೈಶಾಖ ಸ್ಥಾನಕೇ ಸ್ಥಿತಿಃ ॥ ೮ ॥**



ಚಿತ್ರ ೫೭ : ಕಲ್ಕಿ (ಕುದುರೆ ಮುಖ)

**ಶಿಖಾ ಬಂಧಂ ಭವನ್ಮೌಳಿರ್ಝಷಕುಂಡಲ ಮಂಡಿತಮ್**
**ಶ್ರೀವತ್ಸ ಹಾರ ಕೋರತ್ನವಲಯಂ ಚೋದರ ಬಂಧನಮ್ ॥ ೯ ॥**
**ಅಂಗದೈಃ ಕಟಕೈರ್ಯುಕ್ತೋ ಮುದ್ರಿಕಾ ಪಾದ ಮುದ್ರಿಕಾ**
**ಕಟಿಬಂಧಂ ಕೃತಿಮಂ ಪಾಶಂ ಕಟಿಸೂತ್ರಂ ತು ಶೋಭಿತಮ್ ॥ ೧೦ ॥**
**ರತ್ನಾಂಬರವರ್ಣೈರ್ಯುಕ್ತೋ ರಜೋಗುಣ ಸಮ ಸಮಭಂಗವಾನ್**
**ಮಾನುಷೇ ಸ್ಥಾನಕಂ ಕಾರ್ಯಂ ಶೇಷಂ ಯುಕ್ತ್ಯಾನುಕೂಲತಃ ॥ ೧೧ ॥**

ತೆಂಗಿನ ಹೂವಿನ ವರ್ಣದಿಂದ ಕಂಗೊಳಿಸುತ್ತಿರುವ, ಎರಡು ಭುಜಗಳಿಂದ ಶೋಭಿಸುತ್ತಾ ವೈಶಾಖ ಸ್ಥಾನದಲ್ಲಿರುವ, ಕೈಯ್ಯಲ್ಲಿ ದಂಡವನ್ನು ಕೋಲನ್ನು ಹಿಡಿದಿರುವ, ತಲೆಗೂದಲಿನೊಂದಿಗೆ ಶಿಖೆಯುಳ್ಳ, ತಲೆಯಲ್ಲಿ ಕಿರೀಟ, ಕಿವಿಗಳಲ್ಲಿ ಮೀನಿನ ಸ್ವರ್ಣಕುಂಡಲಗಳನ್ನು ಧರಿಸಿರುವ, ಶ್ರೀವತ್ಸ ಎಂಬ ಹಾರವನ್ನು, ರತ್ನಖಚಿತ ಬಳೆ ಉಂಗುರ, ತೋಳ್‌ಬಂಧಿ, ಉದರ ಬಂಧನ, ಕಾಲು, ಕೈ ಮತ್ತು ಕಾಲ್‌ಬೆರಳುಗಳಲ್ಲಿ ಉಂಗುರಗಳನ್ನು ಧರಿಸಿರುವ ಸ್ವಾಮಿಯು ಪ್ರಕಾಶಮಾನವಾಗಿರುತ್ತಾನೆ. ಕೀರ್ತಿ ಮುಖದಿಂದ ಅಲಂಕೃತವಾದ ಕಟಿಬಂಧವನ್ನು ಧರಿಸಿ, ಹಗ್ಗದಂತಹ ಚಿನ್ನದ ಕಟಿಸೂತ್ರವನ್ನು ಧರಿಸಿರುತ್ತಾನೆ. ರಜೋ ಗುಣಮೂರ್ತಿಯಾದ ಈ ಸ್ವಾಮಿಯು ಕೆಂಪು ವಸ್ತ್ರಗಳನ್ನು ಧರಿಸಿರುತ್ತಾನೆ. ಸಮಭಂಗದಲ್ಲಿ ನಿಂತಿರುವ ಈ ಸ್ವಾಮಿಯು ದೈವಪಾದದಲ್ಲಿ ವೈಶಾಖಸ್ಥಾನದಲ್ಲೂ, ಮಾನುಷಪಾದದಲ್ಲಿ ಮಾನುಷಸ್ಥಾನದಲ್ಲೂ ಇರುತ್ತಾನೆ. ಉಳಿದೆಲ್ಲವನ್ನೂ ಯುಕ್ತಿಯುಕ್ತವಾಗಿ ಸೂಕ್ತವಾಗಿ ಕಂಡಂತೆ ರೂಪಿಸಬೇಕು.

### *ವಿಶೇಷ ವಿವರ*

ಕಲಿಯುಗದಲ್ಲಿ ಬೌದ್ಧಾವತಾರದ ನಂತರ ಆಗುವ ಅವತಾರ. ಈ ಯುಗಾಂತ್ಯದಲ್ಲಿ ಆಗಬೇಕಾಗಿರುವ ಅವತಾರ. ಈತನನ್ನು ಕಲ್ಕಿ ಎಂದು ಕರೆಯುತ್ತಾರೆ. ಅತ್ಯಂತ ಪರಾಕ್ರಮಿ, ಮಹಾತ್ಮ, ಸದಾಚಾರಿ, ಪ್ರಜೆಗಳ ಹಿತ ರಕ್ಷಕ. ಬಯಸುತ್ತಲೇ ಬಗೆ ಬಗೆಯ ಕವಚ, ಆಯುಧ, ಅಸ್ತ್ರ, ವಾಹನಗಳು ಈತನಿಗೆ ದೊರೆಯುತ್ತವೆ. ಕಲಿಯುಗದಲ್ಲಿ ವ್ಯಾಪಿಸಿರುವ ಅಧರ್ಮವನ್ನು ನಾಶಮಾಡುತ್ತಾನೆ. ಕೈಯ್ಯಲ್ಲಿ ಕತ್ತಿಹಿಡಿದು, ದೇವದತ್ತ ಎಂಬ ಕುದುರೆಯ ಮೇಲೆ ಕುಳಿತು, ಮೂರು ರಾತ್ರಿಗಳಲ್ಲಿ ಅಧರ್ಮಿಗಳೆಲ್ಲರನ್ನೂ ಕೊಂದುಹಾಕುತ್ತಾನೆ (ಮಹಾಭಾರತ, ವನಪರ್ವ ೧೮೮ : ೮೧ ಪದ್ಮಪುರಾಣ, ಉ : ೨೫೨, ಬ್ರಹ್ಮಪುರಾಣ ೨೧೩ : ೨೬೪, ಹರಿವಂಶ ೧ : ೪೧ : ೬೪, ಭಾಗವತ ೧ : ೩) ಈ ಅವತಾರದ ಸಮಯಕ್ಕೆ ಕೃತಯುಗವು ಪ್ರಾರಂಭವಾಗಿರುತ್ತದೆ (ವಿಷ್ಣು ಧರ್ಮೋತ್ತರ ಪುರಾಣ, ೧ : ೭೪).

ಅಶ್ವಮೇಧವನ್ನು ನಡೆಸಿ ಸಕಲ ಭೂಮಿಯನ್ನು ದಾನಮಾಡುತ್ತಾನೆ. ಸದಾ ಯಾತ್ರಾರ್ಥಿಯಾಗಿರುತ್ತಾನೆ. ಕಲಿ ಬಲಿಯನ್ನು ಸೇರುತ್ತಾನೆ. ಮತ್ತೆ ಕರ್ಮಭೂಮಿಯ ನಿರ್ಮಾಣವಾಗುತ್ತದೆ. ಮತ್ತೆ ವೈವಸ್ವತಮನುವಿನ ಆಳ್ವಿಕೆ ಪ್ರಾರಂಭವಾಗುತ್ತದೆ (ಭವಿಷ್ಯಪುರಾಣ, ೪ : ೨೬).

ಕಲ್ಕಿಯ ರೂಪವು ವೈಖಾನಸ ಆಗಮದಲ್ಲಿ ಈ ರೀತಿ ಇದೆ :

**ಕಲ್ಕಿನಂ ಮಧ್ಯಮಂ ದಶತಾಲಮಿತಮಶ್ವಾಕಾರಂ ಮುಖಮನ್ಯನ್ನರಾಕಾರಂ ಚತುರ್ಭುಜಂ ಚಕ್ರಶಂಖಧರಂ ಖಡ್ಗಖೇಟಕಧರಮುಗ್ರರೂಪಂ ಭಯಾನಕಮೇವಂ ದೇವ ರೂಪಂ ಕೃತ್ವಾ ಕೌತುಕಂ ವಿಷ್ಣುಂ ಚತುರ್ಭುಜಮೇವ ಕಾರಯೇತ್।**

ಮಧ್ಯಮದಶತಾಲದಲ್ಲಿ ೧೨೦ ಅಂಗುಳ ಎತ್ತರಕ್ಕೆ ರೂಪಿತವಾಗುವ ಕಲ್ಕಿಗೆ ಕುದುರೆಯ ಮುಖವಿದ್ದು ಮನುಷ್ಯನ ದೇಹವಿರುತ್ತದೆ. ನಾಲ್ಕು ತೋಳುಗಳು. ಅವುಗಳಲ್ಲಿ ಶಂಖ - ಚಕ್ರ, ಖೇಟಕ - ಖಡ್ಗ ಧರಿಸಿರುತ್ತಾನೆ. ಭಯಂಕರವಾಗಿ ಕಾಣಿಸುತ್ತಿರುತ್ತಾನೆ. ಈ ಸ್ವಾಮಿಯ ಕೌತುಕಬೇರವು ನಾಲ್ಕು ತೋಳುಗಳುಳ್ಳ ಸಾಧಾರಣ ವಿಷ್ಣುಮೂರ್ತಿ ಯಾಗಿರಬೇಕು.

ಅಗ್ನಿಪುರಾಣದ ಅಧ್ಯಾಯ ೪೯ ಪ್ರಕಾರ ಕಲ್ಕಿಯು ಬಿಲ್ಲು - ಬಾಣಗಳನ್ನು ಧರಿಸಿದ್ದು



ಚಿತ್ರ ೫೮ : ಕಲ್ಕಿ

ಕುದುರೆಯ ಮೇಲೆ ಕುಳಿತಿರುತ್ತಾನೆ ಅಥವ ಶಂಖ - ಚಕ್ರ, ಬಾಣ - ಖಡ್ಗಗಳನ್ನು ಧರಿಸಿರಬಹುದು **(ಧನುಷ್ತೂಣಾನ್ವಿತಃ ಕಲ್ಕಿ ಮ್ಲೇಚ್ಛೋತ್ಸಾದಕರೋ ದ್ವಿಜಃ। ಅಥವಾಶ್ವಸ್ಥಿತಃ ಖಡ್ಗೀ ಶಂಖ ಚಕ್ರಶರಾನ್ವಿತಃ॥)**

ವಿಷ್ಣುಧರ್ಮೋತ್ತರ ಪುರಾಣವು ಕಲ್ಕಿಗೆ ಎರಡೇ ತೋಳುಗಳೆಂದು ವಿವರಿಸಿದೆ -

**ಖಡ್ಗೋದ್ಯತಕರಃ ಕ್ರುದ್ಧೋ ಹಯಾರೂಢೋ ಮಹಾಬಲಃ**

**ಮ್ಲೇಚ್ಛಚ್ಛೇದಕರಃ ಕಲ್ಕೀ ದ್ವಿಭುಜಃ ಪರಿಕೀರ್ತಿತಃ ॥**

ಕಲ್ಕಿ ರೂಪವನ್ನು ಧರಿಸಿದ ವಿಷ್ಣುವು ಶ್ವೇತವರ್ಣ ಶರೀರ ಕಾಂತಿಯಿಂದ, ಎರಡು ಹಸ್ತಗಳೊಂದಿಗೆ ಕುದುರೆಯನ್ನು ವಾಹನವಾಗಿ ಪಡೆದಿದ್ದು ಮಹಾ ಬಲನಾಗಿರುತ್ತಾನೆ. ಬಲಹಸ್ತದಲ್ಲಿ ಖಡ್ಗ, ಎಡಹಸ್ತದಲ್ಲಿ ಕುದುರೆಯ ಲಗಾಮು ಹಿಡಿದಿರುವ ಈ ಸ್ವಾಮಿಯು ಮ್ಲೇಚ್ಛರನ್ನು ಕೊಲ್ಲುತ್ತಾ ಬಹು ಕೋಪಾವೇಶದಲ್ಲಿರುತ್ತಾನೆ.

ಪಾಂಚರಾತ್ರಾಗಮದ ಹಯಶೀರ್ಷ ಸಂಹಿತೆ (ಆದಿ, ೨೩ ೩೭ ೩೮) ಯಲ್ಲಿ ಕಲ್ಕಿಗೆ ನಾಲ್ಕು ಅಥವ ಎರಡು ಬಾಹು ಗಳಿರುವಂತೆ ವರ್ಣಿಸಿ ಕುದುರೆಯ ಮೇಲೆ ಕುಳಿತಿರುತ್ತಾನೆ ಎಂದು ಹೇಳಲಾಗಿದೆ **(ಕಲ್ಕಿನಂತು ಚತುರ್ಬಾಹುಂ ಬಹುತೂಣಂ ಧನುರ್ಧರಮ್ ॥ ಶಂಖ ಚಕ್ರಧರಂ ಕುರ್ಯಾತ್ ತಥಾ ಖಡ್ಗಧರಂ ಪ್ರಭುಮ್ । ದ್ವಿಭುಜಂ ವಾ ಹಯಾರೂಢಂ ಖಡ್ಗಪಾಣಿಂ ಸುರೇಶ್ವರಮ್ ॥)**

ಮಾರ್ಕಂಡೇಯ ಸಂಹಿತೆಯಲ್ಲಿ (೮) ಈ ರೀತಿಯ ವಿವರ ದೊರೆಯುತ್ತದೆ :

**ವಾಹನಂ ತುರಗಂ ಪ್ರೋಕ್ತಂ ಪಿಂಗಂ ಯುದ್ಧವಿರಾಜಿತಮ್**

**ವೃತ್ತಾಯುತಂ ಸುವೃತ್ತಾಕ್ಷಂ ರಕ್ತವರ್ಣಾಃ ಪ್ರಕೀರ್ತಿತಾಃ ॥**

**ದ್ವಿಭುಜಂ ಚರ್ಮವಸನಂ ಖಡ್ಗ ಖೇಟಕಧಾರಿಣಮ್**

**ಕರಂಡಿಕಾಮಕುಟಿನಂ ಜಟಾಜಾಲ ವಿರಾಜಿತಮ್ ॥**

**ಬ್ರಾಹ್ಮ್ಯಾ ಲಕ್ಷ್ಮ್ಯಾ ಸಮಾಶ್ರಿತ್ಯ ದೇವೈಃ ಪರಿಜನೈಸ್ಸಹ**

**ಕಲ್ಕಿಲಕ್ಷಣಮಿತ್ಯೇವ ಬೇರಭೇದಂ ಪ್ರಚಕ್ಷತೇ ॥**

ಕುದುರೆಯ ಮೇಲೆ ಕುಳಿತು ಯುದ್ಧದಲ್ಲಿ ವಿರಾಜಮಾನನಾಗಿರುವ ಕಲ್ಕಿಯು ರಕ್ತವರ್ಣದವನಾಗಿ ಗುಂಡಾದ ಕಣ್ಣುಗಳನ್ನು ಪಡೆದಿರುತ್ತಾನೆ. ಚರ್ಮದ ಬಟ್ಟೆತೊಟ್ಟಿದ್ದು ಎರಡು ತೋಳುಗಳನ್ನು ಹೊಂದಿರುತಾನೆ. ಜಟಾ ಜಾಲದಿಂದ ವಿರಾಜಿತನಾಗಿದ್ದು ಕರಂಡ ಮಕುಟಧರಿಸಿ ಕತ್ತಿ - ಗುರಾಣಿಗಳನ್ನು ಹಿಡಿದಿರುತ್ತಾನೆ. ಬ್ರಾಹ್ಮೀ ಮತ್ತು ಲಕ್ಷ್ಮೀಯರನ್ನು ಇಕ್ಕೆಲಗಳಲ್ಲಿ ಪಡೆದಿದ್ದು ಪರಿಜನರು ಮತ್ತು ದೇವತೆಗಳೊಂದಿಗೆ ಇರುತ್ತಾನೆ. ಇದು ಕಲ್ಕಿಮೂರ್ತಿಯ ಲಕ್ಷಣ.

ಪಾದ್ಮ ಸಂಹಿತೆ (ಕ್ರಿಯಾಪಾದ, ೧೮ : ೩೮ - ೪೭) ಯಲ್ಲಿ ಈ ವಿವರಗಳು ದೊರೆಯುತ್ತವೆ :

**ನಿರ್ಮಾಣಮಧುನಾ ವಕ್ಷ್ಯೇ ಕಲ್ಕಿ ವಿಷ್ಣೋರ್ಮಹಾತ್ಮನಃ**

**ಪಿಂಗಶ್ಮಶ್ರುಂ ವಿವೃತ್ತಾಕ್ಷಂ ರಕ್ತಾಭಂ ಹಯವಾಹನಮ್ ॥**

ದ್ವಿಭುಜಂ ಚರ್ಮವಸನಂ ಖಡ್ಗಖೇಟಕ ಧಾರಿಣಮ್
ಜಟಾಮುಕುಟ ಸಂಯುಕ್ತಂ ಬ್ರಹ್ಮ ಲಕ್ಷ್ಮ್ಯಾದಿ ರಾಜಿತಮ್ ||
ಪೈಶಾಚೇ ಯಾನಕಂ ಕುರ್ಯಾದ್ದಿವ್ಯೇ ಭಾಗೇ ಸ್ಥಿತಿರ್ಭವೇತ್
ಯದ್ವಾ ಚತುರ್ಭುಜಂ ಕುರ್ಯಾತ್ ಮುಖ್ಯಾಭ್ಯಾಂ ಖಡ್ಗಖೇಟಕೌ ||
ಅಪರಾಭ್ಯಾಂ ಶಂಖ ಚಕ್ರಂ ಹಸ್ತಾಭ್ಯಾಂ ದಧತಂ ಹರಿಮ್
ಆಸನೇ ಖೇಟಕಂ ಖಡ್ಗಂ ನ ಕುರ್ವೀತ ಕದಾಚನ ||
ಅಭಯಂ ವರದಂ ಚೈವ ಕರಯುಗ್ಮಂ ಪ್ರಕಲ್ಪಯೇತ್
ಶಯನಂ ನೇಷ್ಯತೇ ತಸ್ಯ ಕಲ್ಕಿವಿಷ್ಣೋರ್ಮಹಾತ್ಮನಃ ||
ಏಕ ಬೇರವಿಧಾನಂ ಚೇತ್ಕಲ್ಪಯೇದ್ಬ್ರಹ್ಮಣಃ ಪದೇ
ಆಸೀನಂ ಸ್ಥಾನಕಂ ಚೈವ ಭಾಗೇ ದಿವ್ಯೇ ಪ್ರಕಲ್ಪಯೇತ್ ||
ತಸ್ಯ ದಕ್ಷಿಣ ಪಾರ್ಶ್ವೇತು ಯಾಜ್ಞವಲ್ಕ್ಯಂ ಪುರೋಹಿತಮ್
ನಾರದಂ ದಕ್ಷಿಣೇ ಪಾರ್ಶ್ವೇ ಭಿತ್ತಿಭೂಮಿಷು ದೇವತಾಃ ||
ಕಲ್ಪಯೇದ್ ಜಂಗಮಾನ್ ಬಿಂಬಾನ್ ದ್ವಿಜಾನ್ವಥಾ ಚತುರ್ಭುಜಾನ್
ಅಭಯಂ ವರದಂ ಚೈವ ದ್ವೌ ಭುಜೌ ಪರಿಕಲ್ಪಯೇತ್ ||
ಚತುರ್ಭುಜೇ ಶಂಖಚಕ್ರೇ ದ್ವಯೋರಪರಯೋರ್ಭವೇತ್

ವಿಷ್ಣುವಿನ ಅವತಾರವಾದ ಕಲ್ಕಿಗೆ ಕೆಂಚು ಮೀಸೆಗಳಿರುತ್ತವೆ. ಗುಂಡಾದ ಅಗಲವಾಗಿರುವ ಕಣ್ಣುಗಳು ಇದ್ದು ಕುದುರೆಯನ್ನು ವಾಹನವಾಗಿ ಪಡೆದಿರುತ್ತಾನೆ. ಕೆಂಪುವರ್ಣದ ಈ ಸ್ವಾಮಿಯು ಚರ್ಮದ ಉಡುಗೆಯನ್ನು ಧರಿಸಿರುತ್ತಾನೆ. ಜಟಾಮುಕುಟಧರಿಸಿದ್ದು ಬ್ರಾಹ್ಮೀ, ಲಕ್ಷ್ಮಿಗಳೊಂದಿಗೆ ಇರುತ್ತಾನೆ. ಎರಡು ತೋಳುಗಳಲ್ಲಿ ರೂಪಿಸಿದಾಗ ಖೇಟಕ ಖಡ್ಗ ಧರಿಸಿರಬೇಕು. ಈ ಸ್ವಾಮಿಯು ಯಾನಕ ಮೂರ್ತಿಯಾಗಿದ್ದು ಪೈಶಾಚಕ ಭಾಗದಲ್ಲಿ ಸ್ಥಾಪಿಸಬೇಕು. ನಾಲ್ಕು ತೋಳುಗಳಿರುವಂತೆ ರೂಪಿಸಿದ್ದೇ ಆದರೆ ಮುಂದಿನ ಹಸ್ತಗಳಲ್ಲಿ ಖಡ್ಗ ಖೇಟಕಗಳನ್ನು ಧರಿಸಿರುತ್ತಾನೆ. ಮೇಲಿನ ಹಸ್ತಗಳಲ್ಲಿ ಶಂಖ ಚಕ್ರಗಳನ್ನು ಧರಿಸಿರುತ್ತಾನೆ. ಈ ಸ್ವಾಮಿಯನ್ನು ಆಸನಕ ಮೂರ್ತಿ (ಕುಳಿತಿರುವಂತೆ ರೂಪಿದಾಗ ) ಖಡ್ಗ - ಖೇಟಕ ಇರಕೂಡದು. ಎರಡು ಹಸ್ತ ಕಲ್ಪಿಸಿ ಅಭಯ - ವರದಗಳನ್ನು ರೂಪಿಸಬೇಕು. ಕಲ್ಕಿಮೂರ್ತಿಗೆ ಶಯನ ಭಂಗಿ ಇಲ್ಲ. ಏಕಬೇರವಾಗಿದ್ದಾಗ ಬ್ರಹ್ಮಪದದಲ್ಲಿ ಸ್ಥಾಪಿಸಬೇಕು.

ಸ್ವಾಮಿಯ ಹಿಂಭಾಗದ ಗೋಡೆಯ ಮೇಲೆ ಯಾಜ್ಞವಲ್ಕ್ಯ ಮತ್ತು ನಾರದರನ್ನು ಚಿತ್ರಿಸಬಹುದು.

ಸ್ವಾಮಿಯನ್ನು ಚತುರ್ಭುಜದಲ್ಲಿ ರೂಪಿಸಿದರೆ ಮುಂದಿನ ಹಸ್ತಗಳಲ್ಲಿ ಅಭಯ - ವರದಗಳು ಮೇಲಿನ ಹಸ್ತಗಳಲ್ಲಿ ಶಂಖ ಚಕ್ರಗಳು ಇರಬೇಕು.

ವಿಷ್ವಕ್ಸೇನ ಸಂಹಿತೆಯಲ್ಲಿ (೧೧ : ೧೩೪ - ೧೩೬) ಈ ರೀತಿಯ ವಿವರಣೆ ದೊರೆಯುತ್ತದೆ:

ಅತಿಶೋಣಲ ಸಂಕಾಶೋ ತ್ರಿಣೇತ್ರೋ ಭೀಮರೂಪವಾನ್ ||
ಶಂಖ ಚಕ್ರ ಗದಾಪಾಣಿಶ್ಚತುರ್ಬಾಹುಃ ಕಿರೀಟಧೃಕ್

ವನಮಾಲಾ ಸಂಯುಕ್ತಃ ಸರ್ವಾಭರಣ ಭೂಷಿತಃ ||
ಸರ್ವಾಲಂಕಾರ ಸಂಯುಕ್ತಃ ಪೀತವಸ್ತ್ರ ಸಮನ್ವಿತಃ
ಏವಂ ಕಲ್ಕಿರ್ಮಯಾ ಪ್ರೋಕ್ತೋ ಹಿತೇ ನ್ಯಾಸಂ ವದಾಮಿ ತೇ ||
ದಕ್ಷಿಣೋರ್ಧ್ವಕರೇ ಚಕ್ರಂ ವಾಮೋರ್ಧ್ವೇ ಶಂಖಮೇವ ಚ
ವಾಮಸ್ಯಾಧರ ಹಸ್ತೇ ತು ಪಾಶಂ ಕೃಷ್ಣನಿಭಂ ನ್ಯಸೇತ್ ||
ಕಾರಯೇದ್ದಕ್ಷಣೇ ಹಸ್ತೇ ಕಾಲದಂ ತ್ವಧೋಮುಖಮ್
ಶ್ರಿಯಂ ದಕ್ಷಿಣಪಾರ್ಶ್ವೇ ತು ವಾಮೇ ಪುಷ್ಟಿಂ ನ್ಯಸೇದ್ಬುಧಃ ||
ದ್ವಿತೀಯಾವರಣೇ ಚಾಷ್ಟ ಪರಿವಾರ ಸಮನ್ವಿತಮ್

ಭೀಮರೂಪದಲ್ಲಿ ಕೆಂಪುವರ್ಣ ಶೋಭೆಯಿಂದ ಪ್ರಜ್ವಲಿಸುತ್ತಿರುವ ಈ ಮೂರ್ತಿಯು ನಾಲ್ಕು ತೋಳುಗಳನ್ನು ಪಡೆದಿದ್ದು, ಹಳದಿ ವಸ್ತ್ರಗಳನ್ನು ಧರಿಸಿರುತ್ತಾನೆ. ಸಕಲಾಭರಣಗಳನ್ನು, ಕಿರೀಟವನ್ನೂ, ಅಲಂಕಾರಗಳನ್ನು, ವನಮಾಲೆಯನ್ನು ಧರಿಸಿರುತ್ತಾನೆ. ಹಸ್ತಗಳಲ್ಲಿ ಶಂಖ ಚಕ್ರ ಗದೆಗಳನ್ನು ಧರಿಸಿರುತ್ತಾನೆ. ಇನ್ನೊಂದು ಬಲಹಸ್ತದಲ್ಲಿ ಅಭಯ ಮುದ್ರೆಯನ್ನು ರೂಪಿಸಬಹುದು.

ಈ ಸ್ವಾಮಿಯ ಬಲಕ್ಕೆ ಶ್ರೀದೇವಿ, ಎಡಕ್ಕೆ ಪುಷ್ಟಿದೇವಿ ಇರಬಹುದು. ನಾಲ್ಕು ಹಸ್ತಗಳಲ್ಲಿ ಮೇಲಿನ ಹಸ್ತದಲ್ಲಿ ಶಂಖ ಚಕ್ರಗಳು, ಕೆಳಗಿನ ಎಡಹಸ್ತದಲ್ಲಿ ಪಾಶ ಇರಬೇಕು. ಬಲಹಸ್ತ ಅಧೋಮುಖವಾಗಿರಬೇಕು. ದೇವಾಲಯದ ದ್ವಿತೀಯಾವರಣದಲ್ಲಿ ಈ ದೇವರನ್ನು ಪ್ರತಿಷ್ಠಿಸುವಾಗ ಅಷ್ಟಪರಿವಾರವನ್ನೂ ರೂಪಿಸಬಹುದು.

ಇದಿಷ್ಟು ಕಲ್ಕಿಯ ಬಗ್ಗೆ ದೊರೆಯುವ ವಿವರಗಳು.

*ಇತಿ ಶ್ರೀ ಬ್ರಾಹ್ಮೀಯೇ ಚಿತ್ರಕರ್ಮ ಶಾಸ್ತ್ರೇ ಪ್ರಾದುರ್ಭಾವಕಾಂಡೇ ಕಲ್ಕಿಲಕ್ಷಣಂ ನಾಮ ದಶಮೋಽಧ್ಯಾಯಃ*